ಗುರುವಾರ, ನವೆಂಬರ್ 9, 2023 | ₹ 7.00

www.prajavani.net

prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ನಗು**

ಮುಂಬೈನಲ್ಲಿ ನಿರ್ಮಾಪಕ ರಮೇಶ್ ತೌರಾನಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಟಿ ನುಸರತ್ ಬರೂಚ ಹೀಗೆ ಕಾಣಿಸಿಕೊಂಡರು.








FORTIFIED WITH 7 AIRBAGS



GESTURE CONTROLLED POWERED TAILGATE



ADVANCED DRIVER ASSISTANCE SYSTEM WITH 11 KEY FUNCTIONS

12.3" (31.24CM) HARMAN™ TOUCHSCREEN INFOTAINMENT

VENTILATED FRONT AND SECOND ROW SEATS**

LED DRLs WITH WELCOME AND GOODBYE ANIMATION

10 SPEAKER JBL™ MUSIC SYSTEM WITH AUDIOWORX

NEW SAFARI

RECLAIM YOUR LIFE

**SECOND ROW FOR 6-SEATER ONLY

To know more, call 1800 209 8282 | cars.tatamotors.com/suv/safari | @officialtatamotorscars | @tatasafariofficial | @TataMotors_Cars | @TataMotorsCars

Images shown are for representative purposes and may not depict real life situations. Features shown are not part of the standard fitment and varies from variant to variant.

**PRERANA MOTORS**
**Lalbagh Road:** 7506024020; **BTM Layout:** 7506024118; **Rajajinagar:** 7506024039; **Yelahanka:** 9619489334

**CAUVERY MOTORS:**
**Avalahalli:** 8879156068; **Mekhri Circle:** 8422849049; **Devanahalli:** 8879078454

**ADISHAKTI CARS**
**Hebbal:** 7506023837; **Dasarahalli:** 9167982568; **Kalyana Nagar:** 9167163087

**KEY MOTORS**
**Kanakapura Road:** 7506023980, **Mysore Road:** 9167395034, **Kanakapura City:** 8879145649, **BG Road:** 9167395164, **Sunkadakatte Magadi Road:** 9167882027, **Nelamangala:** 9167881890

**KHT MOTORS**
**Whitefield:** 7506023988; **Domlur:** 7506024006, **Kolar:** 8291028427

**KROPEX AUTO**
**Hosur Road:** 7506024016, **Koramangala:** 9167395364, **Sarjapur road:** 8291202713, **Mahadevapura:** 8291052641


**SREE AUTO**
**Tumkur:** 7506024318, **Tiptur:** 9619050469, **Chitradurga:** 9619033465, **Kunigal:** 8879046819, **Chikkaballapur:** 8879046290, **Chintamani:** 8291927028

ಗುರುವಾರ, ನವೆಂಬರ್ 9, 2023 | ₹ 7.00
www.prajavani.net
prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಖರೀದಿ**
ದೀಪಾವಳಿ ಹಬ್ಬದ ಅಂಗವಾಗಿ ಪಶ್ಚಿಮ ಬಂಗಾಳದ ನದಿಯಾ ಜಿಲ್ಲೆಯಲ್ಲಿ ಜನರು ಅಲಂಕಾರಿಕ ವಸ್ತುಗಳನ್ನು ಖರೀದಿಸಿದರು










**ಬಂಗಾರದಲ್ಲಿನ ಹೂಡಿಕೆ ಜೀವನಪೂರ್ತಿ ಸುರಕ್ಷೆ**

**ಸುವರ್ಣೋತ್ಸವದಲ್ಲಿ ಭಾಗವಹಿಸಿರುವ ಆಭರಣ ಮಳಿಗೆಗೆ ಭೇಟಿ ನೀಡಿ**

Scan the QR code to view detailed Participant's List

FaceBook Instagram YouTube

**C. KRISHNIAH CHETTY & SONS PVT LTD**
All Bengaluru Branches

**GRT JEWELLERS**
All Bengaluru Branches

**JOYALUKKAS**
All Bengaluru Branches

**MALABAR GOLD & DIAMONDS**
All Bengaluru Branches

**NAVRATHAN JEWELLERS PVT. LTD**
All Bengaluru Branches

**SHREE SAI GOLD PALACE**
All Bengaluru Branches

**JOS ALUKKAS**
All Bengaluru Branches

**KALYAN JEWELLERS INDIA LTD**
All Bengaluru Branches

**NEELKANTH GOLD AND DIAMONDS PVT LTD**
All Bengaluru Branches

**SRI KRISHNA DIAMONDS & JEWELLERY**
All Bengaluru Branches

**Aabushan Jewellers | AVR Swarnmahal Jewelry Limited | Chemmanur Jewellers | Manappuram Jewellers Ltd | R H Radhakrishna Gupta Jewellers (Davangere) | Rajamahal Fancy Jewellers (Bellary) | S K Ayodhyarama Setty & Sons (Tumkur) | S.R.S Jewellers (Hassan) | Senco Gold and Diamonds | Simha Jewellers | Sri Ganesh Diamonds & Jewellery ( Sadashivanagar, Rajajinagar & HSR Layout )**

Anand Jewels & Diamonds | Arjunaa Vara Jewellers | Dhanalakshmi Jewellers (Kanakapura) | Gujjadi Swarna Jewellers Pvt Ltd | Kanyaka Jewellery House (Nelamangala) | Kumara Jewellers (Davangere) | M P Swarna Mahal | National Gold & Diamonds (Thirthahalli) | Nikhaar Jewels Private Limited | Prathiba Jewellery House | Praveen Jewels | R R Gold Palace | Roopa Jewellers (Hassan) | Santhosh Jewellers | Sri Vinayaka Jewellers and Silk Sarees | SRL Gold LLP (Sagar Jewels)

Arjun Jewellers (Anekal, Bengaluru Rural) | Arvind Jewellers | Ashoka Jewellers (Tumkur) | Ashwini Jewellers (Tiptur) | Aura Jewels | Dhanalakshmi Jewellers | Dhanalakshmi Swarna Mahal | Ganesh Jewellers (Shivamogga) | Ganesh Jewellers | Khea Jewellery | Maansi Jewellery | Manohar Jewellers | Moti's | Navyaa Abharan | Paras Jewellers LLP | Pooja Jewellers | Prakash Jewellers | R K Abharana (Hassan) | Rajalaxmi Jewells | Shanthi Jewellers | Sheelvant & Sons Jewels Pvt Ltd (Bagalkot) | Shree Sai Jewels Palace | Sirisamruddhi Gold Palace Pvt Ltd | Sri Manohar Jewellers | Sri Vasavi Jewellers (Hassan) | Sumathi Jewellers | Tayi Jewellers | Uttam Jewel Palace

Abhinandan Jewels | Ajay Gold Palace | Ajay Silver Palace | Ambica Jewellers | Ambika Jewellers | Anil Jewel Paradise LLP | Ashok Gold Palace | Ashoka Jewellery Works | Astro Journey | Dev's Jewellery | Dhanalakshmi Jewellers | Diamond Facets | Gayatri Jewellers | Geetha Jewels | Hariom Jewellers | Heera Jewellers | Heritage Jewelry | Hiranyam | Inder Jewellery Pvt. Ltd | J M B Jewels | Jagathamba Jewellers | JBJ Jewellers | Jewel Mandir | Kanhaiya Jewellers | Kanishq Jewels | Kiran Jewellers | KO Jewellery Shop | Krishna Jewellers | Krishna Jewellers (Sri Krishna Bankers) | Kudur Jewellers | Mahadev Jewellers | Mahalakshmi Jewellers | Mahalakshmi Jewellers | Mahaveer Jewellers | Mahaveer Jewellers | Mahendra Diamonds & Jewellers | MAS Gems & Jewellery | Mayur Jewellers (Bagloor, Bengaluru) | Mayur Jewellers (Bidadi) | Mivaan Fine Jewels | Mohith Jewels & Diamonds | Moksha Jewels | Mukesh Jewellers | Navarathna Jewellers | Pavan Jewellers | R K Jewellers (Bellary) | R M Gold Palace (Bellary) | Ramdev Bankers & Jewellery | Rishab Jewellers – Koramangala | S.K. Jewellers | Sai Vajra Jewels | Samrat Jewels | Santhosh Jewellers, Yelahanka | Sathyam Jewellery Works | Shanthi Jewellers | Shinys Jewellery | Shree Sadguru Jewellers | Shree Samarth Jewellers | Silver Palace | Sonal Jewels | Sree Lakshmi Jewels | Sri Chamundi Jewels Private Limited | Sri Dhanalakshmi Jewellers | Sri Gajanand Jewellers | Sri Ganapathi Jewellers | Sri Gokul Jewellers & Diamonds | Sri Hari Jewellers | Sri Krishna Jewellers | Sri Lakshmi Jewellers Vinayaka Hall | Sri Nanjundeshwara Jewellers | Srikanteshwara Jewellery Mart | Srinath Gold Palace | Subramaneshwara Jewellery | Sunrise Abharan | Surabhi Jewellers | Vijay Jewellers | Vijaylakshmi Jewellers | Vishwas Jewels Pvt Ltd.

ಗುರುವಾರ, ನವೆಂಬರ್ 9, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 310 | ಪುಟ 20
www.prajavani.net
prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಸ್ಪರ್ಧಾವಾಣಿ**
ಚಬಹಾರ್ ಎಂದರೆ ನಾಲ್ಕು ಚಿಲುಮೆಗಳು ಸೇರುವ ಸ್ಥಳವೆಂದು ಅರ್ಥ. ಇದೇ ಹೆಸರಿನ ಮಹತ್ವದ ಬಂದರು ಇರಾನ್‌ನಲ್ಲಿದೆ. ಭಾರತ ಮತ್ತು ಇರಾನ್ ನಡುವಿನ ಒಪ್ಪಂದದ ಮಾಹಿತಿ



ಆಳ-ಅಗಲ
ಶೇ 50ರ ಮಿತಿಗೆ ವಿನಾಯಿತಿಯೂ ಇದೆ
ದೆಹಲಿ: ವಾಯು ಮಾಲಿನ್ಯ ನಿಯಂತ್ರಣಕ್ಕೆ ಮೋಡ ಬಿತ್ತನೆ! 10
ಡಿಕೆ ಸಹೋದರರ ಕಟ್ಟಿ ಹಾಕಲು ರಣತಂತ್ರ 6

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 64,975 ▲ | 19,443 ▲ | ₹62,500 (ಬೆಂಗಳೂರು) ▼ | ₹72,300 (ಬೆಂಗಳೂರು) ▼ | 83.30 ▲ |



## ಚಿನಕುರಳಿ

ಪ್ರಕಾಶ್ ಶೆಟ್ಟಿ




ಇದೇ ತಿಂಗಳ ಅಂತ್ಯದೊಳಗೆ ಸರ್ಕಾರಕ್ಕೆ ವರದಿ ಸಲ್ಲಿಕೆ ಸಾಧ್ಯತೆ

# ಜಾತಿ ಗಣತಿ: ಪರ– ಅಪಸ್ವರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹಿಂದುಳಿದ ವರ್ಗಗಳ ಆಯೋಗ ಸಿದ್ಧಪಡಿಸಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಗಣತಿ) ವರದಿ ಇದೇ ತಿಂಗಳ ಅಂತ್ಯದೊಳಗೆ ಸರ್ಕಾರಕ್ಕೆ ಸಲ್ಲಿಕೆಯಾಗಲಿದೆ ಎಂಬ ಲೆಕ್ಕಾಚಾರದ ಮಧ್ಯೆಯೇ, ಪರ-ವಿರೋಧದ ಆರ್ಭಟವೂ ಹೆಚ್ಚುತ್ತಿದೆ.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಸಮ್ಮುಖದಲ್ಲಿ ಇತ್ತೀಚೆಗೆ ಸಭೆ ನಡೆಸಿದ್ದ ಒಕ್ಕಲಿಗ ಸಮುದಾಯದ ಪ್ರಮುಖರು, ಈ ವರದಿಯನ್ನು ತಿರಸ್ಕರಿಸುವಂತೆ ಮುಖ್ಯಮಂತ್ರಿಗೆ ಮನವಿ ಮಾಡುವ ತೀರ್ಮಾನ ಕೈಗೊಂಡಿದ್ದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೃಷಿ ಸಚಿವ ಎನ್. ಚಲುವರಾಯ-ಸ್ವಾಮಿ, ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಶಾಸಕರು ಸಭೆಯಲ್ಲಿ ಪಾಲ್ಗೊಂಡಿದ್ದರು.

ವರದಿಯ ಬಗ್ಗೆ ಆರಂಭದಿಂದಲೂ ವಿರೋಧದ ನಿಲುವು ಹೊಂದಿರುವ ವೀರಶೈವ-ಲಿಂಗಾಯತ ಸಮುದಾಯದ ನಾಯಕರು, ಈ ಕುರಿತು ಮೊದಲ ಸುತ್ತಿನ ಸಭೆ ನಡೆಸಿದ್ದರು. ವರದಿಯನ್ನು ಒಪ್ಪದಿರುವ ಬಗ್ಗೆ ಚರ್ಚೆ ನಡೆದಿತ್ತು. ಈ ಕುರಿತು ಚರ್ಚಿಸಲು ಅಖಿಲ ಭಾರತ ವೀರಶೈವ ಮಹಾಸಭಾದ ಪದಾಧಿಕಾರಿಗಳ ಸಭೆ ಗುರುವಾರ ನಡೆಯಲಿದೆ. ಎಚ್.ಕಾಂತರಾಜು ಅಧ್ಯಕ್ಷತೆಯ ಹಿಂದುಳಿದ ವರ್ಗಗಳ ಆಯೋಗ ನಡೆಸಿದ್ದ ಸಮೀಕ್ಷೆಯ ವರದಿ 2018ರಲ್ಲೇ ಪೂರ್ಣಗೊಂಡಿತ್ತು. ವರದಿ ಬಿಡುಗಡೆಯಾದರೆ ರಾಜಕೀಯ ಪ್ರಾತಿನಿಧ್ಯ ಕಡಿಮೆಯಾಗಲಿದೆ ಎಂಬ ಕಾರಣಕ್ಕೆ ರಾಜಕೀಯವಾಗಿ ಪ್ರಬಲ-ವಾಗಿರುವ ಒಕ್ಕಲಿಗರು ಮತ್ತು ಲಿಂಗಾಯತರು ವಿರೋಧ ವ್ಯಕ್ತಪಡಿಸಿದ್ದರು. ಈಗಲೂ ಅದೇ ಸ್ಥಿತಿ ನಿರ್ಮಾಣವಾಗುವ ಸಾಧ್ಯತೆ ಕಾಣಿಸುತ್ತಿದೆ.

ಈ ಬೆಳವಣಿಗೆಗಳ ಮಧ್ಯೆಯೇ, ವರದಿಯ ಪರ ಕೂಗೆದ್ದಿದೆ. ಪತ್ರಿಕಾ ಗೋಷ್ಠಿ ನಡೆಸಿದ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ, ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಮುಖಂಡರು ಜಾತಿ ಗಣತಿಯ ವರದಿಯನ್ನು ಬಿಡುಗಡೆ ಮಾಡಲು ಒಂದು ತಿಂಗಳ ಗಡುವು ನೀಡಿದ್ದಾರೆ. ಪ್ರಬಲ ಸಮುದಾಯಗಳ ವಿರೋಧವನ್ನು ಗಟ್ಟಿಧ್ವನಿಯಲ್ಲಿ ಖಂಡಿಸಿದ್ದಾರೆ.

## ವರದಿ ಬಿಡುಗಡೆಗೆ ಗಡುವು

ಜಾತಿ ಗಣತಿ ವರದಿಯನ್ನು ಇದೇ ತಿಂಗಳು ಬಿಡುಗಡೆ ಮಾಡಬೇಕು ಎಂದು ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ, ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಮುಖಂಡರು ಆಗ್ರಹಿಸಿದರು.

ಜಂಟಿ ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ಕೆ.ಎಂ.ರಾಮಚಂದ್ರಪ್ಪ, ಪ್ರಧಾನ ಕಾರ್ಯದರ್ಶಿ ಎಣ್ಣೆಗೆರೆ ಆರ್.ವೆಂಕಟರಾಮಯ್ಯ, ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಸಂಚಾಲಕ ಮಾವಳ್ಳಿ ಶಂಕರ್, ಇದೇ ತಿಂಗಳು ಆಯೋಗದಿಂದ ವರದಿ ಪಡೆದು ಬಿಡುಗಡೆ ಮಾಡದೇ ಇದ್ದರೆ ಮುಂದಿನ ತಿಂಗಳು ನಡೆಯುವ 10 ಲಕ್ಷ ಜನರನ್ನು ಒಳಗೊಂಡ ಸಮಾವೇಶದಲ್ಲಿ ಹೋರಾಟದ ನಿರ್ಣಯ ಕೈಗೊಳ್ಳಲಾಗುವುದು ಎಂದರು.

7ನೇ ಪುಟ ನೋಡಿ

## ಲಿಂಗಾಯತರ ಸಭೆ ಇಂದು; ಮರು ಸಮೀಕ್ಷೆಗೆ ಒಲವು?

ಜಾತಿ ಗಣತಿ ವರದಿ ಕುರಿತು ಸ್ಪಷ್ಟ ನಿಲುವು ತೆಗೆದುಕೊಳ್ಳಲು ಅಖಿಲ ಭಾರತ ವೀರಶೈವ ಮಹಾಸಭಾ ನ.9ರಂದು ಸಭೆ ಕರೆದಿದ್ದು, ಆಧಾರ್ ಆಧಾರಿತ ಹೊಸ ಸಮೀಕ್ಷೆ ನಡೆಸಲು ಒತ್ತಾಯಿಸಿ ನಿರ್ಣಯ ತೆಗೆದುಕೊಳ್ಳುವ ಸಾಧ್ಯತೆ ಇದೆ. ರಾಜ್ಯದ ಪ್ರಬಲ ಸಮುದಾಯಗಳಲ್ಲಿ ಒಂದಾದ ವೀರಶೈವ–ಲಿಂಗಾಯತರು ಜಾತಿ ಗಣತಿಗೆ ಆರಂಭದಿಂದಲೇ ವಿರೋಧ ವ್ಯಕ್ತಪಡಿಸಿ-ದ್ದರು. ವರದಿ ಸಲ್ಲಿಕೆಯಾಗುವ ಹೊತ್ತಿಗೆ, ಅದನ್ನು ಸ್ವೀಕರಿಸಬಾರದು ಎಂಬ ಒತ್ತಡವನ್ನೂ ಈ ಸಮುದಾಯದ ಮುಖಂಡರು ಹೇರಿದ್ದರು.

7ನೇ ಪುಟ ನೋಡಿ



**ಆಕಾಶಬುಟ್ಟಿ** ದೀಪಾವಳಿ ಹಬ್ಬದ ಪ್ರಯುಕ್ತ ಹುಬ್ಬಳ್ಳಿಯ ದುರ್ಗದಬೈಲ್ ಮಾರುಕಟ್ಟೆಯಲ್ಲಿ ಮಹಿಳೆಯರು ಬುಧವಾರ ಆಕಾಶಬುಟ್ಟಿ ಖರೀದಿಸಿದರು

-ಪ್ರಜಾವಾಣಿ ಚಿತ್ರ /ಗೋವಿಂದರಾಜ ಜವಳಿ

6 ಉತ್ಪನ್ನ ಪರಿಚಯಿಸಿದ ಸಹಕಾರ ಸಚಿವ ಅಮಿತ್ ಶಾ

# 'ಭಾರತ್ ಆರ್ಗ್ಯಾನಿಕ್ಸ್' ಬಿಡುಗಡೆ

**ನವದೆಹಲಿ (ಪಿಟಿಐ):** 'ಭಾರತ್ ಆರ್ಗ್ಯಾನಿಕ್ಸ್' ಎನ್ನುವ ಹೊಸ ಬ್ರ್ಯಾಂಡ್ ಅನ್ನು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಬುಧವಾರ ಬಿಡುಗಡೆ ಮಾಡಿದ್ದಾರೆ. ಈ ಬ್ರ್ಯಾಂಡ್ ಅಡಿಯಲ್ಲಿ ತೊಗರಿ, ಕಡಲೆ, ಸಕ್ಕರೆ, ಹುರುಳಿ, ಬಾಸ್ಮತಿ ಅಕ್ಕಿ ಮತ್ತು ಸೋನಾಮಸೂರಿ ಉತ್ಪನ್ನಗಳನ್ನು ಸಹ ಇದೇ ವೇಳೆ ಮಾರುಕಟ್ಟೆಗೆ ಪರಿಚಯಿಸಿದ್ದಾರೆ.

ಸದ್ಯ 6 ಉತ್ಪನ್ನಗಳನ್ನು ನೀಡಲಾಗಿದೆ. ಡಿಸೆಂಬರ್ ವೇಳೆಗೆ ಒಟ್ಟು 20 ಉತ್ಪನ್ನಗಳು ಈ ಬ್ರ್ಯಾಂಡ್ ಅಡಿಯಲ್ಲಿ ಲಭ್ಯವಾಗಲಿವೆ. ಮದರ್ ಡೇರಿಯ ಸಫಲ್ ಮಳಿಗೆಗಳು ಮತ್ತು ಆನ್‌ಲೈನ್‌ನಲ್ಲಿ ಮಾರಾಟ ಆಗಲಿವೆ. ದೇಶದಾದ್ಯಂತ ರಿಟೇಲ್ ಮಳಿಗೆಗಳ ಜಾಲವನ್ನೂ ಸೃಷ್ಟಿಸಲಾಗುವುದು ಎಂದು ಶಾ ತಿಳಿಸಿದ್ದಾರೆ.

ನ್ಯಾಷನಲ್ ಕೋ–ಆಪರೇಟಿವ್ ಆರ್ಗ್ಯಾನಿಕ್ಸ್ ಲಿಮಿಟೆಡ್ (ಎನ್‌ಸಿಒಎಲ್) ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎನ್‌ಸಿಒಎಲ್ ಲೋಗೊ, ವೆಬ್‌ಸೈಟ್ ಅನ್ನೂ ಶಾ ಬಿಡುಗಡೆ ಮಾಡಿದ್ದಾರೆ. ಮೊದಲಿಗೆ ಭಾರತದಲ್ಲಿ ಆರ್ಗ್ಯಾನಿಕ್ಸ್ ಉತ್ಪನ್ನಗಳನ್ನು ಎನ್‌ಸಿಒಎಲ್ ಮಾರಾಟ ಮಾಡಲಿದೆ. ಕ್ರಮೇಣ ಜಾಗತಿಕ ಮಾರುಕಟ್ಟೆ-ಯನ್ನೂ ಪ್ರವೇಶಿಸಲಿದೆ. ದೇಶದ ಅತ್ಯಂತ ವಿಶ್ವಾಸಾರ್ಹ ಬ್ರ್ಯಾಂಡ್ ಆಗಿ ರೂಪಿಸಲಾಗುವುದು. 10 ವರ್ಷಗಳಲ್ಲಿ 'ಭಾರತ್ ಆರ್ಗ್ಯಾನಿಕ್ಸ್' ಬ್ರ್ಯಾಂಡ್ ಅನ್ನು ಜಾಗತಿಕ ಮಾರುಕಟ್ಟೆಯಲ್ಲಿ ಬಲಿಷ್ಠ ಬ್ರ್ಯಾಂಡ್ ಆಗಿ ರೂಪಿಸಲಾಗುವುದು. ಇದಕ್ಕಾಗಿ ದೀರ್ಘಾವಧಿಯ ಯೋಜನೆ ಸಿದ್ಧಪಡಿಸಲಾಗುತ್ತಿದೆ ಎಂದರು.

> **ಆರ್ಗ್ಯಾನಿಕ್ ಉತ್ಪನ್ನಗಳ ಮಾರಾಟದಿಂದ ಬರುವ ಲಾಭದಲ್ಲಿ ಶೇ 50ರಷ್ಟನ್ನು ಸದಸ್ಯ ರೈತರ ಖಾತೆಗೆ ವರ್ಗಾವಣೆ ಮಾಡಲಾಗುವುದು**
> **ಅಮಿತ್ ಶಾ,** ಕೇಂದ್ರ ಸಹಕಾರ ಸಚಿವ

10ನೇ ಪುಟ ನೋಡಿ

**ಸಹಕಾರ ಸಂಘಗಳ ಮಾಹಿತಿ**

**7.89** ಕೋಟಿ
ದೇಶದಲ್ಲಿರುವ ಸಹಕಾರ ಸಂಘಗಳು

**29** ಕೋಟಿ
ಸಹಕಾರ ಸಂಘಗಳಲ್ಲಿನ ಒಟ್ಟು ಸದಸ್ಯರ ಸಂಖ್ಯೆ

**ಆರ್ಗ್ಯಾನಿಕ್ ಕೃಷಿ**

**27** ಲಕ್ಷ ಹೆಕ್ಟೇರ್
ಭಾರತದಲ್ಲಿ ಆರ್ಗ್ಯಾನಿಕ್ ಪ್ರಮಾಣಪತ್ರ ಪಡೆದಿರುವ ಭೂಮಿ

**29** ಲಕ್ಷ ಟನ್
2022–23ರಲ್ಲಿ ಭಾರತದಲ್ಲಿ ಉತ್ಪಾದನೆ ಆಗಿರುವ ಪ್ರಮಾಣೀಕೃತ ಆರ್ಗ್ಯಾನಿಕ್ ಉತ್ಪನ್ನಗಳು

# ಶಿವಮೂರ್ತಿ ಶರಣರಿಗೆ ಜಾಮೀನು

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ಪೋಕ್ಸೊ ಕಾಯ್ದೆಯಡಿ ಆರೋಪಿಯಾಗಿ ನ್ಯಾಯಾಂಗ ಬಂಧನದಲ್ಲಿರುವ ಚಿತ್ರದುರ್ಗ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಶರಣರಿಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ.

ಜಾಮೀನು ಕೋರಿ ಶಿವಮೂರ್ತಿ ಶರಣರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠವು ಬುಧವಾರ ತನ್ನ ಆದೇಶವನ್ನು ಪ್ರಕಟಿಸಿತು.

'ಆರೋಪಿಯು ವಿಚಾರಣೆ ಮುಗಿಯುವರೆಗೆ ಚಿತ್ರದುರ್ಗ ಜಿಲ್ಲೆ ಪ್ರವೇಶಿಸಬಾರದು. ₹2 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ಮತ್ತು ಅಷ್ಟೇ ಮೊತ್ತಕ್ಕೆ ಇಬ್ಬರ ಭದ್ರತಾ ಖಾತರಿ ನೀಡಬೇಕು. ಸಾಕ್ಷಿಗಳನ್ನು ಬೆದರಿಸಬಾರದು. ಸಾಕ್ಷ್ಯ ನಾಶಕ್ಕೆ ಯತ್ನಿಸಬಾರದು. ನ್ಯಾಯಾಲಯದ ಈ ಷರತ್ತುಗಳನ್ನು ಉಲ್ಲಂಘಿಸಿದರೆ, ಜಾಮೀನು ತಂತಾನೇ ರದ್ದಾಗಲಿದೆ' ಎಂದು ನ್ಯಾಯಪೀಠ ಹೇಳಿದೆ.

6ನೇ ಪುಟ ನೋಡಿ

ಹಾಲವೀರಪ್ಪ ಸ್ವಾಮೀಜಿ, ಚೈತ್ರಾ ವಿರುದ್ಧದ ಪ್ರಕರಣ

# ವಂಚನೆ: 800 ಪುಟಗಳ ಆರೋಪ ಪಟ್ಟಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಬಿಜೆಪಿ ಟಿಕೆಟ್ ಕೊಡಿಸುವುದಾಗಿ ನಂಬಿಸಿ, ಹೋಟೆಲ್ ಉದ್ಯಮಿಗೆ ವಂಚಿಸಿದ್ದ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಸಿಸಿಬಿ ಪೊಲೀಸರು 3ನೇ ಎಸಿಎಂಎಂ ನ್ಯಾಯಾಲಯಕ್ಕೆ 800 ಪುಟಗಳ ದೋಷಾರೋಪಪಟ್ಟಿ ಸಲ್ಲಿಸಿದ್ದಾರೆ.

ವಂಚನೆ ಪ್ರಕರಣದಲ್ಲಿ ಪೂರಕ ಪುರಾವೆ ಸಹಿತ ನ್ಯಾಯಾಲಯಕ್ಕೆ ಮುಚ್ಚಿದ ಲಕೋಟೆಯಲ್ಲಿ ಆರೋಪಪಟ್ಟಿ ಸಲ್ಲಿಸಿದ್ದಾರೆ ಎಂದು ಮೂಲಗಳು ಹೇಳಿವೆ. ಉದ್ಯಮಿ ಗೋವಿಂದಬಾಬು ಪೂಜಾರಿ ನೀಡಿದ ದೂರು ಆಧರಿಸಿ ತನಿಖೆ ಕೈಗೊಂಡಿದ್ದ ಸಿಸಿಬಿ ಪೊಲೀಸರು, ಹಿಂದುತ್ವ ಸಂಘಟನೆಗಳ ಕಾರ್ಯಕರ್ತೆ ಎಂದು ಗುರುತಿಸಿಕೊಂಡಿದ್ದ ಚೈತ್ರಾ , ಹೊಸಪೇಟೆ ಸಮೀಪದ ಹಿರೇಹಡಗಲಿ ಹಾಲಸ್ವಾಮಿ ಮಠದ ಹಾಲವೀರಪ್ಪ ಸ್ವಾಮೀಜಿ, ಗಗನ್ ಕಡೂರ್, ಶ್ರೀಕಾಂತ್ ಸೇರಿದಂತೆ 8 ಮಂದಿಯನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದರು.

ಬಂಡೇಪಾಳ್ಯ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ ಸಂಬಂಧ ತನಿಖೆ ಕೈಗೊಳ್ಳ ಲಾಗಿತ್ತು. ಆರೋಪಿಗಳನ್ನು ಬೇರೆ ಬೇರೆ ಸ್ಥಳಗಳಲ್ಲಿ ಬಂಧಿಸಲಾಗಿತ್ತು. ಸಿಸಿಬಿ ಘಟಕದ ಮಹಿಳಾ ಸಂರಕ್ಷಣಾ ದಳದ ಎಸಿಪಿ ನೇತೃತ್ವದಲ್ಲಿ ತನಿಖೆ ಕೈಗೊಳ್ಳಲಾಗಿತ್ತು. 75 ಸಾಕ್ಷಿದಾರರ ಹೇಳಿಕೆ ದಾಖಲಿಸಿ ಆರೋಪಪಟ್ಟಿ ಸಲ್ಲಿಸಲಾಗಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

7ನೇ ಪುಟ ನೋಡಿ

## ಕೆಎಚ್‌ಆರ್‌ಐ ಸಿಟಿ: ಸಭೆ ನಾಳೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜಧಾನಿಯಿಂದ 50- 80 ಕಿ.ಮೀ ದೂರದಲ್ಲಿ ಎರಡು ಸಾವಿರ ಎಕರೆ ಪ್ರದೇಶದಲ್ಲಿ 'ನಾಲೆಡ್ಜ್, ಹೆಲ್ತ್ ಕೇರ್, ರೀಸರ್ಚ್ ಮತ್ತು ಇನ್ನೋವೇಶನ್ ಸಿಟಿ' (ಕೆಎಚ್‌ಆರ್‌ಐ ಸಿಟಿ) ನಿರ್ಮಿಸಲು ತೀರ್ಮಾನಿಸಿದ್ದು, ಈ ಸಂಬಂಧ ಉದ್ಯಮಿಗಳು, ವೈದ್ಯರು, ಶಿಕ್ಷಣ ತಜ್ಞರು ಮತ್ತಿತರರ ಜೊತೆ ಇದೇ 10ರಂದು ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ದುಂಡುಮೇಜಿನ ಸಭೆ ನಡೆಸಲಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿರುವ ಈ ಸಭೆಯಲ್ಲಿ ಐಟಿಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಸೇರಿದಂತೆ ಹಲವು ಸಚಿವರು ಭಾಗವಹಿಸಲಿದ್ದಾರೆ. ಸಭೆಯಲ್ಲಿ ಕ್ರಿಸ್ ಗೋಪಾಲಕೃಷ್ಣನ್, ಡಾ. ದೇವಿ ಶೆಟ್ಟಿ, ಗೀತಾಂಜಲಿ ಕಿರ್ಲೋಸ್ಕರ್, ಪ್ರಶಾಂತ್ ಪ್ರಕಾಶ್, ಮಣಿಪಾಲ್ ಆಸ್ಪತ್ರೆಗಳ ಸಮೂಹದ ಡಾ. ದೀಪಕ್ ವೇಣುಗೋಪಾಲನ್, ಡಾ. ಶರಣ್ ಪಾಟೀಲ್, ನ್ಯಾಷನಲ್ ಸೆಂಟರ್ ಫಾರ್ ಬಯಲಾಜಿಕಲ್ ಸೈನ್ಸಸ್ ಸಂಸ್ಥೆಯ ನಿರ್ದೇಶಕ ಡಾ.ಎಲ್ ಎಸ್.ಶಶಿಧರ ಸೇರಿದಂತೆ ಹಲವರು ಇರಲಿದ್ದಾರೆ.

### ನಿಯಮ ಉಲ್ಲಂಘಿಸಿದರೂ ಮಳಿಗೆಗಳಿಗೆ ಪರವಾನಗಿ ನೀಡಿದ ರಾಜ್ಯ ಸರ್ಕಾರ

# ಪಟಾಕಿ ದಾಸ್ತಾನು: ಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸುರಕ್ಷತಾ ಕ್ರಮಗಳನ್ನು ಅನುಸರಿಸದೇ ಹೋದರೂ ಪಟಾಕಿ ದಾಸ್ತಾನು ಮಳಿಗೆಗಳಿಗೆ ಪರವಾನಗಿ ನೀಡಿರುವ ರಾಜ್ಯ ಸರ್ಕಾರದ ಕಂದಾಯ ಅಧಿಕಾರಿಗಳ ಕ್ರಮವನ್ನು ತರಾಟೆಗೆ ತೆಗೆದುಕೊಂಡಿರುವ ಹೈಕೋರ್ಟ್, 'ಪಟಾಕಿ ದಾಸ್ತಾನು ಮತ್ತು ಮಾರಾಟಕ್ಕೆ ಸಂಬಂಧಿಸಿದಂತೆ ಸಮಗ್ರ ಮಾರ್ಗ ಸೂಚಿಯನ್ನು ರೂಪಿಸಲಾಗುವುದು' ಎಂಬ ಇಂಗಿತ ವ್ಯಕ್ತಪಡಿಸಿದೆ.

ಪಟಾಕಿ ದಾಸ್ತಾನು ಜಪ್ತಿ ಮಾಡಿರುವ ಕಂದಾಯ ಇಲಾಖೆಯ ಕ್ರಮವನ್ನು ಪ್ರಶ್ನಿಸಲಾದ 15ಕ್ಕೂ ಹೆಚ್ಚು ಪ್ರಕರಣಗಳಿಗೆ ಸಂಬಂಧಿಸಿದ ರಿಟ್ ಅರ್ಜಿಗಳ ವಿಚಾರಣೆ ನಡೆಸುತ್ತಿರುವ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದ್ದು, 'ಕಾನೂನು ಬಾಹಿರವಾಗಿ ಪಟಾಕಿ ದಾಸ್ತಾನು ಮತ್ತು ಮಾರಾಟಕ್ಕೆ ಏಕೆ ಪರವಾನಗಿ ಕೊಡುತ್ತಿದ್ದೀರಿ' ಎಂದು ರಾಜ್ಯ ಸರ್ಕಾರವನ್ನು ಪ್ರಶ್ನಿಸಿದೆ.

ಇದೇ ವೇಳೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಪರ ಡೆಪ್ಯೂಟಿ ಸಾಲಿಸಿಟರ್ ಜನರಲ್ ಶಾಂತಿಭೂಷಣ್ ಸ್ಥಳ ಪರಿಶೀಲನೆ ನಡೆಸಿದ ವರದಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದ್ದಾರೆ.

'ಪಟಾಕಿ ದಾಸ್ತಾನಿಗೆ ಜಿಲ್ಲಾಧಿಕಾರಿಗಳು ಅನುಮತಿ ನೀಡಿರುವ ಹಲವು ಪ್ರಕರಣಗಳಲ್ಲಿ ಸ್ಫೋಟಕ ವಸ್ತುಗಳ ಕಾಯ್ದೆ-1984ರ ನಿಯಮಗಳನ್ನು ಸ್ಪಷ್ಟವಾಗಿ ಉಲ್ಲಂಘನೆ ಮಾಡಲಾಗಿದೆ. 500 ಕೆ.ಜಿ ತೂಕದವರೆಗೂ ಪಟಾಕಿ ದಾಸ್ತಾನು ಮಾಡಲು ಜಿಲ್ಲಾಧಿಕಾರಿ ಪರವಾನಗಿ ನೀಡಲು ಅವಕಾಶವಿದೆ. ಪಟಾಕಿ ದಾಸ್ತಾನು ಇರಿಸಿದ ಮತ್ತು ಮಾರಾಟ ಮಾಡುವ ಜಾಗ, ಅಂಗಡಿ, ಮನೆಗಳ ನಡುವೆ 15 ಮೀಟರ್ ಅಂತರವಿರಬೇಕು. ಅಗ್ನಿ ಸುರಕ್ಷತೆ ಕ್ರಮ ಕೈಗೊಳ್ಳಬೇಕು ಎಂಬುದೂ ಸೇರಿದಂತೆ ನಿಯಮದ ಹಲವು ಚೌಕಟ್ಟುಗಳನ್ನು ಮೀರಲಾಗಿದೆ' ಎಂದು ಶಾಂತಿಭೂಷಣ್ ನ್ಯಾಯಪೀಠಕ್ಕೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಕಾನೂನು ಬಾಹಿರ ಪರವಾನಗಿಗಳನ್ನು ಯಾಕೆ ಕೊಡುತ್ತಿದ್ದೀರಿ. ಕಂದಾಯ ನಿರೀಕ್ಷಕರು ಏಕೆ ದಾಸ್ತಾನು ಮಳಿಗೆಗೆ ಬೀಗ ಹಾಕಿದ್ದಾರೆ? ಅವರಿಗೆ ಯಾವ ಅಧಿಕಾರವಿದೆ? ದೀಪಾವಳಿ ಹಬ್ಬದಲ್ಲಿ ಏನಾದರೂ ಅನುಕೂಲ ಪಡೆಯಲು ಈ ರೀತಿಯ ಪರವಾನಗಿ ನೀಡಿದ್ದೀರಾ. ಅವರಿಗೆ ಏನಾದರೂ ಪಟಾಕಿ ಬೇಕಿತ್ತಾ?' ಎಂದು ಕುಟುಕಿದೆ.

'ಪ್ರತಿವರ್ಷ ದೀಪಾವಳಿ ಹಬ್ಬ ಸಮೀಪಿಸಿದಾಗಲೆಲ್ಲಾ ಇಂತಹುದೇ ನಡವಳಿಕೆಗಳು ಪುನರಾವರ್ತನೆ ಯಾಗುತ್ತಿದೆ. ಆದ್ದರಿಂದ, ಪಟಾಕಿ ದಾಸ್ತಾನಿಗೆ ಅನುಮತಿ ನೀಡುವಾಗ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಪ್ರಕಟಿಸಲಾಗುವುದು' ಎಂದು ತಿಳಿಸಿರುವ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

**ಪ್ರಕರಣಗಳೇನು?:** 'ಪೊಲೀಸರು ಹಾಗೂ ಜಿಲ್ಲಾಧಿಕಾರಿ ನಿರ್ದೇಶನದಂತೆ ಕಂದಾಯ ನಿರೀಕ್ಷಕರು ದಾಸ್ತಾನು ಜಪ್ತಿ ಮಾಡಿ ಮಾರಾಟ ಮಳಿಗೆಗೆ ಬೀಗ ಹಾಕಿರುವುದನ್ನು ಕಾನೂನು ಬಾಹಿರ ಎಂದು ಘೋಷಿಸಬೇಕು. ವ್ಯಾಪಾರದಲ್ಲಿ ಪೊಲೀಸರು, ಜಿಲ್ಲಾಧಿಕಾರಿ ಹಾಗೂ ಇತರ ಅಧಿಕಾರಿಗಳು ಅನಗತ್ಯ ಹಸ್ತಕ್ಷೇಪ ಮಾಡದಂತೆ ನಿರ್ದೇಶಿಸಬೇಕು' ಎಂಬುದು ಅರ್ಜಿದಾರರು ಮನವಿ. 'ಅರ್ಜಿ ವಿಲೇವಾರಿಯಾಗುವ ತನಕ ಪಟಾಕಿ ಮಾರಾಟಕ್ಕೆ ಅವಕಾಶ ನೀಡಿ ಬೀಗ ತೆರವುಗೊಳಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶಿಸಬೇಕು' ಎಂದು ಮಧ್ಯಂತರ ಮನವಿ ಮಾಡಲಾಗಿದೆ.

ಹೈಕೋರ್ಟ್ ಸುದ್ದಿ

## ಹಸಿರು ಪಟಾಕಿಗೆ ಮಾತ್ರ ಅವಕಾಶ: ಬಿಬಿಎಂಪಿ ಮುಖ್ಯ ಆಯುಕ್ತ

**ಬೆಂಗಳೂರು:** ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಹಸಿರು ಪಟಾಕಿ ಮಾತ್ರ ಬಳಸಬೇಕು. ಅದನ್ನು ಹೊರತುಪಡಿಸಿ ಅನಧಿಕೃತ ಪಟಾಕಿಗಳನ್ನು ಬಳಸಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹಸಿರು ಪಟಾಕಿಗಳ ಮಾರಾಟಕ್ಕಾಗಿ ನಗರದ ವ್ಯಾಪ್ತಿಯಲ್ಲಿ ಕೆಲವು ಮೈದಾನಗಳನ್ನು ಗುರುತಿಸಲಾಗಿದೆ. ಅಲ್ಲಿಯೇ ಪಟಾಕಿ ಮಾರಾಟ ಮಾಡಬೇಕು. ಅಲ್ಲಿ ಮಾರಾಟಕ್ಕಷ್ಟೇ ಅವಕಾಶ ನೀಡಲಾಗಿದ್ದು, ಪಟಾಕಿಗಳನ್ನು ಸಂಗ್ರಹಿಸಿ ಇಡುವಂತಿಲ್ಲ. ಮಾರಾಟ ಮಾಡುತ್ತಿರುವುದು ಹಸಿರು ಪಟಾಕಿಯೇ ಅಲ್ಲವೇ ಎಂಬುದನ್ನು ಪೊಲೀಸರು ಪರೀಕ್ಷೆ ನಡೆಸುತ್ತಾರೆ' ಎಂದು ವಿವರಿಸಿದರು. ಅನಧಿಕೃತವಾಗಿ ಪಟಾಕಿ ಮಾರಾಟ ಮಾಡುವುದು ಅಥವಾ ಸಂಗ್ರಹಿಸಿಟ್ಟಿರುವುದು ಗಮನಕ್ಕೆ ಬಂದರೆ ಪೊಲೀಸರಿಗೆ ಮಾಹಿತಿ ನೀಡಲಾಗುವುದು ಎಂದರು.

**ಬೀದಿಬದಿ ವ್ಯಾಪಾರ:** ನಿಯಮಗಳ ಪ್ರಕಾರ 40 ಅಡಿಗಿಂತ ಹೆಚ್ಚು ಅಗಲ ಇರುವ ರಸ್ತೆಗಳಲ್ಲಿ ಬೀದಿ ಬದಿ ವ್ಯಾಪಾರ ಮಾಡಲು ಅವಕಾಶವಿಲ್ಲ. ವಾರ್ಡ್ ರಸ್ತೆಗಳಲ್ಲಿ ವ್ಯಾಪಾರ ಮಾಡಬಹುದು ಎಂದು ಆಯುಕ್ತರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ 1300 ಕಿ.ಮೀನಷ್ಟು ಉದ್ದದ ಪ್ರಮುಖ ರಸ್ತೆಗಳಿವೆ. ಅಲ್ಲಿ ವಾಹನ ಚಾಲಕರಿಗೆ, ಪಾದಚಾರಿಗಳಿಗೆ ತೊಂದರೆ ನೀಡುವಂತಿಲ್ಲ. ಹಾಗಾಗಿ ಈ ರಸ್ತೆಗಳಲ್ಲಿ ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡುವವರನ್ನು ತೆರವುಗೊಳಿಸಲಾಗುತ್ತಿದೆ. ಒಳರಸ್ತೆಗಳಲ್ಲಿ ಬೀದಿ ಬದಿ ವ್ಯಾಪಾರಿಗಳ ಹಕ್ಕನ್ನು ಸಂರಕ್ಷಿಸಲಾಗುವುದು ಎಂದು ಹೇಳಿದರು.

### 'ಪ್ರಹ್ಲಾದ್ ಬಗ್ಗೆ ಸರ್ಕಾರ ನಿರ್ಧರಿಸಲಿದೆ'

'ಸಹಾಯಕ ಎಂಜಿನಿಯರ್‌ಗಿಂತ ಮೇಲಿನ ಹುದ್ದೆಗಳಿಗೆ ಸರ್ಕಾರವೇ ನೇಮಕ ಮಾಡುತ್ತದೆ. ಹುದ್ದೆಯಲ್ಲಿರುವವರಿಂದ ತಪ್ಪಾಗಿದ್ದರೆ ಸರ್ಕಾರವೇ ಕ್ರಮ ಕೈಗೊಳ್ಳಬೇಕಾಗುತ್ತದೆ. ಬಿಬಿಎಂಪಿ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಅವರ ಮೇಲಿನ ದೂರಿನ ಬಗ್ಗೆಯೂ ಸರ್ಕಾರದ ಮಟ್ಟದಲ್ಲೇ ವಿಚಾರಣೆ, ಕ್ರಮ ಆಗಬೇಕೇ ಹೊರತು ನಮ್ಮ ಮಟ್ಟದಲ್ಲಿ ಅಲ್ಲ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸ್ಪಷ್ಟಪಡಿಸಿದರು.

ಪ್ರಹ್ಲಾದ್ ಅವರು ನಿಯಮ ಮೀರಿ ಹೆಚ್ಚುವರಿಯಾಗಿ ಹಲವು ಹುದ್ದೆಗಳ ಉಸ್ತುವಾರಿ ಹೊತ್ತಿದ್ದಾರೆ ಎಂದು ಆರೋಪಿಸಿ ಗುತ್ತಿಗೆದಾರರು ಪತ್ರ ಬರೆದಿರುವ ಬಗ್ಗೆ ಅವರು ಪ್ರತಿಕ್ರಿಯಿಸಿದರು.



# ಮಳೆ: ಉರುಳಿದ ಮರ, ವಿದ್ಯುತ್ ಕಂಬ

### ಸಹಕಾರ ನಗರದಲ್ಲಿ ಅಂಗಡಿ, ಮನೆಗಳಿಗೆ ನುಗ್ಗಿದ ನೀರು • ಅಧಿಕಾರಿಗಳ ವಿರುದ್ಧ ಸ್ಥಳೀಯರ ಆಕ್ರೋಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಬುಧವಾರ ಸಹ ಮಳೆ ಅಬ್ಬರ ಮುಂದುವರಿದಿತ್ತು. ಹಲವು ಪ್ರದೇಶಗಳಲ್ಲಿ ರಾತ್ರಿ ಧಾರಾಕಾರ ಮಳೆಯಾಗಿದೆ. ಪ್ರಮುಖ ರಸ್ತೆ ಹಾಗೂ ಜಂಕ್ಷನ್‌ಗಳಲ್ಲಿ ಹೊಳೆಯಂತೆ ಮಳೆ ನೀರು ಹರಿಯಿತು.

ಸಹಕಾರ ನಗರ ವ್ಯಾಪ್ತಿಯಲ್ಲಿ ಸುರಿದ ಭಾರಿ ಮಳೆಯಿಂದ ಹಲವು ಅಂಗಡಿ ಹಾಗೂ ಮನೆಗಳಿಗೆ ನೀರು ನುಗ್ಗಿ ಸಮಸ್ಯೆ ಸೃಷ್ಟಿಸಿತ್ತು. ಮನೆಗಳಲ್ಲಿದ್ದ ಸಾಮಗ್ರಿ ನೀರಿನಲ್ಲಿ ತೊಯ್ದವು.

ಸ್ಥಳಕ್ಕೆ ಬಂದ ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಸ್ಥಳೀಯರು ಆಕ್ರೋಶ ಹೊರಹಾಕಿ ಪ್ರತಿಭಟನೆ ನಡೆಸಿದರು. ಭಾರಿ ಮಳೆ ಸುರಿದ ವೇಳೆ ಮನೆಗಳಿಗೆ ನೀರು ನುಗ್ಗುವುದು ಸಾಮಾನ್ಯ ಸಂಗತಿಯಾಗಿದೆ. ಬಿಬಿಎಂಪಿ ಶಾಶ್ವತವಾಗಿ ಸಮಸ್ಯೆ ಪರಿಹರಿಸುತ್ತಿಲ್ಲ. ಸಮಸ್ಯೆಯಾದಾಗ ಮಾತ್ರ ಅಧಿಕಾರಿಗಳು ಈ ಪ್ರದೇಶಕ್ಕೆ ಭೇಟಿ ನೀಡುತ್ತಾರೆ. ಬಳಿಕ ಈ ಪ್ರದೇಶಕ್ಕೆ ಬರುವುದಿಲ್ಲ ಎಂದು ಆಪಾದಿಸಿದರು.

ಪೀಣ್ಯ, ಯಶವಂತಪುರ, ಶೇಷಾದ್ರಿಪುರ, ಮೆಜೆಸ್ಟಿಕ್, ಆಡುಗೋಡಿ, ಇಂದಿರಾನಗರ, ಹೆಬ್ಬಾಳ, ಯಲಹಂಕ, ರಾಜಾಜಿನಗರ ಭಾಗದಲ್ಲಿ ಮಳೆಯಾಗಿದೆ. ಬುಧವಾರ ಸಹ ಕೆಲವು ಕೆಳಸೇತುವೆಗಳಲ್ಲಿ ನೀರು ನಿಂತು ವಾಹನ ಸವಾರರು ಪರದಾಡಬೇಕಾಯಿತು.

ಮಳೆ ಹಾಗೂ ಗಾಳಿಯ ಅಬ್ಬರಕ್ಕೆ ಜಾಲಹಳ್ಳಿ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ರಾಜರತ್ನಂ ವೃತ್ತದಲ್ಲಿ ಮರವೊಂದು ರಸ್ತೆಗೆ ಉರುಳಿ ಬಿದ್ದು ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿತ್ತು. ಬಿಬಿಎಂಪಿ ಸಿಬ್ಬಂದಿ ಹಾಗೂ ಸಂಚಾರ ಪೊಲೀಸರು ಮರ ತೆರವುಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಹೆಬ್ಬಾಳ ಪೊಲೀಸ್ ಠಾಣೆಯ ವ್ಯಾಪ್ತಿಯ ರಾಯಲ್ ಮಾರ್ಟ್ ಬಳಿ ಗಾಳಿಗೆ ವಿದ್ಯುತ್ ಕಂಬವೊಂದು ಕಾರಿನ ಮೇಲೆ ಉರುಳಿ ಬಿದ್ದಿತ್ತು. ತಕ್ಷಣವೇ ವಿದ್ಯುತ್ ಸಂಪರ್ಕ ಕಡಿತ ಮಾಡಿದ್ದರಿಂದ ಅಪಾಯ ತಪ್ಪಿತು. ವಿಜಯನಗರ, ಕೆಂಗೇರಿ, ಅಶೋಕ ನಗರ, ಕೋರಮಂಗಲ ಭಾಗದಲ್ಲೂ ಮಳೆಯಾಗಿದೆ.



ಜಾಲಹಳ್ಳಿ ಸಂಚಾರ ಠಾಣೆ ವ್ಯಾಪ್ತಿಯ ರಾಜರತ್ನಂ ವೃತ್ತದಲ್ಲಿ ಉರುಳಿದ್ದ ಮರ

### 20ಕ್ಕೂ ಅಧಿಕ ಮನೆಗಳಿಗೆ ನೀರು

ಎರಡು ದಿನಗಳಲ್ಲಿ ಸುರಿದ ಮಳೆಯಿಂದ 20ಕ್ಕೂ ಅಧಿಕ ಮನೆಗಳಿಗೆ ನೀರು ನುಗ್ಗಿರುವ ಬಗ್ಗೆ ಪ್ರಾಥಮಿಕ ಮಾಹಿತಿ ಬಂದಿದೆ. ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿ(ಎಸ್‌ಡಿಆರ್‌ಎಫ್) ಪ್ರಕಾರ ಪರಿಹಾರದ ಪ್ರಮಾಣ ನಿರ್ಧರಿಸಿ, ಪರಿಹಾರ ವಿತರಣೆ ಅಧಿಕಾರವನ್ನು ವಲಯದ ಆಯುಕ್ತರಿಗೆ ನೀಡಲಾಗಿದೆ. ಅವರೇ ಕ್ರಮ ಕೈಗೊಳ್ಳಲಿದ್ದಾರೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಪಶ್ಚಿಮ ಬೆಂಗಳೂರಿನಲ್ಲಿ 8, ಪೂರ್ವ ಬೆಂಗಳೂರಿನಲ್ಲಿ 2-3, ಉತ್ತರ ಬೆಂಗಳೂರಿನಲ್ಲಿ 11 ಮನೆಗಳಿಗೆ ನೀರು ನುಗ್ಗಿದೆ ಎಂದು ಮಾಹಿತಿ ಬಂದಿದೆ. ಪೂರ್ಣ ಪ್ರಮಾಣದ ವರದಿ ಪಡೆಯಲಾಗುವುದು ಎಂದರು.

## ನಗರದಲ್ಲಿ ಇಂದು

**ಶಬ್ದ ಮಾಲಿನ್ಯದ ಬಗ್ಗೆ ಜಾಗೃತಿ:** ಆಯೋಜನೆ ಹಾಗೂ ಸ್ಥಳ: ಮೌಂಟ್ ಕಾರ್ಮೆಲ್ ಕಾಲೇಜು, ಅರಮನೆ ರಸ್ತೆ, ಬೆಳಿಗ್ಗೆ 7.30

**ಬಿ.ಎಸ್. ಮಂಜುನಾಥ್ ಅವರ 'ಭಾವಯಾನ' ಕವನ ಸಂಕಲನ ಬಿಡುಗಡೆ:** ಕಾರ್ಯಕ್ರಮ ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಎಸ್.ಎಲ್. ಭೈರಪ್ಪ, ಪುಸ್ತಕ ಬಿಡುಗಡೆ: ಪ್ರಧಾನ್ ಗುರುದತ್, ಪುಸ್ತಕ ಪರಿಚಯ: ಎಂ.ಎಸ್. ನರಸಿಂಹಮೂರ್ತಿ, ಉಪಸ್ಥಿತಿ: ಬಿ.ಎಸ್. ಮಂಜುನಾಥ್, ಆಯೋಜನೆ: ಜಾಗೃತಿ ಟ್ರಸ್ಟ್, ರೋಟರಿ ರಿಚ್ಮಂಡ್ ಟೌನ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 9.30

**ಕರ್ನಾಟಕ ರಾಜ್ಯೋತ್ಸವ ಸಮಾರಂಭ:** ಅತಿಥಿಗಳು: ಧ್ರುವ ಸರ್ಜಾ, ಶಿವರಾಜು ಕೆ.ಆರ್. ಪೇಟೆ, ಸಿ.ಎಂ. ಮಾರೇಗೌಡ, ಜಿ. ಮುನಿರಾಜು, ಕೆ.ಆರ್. ಶಶಿಕುಮಾರ್, ಕೃಷ್ಣಪ್ಪ, ಆರ್. ಕುಮಾರ್, ಶಾರದಾ, ಕೆ. ವೆಂಕಟೇಶ, ಮಂಚಯ್ಯ, ಪ್ರದೀಪ್, ಜೆ.ದೊಡ್ಡಯ್ಯ, ಅಧ್ಯಕ್ಷತೆ: ಎನ್.ಸಿ. ಕುಮಾರ್, ಆಯೋಜನೆ: ಶಂಕರ್‌ನಾಗ್ ವಿನಾಯಕ ಗೆಳೆಯರ ಬಳಗ, ಸ್ಥಳ: ನಾಗದೇವನಹಳ್ಳಿ ಶಂಕರ್ ನಾಗ್ ವೃತ್ತದಿಂದ ಮರಿಯಪ್ಪನಪಾಳ್ಯ ವೃತ್ತದವರೆಗೆ, ಬೆಳಿಗ್ಗೆ 10

**ವ್ಯಾಪಾರೋದ್ಯಮಿಗಳ ಅಭಿವೃದ್ಧಿ ಕಾರ್ಯಕ್ರಮ ಹಾಗೂ ಕೈಗಾರಿಕಾ ವಸ್ತು ಪ್ರದರ್ಶನ:** ಉದ್ಘಾಟನೆ: ಶರಣಬಸಪ್ಪ ದರ್ಶನಾಪುರ, ಅಧ್ಯಕ್ಷತೆ: ಸಿ.ಎ. ಶಶಿಧರ್ ಶೆಟ್ಟಿ, ಆಯೋಜನೆ: ಎಂಎಸ್‌ಎಂಇ ಸಚಿವಾಲಯ, ಕರ್ನಾಟಕ ಸಣ್ಣ ಕೈಗಾರಿಕಾ ಸಂಘ (ಕಾಸಿಯಾ), ಸ್ಥಳ: ಕಾಸಿಯಾ, ವಿಜಯನಗರ, ಬೆಳಿಗ್ಗೆ 10

**ಕರ್ನಾಟಕ ರಾಜ್ಯೋತ್ಸವ ಸಮಾರಂಭ:** ಉದ್ಘಾಟನೆ: ಭಾನು ಪ್ರಕಾಶ್ ಶ್ರೀವಾಸ್ತವ, ಮುಖ್ಯ ಅತಿಥಿಗಳು: ಎಸ್. ಕಿರಣ್ ಕುಮಾರ್, ರಮೇಶ್ ಅರವಿಂದ್, ಅಧ್ಯಕ್ಷತೆ: ಮನೋಜ್ ಜೈನ್, ಆಯೋಜನೆ ಹಾಗೂ ಸ್ಥಳ: ಮಾಸ್ತಿ ಮಂಟಪ, ಭಾರತ್ ಎಲೆಕ್ಟ್ರಾನಿಕ್ಸ್ ಬೆಂಗಳೂರು ಘಟಕ, ಜಾಲಹಳ್ಳಿ, ಮಧ್ಯಾಹ್ನ 3.30

**ಆಟೊ ರಿಕ್ಷಾ ದಿನಾಚರಣೆ ಕಾರ್ಯಕ್ರಮ:** ಮುಖ್ಯ ಅತಿಥಿಗಳು: ರಾಮಲಿಂಗಾರೆಡ್ಡಿ, ಸಂತೋಷ್ ಲಾಡ್, ಪ್ರಜ್ವಲ್ ದೇವರಾಜ್, ಆಯೋಜನೆ: ಪೀಸ್ ಆಟೊ, ಸ್ಥಳ: ಚಂದ್ರಗುಪ್ತ ಆಟದ ಮೈದಾನ, ಜಯನಗರ 5ನೇ ಹಂತ, ಸಂಜೆ 6

**ಪ.ಸ. ಕುಮಾರ್ ಅವರ 'ಮಾರ್ಕಿಂಗ್ಸ್ ಆಫ್ ಎ ಹ್ಯಾಂಡ್' ಏಕವ್ಯಕ್ತಿ ಚಿತ್ರಪ್ರದರ್ಶನ:** ಮುಖ್ಯ ಅತಿಥಿ: ಶೀಲಾ ಗೌಡ, ಗೌರವ ಅತಿಥಿ: ಎಂ.ಜೆ. ಕಮಲಾಕ್ಷಿ, ರಜನಿ ಪ್ರಸನ್ನ, ಪ್ರೇಮಾ ಕುಮಾರಿ, ಆಯೋಜನೆ ಹಾಗೂ ಸ್ಥಳ: ಆರ್ಟ್ ಹೌಸ್, ವಸಂತನಗರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

## 25 ಮಂದಿ ವಿರುದ್ಧ ಎಫ್‌ಐಆರ್

**ಬೆಂಗಳೂರು:** ಪ್ಯಾಲೆಸ್ಟೀನ್ ನಾಗರಿಕರ ಪರವಾಗಿ ನಗರದಲ್ಲಿ ಇತ್ತೀಚೆಗೆ ಏಕಾಏಕಿ ಪ್ರತಿಭಟನೆ ನಡೆಸಿದ್ದ ಆರೋಪದ ಅಡಿ ಕಬ್ಬನ್‌ಪಾರ್ಕ್ ಪೊಲೀಸರು 25 ಮಂದಿ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಕಾರ್ಯಕರ್ತರಾದ ಬೈಶಾಲಿ ಡೇ, ಶಶಾಂಕ್, ಮೊಹಮ್ಮದ್ ಖಲೀಫ್ ಸೇರಿದಂತೆ 25 ಮಂದಿ ವಿರುದ್ಧ ಸಾರ್ವಜನಿಕ ಸಂಚಾರಕ್ಕೆ ಅಡಚಣೆ, ಅನುಮತಿ ಪಡೆಯದೆ ಪ್ರತಿಭಟನೆ ಮಾಡಿದ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

## ಚಿರತೆ ದಾಳಿ ಪುತ್ರಿ ರಕ್ಷಿಸಿದ ತಂದೆ

ಪ್ರಜಾವಾಣಿ ವಾರ್ತೆ

**ತುಮಕೂರು:** ತಾಲ್ಲೂಕಿನ ಚಿಕ್ಕಬೆಳ್ಳಾವಿಯಲ್ಲಿ ಮಂಗಳವಾರ ರಾತ್ರಿ ಚಿರತೆ ದಾಳಿಗೆ ಸಿಲುಕಿದ ಮಗಳನ್ನು ತಂದೆ ರಕ್ಷಿಸಿದ್ದಾರೆ.

ಮನೆ ಅಂಗಳದಲ್ಲಿ ಆಟವಾಡುತ್ತಿದ್ದ ಬಾಲಕಿ ಲೇಖನ (7) ಮೇಲೆ ಚಿರತೆ ದಾಳಿಗೆ ಮುಂದಾಗಿದೆ. ಈ ಸಂದರ್ಭದಲ್ಲಿ ತಂದೆ ರಾಕೇಶ್, ಕೂಡಲೇ ಮಗಳನ್ನು ತನ್ನತ್ತ ಎಳೆದುಕೊಂಡು ದೊಣ್ಣೆ ಹಿಡಿದು ಬೆದರಿಸಿದ ನಂತರ ಚಿರತೆ ಪರಾರಿಯಾಗಿದೆ.

'ಇಬ್ಬರು ಮಕ್ಕಳ ಜತೆ ಕಾಂಪೌಂಡ್ ಒಳಗೆ ನಿಂತಿದ್ದೆ. ಮಗಳು ಲೇಖನ ಗೋಡೆ ಹತ್ತಿರ ಇದ್ದಳು. ಈ ವೇಳೆ ಏಕಾಏಕಿ ಚಿರತೆ ಗೋಡೆ ಹಾರಿ ಬಂತು, ಕೂಡಲೇ ಮಗಳನ್ನು ಎಳೆದುಕೊಂಡೆ ರಕ್ಷಣೆ ಮಾಡಿದೆ' ಎಂದು ರಾಕೇಶ್ ತಿಳಿಸಿದ್ದಾರೆ.

# ಕೆಆರ್‌ಎಸ್ ಸುರಕ್ಷತೆ: ಹೈಕೋರ್ಟ್ ಆತಂಕ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕೆಆರ್‌ಎಸ್ (ಕೃಷ್ಣರಾಜ ಸಾಗರ) ಜಲಾಶಯದ ಸುರಕ್ಷತೆ ಗಂಭೀರ ವಿಷಯವಾಗಿದ್ದು, ಯಾವುದೇ ಕಾರಣಕ್ಕೂ ಇದನ್ನು ನಿರ್ಲಕ್ಷಿಸಲಾಗದು. ಒಂದು ಸಣ್ಣ ಲೋಪವೂ ದೊಡ್ಡ ಅಪಾಯಕ್ಕೆ ಕಾರಣವಾಗಬಹುದು' ಎಂದು ಆತಂಕ ವ್ಯಕ್ತಪಡಿಸಿರುವ ಹೈಕೋರ್ಟ್, 'ಜಲಾಶಯದ ಸುತ್ತಮುತ್ತಲಿನ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆ ಭಾಗವಾಗಿ ನಡೆಸುವ ಸ್ಫೋಟವು ಜಲಾಶಯಕ್ಕೆ ಹಾನಿ ಮಾಡುತ್ತದೆಯೇ ಹೇಗೆ ಎಂಬುದನ್ನು ಪರಿಶೀಲಿಸಬೇಕಿದೆ' ಎಂದು ಹೇಳಿದೆ.

ಗಣಿಗಾರಿಕೆ ಪರವಾನಗಿ ನೀಡುವಾಗ ಜಿಲ್ಲಾಧಿಕಾರಿ ಭೂ ಪರಿವರ್ತನೆಗೆ ವಿಧಿಸಿದ ಷರತ್ತನ್ನು ಪ್ರಶ್ನಿಸಿ ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಸಿ.ಜಿ. ಕುಮಾರ್ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠವು, 'ಗಣಿಗಾರಿಕೆ ಹಿನ್ನೆಲೆಯಲ್ಲಿ ನಡೆಸಲಾಗುವ ಸ್ಫೋಟ ಚಟುವಟಿಕೆಗಳು ಕೆಆರ್‌ಎಸ್ ಜಲಾಶಯಕ್ಕೆ ಹಾನಿ ಮಾಡುತ್ತವೆಯೇ ಹೇಗೆ ಎಂಬುದನ್ನು ಪರಿಶೀಲಿಸಬೇಕಿದೆ. ಈ ದಿಸೆಯಲ್ಲಿ ಜಲಾಶಯ ಸುರಕ್ಷತಾ ಕಾಯ್ದೆ–2021ರ ಅನ್ವಯ ತುರ್ತು ಕ್ರಮಕ್ಕೆ ಮುಂದಾಗಬೇಕಿದೆ' ಎಂದು ಹೇಳಿದೆ.

'ಈಗಾಗಲೇ ಈ ಪ್ರಕರಣದ ಅಮಿಕಸ್ ಕ್ಯೂರಿ ಆದ (ನ್ಯಾಯಾಲಯಕ್ಕೆ ಸಹಕರಿಸುವ ವಕೀಲ) ಹಿರಿಯ ವಕೀಲ ಆದಿತ್ಯ ಸೋಂಧಿ ನ್ಯಾಯಾಲಯಕ್ಕೆ ಪ್ರಾಥಮಿಕ ವರದಿ ಸಲ್ಲಿಸಿದ್ದಾರೆ. ಇದರಲ್ಲಿ ರಾಷ್ಟ್ರೀಯ ಜಲಾಶಯ ಸುರಕ್ಷತಾ ಪ್ರಾಧಿಕಾರ ಮತ್ತು ಎಸ್‌ಸಿಡಿಸಿ ಕಾರ್ಯ ಚಟುವಟಿಕೆಯನ್ನು ಉಲ್ಲೇಖಿಸಲಾಗಿದೆ. ಜಲಾಶಯ ಸುರಕ್ಷತಾ ಕಾಯ್ದೆ ಪ್ರಕಾರ ಎಸ್‌ಸಿಡಿಸಿ ವರ್ಷದಲ್ಲಿ ಎರಡು ಸಭೆಗಳನ್ನು ನಡೆಸಬೇಕಿದೆ. ಹೀಗಾಗಿ, ಈ ಪ್ರಕರಣದಲ್ಲಿ ರಾಜ್ಯ ಜಲಾಶಯ ಸುರಕ್ಷಾ ಸಮಿತಿಯನ್ನೂ (ಎಸ್‌ಸಿಡಿಸಿ) ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡಬೇಕಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

'2018ರಲ್ಲಿ ಸ್ಥಾಪನೆಯಾದ ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಕೇಂದ್ರವು (ಕೆಎಸ್‌ಎನ್‌ಡಿಎಂಸಿ) ಜಿಲ್ಲಾಧಿಕಾರಿಗೆ ಯಾವುದಾದರೂ ವರದಿ ಸಲ್ಲಿಸಿದೆಯೇ, ಒಂದೊಮ್ಮೆ ವರದಿ ನೀಡಿದ್ದರೆ ಅದನ್ನು ಏಕೆ ಬಹಿರಂಗಪಡಿಸಿಲ್ಲ. ಒಂದು ವೇಳೆ ಬಹಿರಂಗವಾಗಿದ್ದರೆ ಅದು ಯಾವ ರೀತಿಯಲ್ಲಿ



ಸಾರ್ವಜನಿಕರಿಗೆ ಲಭ್ಯವಿದೆ. ಸುರಕ್ಷತೆ ನಿರ್ವಹಣೆ, ಭದ್ರತೆ ಅಥವಾ ಗೋಪ್ಯತೆ ಬಗ್ಗೆ ಏನಾದರೂ ಸಮಸ್ಯೆಗಳಿದ್ದರೆ ಅದನ್ನೂ ಎಸ್‌ಸಿಡಿಸಿ ವಿವರಿಸಬೇಕು' ಎಂದು ಆದೇಶದಲ್ಲಿ ವಿವರಿಸಿರುವ ನ್ಯಾಯಪೀಠ, ವಿಚಾರಣೆಯನ್ನು ಡಿಸೆಂಬರ್ 12ಕ್ಕೆ ಮುಂದೂಡಿದೆ.

**ಪ್ರಕರಣವೇನು?:** ಪಾಂಡವಪುರ ತಾಲ್ಲೂಕಿನ ಹೊಂಗನಹಳ್ಳಿ ವ್ಯಾಪ್ತಿಯಲ್ಲಿನ 120 ಎಕರೆ ಭೂ ಪರಿವರ್ತನೆಗೆ ಜಿಲ್ಲಾಧಿಕಾರಿ ಷರತ್ತು ವಿಧಿಸಿರುವುದನ್ನು ಚಿನಕುರಳಿ ಗ್ರಾಮದ ಸಿ. ಜಿ.ಕುಮಾರ್ ಪ್ರಶ್ನಿಸಿದ್ದಾರೆ. ಕಾವೇರಿ ನೀರಾವರಿ ನಿಗಮವು ಪರೀಕ್ಷಾರ್ಥ ಸ್ಫೋಟ ನಡೆಸಿತ್ತು. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಯು 2023ರ ಮೇ 15ರಂದು ಪರವಾನಗಿ ನೀಡಲು ಷರತ್ತು ವಿಧಿಸಿದ್ದರು.



ಇನ್‌ಸೈಟ್ಸ್ ಐಎಎಸ್ ಕೇಂದ್ರದಲ್ಲಿ ನಗರದ ವಿವಿಧ ತರಬೇತಿ ಕೇಂದ್ರಗಳಿಂದ ಬಂದಿದ್ದ ವಿದ್ಯಾರ್ಥಿಗಳು 500 ಮೀಟರ್ ಉದ್ದದ ಕನ್ನಡ ಬಾವುಟವನ್ನು ಪ್ರದರ್ಶಿಸಿ, ಕನ್ನಡಾಂಬೆಯ ಭಾವಚಿತ್ರವನ್ನು ಮೆರವಣಿಗೆ ಮಾಡುವ ಮೂಲಕ ಕರ್ನಾಟಕ ರಾಜ್ಯೋತ್ಸವ ಆಚರಿಸಿದರು. ಶಾಸಕ ಎಂ. ಕೃಷ್ಣಪ್ಪ, ಇನ್ಸೈಟ್ಸ್ ಐಎಎಸ್ ಸಂಸ್ಥಾಪಕ ವಿನಯ್ ಕುಮಾರ್ ಜಿ.ಬಿ. ಇದ್ದರು.

## ರೌಡಿ ಶೀಟರ್ ಮನೆಗಳ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ವಿವಿಧ ಪೊಲೀಸ್ ವಿಭಾಗಗಳ ವ್ಯಾಪ್ತಿಯ ರೌಡಿಶೀಟರ್‌ಗಳ ಮನೆಯ ಮೇಲೆ ಕೇಂದ್ರ ಅಪರಾಧ ವಿಭಾಗ(ಸಿಸಿಬಿ) ಪೊಲೀಸರು ಮಂಗಳವಾರ ತಡರಾತ್ರಿ ಹಾಗೂ ಬುಧವಾರ ಬೆಳಿಗ್ಗೆ ದಾಳಿ ನಡೆಸಿ ಬಿಸಿಮುಟ್ಟಿಸಿದರು.

ರೌಡಿಶೀಟರ್‌ಗಳಾದ ರಮೇಶ್, ಜಗದೀಶ್ ಅಲಿಯಾಸ್ ಟಾಮಿ ಸೇರಿದಂತೆ 20ಕ್ಕೂ ಹೆಚ್ಚು ಮಂದಿ ಮನೆಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಪೊಲೀಸರು ಹೇಳಿದರು.

ವಾರಂಟ್ ಜಾರಿಯಾಗಿದ್ದರೂ ಕೆಲವು ರೌಡಿಗಳು ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡು ಓಡಾಡುತ್ತಿದ್ದರು. ಜತೆಗೆ ರೌಡಿ ಚಟುವಟಿಕೆಗಳಲ್ಲಿ ತೊಡಗಿದ್ದರು. ರೌಡಿ ಚಟುವಟಿಕೆ ನಿಯಂತ್ರಣಕ್ಕೆ ತರಲು ಕೋರ್ಟ್ ಪೊಲೀಸರಿಗೆ ಸೂಚನೆ ನೀಡಿತ್ತು. ಸೂಚನೆ ನೀಡಿದ ಮೇಲೆ ಎಚ್ಚೆತ್ತ ಪೊಲೀಸರು ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ವೈಟ್‌ಫೀಲ್ಡ್, ಆಗ್ನೇಯ ಹಾಗೂ ಈಶಾನ್ಯ ವಿಭಾಗದ ರೌಡಿಶೀಟರ್ ಮನೆಗಳ ಮೇಲೆ ದಾಳಿ ನಡೆಸಿದರು.

‘ಮಾರಕಾಸ್ತ್ರಗಳು ಹಾಗೂ ಕೆಲವು ದಾಖಲೆ ಪತ್ರಗಳನ್ನು ಜಪ್ತಿ ಮಾಡಲಾಗಿದೆ. ಕೆಲವು ರೌಡಿಗಳ ಮನೆಯಲ್ಲಿ ಚೆಕ್, ಸಹಿ ಪಡೆದಿರುವ ಚಾಪಾ ಕಾಗದಗಳು ಪತ್ತೆಯಾಗಿವೆ’ ಎಂದು ಪೊಲೀಸರು ಹೇಳಿದರು.

### ಅಕ್ರಮ ವಾಸ: ಬೆಂಗಳೂರು ಸೇರಿ ರಾಜ್ಯದ ವಿವಿಧೆಡೆ ಎನ್‌ಐಎ ದಾಳಿ

# ಬಾಂಗ್ಲಾ ವಲಸಿಗರ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರ ಸೇರಿದಂತೆ ರಾಜ್ಯದ ಹಲವೆಡೆ ಏಕಕಾಲದಲ್ಲಿ ದಾಳಿ ನಡೆಸಿದ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಅಧಿಕಾರಿಗಳು 10 ಮಂದಿ ಅಕ್ರಮ ಬಾಂಗ್ಲಾ ವಲಸಿಗರನ್ನು ಬಂಧಿಸಿದ್ದಾರೆ.

ದೇಶದ ಗಡಿಭಾಗದಲ್ಲಿ ಮಧ್ಯವರ್ತಿಗಳ ಮೂಲಕ ಅಕ್ರಮವಾಗಿ ದೇಶ ಪ್ರವೇಶಿಸಿ ಬೆಂಗಳೂರು ಹಾಗೂ ಬೆಂಗಳೂರು ಗ್ರಾಮಾಂತರ ಭಾಗದ ವಿವಿಧೆಡೆ ವಾಸವಾಗಿದ್ದ ಬಾಂಗ್ಲಾ ವಲಸಿಗರ ಮೇಲೆ ಈ ದಾಳಿ ನಡೆದಿದೆ.

ಕರ್ನಾಟಕ ಸೇರಿದಂತೆ 10 ರಾಜ್ಯಗಳ 44 ಸ್ಥಳಗಳಲ್ಲಿ ಎನ್‌ಐಎ ಅಧಿಕಾರಿಗಳು ಬುಧವಾರ ದಾಳಿ ನಡೆಸಿದರು. ಬಂಧಿತರಿಂದ ಮೊಬೈಲ್, ಸಿಮ್ ಕಾರ್ಡ್, ಪೆನ್ ಡ್ರೈವ್, ದಾಖಲೆ ಪತ್ರ, ಆಧಾರ್ ಕಾರ್ಡ್‌ಗಳು ಹಾಗೂ ನಗದು ಜಪ್ತಿ ಮಾಡಿಕೊಳ್ಳಲಾಗಿದೆ. ನಕಲಿ ಆಧಾರ್ ಕಾರ್ಡ್ ಮಾಡಿಸಿಕೊಂಡು ವಿವಿಧೆಡೆ ನೆಲೆಸಿದ್ದರು ಎಂದು ಮೂಲಗಳು ಹೇಳಿವೆ.

ಬೆಂಗಳೂರಿನಲ್ಲಿ ಬುಧವಾರ ಒಟ್ಟು 15 ಸ್ಥಳಗಳಲ್ಲಿ ಕಾರ್ಯಾಚರಣೆ ನಡೆದಿದೆ. ಸೋಲದೇವನಹಳ್ಳಿ, ಕೆ.ಆರ್.ಪುರ, ಬೆಳ್ಳಂದೂರು, ಬೈಯಪ್ಪನಹಳ್ಳಿ, ಗ್ರಾಮಾಂತರ ಭಾಗದ ದೊಡ್ಡಬಳ್ಳಾಪುರ, ಹೊಸಕೋಟೆ, ಆನೇಕಲ್‌ನಲ್ಲಿ ದಾಳಿ ನಡೆಸಿ ಬಂಧಿಸಲಾಯಿತು ಎಂದು ಮೂಲಗಳು ಹೇಳಿವೆ.

ಇತ್ತೀಚೆಗೆ ಅಕ್ರಮ ಬಾಂಗ್ಲಾ ವಲಸಿಗರು ಮಾನವ ಕಳ್ಳಸಾಗಾಣಿಕೆ ಮತ್ತು ಭಯೋತ್ಪಾದನಾ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಸಂಬಂಧ ಎನ್‌ಐಎ ಪ್ರಕರಣ ದಾಖಲಿಸಿಕೊಂಡಿತ್ತು. ಈ ದೂರು ಆಧರಿಸಿ ಕಾರ್ಯಾಚರಣೆ ನಡೆಸಲಾಗಿದೆ.

ಕರ್ನಾಟಕ ಸೇರಿದಂತೆ ದಕ್ಷಿಣ ಹಾಗೂ ಉತ್ತರ ಭಾರತದ ಹಲವು ಪ್ರದೇಶಗಳಲ್ಲಿ ನಕಲಿ ದಾಖಲೆ ಸೃಷ್ಟಿಸಿಕೊಂಡು ಬಾಂಗ್ಲಾ ವಲಸಿಗರು ನೆಲೆಸಿದ್ದರು. ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನವ ಕಳ್ಳ ಸಾಗಣೆ ನಡೆಯುತ್ತಿದೆ ಎಂಬ ಮಾಹಿತಿ ಬಂದಿತ್ತು. ಶೋಧ ಮುಂದುವರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

**ವಿಚಾರಣೆ ಮುಂದುವರಿಕೆ:** ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರದ ಕೆಲವು ಪ್ರದೇಶಗಳಲ್ಲಿ ಬಾಂಗ್ಲಾದೇಶದಿಂದ ಬಂದವರು ನೆಲೆಸಿದ್ದಾರೆ. ಚಿಂದಿ ಆಯುವ, ಆಟಿಕೆ ವಸ್ತು ತಯಾರಿಕೆ ಹಾಗೂ ಮಾರಾಟ ನಡೆಸುತ್ತಿದ್ದಾರೆ. ಕೆಲವು ಕಂಪನಿಗಳಲ್ಲಿ ಪಶ್ಚಿಮಬಂಗಾಳ ರಾಜ್ಯದವರು ಎಂದು ಹೇಳಿಕೊಂಡು ಕೆಲಸಕ್ಕೆ ಸೇರಿಕೊಂಡಿದ್ದರು. ಅವರ ದಾಖಲೆ ಪರಿಶೀಲಿಸಲಾಗುವುದು. ಅಕ್ರಮ ವಲಸಿಗರು ಎಂಬುದು ಕಂಡುಬಂದರೆ ಬಂಧಿಸಲಾಗುವುದು. ಸದ್ಯ ಬಂಧಿಸಿರುವ 10 ಮಂದಿ ವಿಚಾರಣೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಪೊಲೀಸರಿಂದ ಹಣ ವಸೂಲಿ: ಬಂಧನ

ಅಪರಾಧ ಸುದ್ದಿ

**ಬೆಂಗಳೂರು:** ನಗರದಲ್ಲಿ ಅಕ್ರಮ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡುವುದಾಗಿ ನಂಬಿಸಿ ಪೊಲೀಸರಿಂದ ಹಣ ವಸೂಲಿ ಮಾಡುತ್ತಿದ್ದ ಆಟೊ ಚಾಲಕ, ಬನಶಂಕರಿ ನಿವಾಸಿ ವಸೀಂ(32) ನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ವಸೀಂ ಎಂಬಾತ ಪೊಲೀಸ್ ಬಾತ್ಮೀದಾರನಾಗಿ ಕೆಲಸ ಮಾಡುತ್ತಿದ್ದ. ಕಳೆದ ಕೆಲವು ವರ್ಷಗಳಿಂದ ಬೇರೆ ಬೇರೆ ಹೆಸರುಗಳಿಂದ ಪೊಲೀಸರನ್ನು ಪರಿಚಯಿಸಿಕೊಂಡು ವಂಚಿಸುತ್ತಿದ್ದ ಎಂದು ಮೂಲಗಳು ಹೇಳಿವೆ.

‘ನಗರದ ಕೆಲವು ಭಾಗಗಳಲ್ಲಿ ದಂಧೆ ನಡೆಯುತ್ತಿದೆ. ಸ್ಥಳ ಹಾಗೂ ಆರೋಪಿಗಳ ಮಾಹಿತಿ ನೀಡುವುದಾಗಿ ಪೊಲೀಸರಿಗೆ ಕರೆ ಮಾಡಿ ತಿಳಿಸುತ್ತಿದ್ದ. ಸ್ಥಳಕ್ಕೆ ಬಂದ ಪೊಲೀಸರಿಗೆ ಕಷ್ಟವೆಂದು ಹೇಳಿ ಅವರಿಂದ ₹ 1ಸಾವಿರದಿಂದ ₹3 ಸಾವಿರ ವರೆಗೆ ಹಣ ಪಡೆಯುತ್ತಿದ್ದ. ಜತೆಗೆ, ತಪ್ಪು ಮಾಹಿತಿ ನೀಡಿ ತಲೆಮರೆಸಿಕೊಳ್ಳುತ್ತಿದ್ದ. ಹೀಗೆ ಹಲವು ಠಾಣೆ ಪೊಲೀಸರಿಗೆ ವಸೀಂ ವಂಚಿಸಿದ್ದ’ ಎಂದು ಮೂಲಗಳು ಹೇಳಿವೆ.

‘ಕೆಲವು ಪೊಲೀಸ್ ಅಧಿಕಾರಿಗಳಿಗೆ ಕರೆ ಮಾಡಿ ಅಕ್ರಮ ಚಟುವಟಿಕೆ ನಡೆಯುತ್ತಿದೆ ಎಂದು ಮಾಹಿತಿ ನೀಡುತ್ತಿದ್ದ. ಬಳಿಕ ಕರೆ ಮಾಡಿ ಆಟೊದಲ್ಲಿ ಪೆಟ್ರೋಲ್ ಖಾಲಿಯಾಗಿದೆ ಎಂದು ಹೇಳಿ ಹಣಕ್ಕೆ ಬೇಡಿಕೆ ಇಡುತ್ತಿದ್ದ. ಮನೆಯಲ್ಲೂ ಸಮಸ್ಯೆಯಾಗಿರುವ ಬಗ್ಗೆ ತಿಳಿಸುತ್ತಿದ್ದ. ಮೊಬೈಲ್ ಪಾವತಿ ಆ್ಯಪ್‌ಗಳ ಮೂಲಕ ಹಣ ಪಡೆಯುತ್ತಿದ್ದ. ಖಾತೆಗೆ ಹಣ ಹಾಕಿದ ಮೇಲೆ ಆರೋಪಿ ಮೊಬೈಲ್ ಸ್ವಿಚ್ಡ್ ಆಫ್ ಮಾಡಿಕೊಂಡು ನಾಪತ್ತೆಯಾಗುತ್ತಿದ್ದ. ಹೀಗೆ ನಾಲ್ಕು ವರ್ಷಗಳಿಂದ ಪೊಲೀಸರಿಗೆ ವಂಚಿಸುತ್ತಿದ್ದ. ಈ ಸಂಬಂಧ ಕಾಟನ್‌ಪೇಟೆ ಠಾಣೆಯಲ್ಲೂ ಪ್ರಕರಣ ದಾಖಲಾಗಿತ್ತು’ ಎಂದು ಪೊಲೀಸರು ಹೇಳಿದರು.

## ಸುದ್ದಿ 2 ನಿಮಿಷ

### ಅಧಿಕಾರಿ ಡೈರಿಯಲ್ಲಿ ರಹಸ್ಯ ಸಂಖ್ಯೆ ‘3 ಕೆಎಂ’: ಯತ್ನಾಳ

**ಬೆಂಗಳೂರು:** ‘ಇತ್ತೀಚೆಗೆ ನಡೆದ ದಾಳಿ ಸಂದರ್ಭದಲ್ಲಿ ಐಎಎಸ್ ಅಧಿಕಾರಿಯೊಬ್ಬರ ಡೈರಿ ವಶಕ್ಕೆ ತೆಗೆದುಕೊಂಡಿದ್ದು, ಅದರಲ್ಲಿ ‘3 ಕೆಎಂ’ ಎಂದು ನಮೂದಿಸಲಾಗಿದೆ. ಇದು ಲಂಚಕ್ಕೆ ಸಂಬಂಧಿಸಿದ ರಹಸ್ಯ ಸಂಖ್ಯೆ ಇರಬಹುದು’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.



ಪ್ರತಿಯೊಂದು ಹುದ್ದೆಗೂ ದರ ಪಟ್ಟಿ ನಿಗದಿ ಮಾಡಿದ್ದಾರೆ. ಡೈರಿಯಲ್ಲಿ ಬರೆದಿರುವ 3 ಕೆಎಂ ಎಂದರೆ ಸಚಿವರಿಗೆ ಕೊಡಲು ₹3 ಕೋಟಿ ಇರಬಹುದು ಅಥವಾ ₹300 ಕೋಟಿ ಇರಬಹುದು. ಇಲ್ಲವೇ ಆ ಹುದ್ದೆಯನ್ನು ಪಡೆಯಲು ಅಧಿಕಾರಿಗೆ ನೆರವಾದ ವ್ಯಕ್ತಿಯ ಹೆಸರೂ ಇರಬಹುದು ಎಂದು ಹೇಳಿದ ಅವರು, ಐಎಎಸ್ ಅಧಿಕಾರಿಯ ಹೆಸರು ಬಹಿರಂಗ ಪಡಿಸಲು ಒಪ್ಪಲಿಲ್ಲ.

ಕಿಯೋನಿಕ್ಸ್ ಹಗರಣ ಹೊರ ಬಂದ ಮಾದರಿಯಲ್ಲಿ ಇನ್ನಷ್ಟು ಹಗರಣಗಳು ಹೊರ ಬರಲಿವೆ.

ಹಣ ಕೊಟ್ಟು ಅಪೇಕ್ಷಿತ ಹುದ್ದೆ ಹಿಡಿದ ಅಧಿಕಾರಿ ಅದನ್ನು ಮರಳಿ ಪಡೆಯಲು ಲೂಟಿಯಲ್ಲಿ ತೊಡಗಿದ್ದಾರೆ ಎಂದರು.

## ಇಂದಿನಿಂದ ಸಿರಿಧಾನ್ಯ, ಸಾವಯವ ಕೃಷಿ ಮೇಳ

**ಬೆಂಗಳೂರು:** ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಶ್ರೀಶ್ರೀ ನೈಸರ್ಗಿಕ ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಂಟಿ ಆಶ್ರಯದಲ್ಲಿ ಇದೇ 9 ರಿಂದ 11ರವರೆಗೆ ಸಂಸ್ಥೆಯ ಆವರಣದಲ್ಲಿ ಸಿರಿಧಾನ್ಯಗಳು ಮತ್ತು ಸಾವಯವ ಕೃಷಿ ಮೇಳವನ್ನು ಆಯೋಜಿಸಿದೆ.

ದಕ್ಷಿಣ ಬೆಂಗಳೂರಿನಲ್ಲಿ ಇದೇ ಮೊದಲ ಬಾರಿಗೆ ಈ ಜಾಗತಿಕ ಕೃಷಿ ಮೇಳ ಹಮ್ಮಿಕೊಳ್ಳಲಾಗಿದೆ. ಪ್ರತಿ ದಿನ ಬೆಳಿಗ್ಗೆ 11ರಿಂದ ಸಂಜೆ 7ರವರೆಗೆ ಮೇಳ ನಡೆಯಲಿದೆ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ್ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೃಷಿ ಕ್ಷೇತ್ರದಲ್ಲಿ ಆಗುತ್ತಿರುವ ಗುಣಾತ್ಮಕ ಬದಲಾವಣೆ ಮತ್ತು ತಂತ್ರಜ್ಞಾನ ಬಳಕೆಯ ಕುರಿತು ಮೇಳದಲ್ಲಿ ವಿಸ್ತೃತ ಚರ್ಚೆ ನಡೆಯಲಿದೆ.

180ಕ್ಕೂ ಹೆಚ್ಚು ಮಳಿಗೆಗಳ ಬೃಹತ್ ಪ್ರದರ್ಶನ ಏರ್ಪಡಿಸಲಾಗಿದೆ. ಸಿರಿಧಾನ್ಯ, ಸಾವಯವ ಮತ್ತು ನೈಸರ್ಗಿಕ ಕೃಷಿಗೆ ಅಗತ್ಯವಿರುವ ಕೃಷಿ ಪರಿಕರಗಳು, ಬೀಜಗಳು, ಮಾರುಕಟ್ಟೆ ವ್ಯವಸ್ಥೆ, ಅಧಿಕ ಇಳುವರಿ ಸಾಧಿಸಲು ಇರುವ ಬೇಸಾಯ ಕ್ರಮಗಳನ್ನು ವಿವರಿಸುವ ಬೃಹತ್ ಕೃಷಿ ವಸ್ತು ಪ್ರದರ್ಶನ ಇದಾಗಿರುತ್ತದೆ.

ಆರ್ಟ್ ಆಫ್ ವಿಲಿಂಗ್ ಸಂಸ್ಥೆಯ ಶ್ರೀಶ್ರೀ ನೈಸರ್ಗಿಕ್‌ನ ವ್ಯವಸ್ಥಾಪಕ ನಿರ್ದೇಶಕ ರಂಗನಾಥ ಪ್ರಸಾದ್, ರವೀಂದ್ರ ದೇಸಾಯಿ, ಉದಯ ಕುಮಾರ ಕೊಳ್ಳಿಮಠ, ಸಾವಯವ ಕೃಷಿ ಸಂಶೋಧಕ ನಾಗರಾಜ್ ಇದ್ದರು.



## ಮಳೆಗೂ ಜಗ್ಗದ ಹೋರಾಟ...

ಅಕ್ಷರ ದಾಸೋಹ ಯೋಜನೆಯನ್ನು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಸೇರಿಸುವಂತೆ ಆಗ್ರಹಿಸಿ, ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ನೇತೃತ್ವದಲ್ಲಿ ಬಿಸಿಯೂಟ ನೌಕರರು ಮಳೆ– ಚಳಿಗೂ ಜಗ್ಗದೇ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸುತ್ತಿದ್ದಾರೆ

ಪ್ರಜಾವಾಣಿ ಚಿತ್ರ: ರಂಜು ಪಿ.

## ಚಿಂದಿ ಆಯುವ ವ್ಯಕ್ತಿ ಕೈಗೆ ಸಿಕ್ಕಿದ ನಕಲಿ ವಿದೇಶಿ ಕರೆನ್ಸಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಚಿಂದಿ ಆಯುವ ವ್ಯಕ್ತಿಯೊಬ್ಬರಿಗೆ ಅಮೆರಿಕದ ಕರೆನ್ಸಿ ಸಿಕ್ಕಿದೆ ಎಂದು ಪೊಲೀಸರಿಗೆ ಮಾಹಿತಿ ನೀಡಲಾಗಿದ್ದು ಅದನ್ನು ಪರಿಶೀಲಿಸಿದಾಗ ಅವುಗಳು ನಕಲಿ ಕರೆನ್ಸಿಗಳು ಎಂಬುದು ಗೊತ್ತಾಗಿದೆ.

‘₹30 ಲಕ್ಷ ಮೌಲ್ಯದ ಅಮೆರಿಕನ್ ಡಾಲರ್ ಸಿಕ್ಕಿದೆ ಎಂದು ಕರೆ ಮಾಡಿ ತಿಳಿಸಲಾಗಿತ್ತು. ಪರಿಶೀಲಿಸಿದಾಗ ನಕಲಿ ಎಂಬುದು ಗೊತ್ತಾಗಿದೆ. ಆದರೂ ಪರಿಶೀಲನೆಗಾಗಿ ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಕಳುಹಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಪಶ್ಚಿಮ ಬಂಗಾಳದ ಸುಲೇಮಾನ್ ಶೇಕ್(39) ಅವರು ಹೆಬ್ಬಾಳ, ನಾಗವಾರ ಸುತ್ತಮುತ್ತ ತ್ಯಾಜ್ಯ ಆಯ್ದು ಜೀವನ ನಡೆಸುತ್ತಿದ್ದಾರೆ. ನ.3ರಂದು ವೀರಣ್ಣಾಪಾಳ್ಯದ ರೈಲ್ವೆ ಗೇಟ್ ಬಳಿ ಕಪ್ಪು ಬಣ್ಣದ ಚೀಲವೊಂದು ಅವರಿಗೆ ಸಿಕ್ಕಿದೆ. ಆ ಚೀಲದಲ್ಲಿ ಈ ಕರೆನ್ಸಿಗಳು ಪತ್ತೆಯಾಗಿವೆ. ಅದರ ಬಗ್ಗೆ ತಿಳಿಯದ ಸುಲೇಮಾನ್ ಶೇಕ್, ತನಗೆ ಆಶ್ರಯ ನೀಡಿದ್ದ ಟೇಕೆದಾಸ್ ಎಂಬುವರಿಗೆ ಮಾಹಿತಿ ನೀಡಿದ್ದರು. ಬಳಿಕ ಟೇಕೆದಾಸ್ ಆ ಚೀಲ ಪರಿಶೀಲಿಸಿದರು. ಸ್ಥಳೀಯರಾದ ಆರ್.ಕಲೀಂ ಉಲ್ಲಾಗೂ ಮಾಹಿತಿ ನೀಡಿದ್ದರು. ಕರೀಂ ಅವರು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರನ್ನು ಭೇಟಿಯಾಗಿ ಮಾಹಿತಿ ನೀಡಿದ್ದರು. ಕೂಡಲೇ ನೋಟುಗಳ ಬಗ್ಗೆ ಪರಿಶೀಲಿಸುವಂತೆ ಹೆಬ್ಬಾಳ ಪೊಲೀಸರಿಗೆ ಸೂಚಿಸಿದ್ದರು. ಬಳಿಕ ಹೆಬ್ಬಾಳ ಪೊಲೀಸರು ಪರಿಶೀಲನೆ ನಡೆಸಿದ್ದರು.

‘ಸಿಕ್ಕಿದ ಕರೆನ್ಸಿಯನ್ನು ಪರಿಶೀಲಿಸಲಾಗಿದೆ. ಇದು ಮೇಲ್ನೋಟಕ್ಕೆ ಕಲರ್ ಜೆರಾಕ್ಸ್ ರೀತಿ ಕಾಣಿಸುತ್ತಿವೆ. ಅವುಗಳ ನೈಜತೆ ಪರೀಕ್ಷೆಗಾಗಿ ಆರ್‌ಬಿಐಗೆ ರವಾನೆ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

## ವಿಮಾನದಲ್ಲಿ ಮಹಿಳೆಗೆ ಲೈಂಗಿಕ ಕಿರುಕುಳ: ಬಂಧನ

ಪ್ರಜಾವಾಣಿ ವಾರ್ತೆ

**ದೇವನಹಳ್ಳಿ:** ಜರ್ಮನಿಯ ಫ್ರಾಂಕ್‌ಪರ್ಟ್‌ನಿಂದ ಬೆಂಗಳೂರಿಗೆ ಪ್ರಯಾಣ ಮಾಡುತ್ತಿದ್ದ 32 ವರ್ಷದ ಮಹಿಳೆಯೊಬ್ಬರಿಗೆ ಸಹ ಪ್ರಯಾಣಿಕನೊಬ್ಬ ಲೈಂಗಿಕ ಕಿರುಕುಳ ನೀಡಿದ್ದು ಆರೋಪಿಯನ್ನು ಬಂಧಿಸಲಾಗಿದೆ. ಬೆಂಗಳೂರಿನ ಶಂಕರ ನಾರಾಯಣ ರಂಗನಾಥನ್ (52) ಬಂಧಿತರು.

ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಅಂತರರಾಷ್ಟ್ರೀಯ ಮಾರ್ಗವಾಗಿ ಸೋಮವಾರ ತಡರಾತ್ರಿ ಆಂಧ್ರಪ್ರದೇಶದ ತಿರುಪತಿ ಮೂಲದ ಮಹಿಳೆಯೊಬ್ಬರು ಪ್ರಯಾಣ ಮಾಡುತ್ತಿದ್ದರು. ಪಕ್ಕದ ಸೀಟ್‌ನಲ್ಲಿ ಕುಳಿತಿದ್ದ ಆರೋಪಿಯು, ನಿದ್ದೆಗೆ ಜಾರಿದ್ದ ಸಮಯದಲ್ಲಿ ಅಸಭ್ಯವಾಗಿ ವರ್ತಿಸಿ ಕಿರುಕುಳ ನೀಡಿದ್ದಾರೆ ಎಂದು ಮಹಿಳೆಯು ವಿಮಾನ ನಿಲ್ದಾಣದ ಪೊಲೀಸರಿಗೆ ನೀಡಿರುವ ದೂರಿನಲ್ಲಿ ಆರೋಪಿಸಿದ್ದಾರೆ.

## ಯಂತ್ರಕ್ಕೆ ತಲೆಕೂದಲು ಸಿಲುಕಿ ಮಹಿಳೆ ಸಾವು

**ಬೆಂಗಳೂರು:** ನೆಲಗದರನಹಳ್ಳಿಯ ಶ್ರೀಪೇಂಟರ್ಸ್ ಕಾರ್ಖಾನೆಯಲ್ಲಿ ಬಣ್ಣ ಮಿಶ್ರಣ ಮಾಡುವ ಸಂದರ್ಭದಲ್ಲಿ ಯಂತ್ರಕ್ಕೆ ತಲೆಯ ಕೂದಲು ಸಿಲುಕಿ ಮಹಿಳೆಯೊಬ್ಬರ ತಲೆ ತುಂಡಾಗಿ ಮೃತಪಟ್ಟಿರುವ ದಾರುಣ ಘಟನೆ ನಡೆದಿದೆ. ರಾಮನಗರದ ಶ್ವೇತಾ(34) ಮೃತಪಟ್ಟವರು.

‘ಕಾರ್ಖಾನೆ ಮಾಲೀಕನ ವಿರುದ್ಧ ನಿರ್ಲಕ್ಷ್ಯ ಆರೋಪದ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

# ಬೆಂಗಳೂರಿಗೆ 24 ಟಿಎಂಸಿ ಅಡಿ ಕಾವೇರಿ ನೀರು

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ಹಾಗೂ ಸುತ್ತಲಿನ ಪ್ರದೇಶಗಳಿಗೆ ಕುಡಿಯುವ ಉದ್ದೇಶಕ್ಕಾಗಿ ವಾರ್ಷಿಕವಾಗಿ 24 ಟಿಎಂಸಿ ಅಡಿ ಕಾವೇರಿ ನೀರನ್ನು ಮೀಸಲು ಇರಿಸಲು ಮತ್ತು ಅದನ್ನು ಜಲ ಮಂಡಳಿ ಬಳಸಿಕೊಳ್ಳಬೇಕು ಎಂದು ಜಲ ಸಂಪನ್ಮೂಲ ಇಲಾಖೆ ಆದೇಶ ಹೊರಡಿಸಿದೆ.

ಬುಧವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಜಲ ಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಈ ವಿಷಯ ತಿಳಿಸಿದರು.

'ಬೆಂಗಳೂರಿಗೆ ಕುಡಿಯುವ ನೀರಿನ ಉದ್ದೇಶಕ್ಕಾಗಿ 24 ಟಿಎಂಸಿ ಅಡಿ ನೀರನ್ನು ಬಳಸಿಕೊಳ್ಳಬಹುದು ಎಂದು ಸುಪ್ರೀಂ ಕೋರ್ಟ್ 2018ರಲ್ಲಿ ತಿಳಿಸಿತ್ತು. ಆದರೆ, ಇದುವರೆಗೂ ಯಾರೂ ಈ ವಿಚಾರವಾಗಿ ಕ್ರಮ ತೆಗೆದುಕೊಂಡಿರಲಿಲ್ಲ. ಈ ಮೊದಲು ಕಡಿಮೆ ನೀರು ನಿಗದಿ ಮಾಡಲಾಗಿತ್ತು. ಈಗ ಉಳಿಕೆ 6 ಟಿಎಂಸಿ ಅಡಿ ನೀರನ್ನು ಬಳಸಿಕೊಂಡು, ಒಟ್ಟಾರೆ ಕುಡಿಯುವ ಉದ್ದೇಶಕ್ಕೆ 24 ಟಿಎಂಸಿ ಬಳಸಿಕೊಳ್ಳಲು ತೀರ್ಮಾನಿಸಿದ್ದೇವೆ. ಈ ಸಂಬಂಧ ಕ್ರಿಯಾ ಯೋಜನೆ ಸಿದ್ಧಪಡಿಸಲು ಜಲ ಮಂಡಳಿಗೆ ಸೂಚಿಸಲಾಗಿದೆ' ಎಂದು ಹೇಳಿದರು.

'ಮೇಕೆದಾಟು ಯೋಜನೆ ಪ್ರಾರಂಭ ಮಾಡಲು ಅನುಮತಿ ನೀಡಬೇಕು ಎಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಹಾಗೂ ಸುಪ್ರೀಂ ಕೋರ್ಟ್‌ನಲ್ಲಿ ಮನವಿ ಮಾಡುತ್ತೇವೆ. ಸಂಕಷ್ಟದ ಸಂದರ್ಭದಲ್ಲಿ ನೀರು ಹರಿಸಲು ಈ ಯೋಜನೆ ಸಹಕಾರಿಯಾಗುತ್ತದೆ. ಅಲ್ಲದೇ ತಮಿಳುನಾಡಿಗೆ ಈ ಯೋಜನೆಯಿಂದ ಹೆಚ್ಚು ಪ್ರಯೋಜನವಿದೆ' ಎಂದರು.

'ಸಂಕಷ್ಟಕಾಲದಲ್ಲೂ 300- 400 ಟಿಎಂಸಿ ಅಡಿ ನೀರು ಬಿಡಬೇಕು ಎಂದು ತಮಿಳುನಾಡಿನವರು ಕೇಳಿದ್ದರು. ಕೆಆರ್‌ಎಸ್‌ಗೆ ಒಳಹರಿವು ಸಂಪೂರ್ಣವಾಗಿ ನಿಂತೇ ಹೋಗಿದೆ. ಇದನ್ನು ಮನದಟ್ಟು ಮಾಡಿಕೊಡಲು ನಿರ್ಧಾರ ಮಾಡಿದ್ದೇವೆ' ಎಂದು ಅವರು ಹೇಳಿದರು.

'ಕುಡಿಯುವ ನೀರಿಗೆ ನಮ್ಮ ಮೊದಲ ಆದ್ಯತೆ. ಸುಪ್ರೀಂ ಕೋರ್ಟ್ ಕೊಟ್ಟಿರುವ ಆದೇಶ ಪಾಲಿಸುತ್ತಿದ್ದೇವೆ. ತಮಿಳುನಾಡಿನವರು ಏನಾದರೂ ಆಕ್ಷೇಪ ವ್ಯಕ್ತಪಡಿಸಲಿ, ನಮ್ಮ ಹಕ್ಕನ್ನು ನಾವೇಕೆ ಬಿಟ್ಟುಕೊಡಬೇಕು. ಈ ಹಿಂದೆ ನೀಡಿರುವ ಆದೇಶವನ್ನೇ ಈಗ ಪಾಲಿಸುತ್ತಿದ್ದೇವೆ. ಕೆಆರ್‌ಎಸ್ ಅಥವಾ ಕಾವೇರಿ ಜಲಾನಯನ ಪ್ರದೇಶದ ಯಾವುದೇ ಭಾಗದಲ್ಲಾದರೂ ಇಷ್ಟು ಪ್ರಮಾಣದ ನೀರನ್ನು ನಾವು ಮೀಸಲಿರಿಸುತ್ತೇವೆ' ಎಂದು ಅವರು ಉತ್ತರಿಸಿದರು.

ಮೇಕೆದಾಟು ವಿಚಾರದ ಕುರಿತು ಮುಂದಿನ ವಾರ ಚರ್ಚೆ ಮಾಡೋಣ ಎಂದು ಪ್ರಾಧಿಕಾರ ತಿಳಿಸಿದೆ. ಅವರ ಮುಂದೆ ವಿಚಾರ ಮಂಡಿಸಲು ಎಲ್ಲ ರೀತಿಯ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ. ಬೆಂಗಳೂರು ಬೆಳೆಯುತ್ತಿದೆ. ಮುಂದಿನ 20 ವರ್ಷವನ್ನು ಗಮನದಲ್ಲಿ ಇಟ್ಟುಕೊಂಡು ಯೋಜನೆ ರೂಪಿಸಬೇಕು. ಆನೇಕಲ್, ಹಾರೋಹಳ್ಳಿ, ಬೆಂಗಳೂರು ಉತ್ತರ ಸೇರಿದಂತೆ ಸುತ್ತಲಿನ ಪ್ರದೇಶಗಳಿಗೆ ನೀರು ಕೊಡಲೇಬೇಕು ಎಂದರು.

## ರಾಮನಗರ ಜಿಲ್ಲೆ ಹೆಸರು ಬದಲು: ಸಿ.ಎಂಗೆ ಪ್ರಸ್ತಾವ

ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರು ನಾಮಕರಣ ಮಾಡಲು ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಲು ಸಮೀಕ್ಷೆ ಆರಂಭಿಸಿರುವುದಾಗಿ ಉಪ ಮುಖ್ಯಮಂತ್ರಿ ಶಿವಕುಮಾರ್ ಹೇಳಿದರು.

ರಾಮನಗರ ಜಿಲ್ಲೆಗೆ ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರು ನಾಮಕರಣ ಮಾಡಲು ಒತ್ತಾಯಿಸಿ, ಶೀಘ್ರದಲ್ಲಿಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಅವರು ತಿಳಿಸಿದರು.

ಜಿಲ್ಲೆಗೆ ಮರು ನಾಮಕರಣ ಮಾಡುವುದು ಖಚಿತ ಎಂದ ಅವರು, ವೈಯಕ್ತಿಕ ನೆಲೆಯಲ್ಲಿ ಸಮೀಕ್ಷೆ ಮಾಡುತ್ತಿದ್ದೇನೆ. ಈವರೆಗೆ ಸಮೀಕ್ಷೆಗೆ ಜನರಿಂದ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದರು.

ರಾಮನಗರ ಜಿಲ್ಲೆಗೆ ಮರು ನಾಮಕರಣ ಮಾಡಿದ ನಂತರ ರಾಮನಗರ, ಚನ್ನಪಟ್ಟಣ, ಕನಕಪುರ ಮತ್ತು ಮಾಗಡಿ ತಾಲ್ಲೂಕುಗಳನ್ನು ಸ್ಯಾಟಲೈಟ್ ಟೌನ್‌ಗಳಾಗಿ ಅಭಿವೃದ್ಧಿಪಡಿಸಲು ಸರ್ಕಾರ ಯೋಜಿಸಿದೆ. 'ನಮ್ಮ ಮೆಟ್ರೊ'ವನ್ನು ಎಲ್ಲ ನಾಲ್ಕು ತಾಲ್ಲೂಕುಗಳಿಗೂ ವಿಸ್ತರಿಸಲು ಸಮೀಕ್ಷೆ ನಡೆಸಲಾಗುವುದು ಎಂದು ಅವರು ಹೇಳಿದರು.

ಮಾಗಡಿ ಮತ್ತು ಕನಕಪುರ ತಾಲ್ಲೂಕುಗಳಿಗೆ ಕೈಗಾರಿಕೆಗಳನ್ನು ಆಕರ್ಷಿಸುವ ಉದ್ದೇಶದಿಂದ ಜಿಲ್ಲೆಯ ಹೆಸರು ಬದಲಿಸಲಾಗುತ್ತಿದೆ ಎಂದು ಅವರು ಹೇಳಿದರು.

## ಗ್ರಾಮೀಣ ಸೇವೆ ಕಡ್ಡಾಯ ರದ್ದು ಸುಗ್ರೀವಾಜ್ಞೆಗೆ ರಾಜ್ಯಪಾಲರ ಅಸ್ತು

ಬೆಂಗಳೂರು: ರಾಜ್ಯದಲ್ಲಿ ಎಂಬಿಬಿಎಸ್ ಮತ್ತು ಸ್ನಾತಕೋತ್ತರ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳು ಗ್ರಾಮೀಣ ಮತ್ತು ನಗರ ಪ್ರದೇಶದ ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದು ವರ್ಷ ಕಡ್ಡಾಯವಾಗಿ ಸೇವೆ ಸಲ್ಲಿಸಬೇಕು ಎಂಬ ನಿಯಮ ರದ್ದುಪಡಿಸುವ ಉದ್ದೇಶದ 'ಕರ್ನಾಟಕ ವೈದ್ಯಕೀಯ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ಸುಗ್ರೀವಾಜ್ಞೆ -2023'ಕ್ಕೆ ರಾಜ್ಯಪಾಲರು ಬುಧವಾರ ಅಂಕಿತ ಹಾಕಿದ್ದಾರೆ.

2012ರ ಕಾಯ್ದೆ ಮತ್ತು 2015ರ ನಿಯಮಗಳ ಅನ್ವಯ ಎಂಬಿಬಿಎಸ್ ಮತ್ತು ವೈದ್ಯಕೀಯ ಸ್ನಾತಕೋತ್ತರ ಅಭ್ಯರ್ಥಿಗಳು ಗ್ರಾಮೀಣ ಮತ್ತು ನಗರ ಪ್ರದೇಶದ ಆರೋಗ್ಯ ಕೇಂದ್ರಗಳಲ್ಲಿ ಸೇವೆ ಸಲ್ಲಿಸುವುದು ಕಡ್ಡಾಯವಾಗಿತ್ತು.

ಕಾಯ್ದೆಗೆ ತಿದ್ದುಪಡಿ ತಂದಿರುವುದರಿಂದ ಇನ್ನು ಮುಂದೆ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಮಿತಿಗೊಳಿಸಿ ಅಭ್ಯರ್ಥಿಗಳು ಒಂದು ವರ್ಷದ ಗ್ರಾಮೀಣ ಸೇವೆ ಮಾಡಬೇಕಿದೆ. ಕೇಂದ್ರ ಅಥವಾ ರಾಜ್ಯ ಸರ್ಕಾರದ ಹುದ್ದೆಗೆ ಅಭ್ಯರ್ಥಿಗಳು ಆಯ್ಕೆಯಾದರೆ, ಅಂಥವರಿಗೆ ವಿನಾಯಿತಿ ನೀಡಲು ಈ ತಿದ್ದುಪಡಿಯ ಮೂಲಕ ಅವಕಾಶ ಕಲ್ಪಿಸಲಾಗಿದೆ.

### ಸಂಕ್ಷಿಪ್ತ ಸುದ್ದಿ

## ಕೆ-ಸೆಟ್: ಪರೀಕ್ಷೆ ಮುಂದೂಡಿಕೆ

ಬೆಂಗಳೂರು: ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯನ್ನು (ಕೆ-ಸೆಟ್) ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮುಂದೂಡಿದೆ.

ಪರೀಕ್ಷೆ ನ.26ರಂದು ನಿಗದಿಯಾಗಿತ್ತು. ಮುಂದೂಡಿದ ಪರೀಕ್ಷೆಯನ್ನು ಡಿ. 31ರಂದು ನಡೆಸಲು ನಿರ್ಧರಿಸಲಾಗಿದೆ. ಮತ್ತೊಮ್ಮೆ ಪರಿಶೀಲಿಸಿ ಮರು ದಿನಾಂಕ ಖಚಿತಪಡಿಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ತಿಳಿಸಿದ್ದಾರೆ.

ಈ ಮೊದಲು ಮೈಸೂರು ವಿಶ್ವವಿದ್ಯಾಲಯ ಕೆ-ಸೆಟ್ ಪರೀಕ್ಷೆ ನಡೆಸುವ ಹೊಣೆಗಾರಿಕೆ ನಿಭಾಯಿಸುತ್ತಿತ್ತು. ಪರೀಕ್ಷಾ ನಕಲು ತಡೆಯಲು, ಸುಸೂತ್ರವಾಗಿ ಪರೀಕ್ಷೆಗಳನ್ನು ನಡೆಸಲು ವಿಫಲವಾದ ಕಾರಣ ಹೊಣೆಗಾರಿಕೆಯನ್ನು ಸರ್ಕಾರ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ವಹಿಸಿತ್ತು. ಹಾಗಾಗಿ, ಎರಡು ವರ್ಷಗಳಿಂದ ಪರೀಕ್ಷೆ ನಡೆದಿರಲಿಲ್ಲ. ನಿಗದಿಯಾಗಿದ್ದ ಪರೀಕ್ಷೆಯನ್ನು ಮತ್ತೆ ಮುಂದೂಡಲಾಗಿದೆ.

## 'ಸೇವಾದಳ ಶತಮಾನೋತ್ಸವ ಇಂದು'

ಬೆಂಗಳೂರು: 'ಸೇವಾದಳದ ಶತಮಾನೋತ್ಸವ ಮತ್ತು ರಾಜ್ಯಮಟ್ಟದ ಸಮಾವೇಶ ನಗರದ ಅರಮನೆ ಮೈದಾನದಲ್ಲಿ ಗುರುವಾರ (ನ. 9) ನಡೆಯಲಿದೆ' ಎಂದು ಸೇವಾದಳದ ಉಸ್ತುವಾರಿಯೂ ಆಗಿರುವ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ರಾಷ್ಟ್ರೀಯ ಸೇವಾದಳದ ಅಧ್ಯಕ್ಷ ಲಾಲ್ ಜಿ ಅವರು ಧ್ವಜಾರೋಹಣ ಮಾಡಲಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಸಚಿವರು, ಪಕ್ಷದ ಪ್ರಮುಖ ನಾಯಕರು ಭಾಗವಹಿಸಲಿದ್ದಾರೆ' ಎಂದರು.

'ಇದೇ ತಿಂಗಳ 28ಕ್ಕೆ ಸೇವಾದಳ 100 ವರ್ಷಗಳನ್ನು ಪೂರೈಸಲಿದೆ. ಈ ಹಿನ್ನೆಲೆಯಲ್ಲಿ ದೇಶದ ಎಲ್ಲ ರಾಜ್ಯಗಳಲ್ಲೂ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಆ ಮೂಲಕ, ಸೇವಾದಳದ ಇತಿಹಾಸದ ಕುರಿತು ಇಡೀ ದೇಶಕ್ಕೆ ಸಂದೇಶ ರವಾನಿಸಲಾಗುವುದು. ಈ ಕಾರ್ಯಕ್ರಮದಲ್ಲಿ ಸೇವಾದಳದ ಮೂರು ಸಾವಿರ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ' ಎಂದೂ ತಿಳಿಸಿದರು.

ಸೇವಾದಳದ ಅಧ್ಯಕ್ಷ ರಾಮಚಂದ್ರಪ್ಪ ಮಾತನಾಡಿ, 'ಬ್ರಿಟಿಷರ ಹಿಂಸೆ ತಾಳಲಾರದೆ ಹುಟ್ಟಿಕೊಂಡ ಸಂಘಟನೆ ಸೇವಾದಳ. ಎರಡು ವರ್ಷಗಳಿಂದ ನಾನು ಅಧ್ಯಕ್ಷನಾಗಿದ್ದು, ಈ ಅವಧಿಯಲ್ಲಿ ರಾಜ್ಯಮಟ್ಟದ, ಜಿಲ್ಲಾಮಟ್ಟದ ಪದಾಧಿಕಾರಿಗಳನ್ನು ನೇಮಿಸಿದ್ದೇನೆ. ದೊಡ್ಡಮಟ್ಟದಲ್ಲಿ ಶತಮಾನೋತ್ಸವ ನಡೆಯಲಿದೆ' ಎಂದರು.

## 'ವಿಮೋಚನೆಯ ರಹಸ್ಯ' 11ರಂದು ಬಿಡುಗಡೆ

ಬೆಂಗಳೂರು: ದೇವಾಸೀರ್ ಲಾರಿ ಅವರು ರಚಿಸಿರುವ 'ವಿಮೋಚನೆಯ ರಹಸ್ಯ' ಅಧ್ಯಾತ್ಮ ಕೃತಿ ಕೇರಳದ ಮನುಜ್ಯೋತಿ ಆಶ್ರಯದಲ್ಲಿ ನ.11ರಂದು ಇಲ್ಲಿನ ಜಿಮ್‌ಖಾನ ಕ್ಲಬ್‌ನಲ್ಲಿ ಬಿಡುಗಡೆಗೊಳ್ಳಲಿದೆ.

ದೇಹ, ಪ್ರಾಣ, ಆತ್ಮ, ಮನಸ್ಸುಗಳನ್ನು ಹೇಗೆ ಶುಚಿಗೊಳಿಸಬಹುದು? ಈ ಪುಸ್ತಕ ಪಠಣದಿಂದ ನಮ್ಮನ್ನು ನಾವು ಹೇಗೆ ಪವಿತ್ರಗೊಳಿಸಬಹುದು ಎಂಬುದನ್ನು ಅರಿಯಲು ಕೃತಿ ನೆರವಾಗಲಿದೆ. ಮನುಜ್ಯೋತಿ ಆಶ್ರಮದ ಸ್ಥಾಪಕ ಲಹರಿ ಕೃಷ್ಣ ಅವರ ಭಾಷಣ ಮತ್ತು ಪ್ರವಚನಗಳನ್ನು ಸಂಗ್ರಹಿಸಿ ಕನ್ನಡದಲ್ಲಿ ನೀಡಲಾಗಿದೆ ಎಂದು ಮನುಜ್ಯೋತಿ ಆಶ್ರಮದ ಮುಖ್ಯಸ್ಥ ಲಿಯೊ ಸಿ. ಲಾರಿ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



**ಹಣತೆಗಳ ಲೋಕ....** ದೀಪಗಳ ಹಬ್ಬ ದೀಪಾವಳಿಯ ಪ್ರಯುಕ್ತ ನಗರದ ಗಾಂಧಿ ಬಜಾರ್‌ನಲ್ಲಿ ಮಹಿಳೆಯರು ಮಣ್ಣಿನ ಹಣತೆಗಳನ್ನು ಖರೀದಿಸುತ್ತಿರುವುದು ಕಂಡು ಬಂತು


ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

## ವಿ.ವಿ ಕಾಯ್ದೆ ತಿದ್ದುಪಡಿಗೆ ಸಮಿತಿ

ಬೆಂಗಳೂರು: ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆಗೆ (2000) ತಿದ್ದುಪಡಿ ತರುವ ಕುರಿತು ಪರಿಶೀಲಿಸಲು ನಿವೃತ್ತ ಐಎಎಸ್ ಅಧಿಕಾರಿ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗುತ್ತಿದೆ.

ವಿಶ್ರಾಂತ ಕುಲಪತಿಗಳು, ನಿವೃತ್ತ ಕುಲಸಚಿವರು, ಅಧ್ಯಾಪಕರನ್ನು ಒಳಗೊಂಡ ತಜ್ಞರ ಸಮಿತಿ ರಚಿಸಬೇಕು. ಈ ಸಮಿತಿ ಕಾಯ್ದೆಯಲ್ಲಿನ ನ್ಯೂನತೆಗಳನ್ನು ಪರಿಶೀಲಿಸಿ, ತಿದ್ದಪಡಿ ಮಾಡಬೇಕಿರುವ ಅಂಶಗಳ ಕುರಿತು ಒಂದು ತಿಂಗಳ ಒಳಗಾಗಿ ವರದಿ ನೀಡಲು ಕ್ರಮ ಕೈಗೊಳ್ಳಬೇಕು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರು ಉನ್ನತ ಶಿಕ್ಷಣ ಇಲಾಖೆ ಹೆಚ್ಚುವರಿ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

ವಿಶ್ವವಿದ್ಯಾಲಯಗಳಲ್ಲಿ ಉನ್ನತ ಗುಣಮಟ್ಟದ ಸುಧಾರಣೆ, ಶಿಕ್ಷಣದ ಶ್ರೇಷ್ಠತೆಯ ಸಾಧನೆಗಾಗಿ ಬೋಧನೆ, ಕಲಿಕೆ, ಸಂಶೋಧನಾ ಕ್ಷೇತ್ರಗಳಲ್ಲಿ ಸುಧಾರಣೆ ತರಲು, ಶೈಕ್ಷಣಿಕ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆ ದೊರಕಿಸಲು, ಆಡಳಿತದಲ್ಲಿ ಸುಧಾರಣೆ ತರಲು ಹಿಂದೆ ಕಾಯ್ದೆ ರೂಪಿಸಲಾಗಿತ್ತು. ಈ ಕಾಯ್ದೆ ಹಲವು ನ್ಯೂನತೆಗಳಿಂದ ಕೂಡಿದೆ ಎಂಬ ಬಗ್ಗೆ ಹಲವು ದೂರುಗಳು ಸಲ್ಲಿಕೆಯಾಗಿರುವ ಕಾರಣ ತಿದ್ದುಪಡಿ ಮಾಡಲಾಗುತ್ತಿದೆ ಎಂದು ವಿವರಿಸಿದ್ದಾರೆ.



# ಚಬಹಾರ್ ಬಂದರು

ಚಬಹಾರ್ ಎಂದರೆ ನಾಲ್ಕು ಚಿಲುಮೆಗಳು ಸೇರುವ ಸ್ಥಳವೆಂದು ಅರ್ಥ. ಇದೇ ಹೆಸರಿನ ಮಹತ್ವದ ಬಂದರು ಇರಾನ್‌ನಲ್ಲಿದೆ. ಈ ಕುರಿತ ಮಾಹಿತಿ ಇಲ್ಲಿದೆ.

ಯು.ಟಿ. ಆಯಿಶ ಫರ್ಝಾನ

ಭಾರತ ಮತ್ತು ಇರಾನ್ ಮಧ್ಯದ ಮಹತ್ವದ ಯೋಜನೆಯಾದ ಚಬಹಾರ್ ಬಂದರಿನ ಕಾರ್ಯಾಚರಣೆ ರೂಪಿಸಿದ 10 ವರ್ಷಗಳ ಒಪ್ಪಂದಕ್ಕೆ ಸಂಬಂಧಿಸಿದಂತೆ ಎರಡೂ ರಾಷ್ಟ್ರಗಳ ಮಧ್ಯೆ ಅನೇಕ ಭಿನ್ನಾಭಿಪ್ರಾಯಗಳಿದ್ದವು. ಆ ಭಿನ್ನಾಭಿಪ್ರಾಯಗಳನ್ನು ಪರಿಹರಿಸಲು ಭಾರತ ಮತ್ತು ಇರಾನ್ ದೇಶಗಳೆರಡೂ ಸಿದ್ಧವಾಗಿವೆ ಎಂದು ಇರಾನ್ ಮಾಧ್ಯಮಗಳಲ್ಲಿ ಇತ್ತೀಚೆಗೆ ವರದಿಯಾಗಿದೆ. ಶೀಘ್ರವೇ ಒಪ್ಪಂದಕ್ಕೆ ಅಂತಿಮ ಸಹಿ ಬೀಳಬಹುದೆಂದು ನಿರೀಕ್ಷಿಸಲಾಗಿದೆ.

## ಚಬಹಾರ್ ಬಂದರು

- ಚಬಹಾರ್ ಎಂದರೆ ಪರ್ಷಿಯನ್ ಭಾಷೆಯಲ್ಲಿ 'ನಾಲ್ಕು ಚಿಲುಮೆಗಳು' ಎಂಬರ್ಥವಿದೆ. ಓಮನ್ ಕೊಲ್ಲಿ ಪ್ರದೇಶದಲ್ಲಿ ಬರುವ ಆಗ್ನೇಯ ಇರಾನ್‌ನ ಆಯಕಟ್ಟಿನ ಮಹತ್ವದ ಬಂದರು ಇದಾಗಿದೆ.
- ಇದು ಸಿಸ್ತಾನ್ ಮತ್ತು ಬಲುಚಿಸ್ತಾನ್ ಪ್ರಾಂತ್ಯದ ಮಕ್ರಾನ್ ಕರಾವಳಿಯಲ್ಲಿದ್ದು ಅದರ ಕಾರ್ಯತಂತ್ರದ ಸ್ಥಳ ಮತ್ತು ಪ್ರಾದೇಶಿಕ ವ್ಯಾಪಾರ ಮತ್ತು ಸಂಪರ್ಕವನ್ನು ಹೆಚ್ಚಿಸುವ ಸಾಮರ್ಥ್ಯದಿಂದಾಗಿ ಅಪಾರ ಭೌಗೋಳಿಕ, ರಾಜಕೀಯ ಮತ್ತು ಆರ್ಥಿಕ ಪ್ರಾಮುಖ್ಯ ಪಡೆದಿದೆ.
- ಚಬಹಾರ್ ಬಂದರು ಪಾಕಿಸ್ತಾನದ ಗ್ವಾದರ್ ಬಂದರಿನಿಂದ 70 ಕಿಲೋಮೀಟರ್ ದೂರದಲ್ಲಿದ್ದು (ಚೀನಾ ಇದನ್ನು ಅಭಿವೃದ್ಧಿ ಪಡಿಸುತ್ತಿದೆ), ಮುಂಬೈಗೆ 1,400 ಕಿಲೋಮೀಟರ್ ಮತ್ತು ಅಫ್ಘಾನಿಸ್ತಾನದ ಕಾಬೂಲ್‌ಗೆ 1,854 ಕಿಮೀ ದೂರದಲ್ಲಿದೆ.

## ಮೂಲಸೌಕರ್ಯ ಮತ್ತು ವೈಶಿಷ್ಟ್ಯಗಳು

- ಚಬಹಾರ್ ಬಂದರು ಆಳ ನೀರಿನ ಸೌಲಭ್ಯಗಳನ್ನು ಹೊಂದಿದ್ದು ಬೃಹತ್ ಹಡಗುಗಳ ಚಲನೆ ಮತ್ತು ಲಂಗರು ಹಾಕಲು ಉತ್ತಮ ನೈಸರ್ಗಿಕ ಸೌಕರ್ಯಗಳನ್ನು ಹೊಂದಿದೆ. ಹಿಂದೂ ಮಹಾಸಾಗರದ ಸನಿಹದಲ್ಲಿರುವುದು ಮತ್ತು ಅತ್ಯಂತ ಆಯಕಟ್ಟಿನ ಪ್ರದೇಶದಲ್ಲಿರುವುದರಿಂದ ಭಾರತ ಮತ್ತು ಅಫ್ಘಾನಿಸ್ತಾನದಿಂದ ಸರಕು ಸಾಗಣೆಗೆ ಪರ್ಯಾಯ ವ್ಯಾಪಾರ ಮಾರ್ಗವನ್ನು ಒದಗಿಸುತ್ತದೆ.
  ಈ ಬಂದರು ಎರಡು ಪ್ರತ್ಯೇಕ ಟರ್ಮಿನಲ್‌ಗಳನ್ನು ಒಳಗೊಂಡಿದೆ.
  1) ಶಾಹಿದ್ ಕಲಂತರಿ ಟರ್ಮಿನಲ್ (SKT) ಮತ್ತು 2) ಶಾಹಿದ್ ಬೆಹೆಷ್ತಿ ಟರ್ಮಿನಲ್ (SBT)

## ಚಬಹಾರ್ ಜೊತೆ ಭಾರತದ ಸಂಬಂಧ

- ಅದರ ಆಯಕಟ್ಟಿನ ಸ್ಥಳದ ಕಾರಣಕ್ಕೆ ಭಾರತವು ಚಬಹಾರ್ ಬಂದರಿನ ಅಭಿವೃದ್ಧಿಯಲ್ಲಿ ವಿಶೇಷ ಆಸಕ್ತಿಯನ್ನು ತೋರಿಸಿದೆ. ಇದು ಭಾರತದಿಂದ ಅಭಿವೃದ್ಧಿಯಾಗುತ್ತಿರುವ ಮೊದಲ ವಿದೇಶಿ ಬಂದರು ಯೋಜನೆಯಾಗಿದೆ.
- ಭಾರತ, ಇರಾನ್ ಮತ್ತು ಅಫ್ಘಾನಿಸ್ತಾನ ದೇಶಗಳು ಒಂದಾಗಿ 2016ರಲ್ಲಿ ಚಬಹಾರ್ ಬಂದರನ್ನು ಅಭಿವೃದ್ಧಿಪಡಿಸುವ ಯೋಜನೆಯ ಒಪ್ಪಂದಕ್ಕೆ ಸಹಿ ಹಾಕಿದವು. ಈ ಮೂಲಕ ಇರಾನ್‌ನ ಸಹಕಾರದೊಂದಿಗೆ ಶಾಹಿದ್ ಬೆಹೆಷ್ತಿ ಟರ್ಮಿನಲ್ (SBT)ನ ಮೊದಲ ಹಂತದಲ್ಲಿ ಹೂಡಿಕೆ ಮಾಡಲು ಮತ್ತು ಅದರ ನಿರ್ವಹಣೆ ಮಾಡಲು ಭಾರತಕ್ಕೆ ಅವಕಾಶ ಮಾಡಿಕೊಡಲಾಯಿತು.
- ಭಾರತವು SBTಯ ಅಭಿವೃದ್ಧಿಗೆ ಬೆಂಬಲವನ್ನು ನೀಡುವುದಾಗಿ ಹೇಳಿದ್ದು, ಆ ಪ್ರಕಾರ 85 ಮಿಲಿಯನ್ ಡಾಲರ್ ಮೊತ್ತದ ಅನುದಾನ ಮತ್ತು 150 ಮಿಲಿಯನ್ ಡಾಲರ್ ಮೊತ್ತದ ಸಾಲಸೌಲಭ್ಯವನ್ನು ನೀಡುತ್ತಿದ್ದೇವೆ. SBTಯ ಮೂಲಸೌಕರ್ಯ ಹೆಚ್ಚಿಸಲು ಭಾರತವು ಆರು ಮೊಬೈಲ್ ಹಾರ್ಬರ್ ಕ್ರೇನ್‌ಗಳನ್ನು ಅದಾಗಲೇ ಒದಗಿಸಿದೆ.
- ಭಾರತವು ಚಬಹಾರ್‌ನಲ್ಲಿನ ವಿವಿಧ ಅಭಿವೃದ್ಧಿ ಯೋಜನೆಗಳಲ್ಲಿ ತೊಡಗಿಸಿಕೊಂಡಿದ್ದು, ಇದರಲ್ಲಿ ಪ್ರಮುಖವಾಗಿ ಚಬಹಾರ್‌ನಿಂದ ಇರಾನ್‌ನ ಜಹೇದನ್‌ಗೆ ಸಂಪರ್ಕಿಸುವ ಹೊಸ ರೈಲು ಮಾರ್ಗದ ನಿರ್ಮಾಣವೂ ಸೇರಿದೆ. ಇದು ಅಫ್ಘಾನಿಸ್ತಾನದಲ್ಲಿರುವ ಜರಾಂಜ್‌ಗೆ ಹೆಚ್ಚಿನ ಸಂಪರ್ಕವನ್ನು ಕಲ್ಪಿಸುತ್ತದೆ. ಈ ಜರಾಂಜ್ ಭಾರತಕ್ಕೆ ಅತಿ ಮುಖ್ಯವಾದುದು ಯಾಕೆಂದರೆ ಭಾರತಕ್ಕೆ ಇದು ಮಧ್ಯ ಏಷ್ಯಾದೇಶಗಳೆಡೆಗೆ ಪ್ರವೇಶಮಾರ್ಗವಾಗಿ ಹೆಬ್ಬಾಗಿಲಿನಂತೆ ಕಾರ್ಯನಿರ್ವಹಿಸುತ್ತದೆ. ಈ ಸಾರಿಗೆ ಕಾರಿಡಾರ್ ಈ ಮೂರು ರಾಷ್ಟ್ರಗಳ ನಡುವೆ ವ್ಯಾಪಾರ ಅವಕಾಶಗಳ ಹೆಚ್ಚಳಕ್ಕೆ ಕಾರಣವಾಗುತ್ತದೆ.

## ಭೌಗೋಳಿಕ ರಾಜಕೀಯ ಪರಿಣಾಮಗಳು

## ಪರ್ಯಾಯ ವ್ಯಾಪಾರ ಮಾರ್ಗಗಳು

- ಚಬಹಾರ್ ಬಂದರು ಭಾರತಕ್ಕೆ ಪಾಕಿಸ್ತಾನಕ್ಕೆ ಪ್ರವೇಶ ಮಾಡುವ ಅವಶ್ಯಕತೆಯಿಲ್ಲದೆಯೇ (ಬೈಪಾಸ್ ಮಾಡಿ ಹೋಗಬಹುದಾದ ರೀತಿಯಲ್ಲಿ) ಅಫ್ಘಾನಿಸ್ತಾನ ಮತ್ತು ಮಧ್ಯ ಏಷ್ಯಾಕ್ಕೆ ಪರ್ಯಾಯ ವ್ಯಾಪಾರ ಮಾರ್ಗವನ್ನು ಒದಗಿಸುತ್ತದೆ. ಅಫ್ಘಾನಿಸ್ತಾನ ಮತ್ತು ಅದರಾಚೆಗಿನ ದೇಶಗಳ ವ್ಯಾಪಾರಕ್ಕಾಗಿ ಪಾಕಿಸ್ತಾನಿ ಬಂದರುಗಳು ಅಥವಾ ರಸ್ತೆಗಳು ಮತ್ತು ರೈಲ್ವೆಗಳ ಮೇಲಿನ ತನ್ನ ಅವಲಂಬನೆಯನ್ನು ಕಡಿಮೆ ಮಾಡಲು ಭಾರತಕ್ಕೆ ಇದು ಉತ್ತಮ ಅವಕಾಶವಾಗಿದೆ.

## ಚೀನಾಕ್ಕೆ ತಕ್ಕ ಪ್ರತಿಕ್ರಿಯೆ

- ಚಬಹಾರ್ ಬಂದರು ಪಾಕಿಸ್ತಾನದಲ್ಲಿರುವ ಚೀನಾದ ಗ್ವಾದರ್ ಬಂದರಿನ ಪ್ರಭಾವವನ್ನು ಸರಿದೂಗಿಸಲು ಅವಕಾಶ ಮಾಡಿಕೊಡುತ್ತದೆ. ಗ್ವಾದರ್ ಬಂದರು ಚೀನಾದ ಬೆಲ್ಟ್ ಮತ್ತು ರೋಡ್ ಇನಿಶಿಯೇಟಿವ್ (BRI) ಹಾಗೂ ಚೀನಾ-ಪಾಕಿಸ್ತಾನ್ ಆರ್ಥಿಕ ಕಾರಿಡಾರ್ (CPEC) ಯೋಜನೆಗಳ ಮಹತ್ವದ ಭಾಗವಾಗಿದ್ದು, ಇದಕ್ಕೆ ಎದುರಾಗಿ ಚಬಹಾರ್ ಅನ್ನು ಅಭಿವೃದ್ಧಿಪಡಿಸುವ ಮೂಲಕ, ಭಾರತವು ಈ ಪ್ರದೇಶದಲ್ಲಿ ತನ್ನ ಪ್ರಭಾವವನ್ನು ಉಳಿಸಿಕೊಳ್ಳಲು ಮತ್ತು ಗ್ವಾದರ್‌ನಿಂದ ಉದ್ಭವಿಸಬಹುದಾದ ಪರಿಣಾಮಗಳನ್ನು ಈ ಮೂಲಕ ಎದುರಿಸಲು ಪ್ರಯತ್ನಿಸುತ್ತದೆ.

## ಪ್ರಾದೇಶಿಕ ಸಂಪರ್ಕವನ್ನು ಹೆಚ್ಚಿಸುವುದು

- ಚಬಹಾರ್‌ನ ಅಭಿವೃದ್ಧಿಯು ಉತ್ತಮ ಪ್ರಾದೇಶಿಕ ಸಂಪರ್ಕವನ್ನು ಸುಗಮಗೊಳಿಸಿ ಆ ಪ್ರದೇಶದ ಆರ್ಥಿಕ ಬೆಳವಣಿಗೆ ಮತ್ತು ಸ್ಥಿರತೆಗೆ ಕೊಡುಗೆ ನೀಡುತ್ತದೆ. ಇದು ಭಾರತ, ಇರಾನ್, ಅಫ್ಘಾನಿಸ್ತಾನ ಮತ್ತು ಇತರ ಮಧ್ಯ ಏಷ್ಯಾದ ದೇಶಗಳ ನಡುವೆ ವ್ಯಾಪಾರ ಮತ್ತು ವಾಣಿಜ್ಯ ಸಂಬಂಧಗಳನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

## ಆರ್ಥಿಕ ಬೆಳವಣಿಗೆ ಮತ್ತು ಹೂಡಿಕೆ

- ಚಬಹಾರ್‌ನ ಅಭಿವೃದ್ಧಿಯು ಇರಾನ್‌ಗೆ ವಿದೇಶೀ ಹೂಡಿಕೆಯನ್ನು ಆಕರ್ಷಿಸಲು ಮತ್ತು ಅದರ ಆರ್ಥಿಕತೆಯನ್ನು ಹೆಚ್ಚಿಸಲು ಒಂದು ಅವಕಾಶವಾಗಿದೆ. ಅಂತರರಾಷ್ಟ್ರೀಯ ನಿರ್ಬಂಧಗಳಿಂದ ಮೂಡಿದ ಕೆಲವು ಆರ್ಥಿಕ ಸವಾಲುಗಳನ್ನು ನಿವಾರಿಸುವಲ್ಲಿ ಇದು ಇರಾನ್‌ಗೆ ಸಹಾಯ ಮಾಡುತ್ತದೆ.

## ಭಾರತದ ಸಂಪರ್ಕ ಯೋಜನೆಗಳಿಗೆ ಪೂರಕ ನಡೆ

- ಚಬಹಾರ್ ಭಾರತದ ವಿದೇಶಾಂಗ ನೀತಿಯ ಪ್ರಮುಖ ಭಾಗವಾಗಿದೆ ಮತ್ತು ಇದು ಅಂತರರಾಷ್ಟ್ರೀಯ ಉತ್ತರ-ದಕ್ಷಿಣ ಸಾರಿಗೆ ಕಾರಿಡಾರ್ (INSTC) ಮತ್ತು ಅಶ್ಗಾಬಾಟ್ ಒಪ್ಪಂದದಂತಹ ಯೋಜನೆಗಳಿಗೆ ಪೂರಕವಾಗಿದೆ. ಹಾಗೂ ಯುರೇಷಿಯನ್ ದೇಶಗಳೊಂದಿಗೆ ಭಾರತದ ಸಂಪರ್ಕವನ್ನು ಹೆಚ್ಚಿಸುತ್ತದೆ.

## ಮಾನವೀಯ ನೆರವು ಮತು ಮರುನಿರ್ಮಾಣ

- ಚಬಹಾರ್ ಅಫ್ಘಾನಿಸ್ತಾನದಲ್ಲಿ ಮಾನವೀಯ ನೆರವು ಮತ್ತು ಪುನರ್ನಿರ್ಮಾಣ ಚಟುವಟಿಕೆಗಳ ಕೇಂದ್ರವಾಗಿ ಕಾರ್ಯನಿರ್ವಹಿಸಬಹುದು. ಇದರ ಸಮರ್ಪಕ ಬಳಕೆಯು ಯುದ್ಧ-ಹಾನಿಗೊಳಗಾದ ದೇಶದಲ್ಲಿ ಸ್ಥಿರತೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ. ಉದಾಹರಣೆಗೆ 2020 ರಲ್ಲಿ, ಮಾನವೀಯ ಸಹಾಯದ ಭಾಗವಾಗಿ ಭಾರತವು ಅಫ್ಘಾನಿಸ್ತಾನಕ್ಕೆ 75,000 ಟನ್ ಗೋಧಿಯನ್ನು ಚಬಹಾರ್ ನ ಮೂಲಕವೇ ಪೂರೈಸಿತ್ತು.

## ಪ್ರಾದೇಶಿಕ ಸ್ಥಿರತೆಯತ್ತ ಹೆಜ್ಜೆ

- ಚಬಹಾರ್‌ನಲ್ಲಿ ಹೂಡಿಕೆ ಮಾಡುವ ಮೂಲಕ, ಭಾರತವು ಇರಾನ್ ಮತ್ತು ಅಫ್ಘಾನಿಸ್ತಾನದೊಂದಿಗಿನ ಉತ್ತಮ ಸೌಹಾರ್ದ ಸಂಬಂಧ ಮತ್ತು ಸಮತೋಲನವನ್ನು ಕಾಯ್ದುಕೊಂಡು ಪ್ರಾದೇಶಿಕ ಸ್ಥಿರತೆ ಮತ್ತು ಭದ್ರತೆಯನ್ನು ಕಾಪಾಡಿಕೊಳ್ಳುತ್ತದೆ.
- ಚಬಹಾರ್ ಬಂದರು ಮಹತ್ವದ ಮೂಲಸೌಕರ್ಯ ಯೋಜನೆಯಾಗಿದ್ದು, ಇದು ಆ ಪ್ರದೇಶದಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ ಹಾಗೂ ದೂರಗಾಮಿ ಭೌಗೋಳಿಕ ರಾಜಕೀಯ ಪರಿಣಾಮಗಳನ್ನು ಹೊಂದಿದ್ದು ಭಾರತ, ಇರಾನ್ ಮತ್ತು ಅಫ್ಗಾನ್ ದೇಶಗಳ ನಡುವಿನ ಸಂಬಂಧ ಸುಧಾರಣೆಗೆ ಒತ್ತು ನೀಡುತ್ತದೆ. ಈ ಮೂಲಕ ಪಾಕಿಸ್ತಾನ ಮತ್ತು ಚೀನಾದ ಮೈತ್ರಿಗೆ ಎದುರಾಗಿ ರೂಪಿಸಲ್ಪಟ್ಟ ಭಾರತದ ಜಾಣ್ಮೆಯ ನಡೆಯಾಗಿದೆ.

❖

# ಅಂತರರಾಷ್ಟ್ರೀಯ ವಿದ್ಯಮಾನಗಳು

ಗುರುಶಂಕರ್

## ಶ್ರೀಲಂಕಾದಿಂದ ಉಚಿತ ವೀಸಾ

- ಶ್ರೀಲಂಕಾದ ಸಚಿವ ಸಂಪುಟ ಭಾರತ, ಚೀನಾ, ರಷ್ಯಾ, ಮಲೇಶಿಯಾ, ಜಪಾನ್, ಇಂಡೋನೇಷ್ಯಾ ಮತ್ತು ಥಾಯ್‌ಲೆಂಡ್ ರಾಷ್ಟ್ರಗಳ ಪ್ರವಾಸಿಗರಿಗೆ ಉಚಿತ ವೀಸಾ ಸವಲತ್ತು ನೀಡುವ ನಿರ್ಧಾರವನ್ನು ಕೈಗೊಂಡಿದೆ.
- ಈ ಯೋಜನೆಯು ಮಾರ್ಚ್ 31, 2024 ರವರೆಗೂ ಜಾರಿಯಲ್ಲಿರುತ್ತದೆ.
- ಶ್ರೀಲಂಕಾದ ಪ್ರವಾಸೋದ್ಯಮವನ್ನು ಪುನಶ್ಚೇತನಗೊಳಿಸುವ ಉದ್ದೇಶದಿಂದ ಹಾಗೂ ಮೇಲಿನ ರಾಷ್ಟ್ರಗಳೊಂದಿಗೆ ದ್ವಿಪಕ್ಷೀಯ ಸಂಬಂಧಗಳನ್ನು ಸುಧಾರಿಸಲು ಈ ಯೋಜನೆ ಜಾರಿಗೆ ತರಲಾಗಿದೆ.
- 2023ರ ಸೆಪ್ಟೆಂಬರ್ ತಿಂಗಳಲ್ಲಿ ಭಾರತದಿಂದ 30,000 ಪ್ರವಾಸಿಗರು ಶ್ರೀಲಂಕಾಗೆ ಭೇಟಿ ನೀಡಿದ್ದಾರೆ. ಶ್ರೀಲಂಕಾಗೆ ಭೇಟಿ ನೀಡಿದ ಒಟ್ಟು ಪ್ರವಾಸಿಗರಲ್ಲಿ ಶೇ 26ರಷ್ಟು ಭಾರತೀಯರಿದ್ದಾರೆ. ಭಾರತೀಯ ಪ್ರವಾಸಿಗರ ನಂತರ ಚೀನಾದ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿದ್ದರು.
- ಮೂರು ವರ್ಷಗಳಿಂದ ಶ್ರೀಲಂಕಾ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿದ್ದು ಪ್ರವಾಸೋದ್ಯಮಕ್ಕೆ ಉತ್ತೇಜನವನ್ನು ನೀಡಲು ಶ್ರೀಲಂಕಾದ ಪ್ರವಾಸೋದ್ಯಮ ಸಚಿವಾಲಯ ಈ ಪ್ರಸ್ತಾವವನ್ನು ಸಂಪುಟದ ಮುಂದೆ ಮಂಡಿಸಿತ್ತು.

## ಅಮೆರಿಕದ ಅಂತರ್ಜಲದಲ್ಲಿ ಉಪ್ಪಿನ ಅಂಶ ಹೆಚ್ಚಳ

- ಅಮೆರಿಕದ ಜಿಯೋಲಾಜಿಕಲ್ ಸರ್ವೆ ಸಂಸ್ಥೆಯ ಅಧ್ಯಯನದ ಅನ್ವಯ ಅಮೆರಿಕದಾದ್ಯಂತ ಅಂತರ್ಜಲದಲ್ಲಿ ಉಪ್ಪಿನ ಅಂಶ ಹೆಚ್ಚಳಗೊಂಡಿದೆ ಮೂರು ದಶಕಗಳಲ್ಲಿ ಗಣನೀಯ ಏರಿಕೆ ಕಂಡಿದೆ.
- 82 ಸ್ಥಳಗಳಲ್ಲಿ ಅಧ್ಯಯನ ನಡೆಸಲಾಗಿದ್ದು, ಅಂತರ್ಜಲದಲ್ಲಿ ಸೋಡಿಯಂ ಮತ್ತು ಕ್ಲೋರೈಡ್ ಅಂಶಗಳೂ ಹೆಚ್ಚಿರುವುದು ಕಂಡುಬಂದಿದೆ.

## ಮೊಬೈಲ್ ಫೋನ್ ಕಳ್ಳತನಕ್ಕೆ ಕಠಿಣ ಶಿಕ್ಷೆ ವಿಧಿಸಿದ ಪೆರು

- ಪೆರು ಸರ್ಕಾರ ಮೊಬೈಲ್ ಫೋನ್ ಕಳ್ಳತನಕ್ಕೆ ಕಠಿಣ ಶಿಕ್ಷೆಯನ್ನು ವಿಧಿಸಿದ್ದು , ಅಪರಾಧ ದಂಡಸಂಹಿತೆಗೆ ಪ್ರಮುಖ ತಿದ್ದುಪಡಿಗಳನ್ನು ಜಾರಿಗೆ ತಂದಿದೆ.
- ಮೊಬೈಲ್ ಕಳ್ಳತನ ಮಾಡುವ ಸಂದರ್ಭದಲ್ಲಿ ಸಂತ್ರಸ್ತ ಅಪಘಾತಗೊಂಡರೆ ಅಥವಾ ಮರಣ ಹೊಂದಿದರೆ ಅಪರಾಧಿಗೆ 30 ವರ್ಷದವರೆಗೂ ಗರಿಷ್ಠ ಶಿಕ್ಷೆಯನ್ನು ವಿಧಿಸಲಾಗುತ್ತದೆ. ಇದಲ್ಲದೆ ಅಪರಾಧವನ್ನು ಎಸಗುವ ಸಂದರ್ಭದಲ್ಲಿ ಯಾವುದಾದರೂ ಶಸ್ತ್ರಾಸ್ತ್ರವನ್ನು ಬಳಸಿದರೆ ಶಿಕ್ಷೆಯ ಅವಧಿಯನ್ನು 30 ವರ್ಷದವರೆಗೂ ವಿಸ್ತರಿಸಲು ತಿದ್ದುಪಡಿ ತರಲಾಗಿದೆ.
- 2023ರ ಮೊದಲ ಒಂಬತ್ತು ತಿಂಗಳ ಅವಧಿಯಲ್ಲಿ 12,000 ಮೊಬೈಲ್ ಫೋನ್‌ಗಳು ಕಳವಾಗಿವೆ. ನಿತ್ಯ 4,000 ಕ್ಕಿಂತ ಹೆಚ್ಚು ಮೊಬೈಲ್ ಫೋನ್ ಗಳು ಕಳ್ಳತನವಾಗುತ್ತಿದೆ ಎಂದು ದೂರಸಂಪರ್ಕ ಪ್ರಾಧಿಕಾರ ವರದಿಯನ್ನು ನೀಡಿತ್ತು. ಈ ಕಾರಣದಿಂದ ಮೊಬೈಲ್ ಫೋನ್ ಕಳ್ಳತನಕ್ಕೆ ಶಾಶ್ವತ ಪರಿಹಾರವನ್ನು ಕಲ್ಪಿಸಲು ಕಠಿಣ ಶಿಕ್ಷೆ ನೀಡಲು ಪೆರು ಸರ್ಕಾರ ನಿರ್ಧರಿಸಿದೆ.

# ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

MATHEMATICS

## ಗಣಿತ

### ಅಧ್ಯಾಯ–1 ಸಮಾಂತರ ಶ್ರೇಢಿ

ಅಭ್ಯಾಸ – 1.3

3) ಸಮಾಂತರ ಶ್ರೇಢಿಯಲ್ಲಿ (..... ಹಿಂದಿನ ಸಂಚಿಕೆಯಿಂದ)

iv) $a_3 = 15, S_{10} = 125$ ಆದರೆ $d$ ಮತ್ತು $a_{10}$ ಕಂಡುಹಿಡಿಯಿರಿ

v) $d = 5, S_9 = 75$ ಆದರೆ a ಮತ್ತು $a_9$ ಕಂಡುಹಿಡಿಯಿರಿ

vi) $a = 2, d = 8, S_n = 90$ ಆದಾಗ n ಮತ್ತು $a_n$ ಕಂಡುಹಿಡಿಯಿರಿ

vii) a = 8, an = 62, $S_n = 210$ ಆದಾಗ n ಮತ್ತು d ಕಂಡುಹಿಡಿಯಿರಿ

viii) $a_n = 4, d = 2, S_n = -14$ ಆದರೆ n ಮತ್ತು a ಕಂಡುಹಿಡಿಯಿರಿ

ix) a = 3, n = 8, S = 192 ಆದರೆ d ಕಂಡುಹಿಡಿಯಿರಿ

ಪರಿಹಾರ: (i) $a = 5, d = 3, a_n = 50$ ಆದರೆ $n$ ಮತ್ತು $S_n$ ಕಂಡುಹಿಡಿಯಿರಿ

ಇಲ್ಲಿ $a = 5, \quad d = 3, \quad a_n = 50$

ನಮಗೆ ಗೊತ್ತಿರುವಂತೆ $a_n = a + (n-1)d$

$50 = 5 + (n-1)(3)$

$(n-1)(3) = 50 - 5$

$(n-1)(3) = 45$

$(n-1) = 45/3$

$n-1 = 15$

$n = 15+1 = 16$

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$

$$Sn = \frac{16}{2}[2(5)+(16-1)(3)]$$

$$Sn = 8[10+45]$$

$$= 8(55)$$

$$= 440$$

ii) $a = 7, a_{13} = 35$ ಆದರೆ d ಮತ್ತು $S_{13}$ ಗಳನ್ನು ಕಂಡುಹಿಡಿಯಿರಿ

ಪರಿಹಾರ: $a = 7, \quad a_{13} = 35$

ನಮಗೆ ಗೊತ್ತಿರುವಂತೆ

$a_n = a + (n-1)d$

$a_{13} = a + (13-1)(d)$

$a_{13} = a + (12)(d)$

$35 = 7 + 12d$

$12d = 28$

$d = 28/12$

$d = 7/3$

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$

$$S_{13} = \frac{13}{2}[2(a)+(13-1)(d)]$$

$$S_{13} = \frac{13}{2}[2a+(12)(d)]$$

$$S_{13} = \frac{13}{2}\left[2(7)+(12)(\frac{7}{3})\right]$$

$$S_{13} = \frac{13}{2}[14+28]$$

$$S_{13} = \frac{13}{2}[42]$$

$$S_{13} = (13)(21)$$

$$S_{13} = 273$$

iii) $a_{12} = 37, d = 3$ ಆದರೆ a ಮತ್ತು $S_{12}$ ಗಳನ್ನು ಕಂಡುಹಿಡಿಯಿರಿ

ಪರಿಹಾರ: $a_{12} = 37, \quad d = 3$

ನಮಗೆ ಗೊತ್ತಿರುವಂತೆ

$a_n = a + (n-1)d$

$a_{12} = a + (12-1)(d)$

$a_{12} = a + (11)(d)$

$37 = a + 11d$

$37 = a + 11 \times 3$

$a = 37 - 33$

$= 4$

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$

$$S_{12} = \frac{12}{2}[2a+(12-1)d]$$

$$S_{12} = 6(2a+11d)$$

$$S_{12} = 6(2x4+11x3)$$

$$S_{12} = 6(8+33)$$

$$S_{12} = 6x41$$

$$S_{12} = 246$$

iv) $a_3 = 15, S_{10} = 125$ ಆದರೆ d ಮತ್ತು $a_{10}$ ಕಂಡುಹಿಡಿಯಿರಿ

ಪರಿಹಾರ: $a_3 = 15, \quad n = 10 \quad d = ? \quad S_{10} = 125,$

$a_3 = 15$

$a + 2d = 15$.............(1)

$S_{10} = 125,$

$$= \frac{10}{2}[2a+(n-1)d]$$

$$= \frac{10}{2}[2a+(10-1)d] = 125$$

$$= 5(2a+9d) = 125$$

$$= 2a+9d = \frac{125}{5}$$

$$2a+9d = 25 \ldots\ldots\ldots\ldots(2)$$

2 ರಿಂದ ಸಮೀಕರಣ 1 ಮತ್ತು 2ಅನ್ನು ಗುಣಿಸಿದಾಗ

$a + 2d = 15 \times 2$

$2a + 9d = 25 \times 2$

$2a + 4d = 30$

$(-)\ 2a + 9d = 25$

$(-) \quad (-)$

$-5d = 5$

$d = -5/5$

$d = -1$

a ಕಂಡುಹಿಡಿಯುವುದು

$a + 2d = 15$

$a + 2 \times -1 = 15$

$a = 15+2 \Rightarrow a = 17$

$a_{10}$ ಕಂಡುಹಿಡಿಯುವುದು

$a_n = a + (n-1)d$

$a_{10} = a + 9d$

$= 17+9x(-1)$

$= 17-9$

$a_{10} = 8$

(ಮುಂದುವರಿಯುವುದು......)

ಎಸ್ಸೆಸ್ಸೆಲ್ಸಿ- ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC BIOLOGY

## REPRODUCTION

### *Human Reproduction*

***Multiple Choice questions:-*** ***(….Contd)***

**81. Sertoli cell secretes hormone……..**
A) Relaxin B) Testosterone
C) Inhibin D) Gonadotropin

**82. Low titre of progesterone and estrogen stimulates production of……….**
A) FSH B) FSH-RH
C) LH D) GH

**83. Embryo at 16-celled stage is called………**
A) Morula B) Blastomere
C) Blastula D) Gastrula.

**84. Sertoli cells are regulated by the pituitary hormone……….**
A) FSH B) GH
C) Prolactin D) LH

**85. Spermatids are changed into spermatozoa through**
A) Spermiogenesis B) Spermition
C) Spermatogenesis D) Spermatosis

**86. Notochord, skeletal system and dermis of skin are derived from**
A) Ectoderm B) Endoderm
C) Mesoderm D) All the above

**87. Which is incorrect about menstruation?**
A) At menopause there is abrupt increase in gonadotropic hormones
B) Beginning of cycle of menstruation is called menarche
C) About 40 mL of blood is lost during normal menstruation
D) Menstrual fluid can easily clot.

**88. Leyding cells secrete…………**
A) Progesterone B) Testosterone
C) Estrogen D) Cortisterone


**89. Which germinal layer develops first during embryonic development?**
A) Endoderm B) Mesoderm
C) Ectoderm D) Both A & B

**90. 32 celled stage of human embryo is………**
A) Larger than fertilized egg
B) Smaller than fertilized egg
C) Same size as fertilized egg
D) 4 times larger than fertilized egg

**91. Signals from fully developed foetus and placenta ultimately lead to parturition which requires the release of**
A) Estrogen from placenta
B) Oxytocin from foetal pituitary
C) Oxytocin from maternal pituitary
D) Relaxin from placenta

**92. What happens during fertilization in humans after many sperms reach close to the ovum……..**
A) Cells of corona radiata trap all the sperms except one
B) Only two sperms nearest the ovum penetrate zona pellucida
C) Secretion of acrosome helps one sperm enter cytoplasm of ovum through zona pellucida
D) All sperms except the one nearest the ovum lose their tails.

**93. The figure given here depicts a diagrammatic sectional view of the female reproductive system of humans. Which one set of three parts out of i-vi have been correctly identified**





A) iv-oviducal funnel, v-uterus, vi-cervix
B) i-perimetrium, ii-myometrium, iv-fallopian tube
C) ii-endometrium, iii-infundibulum, iv-fimbriae
D) iii-infundibulum, iv-fimbriae, v-cervix

**94. About which day in the normal human menstrual cycle does rapid secretion of LH (popularly called LH surge) normally occurs**
A) 5th day B) 11th day
C) 14th day D) 20th day

**95. Signals for parturition originate from……**
A) Placenta
B) Fully developed foetus
C) Both placenta as well as fully developed foetus
D) Oxytocin released from maternal pituitary.

**96. Identify the human development stage as well as its place of occurrence and select the right option of the two ………….**



| *Development state* | *Site of Occurrence* |
|---|---|
| A) Late morula | Middle part of fallopian tube |
| B)8-celled morula | Starting point of fallopian tube |
| C) Blastula | End part of fallopian tube |
| D) Blastocyst | Uterine wall |

**97. In human females, ovarian cycle begins as the……………**
A) Estrogen level reaches maximum
B) Progesterone level falls precipitously
C) Hypothalamus increases release of FSH and LH
D) Hypothalamus stimulates anterior pituitary to increase FSH and LH output.

***Answers:*** **81)C 82)B 83)A 84)A 85)A 86)C 87)D 88)B 89)A 90)C 91)C 92)C 93)D 94)C 95)C 96)D 97)C**

# ಕಾಡಾನೆ ದಾಳಿ: ಯುವತಿ ಸಾವು

ಪ್ರಜಾವಾಣಿ ವಾರ್ತೆ



ಆಲ್ದೂರು (ಚಿಕ್ಕಮಗಳೂರು): ಕಾಫಿತೋಟದ ಕೆಲಸಕ್ಕೆ ಹೋಗುತ್ತಿದ್ದ ಕಾರ್ಮಿಕರ ಮೇಲೆ ಮೀನಾ ಕಾಡಾನೆ ದಾಳಿ ನಡೆಸಿದ್ದು, ಗಾಳಿಗುಂಡಿ ಗ್ರಾಮದ ಮೋಹನ್ ಅವರ ಪುತ್ರಿ ಮೀನಾ(32) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಗಾಳಿಗುಂಡಿ ಗ್ರಾಮದಿಂದ ಹೆಡದಾಳು ಗುಡ್ಡದಕೆರೆ ಬಳಿಯ ಕಾಫಿ ತೋಟದ ಕೆಲಸಕ್ಕೆ ಬುಧವಾರ ಬೆಳಿಗ್ಗೆ ಆರು ಮಂದಿ ಹೋಗಿದ್ದರು. ಮನೆಯಿಂದ ತೆಗೆದುಕೊಂಡು ಹೋಗಿದ್ದ ಉಪಾಹಾರವನ್ನು ಕೆಲಸ ಆರಂಭಿಸುವ ಮುನ್ನ ತಿನ್ನಲು ಒಟ್ಟಿಗೆ ನಾಲ್ವರು ಯುವತಿಯರು ಕುಳಿತಿದ್ದರು.

ಈ ಸಂದರ್ಭದಲ್ಲಿ ಬಂದ ಆನೆಯನ್ನು ನೋಡಿದ ಎಲ್ಲರೂ ಓಡಿದರು. ಆದರೆ, ಮೀನಾ ಅವರು ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಮೀನಾ ಅವರ ತಲೆಯ ಮೇಲೆ ಆನೆ ಕಾಲಿಟ್ಟಿದ್ದು, ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಎರಡು ತಿಂಗಳಲ್ಲಿ ಕಾಡಾನೆ ಇಬ್ಬರನ್ನು ಬಲಿ ಪಡೆದಿದ್ದು, ಆನೆಗಳನ್ನು ಹಿಡಿದು ಸ್ಥಳಾಂತರ ಮಾಡುವಲ್ಲಿ ಅರಣ್ಯ ಇಲಾಖೆ ವಿಫಲವಾಗಿದೆ. ಅಮಾಯಕರು ಆನೆಗಳ ದಾಳಿಗೆ ಬಲಿಯಾಗುತ್ತಿದ್ದಾರೆ ಎಂದು ಆರೋಪಿಸಿ ಸ್ಥಳೀಯರು ಮತ್ತು ಬಿಜೆಪಿ ಮುಖಂಡರು ಮೀನಾ ಅವರ ಶವವಿಟ್ಟುಕೊಂಡು ಪ್ರತಿಭಟನೆ ನಡೆಸಿದರು.

ಮೂಡಿಗೆರೆಗೆ ಭೇಟಿ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾಧಿಕಾರಿ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳ ಜತೆ ಸಭೆ ನಡೆಸಿದರು. ಆನೆಗಳನ್ನು ಹಿಡಿದು ಸ್ಥಳಾಂತರಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು. ಪ್ರತಿಭಟನೆ ನಡೆಸುತ್ತಿದ್ದವರ ಜತೆಗೂ ದೂರವಾಣಿ ಮೂಲಕ ಮಾತನಾಡಿದರು.

ಮುಖ್ಯಮಂತ್ರಿ ಅವರ ಸೂಚನೆಯ ಮೇರೆಗೆ ಮೃತಳ ಕುಟುಂಬಕ್ಕೆ ₹15 ಲಕ್ಷ ಪರಿಹಾರದ ಚೆಕ್‌ನ್ನು ಸ್ಥಳದಲ್ಲೇ ನೀಡಲಾಯಿತು. ಬಳಿಕ ಸ್ಥಳೀಯರು ಪ್ರತಿಭಟನೆ ಹಿಂಪಡೆದರು.

## ತಿದ್ದುಪಡಿ

ಬಿಹಾರ್ ರಾಜ್ಯ ಸರ್ಕಾರವು ಎಸ್‌ಸಿ, ಎಸ್‌ಟಿ ಸಮುದಾಯದ ಮೀಸಲಾತಿ ಪ್ರಮಾಣವನ್ನು ಶೇ 22ಕ್ಕೆ, ಒಬಿಸಿ ಮೀಸಲಾತಿ ಪ್ರಮಾಣವನ್ನು ಶೇ 43ಕ್ಕೆ ಹೆಚ್ಚಿಸಲು ತೀರ್ಮಾನಿಸಿದೆ. ಆರ್ಥಿಕ ದುರ್ಬಲ ವರ್ಗದವರಿಗೆ ಶೇ 10ರಷ್ಟು ಮೀಸಲಾತಿ ಸೇರಿ ಒಟ್ಟು ಮೀಸಲಾತಿ ಪ್ರಮಾಣ ಶೇ 75ರಷ್ಟು ಆಗಲಿದೆ. ಬುಧವಾರದ ಸಂಚಿಕೆಯಲ್ಲಿ ಈ ಅಂಕಿ ಅಂಶಗಳು ತಪ್ಪಾಗಿದ್ದವು.

### ಕರ್ನಾಟಕ ಜೀವವೈವಿಧ್ಯ ಮಂಡಳಿ

(ಅರಣ್ಯ, ಜೀವಿಸ್ಥಿತಿ ಮತ್ತು ಪರಿಸರ ಇಲಾಖೆ)
ನೆಲಮಹಡಿ, "ವನವಿಕಾಸ", 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003.

**2023ನೇ ಸಾಲಿನ ಜೀವವೈವಿಧ್ಯ ಪ್ರಶಸ್ತಿ**

| ಕ್ರ.ಸಂ. | ಪ್ರಶಸ್ತಿಯ ಹೆಸರು | ಬಹುಮಾನ |
|---|---|---|
| 1 | ಜೀವವೈವಿಧ್ಯತೆ ಸಂರಕ್ಷಣೆ | ಪ್ರತಿ ಪ್ರಶಸ್ತಿಗೆ ರೂ.50,000/- ಹಾಗೂ ಪ್ರಮಾಣಪತ್ರ ನೀಡಲಾಗುವುದು. |
| 2 | ಪಾರಂಪರಿಕ/ಸಾವಯವ ಕೃಷಿ ಪದ್ಧತಿ | |
| 3 | ಅತ್ಯುತ್ತಮ ಜೀವವೈವಿಧ್ಯ ನಿರ್ವಹಣಾ ಸಮಿತಿ | |
| 4 | ಅತ್ಯುತ್ತಮ ಜೀವವೈವಿಧ್ಯ ಸಾಕ್ಷ್ಯಚಿತ್ರ | |

ಅರ್ಜಿಗಳನ್ನು ಸಲ್ಲಿಸಲು ದಿನಾಂಕವನ್ನು ವಿಸ್ತರಿಸಲಾಗಿದ್ದು, ದಿನಾಂಕ: 01.12.2023ರ ಸಂಜೆ 5:00 ಗಂಟೆಯೊಳಗಾಗಿ ಮುದ್ದಾಂ ಅಥವಾ ಅಂಚೆ ಮೂಲಕ ಅರ್ಜಿಗಳನ್ನು ಮಂಡಳಿಗೆ ಸಲ್ಲಿಸಬೇಕಾಗಿರುತ್ತದೆ.

ವಾಸಾಸಂಇ/ವಾಪ್ರ/ಜಿಎ/2047/2022-23

### ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರವರ ಕಚೇರಿ
ಕನೀನಿನಿ, ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ. ತಾ:: ಹುಬ್ಬಳ್ಳಿ, ಜಿ: ಧಾರವಾಡ 580023. ಫೋನ್ : 0836–2315225 ಫ್ಯಾಕ್ಸ್ :2315226.
e-mail :-eemrbcc3byt@gmail.com
Head Office : 4th Floor, Coffee Board Building
No.1 Dr. Ambedkar Veedhi, Bangalore. CIN:- U85110KA1998SGC024503.
Phone:-080-22283074-78 Fax:-080-22386015
e-mail :- knnl@knnlindia.com Website:- www.knnlindia.com

ಸಂ.ಕನೀನಿನಿ/ಮಬದವಿ–3/ಎ.ಇ–1/ಇ–ಟೆಂಡರ/2023–24/1556 ದಿನಾಂಕ:–06–11–2023

**ಟೆಂಡರ ಪ್ರಕಟಣೆ**

(ಇ–ಪ್ರೊಕ್ಯೂರ್‌ಮೆಂಟ ಪೋರ್ಟಲ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ರವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್ ಕನೀನಿನಿ, ಮಬದಕಾನಿ ವಿಭಾಗ ಸಂ.3, ಬ್ಯಾಹಟ್ಟಿ ವ್ಯಾಪ್ತಿಯ 4701 ಲೆಕ್ಕಶೀರ್ಷಿಕೆ ಅಡಿ ಈ ಕೆಳಗೆ ನಮೂದಿಸಿರುವ ಇಂಡೆಂಟ ನಂಬರಿನ 01 ಕನ್ಸಲ್ಟನ್ಸಿ ಕಾಮಗಾರಿಗೆ ಶೇಕಡಾವಾರು ಟೆಂಡರನ್ನು ದ್ವಿಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರಮೆಂಟ ಮೂಲಕ ಆಹ್ವಾನಿಸಲಾಗಿದೆ.

Work Indent No :-311
**ಕಾಮಗಾರಿಯ ಅಂದಾಜು ಮೊತ್ತ: ರೂ. 100.00 ಲಕ್ಷಗಳು**
**ಇ.ಎಂ.ಡಿ ಮೊತ್ತ:– ರೂ. 2.00 ಲಕ್ಷಗಳು**

ಇ–ಪೋರ್ಟಲ್ ಮೂಲಕ ಟೆಂಡರಗಳನ್ನು ದಿನಾಂಕ: 02/12/2023 ರ 4.00 pm. ತನಕ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04/12/2023 ರಂದು ಮುಂಜಾನೆ: 11.00 am. ರಿಂದ. ಹಾಗೂ ಕಾಮಗಾರಿವಾರು ಇತರೆ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ ಪೋರ್ಟಲ್ ವೆಬಸೈಟ್ ಮುಖೇನ http://kppp.karnataka.gov.in ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: 0836–2315225 ನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು
ಕನೀನಿನಿ, ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ

ವಾ.ಸಾ.ಇ./ಧಾ/461/2023–24/ದೇಶಪಾಂಡೆಪಬ್ಲಿಸಿಟಿ

# ಹೆಜ್ಜೇನು ದಾಳಿ: ಕಾಲೇಜಿನ 16 ವಿದ್ಯಾರ್ಥಿಗಳು ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ಪಟ್ಟಣದ ಹೊರವಲಯದ ಎಸ್‌ಆರ್‌ಎಂಪಿಪಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಿಂದ 300 ಮೀಟರ್ ದೂರದಲ್ಲಿ ಬುಧವಾರ ಹೆಜ್ಜೇನುಗಳ ಹಿಂಡು ದಾಳಿ ನಡೆಸಿದ್ದರಿಂದ 16 ವಿದ್ಯಾರ್ಥಿಗಳು ಗಾಯಗೊಂಡರು.

ತರಗತಿ ಮುಗಿಸಿಕೊಂಡು ಪದವಿ ವಿದ್ಯಾರ್ಥಿಗಳು ಮನೆಗೆ ಮರಳುತ್ತಿದ್ದರೆ, ಕೂಡ್ಲಿಗಿಯ ರಾಘವೇಂದ್ರ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಪದವಿ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ತೆರಳುತ್ತಿದ್ದ ವೇಳೆ ಘಟನೆ ನಡೆದಿದೆ. ಎಬಿಪಿಪಿ ಜಿಲ್ಲಾ ಘಟಕದ ಸಂಚಾಲಕ ಕೊಟ್ರೇಶ ಮತ್ತು ಕಾಲೇಜಿನ ಸಿಬ್ಬಂದಿ ಗಾಯಾಳುಗಳನ್ನು ಆಸ್ಪತ್ರೆಗೆ ಕರೆದೊಯ್ದರು.

'ಪಟ್ಟಣದಿಂದ 2 ಕಿ.ಮೀ. ದೂರದಲ್ಲಿ ಕಾಲೇಜು ಇದೆ. ಈ ದಾರಿಯಲ್ಲಿ ಹಲವು ಮರಗಳಿದ್ದು, ಹೆಜ್ಜೇನು ಗೂಡು ಕಟ್ಟಿತ್ತು. ಕಿಡಿಗೇಡಿಗಳು ಗೂಡಿಗೆ ಕಲ್ಲು ಎಸೆದಿದ್ದರಿಂದ ಈ ಘಟನೆ ನಡೆದಿದೆ' ಎಂದು ಸ್ಥಳೀಯರು ತಿಳಿಸಿದ್ದಾರೆ.

### ಕರ್ನಾಟಕ ಸರ್ಕಾರ
### ಕಾರ್ಯಪಾಲಕ ಅಭಿಯಂತರರವರ ಕಛೇರಿ
### ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು–570 006.

ಸಂ.ಕಾಅ/ಗ್ರಾಕುನೀ&ನೈವಿ/ಮೈ/KPPP ಅಲ್ಪಾವಧಿ ಟೆಂಡರ್ ಪ್ರಕಟಣೆ

**ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಸಂಖ್ಯೆ.18/2023–24 ದಿ:07.11.2023**

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ, ಪಿ.ಡಬ್ಲ್ಯೂ.ಡಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿದ ಕಾಮಗಾರಿ ಮೊತ್ತ ದನ್ವಯ 3, 4ನೇ ದರ್ಜೆ ಗುತ್ತಿಗೆದಾರರು ಮತ್ತು ಮೇಲ್ಪಟ್ಟು ಟೆಂಡರ್ ನಮೂನೆ KW-1,2/KW-3 ರೀತ್ಯಾ (ಏಕ & ದ್ವಿ ಲಕೋಟೆ ಪದ್ಧತಿಯಂತೆ) ಹೆಚ್.ಡಿ.ಕೋಟೆ, ಸರಗೂರು, ಪಿರಿಯಾಪಟ್ಟಣ, ಕೆ.ಆರ್.ನಗರ, ಹುಣಸೂರು ತಾಲ್ಲೂಕಿನ ಕಾಮಗಾರಿಗಳಿಗೆ (ಮೀಸಲಾತಿ ಕಾಮಗಾರಿಗಳನ್ನೊಳಪಟ್ಟು) (ಟೆಂಡರ್‌ಗಿಟ್ಟ ಮೊತ್ತ ರೂ.12.29 ಲಕ್ಷಗಳಿಂದ ರೂ.97.18 ಲಕ್ಷದವರೆಗೆ) ಹಾಗೂ ಸರ್ಕಾರಿ ಕೆಲಸಗಳಿಗೆ ವಾಹನವನ್ನು ಗುತ್ತಿಗೆ ಆಧಾರದ ಮೇಲೆ ಪಡೆಯಲು ಸ್ವಂತ ವಾಹನಗಳನ್ನು ಹೊಂದಿರುವ ಸರಬರಾಜುದಾರರು / ಟ್ರಾವಲ್ ಏಜೆನ್ಸಿಗಳು ರವರರಿಂದ ಮೈಸೂರು ವಿಭಾಗ ಹಾಗೂ ವಿಭಾಗ ವ್ಯಾಪ್ತಿಯ 8 ಕಚೇರಿಗಳಿಗೆ (ಟೆಂಡರ್‌ಗಿಟ್ಟ ಮೊತ್ತ ರೂ. ರೂ.34.20ಲಕ್ಷ) ಇ–ಪ್ರಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ನಿಗಧಿತ ಅವಧಿ ದಿ: 08.11.2023 ರಿಂದ 15.11.2023 ಸಂಜೆ 4.00 ಘಂಟೆಯವರೆಗೆ ಸಾಧ್ಯವಾದರೆ ಟೆಂಡರ್ ತೆರೆಯುವ ದಿ: 16.11.2023 ರ ಸಂಜೆ 5.30 ಘಂಟೆಯ ನಂತರ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (KPPP portal) ವೆಬ್ ಸೈಟ್‌ನಲ್ಲಿ ಪಡೆಯಬಹುದು. https://KPPP.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (ಪೋನ್ ನಂ.0821–2460495)ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರು

DIPR/DDMYS/KSMCA/608/2023-24

### ಕರ್ನಾಟಕ ಸರ್ಕಾರ GOVERNMENT OF KARNATAKA
### ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ.

Cantonment Area, Director:8147796529, PA: 8147796539,
e-mail : vimsballaridirector@karnataka.gov.in , directorvimsballari@gmail.com
website: vims.karnataka.gov.in

ಸಂ:ವಿಮ್ಸ್/ಟೆಂಡರ್/ಸಾಮಾನ್ಯ–1/01/2023–24 ದಿನಾಂಕ:08/11/.2023

**ತಿದ್ದುಪಡಿಆದೇಶ**

ವಿಮ್ಸ್ ಸಂಸ್ಥೆ, ಬಳ್ಳಾರಿಯ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗೆ ಸ್ವಚ್ಛತಾ ಮತ್ತು ನೈರ್ಮಲ್ಯ ಸೇವೆಗಳಿಗಾಗಿ ಮಾನವ ಸಂಪನ್ಮೂಲ ಒದಗಿಸಲು ಕೆ.ಟಿ.ಪಿ.ಪಿ ಅಧಿನಿಯಮ–1999–2000ರಂತೆ ಒಂದು–ಬಿಡ್ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಪೋರ್ಟಲ್ https://kppp.karnataka.gov.in ಮೂಲಕ ಇ–ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಬಿಡ್ ದಾರರು ಮೇಲಿನ ಪೋರ್ಟಲ್‌ನಲ್ಲಿ ಟೆಂಡರನ್ನು **ದಿನಾಂಕ: 04/11/2023 ಸಂಜೆ 5.00** ಗಂಟೆಯಬದಲಾಗಿ **ದಿನಾಂಕ: 18.11.2023ರ ಸಂಜೆ: 5.00** ಗಂಟೆ ಎಂದು ಓದಿಕೊಳ್ಳತಕ್ಕದ್ದು.

ಸಹಿ/– ನಿರ್ದೇಶಕರು, ವಿಮ್ಸ್, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/418/ಕೆಎಸ್‌ಎಂಸಿಎ/2023–24

### ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹೊಳಲ್ಕೆರೆ–577526

(ಚಿತ್ರದುರ್ಗ ಜಿಲ್ಲೆ)
ಇ–ಮೇಲ್:apmcholalkere@gmail.com, ದೂರವಾಣಿ:–08191–275113

ಕ್ರಸಂ:ಕೃಉಮಾಸ/ಹೊಳ/423/2023–24 ದಿನಾಂಕ: 07/11/2023

**ಟೆಂಡರ್ ಪ್ರಕಟಣೆ–2ನೇ ಕರೆ**

ಹೊಳಲ್ಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಹೆಚ್ಚುವರಿ ಹಣವನ್ನು ಇ–ಪೋರ್ಟಲ್‌ನಲ್ಲಿ ಇ–ಹರಾಜಿನ ಮೂಲಕ ನಿಶ್ಚಿತ ಠೇವಣಿಯಲ್ಲಿ ತೊಡಗಿಸುವ ಕುರಿತು ಆಸಕ್ತ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಹೊಳಲ್ಕೆರೆಯ (SBI BANK Auction No:APMC/2023-24/AUCTION40) ಶಾಖೆಗಳಿಂದ ಸ್ಪರ್ಧಾತ್ಮಕ ಇ–ಬಿಡ್ಡಿಂಗ್‌ನ್ನು ಆಹ್ವಾನಿಸಲಾಗಿದ್ದು, ಸಮಜಾಯಿಷಿ ನೀಡುವ ಕೊನೆಯ ದಿನಾಂಕ: 18–11–2023 ಸಂಜೆ 4:50 ಘಂಟೆಯವರೆಗೆ, ಇ–ಹರಾಜಿನ ಪೂರ್ವಭಾವಿ ಸಭೆ ದಿನಾಂಕ: 21–11–2023 ಬೆಳಗ್ಗೆ 11:00 ಘಂಟೆಗೆ, ಇ–ಹರಾಜಿನಲ್ಲಿ ಭಾಗವಹಿಸುವವರ ಕೊನೆಯ ದಿನಾಂಕ: 24–11–2023 ಬೆಳಗ್ಗೆ 11:00 ಘಂಟೆಯವರೆಗೆ ಮತ್ತು ಇ–ಹರಾಜನ್ನು ದಿನಾಂಕ: 28–11–2023 ರಂದು ಬೆಳಗ್ಗೆ 11:00 ಘಂಟೆಯಿಂದ ಸಂಜೆ 5:00 ಘಂಟೆಯವರೆಗೆ ನಡೆಸಲಾಗುವುದು ಮತ್ತು ಟೆಂಡರ್ ತೆರೆಯುವ ದಿನಾಂಕ: 04–12–2023ರ ಬೆಳಗ್ಗೆ 11:00 ಘಂಟೆಗೆ ಇರುತ್ತದೆ. ಹೆಚ್ಚಿನ ವಿವರಗಳನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. ಮತ್ತು ಈ ಕಛೇರಿಯ ಕಾರ್ಯದರ್ಶಿಯವರ ದೂರವಾಣಿ ಸಂಖ್ಯೆ: 9448610923 ರ ಮೂಲಕ ಪಡೆಯಬಹುದಾಗಿರುತ್ತದೆ. ಟೆಂಡರ್‌ನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿದೆ.

ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ., ಹೊಳಲ್ಕೆರೆ.
ಸಹಿ/– ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ., ಹೊಳಲ್ಕೆರೆ.

DIPR/CTA/KSMCA/318/2023-24

## ಸಂಕ್ಷಿಪ್ತ ಸುದ್ದಿ

# ನ್ಯಾ.ಶಿವರಾಜ ಪಾಟೀಲಗೆ ಅನುಭವ ಮಂಟಪ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣ (ಬೀದರ್ ಜಿಲ್ಲೆ): ವಿಶ್ವ ಬಸವಧರ್ಮ ವಿಶ್ವಸ್ಥ ಮಂಡಳಿಯ ಪ್ರಸಕ್ತ ಸಾಲಿನ 'ಡಾ.ಚನ್ನಬಸವ ಪಟ್ಟದ್ದೇವರು ಅನುಭವ ಮಂಟಪ ಪ್ರಶಸ್ತಿ'ಗೆ ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲ ಅವರನ್ನು ಆಯ್ಕೆ ಮಾಡಲಾಗಿದೆ.

ರಾಯಚೂರು ಜಿಲ್ಲೆಯವರಾದ ಇವರು ರಾಷ್ಟ್ರೀಯ ಮಾನವ ಹಕ್ಕುಗಳ ಅಧ್ಯಕ್ಷರೂ ಆಗಿದ್ದರು. ಪ್ರಶಸ್ತಿಯು ₹1 ಲಕ್ಷ ನಗದು ಹಾಗೂ ಫಲಕ ಒಳಗೊಂಡಿದೆ. ವಿಶ್ವಸ್ಥ ಮಂಡಳಿ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರ ನೇತೃತ್ವದ ಸಮಿತಿಯು ಪ್ರಶಸ್ತಿಗೆ ಆಯ್ಕೆ ಮಾಡಿದೆ. ನ.25ರಂದು ನಡೆಯುವ ಅನುಭವ ಮಂಟಪ ಉತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಮಂಡಳಿ ಕಾರ್ಯದರ್ಶಿ ಡಾ.ಎಸ್.ಬಿ.ದುರ್ಗೆ ತಿಳಿಸಿದ್ದಾರೆ.

# ದಿಲೀಪ್ ಕುಮಾರ್‌ಗೆ ಶ್ರೀನಗರೀಂದ್ರ ಪ್ರಶಸ್ತಿ



ಚಿತ್ರದುರ್ಗ: ನರ್ಸಿಂಗ್ ಕ್ಷೇತ್ರದಲ್ಲಿ ಸಲ್ಲಿಸಿದ ಅನುಪಮ ಸೇವೆಗೆ ಮೀಸಲಿರುವ 'ಶ್ರೀನಗರೀಂದ್ರ ಅಂತರರಾಷ್ಟ್ರೀಯ ಪುರಸ್ಕಾರ'ಕ್ಕೆ ಇಂಡಿಯನ್ ನರ್ಸಿಂಗ್ ಕೌನ್ಸಿಲ್ ಅಧ್ಯಕ್ಷ ಡಾ.ಟಿ.ದಿಲೀಪ್‌ಕುಮಾರ್ ಭಾಜನರಾಗಿದ್ದಾರೆ.

ಬ್ಯಾಂಕಾಕ್‌ನಲ್ಲಿ ಈಚೆಗೆ ನಡೆದ ಸಮಾರಂಭದಲ್ಲಿ ರಾಣಿ ಮಹಾ ಚಕ್ರಿ ಸಿರಿಂದೋರ್ನ್ ಅವರು 2023ನೇ ಸಾಲಿನ ಪುರಸ್ಕಾರವನ್ನು ದಿಲೀಪ್‌ಕುಮಾರ್ ಅವರಿಗೆ ಪ್ರದಾನ ಮಾಡಿದರು.

ದಿಲೀಪ್‌ಕುಮಾರ್ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ದುಮ್ಮಿ ಗ್ರಾಮದವರು. ನರ್ಸಿಂಗ್ ಶಿಕ್ಷಣ ಪಡೆದ ಇವರು ಚಿತ್ರದುರ್ಗ, ಬಳ್ಳಾರಿ ಬೆಂಗಳೂರು ಸೇರಿ ರಾಜ್ಯದ ಹಲವೆಡೆ ಸೇವೆ ಸಲ್ಲಿಸಿದ್ದಾರೆ.

# 'ಪಂಡಿತಾರಾಧ್ಯ ಶ್ರೀಗಳ ಹೇಳಿಕೆ ಸತ್ಯ'

ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ): 'ವೇದಿಕೆ ಕಾರ್ಯಕ್ರಮ ಅಥವಾ ಮನೆಗಳಲ್ಲಿ ಗಣಪತಿಯನ್ನು ವಿಘ್ನ ನಿವಾರಕನನ್ನಾಗಿ ಪೂಜಿಸುವುದು, ಪ್ರಾರ್ಥಿಸುವುದು ನಮ್ಮ ಸಂಸ್ಕೃತಿಯಲ್ಲ. ಅದರ ಬದಲು ವಾಸ್ತವಕ್ಕೆ ತಕ್ಕ ವಚನಗಳನ್ನು ಪಠಿಸಬೇಕು ಎಂದು ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದ್ದು ಸತ್ಯವಾಗಿದೆ. ಎಲ್ಲ ಲಿಂಗಾಯತರು ವಚನ ಪಠಿಸುವುದನ್ನು ರೂಢಿಸಿಕೊಳ್ಳಬೇಕು' ಎಂದು ಬಸವ ಧರ್ಮ ಪೀಠದ ಪೀಠಾಧ್ಯಕ್ಷೆ ಮಾತೆ ಗಂಗಾದೇವಿ ತಿಳಿಸಿದ್ದಾರೆ.

'ಲಿಂಗಾಯತ ಧರ್ಮದಲ್ಲಿ ಕಾಲ್ಪನಿಕ ದೇವರು ಇಲ್ಲ. ಲಿಂಗಾಯತ ಧರ್ಮ, ಹಿಂದೂಧರ್ಮಗಳ ನಡುವೆ ಬಹಳ ವ್ಯತ್ಯಾಸ ಇದೆ' ಎಂದು ಹೇಳಿದ್ದಾರೆ.

### ಕರ್ನಾಟಕ ಸರ್ಕಾರ
### ಜಿಲ್ಲಾ ಪಂಚಾಯತ ಬೆಳಗಾವಿ
### ಪಂಚಾಯತ ರಾಜ ಇಂಜನಿಯರಿಂಗ್ ವಿಭಾಗ ಚಿಕ್ಕೋಡಿ

ಕಚೇರಿ ದೂರವಾಣಿ / ಫ್ಯಾಕ್ಸ್ ಸಂಖ್ಯೆ: 08338–272131, ಇ–ಮೇಲ್ : preckdee@gmail.com

ಕ್ರ.ಸಂ. ಪಂರಾಇಂ/ಚಿವಿ/ಡಿಬಿ/ಕೆಪಿಪಿಪಿ/2022–23/1748 ದಿನಾಂಕ: 31–10–2023

**ಅಲ್ಪಾವಧಿ ಕೆ. ಪಿ. ಪಿ. ಪಿ. ಟೆಂಡರ್ ಪ್ರಕಟಣೆ**

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಚಿಕ್ಕೋಡಿ ಇವರು KW-1, KW-2, KW-3, KW-4, (Standard Tender Document) ನಿಬಂಧನೆಗಳೊಪಟ್ಟಂತೆ ಪಂಚಾಯತ ರಾಜ್ ಇಂಜನೀಯರಿಂಗ್ / ಲೋಕೋಪಯೋಗಿ ಇಲಾಖೆಯಲ್ಲಿ ಸಿವ್ಹಿಲ್ ನೊಂದಾಯಿತ ಹಾಗೂ ಇ–ಗುತ್ತಿಗೆ ಕುರಿತು ಕೆ.ಪಿ.ಪಿ.ಪಿ. ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರುಗಳಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ವಿವಿಧ ಯೋಜನೆ ಅಡಿಯಲ್ಲಿಯ ಕಾಮಗಾರಿಗಳಿಗೆ ಐಟಂವಾರು ಟರ್ನಕೀ ಆಧಾರದ ಮೇಲೆ ಇ–ಟೆಂಡರ್ ಆಹ್ವಾನಿಸಲಾಗಿದೆ.

| | | |
|---|---|---|
| 1 | Last date of request for issue of blank E-bid document through e-procurement date: other works | 31-10-2023 to 18-11-2023 |
| 2 | Bid Closing & Submission date: other works | 18-11-2023 at 4:00 PM |
| 3 | Financial Bid Opening date | 20-11-2023 at 11:00 AM |
| 4 | Pre-Bid Meeting date: (KW-3 & 4 only) | 02-11-2023 at 11:00 AM |
| 5 | Technical Bid Opening Date : (KW-3 & 4 only) | 20-11-2023 at 11:00 AM |
| 6 | Financial Bid opening date: (KW-3 & 4 only) | 22-11-2023 at 11:00 PM |

| | |
|---|---|
| General Works Indent No"s | 261, 1091, 1052, 1054, 690, 753, 736, 692, 769, 765, 766, 759, 762, 760, 750, 781, 1092, 240, 284, 539, 248, 649, 293, 1066, 778, 655, 282, 524, 1047, 1048, 859, 780, 783, 1042, 1051, 646, 644, 772, 774, 652, 653, 654, 610, 643, 269, 267, 266, 270, 265, 257, 272, 764, 786, 849, 848, 846, 535, 852, 854, 855, 853, 1174, 326, 706, 861. |
| SC Works Indent No's | 298, 233, 754, 1150, 263, 857, 777, 1090, 648, 650, 651, 728, 845, 851, 1139, 320 |
| ST Works Indent No's | 1053, 753, 856, 787, 847, 850, 1171, |

ಕಾಮಗಾರಿಗಳ ವಿವಿರ, ಷರತ್ತು ನಿಬಂಧನೆಗಳಿಗಾಗಿ ಈ ಕಚೇರಿಗೆ ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್‌ಸೈಟ್ https://kppp.karnatakat.gov.in ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾಜ್. ಇಂ. ವಿಭಾಗ, ಚಿಕ್ಕೋಡಿ.

DIPO/RO No. 574/2023-24

### DEPARTMENT OF SERICULTURE

Office of the Commissioner for Sericulture Development & Director of Sericulture
M.S. Building, 5th Floor, Dr. Ambedkar Veedhi
Bengaluru- 560001
Phone: 22252611, e-mail: teamsilk.tech2@gmail.com

No.DOS/EPRO/RFIX(REQ)/1/2023 Date: 08-11-2023

**SHORT TERM TENDER NOTIFICATION**

**SHORT TERM TENDER FOR SUPPLY OF SERICULTURE FARM MACHINERIES, REARING EQUIPMENTS AND POST COCOON EQUIPMENTS (Call-2)**

Commissioner for Sericulture Development & Director of Sericulture, Department of Sericulture, Bengaluru invites tenderfor supply of Sericulture Farm Machineries, Rearing Equipments and Post Cocoon to the beneficiaries under Central Sponsored and State own sericulture scheme for two years, through e-procurement portal of Government of Karnataka **(https://kppp.karnataka.gov.in/)** Prospective suppliers willing to participate in this tender shall necessarily register themselves with above mentioned e procurement portal.

1) Date of uploading of Tender: **08-11-2023 2)** Pre Bid Meeting Date, Place and Time: **15-11-2023 at 03.00 PM 3)** Last date & Time for submission of tender: **22-11-2023 at 05.00 PM 4)** Date & Time of opening of Technical bid: **24-11-2023 at 11.00 AM 5)** Tentative Date & Time of opening of Commercial bid: **02-12-2023 at 11.00 AM 6)** EMD Amount: As mentioned in the Tender document **7)** Venue of pre-bid meeting, opening of tender& address for communication: **Office of the Commissioner for Sericulture Development & Director of Sericulture, Directorate of Sericulture, Room No.516, 5th Floor, M.S. Building, Dr.AmbedkarVeedhi Bengaluru- 560001 Phone: 22252611, e-mail: teamsilk.tech2@gmail.com**

Prospective suppliers willing to participate in this invitation of Tender can download the bid documents with visiting the website **https://kppp.karnataka.gov.in**

Sd/-
Additional Director of Sericulture (Tech)
& Tender Inviting Authority

DIPR/CP/2041/SPAN/2023-24

### ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

9 ಮತ್ತು 10ನೇ ಮಹಡಿ, ವಿ.ವಿ. ಚಿಕ್ಕ ಗೋಪುರ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
ಫೋ:080–22865401, 22868870, 22867097, 22865747, 22865192,
ಇ–ಮೇಲ್: mdadcl2011@gmail.com

ಸಂಖ್ಯೆ:ಅಂಅನಿ/ಪಿ.ತರಬೇತಿ ಭವನ/05/2023–24 ದಿನಾಂಕ:06.11.2023

**ಮುಕ್ತ ಹರಾಜು ಪ್ರಕಟಣೆ**

ಡಾ:ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಒಡೆತನದಲ್ಲಿರುವ ಭಾರತಾಮಾತ ಕೈಗಡಿಯಾರ ಘಟಕ ಶೆಡ್ ಸಂಖ್ಯೆ:ಎ–102, ಪೀಣ್ಯ ಇಂಡಸ್ಟ್ರೀಯಲ್ ಪ್ರದೇಶ, ಪೀಣ್ಯ 2ನೇ ಹಂತ, ನಲ್ಲೇಕದೆರನಹಳ್ಳಿ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಇರುವ ಹಳೆಯ ಕಟ್ಟಡವನ್ನು ನೆಲಸಮಗೊಳಿಸಲಾಗಿದೆ, ಹಾಲಿ ನೆಲಸಮಗೊಂಡಿರುವ ಜಾಗದಲ್ಲಿ ಇರುವ ಈ ಕೆಳಕಂಡ ಅನುಪಯುಕ್ತ ವಸ್ತುಗಳನ್ನು ಯಥಾಸ್ಥಿತಿಯಲ್ಲಿ ಹೇಗಿದೆಯೋ ಹಾಗೆಯೇ ಬಹಿರಂಗ ಹರಾಜು ಮಾಡಲಾಗುವುದು. ಹರಾಜಿನಲ್ಲಿ ಭಾಗವಹಿಸಲು ಇಚ್ಚಿಸುವ ಬಿಡ್‌ದಾರರು **ದಿನಾಂಕ: 10.11.2023 ರ ಬೆಳಿಗ್ಗೆ 11:30 ರಿಂದ ಸಂಜೆ 4:00 ಗಂಟೆಯವರೆಗೆ** ಸ್ಥಳದಲ್ಲಿ ಹಾಜರಾಗಿ ಸದರಿ ಕಟ್ಟಡದ ವಸ್ತುಗಳನ್ನು ಪರಿಶೀಲಿಸಲು ಅವಕಾಶ ಕಲ್ಪಿಸಿಕೊಡಲಾಗಿದೆ. ದಿನಾಂಕ: **16.11.2023ರ ಬೆಳಿಗ್ಗೆ 11:30ಕ್ಕೆ** ಸದರಿ ಅನುಪಯುಕ್ತ ವಸ್ತುಗಳನ್ನು ಖರೀದಿಸಲಿಚ್ಚಿಸುವ ಬಿಡ್‌ದಾರರು ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ.

ವಸ್ತುಗಳ ಪಟ್ಟಿ ಈ ಕೆಳಗಿನಂತಿದೆ

1. Roof Truss ನಲ್ಲಿ ಬಳಸಲಾದ ಕಬ್ಬಿಣದ ಸಾಮಗ್ರಿಗಳು
2. Collapsible Doors ಮತ್ತು Rolling Shutters
3. A.C Sheets ಮತ್ತು G.I Sheets
4. ಪಾಯದ ಕಲ್ಲುಗಳು
5. ಮರದ ಕಿಟಕಿಗಳು, ಬಾಗಿಲುಗಳು ಮತ್ತು Ventilators
6. ಕಬ್ಬಿಣದ ಸರಳುಗಳು, ಕಂಬಿಗಳು ಮತ್ತು ಇತರೆ ಕಟ್ಟಡ ಸಾಮಗ್ರಿಗಳು

ಹರಾಜು ನಿಬಂಧನೆಗಳನ್ನು ಹರಾಜು ನಡೆಯುವ ಸ್ಥಳದಲ್ಲಿ ಪಡೆದು, ಹರಾಜು ಪ್ರಕ್ರಿಯೆಗೆ ಭಾಗವಹಿಸುವ ಮೊದಲು ರೂ.10,000/– ಗಳ ನಂಬುಗೆ ಠೇವಣಿ (ಇ.ಎಂ.ಡಿ) ನಗದು ರೂಪದಲ್ಲಿ ಪಾವತಿಸಿ ಹರಾಜಿನಲ್ಲಿ ಭಾಗವಹಿಸಬಹುದು.

ವಾಸಾಸಂಇ/ವಾಪ್ರ/ಜಿಎ/2042/2023–24 ಸಹಿ/– ವ್ಯವಸ್ಥಾಪಕ ನಿರ್ದೇಶಕರು

### ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ

An ISO-9001:2015 & 14001:2015 Company
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಶ್ರೀಗಂಧ ನಗರ: ಅಂಚೆ ಪೆಟ್ಟಿಗೆ ಸಂ.5531, ಬೆಂಗಳೂರು–ಪುಣೆ ಹೆದ್ದಾರಿ, ಬೆಂಗಳೂರು–560 055.
ದೂರವಾಣಿ: 080–22164879, 22164886, ಜಾಲತಾಣ: www.mysoresandal.org ಇ–ಮೇಲ್: ksdl.dgmmtls@gmail.com

ದಿನಾಂಕ: 08.11.2023

**ಟೆಂಡರ್ ಪ್ರಕಟಣೆ**

ಕೆಎಸ್&ಡಿಎಲ್ ಸಂಸ್ಥೆಗೆ ಈ ಕೆಳಕಂಡ ಸರಕು/ಸೇವೆ/ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ 2.0 ಜಾಲತಾಣ (https://kppp.karnataka.gov.in)ದ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ. | ಟೆಂಡರ್ ಸಂಖ್ಯೆ | ಟೆಂಡರ್ ಹೆಸರು | ಸಂಖ್ಯೆ | ಪ್ರಕಟಣೆ ದಿನಾಂಕ | ಬಿಡ್ ಸಲ್ಲಿಸಲು ಕೊನೆಯ ದಿನಾಂಕ |
|---|---|---|---|---|---|
| 1 | KSDL/2023-24/ SE0036 | ಕೆಎಸ್&ಡಿಎಲ್, ಬೆಂಗಳೂರು ಸಂಕೀರ್ಣದಲ್ಲಿರುವ ಶ್ರೀಗಂಧ ವನಕ್ಕೆ ಕೌಶಲ್ಯರಹಿತ ಕಾರ್ಮಿಕರನ್ನು ಒದಗಿಸುವ ವಾರ್ಷಿಕ ಗುತ್ತಿಗೆ | ಸೇವೆಗಳು | 31.10.2023 | 15.11.2023 |
| 2 | KSDL/2023-24/ SE0037 | ಕೆಎಸ್&ಡಿಎಲ್‌ನಲ್ಲಿ ವೃತ್ತಿಪರ ಜಾಹೀರಾತು ಏಜೆನ್ಸಿ (PR) ನೇಮಿಸಿಕೊಳ್ಳುವುದು. | ಸೇವೆಗಳು | 02.11.2023 | 17.11.2023 |
| 3 | KSDL/2023-24/ SE0038 | ಬ್ರಾಂಡ್ ಮ್ಯಾನೇಜ್ಮೆಂಟ್ ಸೇವೆಗಳಿಗಾಗಿ ವೃತ್ತಿಪರ ಏಜೆನ್ಸಿಯನ್ನು ನೇಮಿಸಿಕೊಳ್ಳುವುದು. | ಸೇವೆಗಳು | 02.11.2023 | 17.11.2023 |
| 4 | KSDL/2023-24/ IND0044 | ನ್ಯೂ ಬೆವೆಲ್ ಹೆಲಿಕಲ್ ರೆಡ್ಯೂಸರ್ ಗೇರ್ ಮೋಟಾರ್ ಅಸೆಂಬ್ಲಿಯ ಖರೀದಿ. | 5 ಸಂ. | 03.11.2023 | 21.11.2023 |
| 5 | KSDL/2023-24/ IND0045 | 600 ಕೆಜಿ/ಗಂಟೆ ಸಾಮರ್ಥ್ಯದ ಹೊಸ ಸಂಪೂರ್ಣ ಸ್ವಯಂಚಾಲಿತ ಡೀಸೆಲ್ ಸ್ಟೀಮ್ ಬಾಯ್ಲರ್‌ನ ವಿನ್ಯಾಸ, ಪೂರೈಕೆ, ನಿರ್ಮಾಣ ಮತ್ತು ಕಾರ್ಯಾರಂಭ. | 1 ಸಂ. | 03.11.2023 | 21.11.2023 |
| 6 | KSDL/2023-24/ IND0046 | L-2 ರಿಂದ L-9 ಸೋಪ್ ಫಿನಿಶಿಂಗ್ ಲೈನ್‌ಗಳಿಗೆ MCC ಪ್ಯಾನೆಲ್‌ಗಳ ಪೂರೈಕೆ ಮತ್ತು ಸ್ಥಾಪನೆ | 8 ಸಂ. | 04.11.2023 | 21.11.2023 |
| 7 | KSDL/2023-24/ IND0047 | ಪಂಪ್ ಹೌಸ್ ಪ್ಲಾಂಟ್‌ಗೆ MCC ಪ್ಯಾನೆಲ್‌ಗಳ ಪೂರೈಕೆ ಮತ್ತು ಸ್ಥಾಪನೆ | 1 ಸಂ. | 04.11.2023 | 20.11.2023 |
| 8 | KSDL/2023-24/ IND0048 | 2023–24ನೇ ಸಾಲಿಗೆ ಕೆಎಸ್&ಡಿಎಲ್ ಅಧಿಕಾರಿಗಳು ಮತ್ತು ಉದ್ಯೋಗಿಗಳಿಗೆ ಸಾಕ್ಸ್‌ಗಳ ಖರೀದಿ. | 2420 ಜೊತೆ | 06.11.2023 | 21.11.2023 |
| 9 | KSDL/2023-24/ SE0040 | ಶ್ರೀಗಂಧದೆಣ್ಣೆ ವಿಭಾಗ, ಮೈಸೂರು ಕಾರ್ಖಾನೆಯ ಆವರಣದಲ್ಲಿ ಒಂದು ವರ್ಷದವರೆಗೆ ವಿವಿಧ ಬ್ರಾಂಡ್‌ಗಳ ಅಗರಬತ್ತಿ ಉತ್ಪನ್ನಗಳ ಪ್ಯಾಕಿಂಗ್ ಕಾರ್ಯಕ್ಕೆ ವಾರ್ಷಿಕ ಗುತ್ತಿಗೆ | ಸೇವೆಗಳು | 06.11.2023 | 22.11.2023 |
| 10 | KSDL/2023-24/ SE0041 | ಗುತ್ತಿಗೆ ಆಧಾರದ ಮೇಲೆ ಸ್ಟ್ರಾಟೆಜಿಕ್ ಬಿಸಿನೆಸ್ ಕನ್ಸಲ್ಟೆಂಟ್ಸ್‌ನ ನೇಮಕ. | ಸೇವೆಗಳು | 07.11.2023 | 23.11.2023 |
| 11 | KSDL/2023-24/ SE0042 | ಗುತ್ತಿಗೆ ಆಧಾರದ ಮೇಲೆ ವ್ಯವಸ್ಥಾಪಕ ನಿರ್ದೇಶಕರವರಿಗೆ ಆಪರೇಷನಲ್ ಅಸಿಸ್ಟೆಂಟ್‌ನ ನೇಮಕ. | ಸೇವೆಗಳು | 07.11.2023 | 23.11.2023 |
| 12 | KSDL/2023-24/ SE0039 | ಕೆಎಸ್&ಡಿಎಲ್, ಬೆಂಗಳೂರು ಸಂಕೀರ್ಣದಲ್ಲಿರುವ ಸಿದ್ದಪಡಿಸಿದ ಉತ್ಪನ್ನಗಳ ಕೇಂದ್ರೀಯ ಉಗ್ರಾಣ (CFGS)ದಿಂದ ಸುಂಕ ಪಾವತಿಸಿದ ಉಗ್ರಾಣ(DPG)ಕ್ಕೆ 1 ವರ್ಷದ ಅವಧಿಗೆ ಸಿದ್ದಪಡಿಸಿದ ಉತ್ಪನ್ನಗಳ ಸಾಗಣೆಗೆ ಸಾರಿಗೆ ವ್ಯವಸ್ಥೆಯ ವಾರ್ಷಿಕ ಗುತ್ತಿಗೆ. | ಸೇವೆಗಳು | 08.11.2023 | 24.11.2023 |

ಯಾವುದೇ ಹೆಚ್ಚಿನ ವಿಚಾರಣೆ/ಸ್ಪಷ್ಟೀಕರಣಕ್ಕೆ ಕೆಳಕಂಡ ಸಹಿದಾರರನ್ನು ಸಂಪರ್ಕಿಸಬಹುದು.

ಸಹಿ/–
ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಾಮಗ್ರಿ)

## ಕರ್ನಾಟಕ ಜೀವವೈವಿಧ್ಯ ಮಂಡಳಿ

ಕರ್ನಾಟಕ ಸರ್ಕಾರ
(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ)

**ಗಮನಿಸಿ:**
**ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಅಪಜೀ 186 ಇಎನ್‌ವಿ 2023 ದಿನಾಂಕ: 25.10.2023**
**ಜೈವಿಕವೈವಿಧ್ಯ ಅಧಿನಿಯಮ 2002ರ ಪರಿಚ್ಛೇದ 49(1)ರಡಿ ನಿರ್ದೇಶನಗಳು**

ಕರ್ನಾಟಕ ಸರ್ಕಾರವು ಜೈವಿಕ ವೈವಿಧ್ಯ ಅಧಿನಿಯಮ 2002ರ ಪ್ರಕರಣ 49(1)ರಡಿ ತನ್ನ ಅಧಿಕಾರವನ್ನು ಚಲಾಯಿಸುತ್ತಾ ವಾಣಿಜ್ಯ ಬಳಕೆಗಾಗಿ ಕರ್ನಾಟಕದಲ್ಲಿ ಜೈವಿಕ ಸಂಪನ್ಮೂಲಗಳನ್ನು ಉಪಯೋಗಿಸುತ್ತಿರುವ ಸಂಸ್ಥೆಗಳಿಗೆ ಕಾಯ್ದೆಯ ನಿಬಂಧನೆಗಳನ್ನು ಪಾಲನೆ ಮಾಡಲು ನಿರ್ದೇಶನಗಳ ಮುಖಾಂತರ 60ದಿನಗಳ ಕಾಲಾವಧಿಯ ಸದಾವಕಾಶವನ್ನು ಒದಗಿಸಿದೆ.

**ನಿರ್ದೇಶನಗಳು ಇಂತಿವೆ:**

1. ಜೈವಿಕ ವೈವಿಧ್ಯ ಅಧಿನಿಯಮ, 2002ರ ಸೆಕ್ಷನ್ 7ರ ವ್ಯಾಪ್ತಿಯಲ್ಲಿ ಬರುವ, ಜೈವಿಕವೈವಿಧ್ಯ ಅಧಿನಿಯಮ ಕಾಯ್ದೆಯ ನಿಬಂಧನೆಗಳು ಮತ್ತು ನಿಯಮಗಳನ್ನು ಪಾಲಿಸಲು ಅನ್ವಯಿಸುವ ಭಾರತದ ಎಲ್ಲಾ ಸಂಬಂಧಿಸಿದ ನಾಗರೀಕರು/ಸಂಸ್ಥೆಗಳೂ ಕರ್ನಾಟಕ ಜೀವವೈವಿಧ್ಯ ಮಂಡಳಿಗೆ ಅರ್ಜಿ ನಮೂನೆ–1 ರಲ್ಲಿ ಹಿಂದಿನ ವರ್ಷಗಳಿಗೆ ನೀಡಿದ ಪೂರ್ವ ಮಾಹಿತಿಯನ್ನು ಈ ನಿರ್ದೇಶನ ಹೊರಡಿಸಿದ 60 ದಿನಗಳೊಳಗಾಗಿ ಸಲ್ಲಿಸತಕ್ಕದ್ದು.

2. ಜೈವಿಕ ಸಂಪನ್ಮೂಲಗಳ ಬಳಕೆ, ಸಂಬಂಧಿತ ಜ್ಞಾನ, ಬಳಕೆ ಹಾಗೂ ಲಾಭ ಹಂಚಿಕೆಯು 2014ರಿಂದ ಜಾರಿಗೆ ಬಂದಿದ್ದು, ಜೈವಿಕ ಸಂಪನ್ಮೂಲಗಳನ್ನು ಪಡೆದುಕೊಳ್ಳುವ ಕುರಿತಂತೆ ನಿರ್ದೇಶನಗಳನ್ನು ಪರಿಗಣನೆಗೆ ತೆಗೆದುಕೊಂಡು ಹಿಂದಿನ ವರ್ಷಗಳ ಕಾಯ್ದೆಯ ಅಂಶಗಳ ಅನುಪಾಲನೆಗೆ ಅವಕಾಶವನ್ನು ಸರ್ಕಾರದ ಆದೇಶ ಸಂಖ್ಯೆ. FEE 186 ENV 2023 ದಿನಾಂಕ: 25.10.2023 ಪ್ರಕಾರ ದಿನಾಂಕ: 06.11.2023 ರಿಂದ 06.01.2024ರವರೆಗೆ ನೀಡಲಾಗಿದೆ. ಯಾವ ಚಟುವಟಿಕೆಗಳಿಗೆ ಈ ಹಿಂದೆ ಅನುಮೋದನೆಯನ್ನು ಪಡೆಯಬೇಕಾಗಿತ್ತೋ ಅಂತಹ ಚಟುವಟಿಕೆಗಳಿಗೆ ಮಾತ್ರ ಕೆಲವೊಂದು ಷರತ್ತಿಗೊಳಪಟ್ಟು ಈ ಅವಕಾಶವನ್ನು ನೀಡಿದೆ.

3. ಜೈವಿಕ ಸಂಪನ್ಮೂಲಗಳನ್ನು ಪಡೆದುಕೊಳ್ಳುವ ಸಂಬಂಧ ಅರ್ಜಿ ನಮೂನೆ–1ನ್ನು ಘಟನೋತ್ತರ ಅನುಮೋದನೆಗಾಗಿ (ex-post facto) ಸಲ್ಲಿಸುವ ಎಲ್ಲಾ ಅರ್ಜಿಗಳನ್ನು ಮಂಡಳಿಯು ವಿಚಾರಣೆ ಮೂಲಕ ಪರಶೀಲಿಸುವುದು ಹಾಗೂ ಸೂಕ್ತವಾದ ಮತ್ತು ಸಂಜಸವಾದ ಸಮರ್ಥನೆಗಳನ್ನು ಮತ್ತು ಕಾರಣಗಳನ್ನು ದಾಖಲಿಸಿದ್ದಲ್ಲಿ, ಅಂತಹ ಅರ್ಜಿಗಳು ಮಂಡಳಿಗೆ ಒಪ್ಪಿಗೆಯಾದಲ್ಲಿ ಮಾತ್ರ ಅನುಮೋದನೆ ನೀಡಬಹುದು. ಇಂತಹ ಎಲ್ಲಾ ಘಟನೋತ್ತರ ಅನುಮೋದನೆಗಳ ಪ್ರಕರಣಗಳನ್ನು ಅರ್ಹತೆಯ ಆಧಾರದ ಮೇಲೆ ಪರಿಗಣಿಸತಕ್ಕದ್ದು ಹಾಗೂ ಯಾವ ವ್ಯಕ್ತಿ/ಘಟಕವು ಸಾಮಾನ್ಯವಾಗಿ ಪೂರ್ವಾನುಮತಿಗಾಗಿ ನಿಗದಿತ ಸಮಯದಲ್ಲಿ ಅರ್ಜಿ ಸಲ್ಲಿಸಿದಾಗ ಪೂರ್ವಾನುಮತಿ ನೀಡಬಹುದಾದಂತಹ ಪ್ರಕರಣಗಳಿಗೆ ಅನುಮತಿ ನೀಡುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

ಮುಂದುವರೆದು ಈ ಆದೇಶ ಹೊರಡಿಸಿದ ದಿನಾಂಕದಿಂದ 60 ದಿನಗಳ ಅವಧಿಯೊಳಗಾಗಿ ಹಿಂದಿನ ಅವಧಿಗೆ ಸಂಬಂಧಿಸಿದ ಪ್ರಕರಣಗಳೂ ಸೇರಿದಂತೆ ಕ್ರಮ ಕೈಗೊಳ್ಳುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಂತೆ ಕರ್ನಾಟಕ ಸರ್ಕಾರವು ಮಂಡಳಿಗೆ ನಿರ್ದೇಶಿಸಿದೆ.

ಆದ್ದರಿಂದ, ಕರ್ನಾಟಕದಿಂದ ಜೈವಿಕ ಸಂಪನ್ಮೂಲಗಳನ್ನು ವಾಣಿಜ್ಯ ಬಳಕೆಗಾಗಿ ಉಪಯೋಗಿಸುವ ಎಲ್ಲರ ಗಮನ ಸೆಳೆಯುತ್ತಾ, ಕಾಯ್ದೆಯ ನಿಬಂಧನೆಗಳನ್ನು ಪಾಲನೆ ಮಾಡಬೇಕೆಂದು ಮತ್ತು ನಮೂನೆ–1 ಹಾಗು ಲಾಭಾಂಶದ ನ್ಯಾಯ ಸಮ್ಮತ ಹಂಚಿಕೆ ಸಂಬಂಧ ಕರ್ನಾಟಕ ಜೀವವೈವಿಧ್ಯ ಮಂಡಳಿಗೆ ಬದ್ಧರಾಗಲು ಸೂಚಿಸಿದೆ. ಇದಕ್ಕೆ ತಪ್ಪಿದಲ್ಲಿ ಜೈವಿಕ ವೈವಿಧ್ಯ ಅಧಿನಿಯಮ, 2002ರ ಪ್ರಕರಣ 55 ಮತ್ತು 56ರ ಪ್ರಕಾರ ಕ್ರಮ ಜರುಗಿಸಲಾಗುವುದು.

ಸಹಿ/–
ಸದಸ್ಯ ಕಾರ್ಯದರ್ಶಿಗಳು

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**
ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ಜೀವವೈವಿಧ್ಯ ಮಂಡಳಿ
ನೆಲ ಮಹಡಿ, "ವನವಿಕಾಸ", 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03, ದೂರವಾಣಿ: 080–23448783, ಫ್ಯಾಕ್ಸ್: 080–23440535, ಇ–ಮೇಲ್: kbb-ka@nic.in
kbb.ka.ms@gmail.com

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
https://kbb.karnataka.gov.in

ವಾಸಾಸಂಇ/ವಾಪ್ರ/ಜಿಎ/2046/2023–24

ಎಚ್‌.ಡಿ. ಕುಮಾರಸ್ವಾಮಿಗೆ ಪರಮಾಧಿಕಾರ ನೀಡಲು ಜೆಡಿಎಸ್ ಶಾಸಕರ ನಿರ್ಧಾರ • ಹಾಸನದಲ್ಲಿ ಒಗ್ಗಟ್ಟು ಪ್ರದರ್ಶನ

# ಡಿಕೆ ಸಹೋದರರ ಕಟ್ಟಿ ಹಾಕಲು ರಣತಂತ್ರ

• ಚಿದಂಬರಪ್ರಸಾದ



ಎಚ್‌.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ಜೆಡಿಎಸ್ ಶಾಸಕರು ಬುಧವಾರ ಹಾಸನದಲ್ಲಿ ಹಾಸನಾಂಬೆ ದೇವಿಯ ದರ್ಶನ ಪಡೆದು ಹೊರಬಂದ ಕ್ಷಣ –ಪ್ರಜಾವಾಣಿ ಚಿತ್ರ

ಹಾಸನ: ಹಾಸನಾಂಬೆಯ ದರ್ಶನದ ನೆಪದಲ್ಲಿ ನಗರದಲ್ಲಿ ಸರಣಿ ಸಭೆ ನಡೆಸಿರುವ ಜೆಡಿಎಸ್ ಶಾಸಕರು, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಂಸದ ಡಿ.ಕೆ. ಸುರೇಶ್ ಅವರನ್ನು ಕಟ್ಟಿಹಾಕುವ ರಣತಂತ್ರ ರೂಪಿಸಿದ್ದಾರೆ.

ಎಚ್‌.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ನಗರದ ರೆಸಾರ್ಟ್‌ನಲ್ಲಿ ಮಂಗಳವಾರ ತಡರಾತ್ರಿವರೆಗೆ ನಡೆದ ಸಭೆಯಲ್ಲಿ ಯಾದಗಿರಿ ಜಿಲ್ಲೆಯ ಗುರುಮಠಕಲ್ ಕ್ಷೇತ್ರದ ಶಾಸಕ ಶರಣಗೌಡ ಕಂದಕೂರು ಹೊರತುಪಡಿಸಿ, ಉಳಿದೆಲ್ಲ 18 ಶಾಸಕರು ಭಾಗವಹಿಸಿದ್ದರು.

'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಬಿಜೆಪಿ ಜೊತೆಗಿನ ಮೈತ್ರಿಯನ್ನೇ ಮುಂದಿಟ್ಟುಕೊಂಡು, ಜೆಡಿಎಸ್ ಶಾಸಕರನ್ನು ಕಾಂಗ್ರೆಸ್‌ಗೆ ಸೆಳೆಯುವ ಯತ್ನ ನಡೆಸುತ್ತಿದ್ದಾರೆ ಎನ್ನುವ ಮಾಹಿತಿ ಕುಮಾರಸ್ವಾಮಿ ಅವರಿಗೆ ಲಭ್ಯವಾಗಿದೆ. ಅದನ್ನು ವಿಫಲಗೊಳಿಸುವ ತಂತ್ರವಾಗಿ ಈ ಸಭೆ ಕರೆಯಲಾಗಿದೆ' ಎಂಬುದು ಪಕ್ಷದ ಮೂಲಗಳಿಂದ ತಿಳಿದು ಬಂದಿರುವ ಮಾಹಿತಿ.

ಪ್ರಮುಖವಾಗಿ ಮೈಸೂರು ಭಾಗದ ಜೆಡಿಎಸ್ ಶಾಸಕರನ್ನು ಸೆಳೆಯುವ ಪ್ರಯತ್ನ ನಡೆಸಲಾಗುತ್ತಿದ್ದು, ಅದಕ್ಕಾಗಿಯೇ ಎಲ್ಲರನ್ನೂ ಒಟ್ಟಿಗೆ ಸೇರಿಸಿ, ಮುಖಾಮುಖಿ ಚರ್ಚೆ ಮಾಡಲಾಗಿದೆ. ಮುಂಬರುವ ದಿನಗಳಲ್ಲಿ ಜೆಡಿಎಸ್‌ಗೆ ಭವಿಷ್ಯವಿದ್ದು, ಪಕ್ಷದ ಬಿಟ್ಟು ಹೋಗದಂತೆ ಸೂಚನೆ ನೀಡಲಾಗಿದೆ.

**ಮೈತ್ರಿ ಅನಿವಾರ್ಯತೆ ಮನವರಿಕೆ:** ಬಿಜೆಪಿ ಜೊತೆಗೆ ಕೈಜೋಡಿಸಿರುವುದಕ್ಕೆ ಜೆಡಿಎಸ್‌ನ ಹಲವು ಶಾಸಕರಿಂದ ಅಪಸ್ವರ ಕೇಳಿ ಬಂದಿತ್ತು. ಈ ಬಗ್ಗೆಯೂ ಶಾಸಕರಿಗೆ ಮನವರಿಕೆ ಮಾಡಿದ ಕುಮಾರಸ್ವಾಮಿ, 'ಕೇಂದ್ರದಲ್ಲಿ ಬಿಜೆಪಿ ಸರ್ಕಾರವಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವಿದೆ. ಇಂತಹ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿ ಬಿಜೆಪಿಗೂ ಜೆಡಿಎಸ್ ಸಖ್ಯ ಅನಿವಾರ್ಯವಾಗಿದೆ. ಬಿಜೆಪಿ ಜೊತೆಗೆ ಕೈಜೋಡಿಸಿದಲ್ಲಿ ಕನಿಷ್ಠ ನಾಲ್ಕು ಲೋಕಸಭಾ ಕ್ಷೇತ್ರಗಳಲ್ಲಿ ಸುಲಭದಲ್ಲಿ ಗೆಲುವು ಸಾಧಿಸಬಹುದು. ನಂತರ ಎನ್‌ಡಿಎ ಭಾಗವಾಗಿ ಕೇಂದ್ರದಲ್ಲಿ ಅಧಿಕಾರ ಪಡೆಯಬಹುದು' ಎಂದು ವಿವರಿಸಿದ್ದಾರೆ.

'ಕಾಂಗ್ರೆಸ್ ಜೊತೆಗೆ ಕೈಜೋಡಿಸುವುದರಿಂದ ಯಾವುದೇ ಪ್ರಯೋಜನವಿಲ್ಲ. 136 ಶಾಸಕರನ್ನು ಹೊಂದಿರುವ ಕಾಂಗ್ರೆಸ್‌ನಲ್ಲಿ ಈಗಾಗಲೇ ಸಚಿವ ಸ್ಥಾನಕ್ಕೆ ಪೈಪೋಟಿ ನಡೆಯುತ್ತಿದೆ. ಬೇರೆ ಪಕ್ಷದಿಂದ ಬಂದ ಶಾಸಕರನ್ನು ಸಚಿವರನ್ನಾಗಿ ಮಾಡಲು ಕಾಂಗ್ರೆಸ್ ಮುಖಂಡರಿಗೆ ಸಾಧ್ಯವೇ' ಎಂಬ ಪ್ರಶ್ನೆಯನ್ನು ಕುಮಾರಸ್ವಾಮಿ ಶಾಸಕರ ಮುಂದಿಟ್ಟಿದ್ದಾರೆ.

'ಪ್ರಾದೇಶಿಕ ಪಕ್ಷವಾಗಿ ಜೆಡಿಎಸ್ ಗಟ್ಟಿ ನೆಲೆಯೂರಬೇಕು. 2028 ರ ಚುನಾವಣೆಗೆ ಈಗಿನಿಂದಲೇ ತಯಾರಿ ಆರಂಭಿಸಬೇಕು. ಸಿದ್ದರಾಮಯ್ಯ ಅವರಿಗೆ ಇದು ಕೊನೆಯ ಚುನಾವಣೆ. ಬಿಜೆಪಿಯಲ್ಲೂ ಬಿ.ಎಸ್.ಯಡಿಯೂರಪ್ಪ ಅವರ ನಂತರ ಹೇಳಿಕೊಳ್ಳುವ ನಾಯಕರಿಲ್ಲ. ಹಾಗಾಗಿ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರುವುದು ನಿಶ್ಚಿತ' ಎಂದು ಪ್ರತಿಪಾದಿಸಿದ್ದಾರೆ.

ಕುಮಾರಸ್ವಾಮಿ ಮಾತಿಗೆ ಧ್ವನಿಗೂಡಿಸಿರುವ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡ ಅವರೂ, ಮೈತ್ರಿಯ ಅನಿವಾರ್ಯತೆಯನ್ನು ಮನದಟ್ಟು ಮಾಡಿದ್ದಾರೆ. ಪಕ್ಷದ ಸಂಘಟನೆ, ಲೋಕಸಭೆ ಚುನಾವಣೆಗೆ ಸಂಬಂಧಿಸಿದಂತೆ ನಿರ್ಧಾರ ಕೈಗೊಳ್ಳಲು ಎಚ್‌.ಡಿ. ಕುಮಾರಸ್ವಾಮಿ ಅವರಿಗೆ ಅಧಿಕಾರ ನೀಡಲು ಎಲ್ಲ ಶಾಸಕರು ಸಮ್ಮತಿ ಸೂಚಿಸಿದ್ದಾರೆ.

## ಮತ್ತೆ ಗೈರಾದ ಶರಣಗೌಡ ಕಂದಕೂರ

ಬಿಜೆಪಿ ಜೊತೆಗಿನ ಮೈತ್ರಿ ವಿರೋಧಿಸಿದ್ದ ಗುರುಮಠಕಲ್ ಕ್ಷೇತ್ರದ ಶಾಸಕ ಶರಣಗೌಡ ಕಂದಕೂರ, ನಗರದಲ್ಲಿ ನಡೆದ ಜೆಡಿಎಸ್ ಶಾಸಕರ ಸಭೆಗೂ ಗೈರಾಗಿದ್ದರು. ಜೆಡಿಎಸ್ ಪಕ್ಷದೊಂದಿಗೆ ಅಂತರ ಕಾಯ್ದುಕೊಳ್ಳುತ್ತಿರುವ ಶಾಸಕ ಶರಣಗೌಡ ಕಂದಕೂರು, ಪದೇಪದೇ ಪಕ್ಷದ ಸಭೆಗೆ ಗೈರಾಗುತ್ತಿದ್ದಾರೆ. ಬೆಂಗಳೂರಿ ನಲ್ಲಿದ್ದರೂ ಹಾಸನದ ಶಾಸಕರ ಸಭೆಗೆ ಹಾಜರಾಗಿಲ್ಲ. ಕಳೆದ ಶನಿವಾರ ಎಚ್‌.ಡಿ. ಕುಮಾರಸ್ವಾಮಿ ನಡೆಸಿದ್ದ ಸಭೆಗೂ ಅವರು ಗೈರಾಗಿದ್ದರು.

### 'ಪಕ್ಷದ ಬಗ್ಗೆ ಅಸಮಾಧಾನ ಇದೆ'

ಬೆಂಗಳೂರು:'ಬಿಜೆಪಿ ಜತೆ ಕೈಜೋಡಿಸುವ ಪಕ್ಷದ ತೀರ್ಮಾನದ ಬಗ್ಗೆ ಖಂಡಿತವಾಗಿ ಅಸಮಾಧಾನವಿದೆ. ಹಾಸನದಲ್ಲಿ ಬುಧವಾರ ನಡೆದ ಪಕ್ಷದ ಸಭೆಗೆ ಆಹ್ವಾನವಿತ್ತು. ಆದರೆ ನಾನು ಸಭೆಗೆ ಹೋಗಲಿಲ್ಲ' ಎಂದು ಜೆಡಿಎಸ್ ಶಾಸಕ ಶರಣಗೌಡ ಕಂದಕೂರ ಹೇಳಿದ್ದಾರೆ.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ನಾನು ಸಭೆಗೆ ಗೈರಾಗುವ ವಿಚಾರವನ್ನು ಕುಮಾರಸ್ವಾಮಿ ಅವರ ಗಮನಕ್ಕೆ ತಂದಿಲ್ಲ. ಈ ಹಿಂದೆಯೂ ಪಕ್ಷದ ಹಲವು ಸಭೆಗಳಿಗೆ ಹಾಜರಾಗಿರಲಿಲ್ಲ' ಎಂದರು.

## ಸುದ್ದಿ 2 ನಿಮಿಷ

### ರಜೆ ಮೇಲೆ ತೆರಳಿದ ಸಂಗಪ್ಪ

ಬೆಂಗಳೂರು: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮದ (ಕಿಯೋನಿಕ್ಸ್) ವ್ಯವಸ್ಥಾಪಕ ನಿರ್ದೇಶಕ ಸಂಗಪ್ಪ ಬುಧವಾರದಿಂದ ಡಿಸೆಂಬರ್ 5ರವರೆಗೆ ರಜೆ ಮೇಲೆ ತೆರಳಿದ್ದಾರೆ.

ಕರ್ನಾಟಕ ರಾಜ್ಯ ಹಣಕಾಸು ನಿಗಮದ ವ್ಯವಸ್ಥಾಪಕ ನಿರ್ದೇಶಕ ಉಜ್ವಲ್ ಕುಮಾರ್ ಘೋಷ್ ಅವರಿಗೆ ಕಿಯೋನಿಕ್ಸ್ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯ ಹೆಚ್ಚುವರಿ ಪ್ರಭಾರವನ್ನು ವಹಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮಂಗಳವಾರ ಆದೇಶ ಹೊರಡಿಸಿದೆ. ಸಂಗಪ್ಪ ಗಳಿಕೆ ರಜೆ ಪಡೆದಿದ್ದು, ಅವರ ಸೇವಾ ಲೀನ್ ಅನ್ನು ಕಿಯೋನಿಕ್ಸ್ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯಲ್ಲೇ ಮುಂದುವರಿಸಲಾಗುವುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಸರಕು ಮತ್ತು ಸೇವೆಗಳ ಪೂರೈಕೆ ಬಾಬ್ತು ಬಾಕಿ ಬಿಲ್ ತಡೆ ಹಿಡಿದಿರುವುದರಿಂದ ಕಿಯೋನಿಕ್ಸ್ ನೋಂದಾಯಿತ ವೆಂಡರ್‌ದಾರರ ವೆಲ್ಫೇರ್ ಅಸೋಸಿಯೇಷನ್ ಸದಸ್ಯರು ನಿಗಮದ ಕೇಂದ್ರ ಕಚೇರಿಯಲ್ಲೇ ಸಂಗಪ್ಪ ವಿರುದ್ಧ ಹಲವು ಬಾರಿ ಪ್ರತಿಭಟನೆ ನಡೆಸಿದ್ದರು. 'ಬಾಕಿ ಬಿಲ್ ಪಾವತಿಗೆ ಸಂಗಪ್ಪ ಶೇಕಡ 12ರಷ್ಟು ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ' ಎಂದು ಸಂಘದ ಅಧ್ಯಕ್ಷ ವಸಂತ ಬಂಗೇರ ಆರೋಪಿಸಿದ್ದರು.

ಕಿಯೋನಿಕ್ಸ್ ವೆಂಡರ್‌ದಾರರ ಬಾಕಿ ಬಿಲ್ ತಡೆ ಹಿಡಿದಿರುವ ವಿಷಯದಲ್ಲಿ ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದವು.

### ಬನ್ನೇರುಘಟ್ಟ: ಹುಲಿ-ಚಿರತೆ ಪ್ರತ್ಯಕ್ಷ





ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನ ಮತ್ತು ಗಡಿ ಭಾಗ ಅರಣ್ಯ ಪ್ರದೇಶದ ರಸ್ತೆಯಲ್ಲಿ ಹುಲಿ ಮತ್ತು ಚಿರತೆ ಓಡಾಡುವ ದೃಶ್ಯ ಅರಣ್ಯ ಇಲಾಖೆ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಮಂಗಳವಾರ ಮಧ್ಯಾಹ್ನ 1.57ರ ಸುಮಾರಿನಲ್ಲಿ ಹುಲಿ ಕಂಡಿದೆ. ನಂತರ ಇದೇ ಸ್ಥಳದಲ್ಲಿ ಸಂಜೆ 4ರ ಸುಮಾರಿನಲ್ಲಿ ಚಿರತೆ ಓಡಾಟ ನಡೆಸಿರುವ ದೃಶ್ಯ ಕೂಡ ಸೆರೆಯಾಗಿದೆ. 'ಬೆಂಗಳೂರು ನಗರಕ್ಕೆ ಹೊಂದಿಕೊಂಡಿರುವ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ಹುಲಿ ಮತ್ತು ಚಿರತೆ ಕಾಣಿಸಿಕೊಂಡಿರುವುದು ಕಾಡು ಸಂರಕ್ಷಿಸಿ, ಪ್ರಾಣಿಗಳನ್ನು ಉಳಿಸುವ ಜವಾಬ್ದಾರಿ ಪ್ರತೀಕ' ಎಂದು ಈ ದೃಶ್ಯಗಳನ್ನು ಹಂಚಿಕೊಂಡಿರುವ ಜೈವಿಕ ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸೂರ್ಯಸೇನ್ ತಿಳಿಸಿದ್ದಾರೆ.

## ಕಾಂಗ್ರೆಸ್‌ನ 45 ಶಾಸಕರು ಬಿಜೆಪಿ ಸಂಪರ್ಕದಲ್ಲಿ: ಎಚ್‌ಡಿಕೆ

ಹಾಸನ: 'ಕಾಂಗ್ರೆಸ್‌ನ 45 ಶಾಸಕರು ಬಿಜೆಪಿ ಸಂಪರ್ಕದಲ್ಲಿದ್ದಾರೆಂಬ ಮಾಹಿತಿ ಗುಪ್ತಚರ ಇಲಾಖೆಯಿಂದ ಸರ್ಕಾರಕ್ಕೆ ಸಿಕ್ಕಿದೆ. ಅದನ್ನು ತಡೆಯಲು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಕಸರತ್ತು ನಡೆಸಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪ್ರತಿಪಕ್ಷಗಳ 40–50 ಮುಖಂಡರನ್ನು ಪಕ್ಷಕ್ಕೆ ಕರೆತರುವಂತೆ ಕಾಂಗ್ರೆಸ್ ಹೈಕಮಾಂಡ್ ಸೂಚನೆ ನೀಡಿದೆ. ಅದಕ್ಕಾಗಿಯೇ ಕಾಂಗ್ರೆಸ್ ಮುಖಂಡರು ದಿನಕ್ಕೊಂದು ಹೇಳಿಕೆ ನೀಡುತ್ತಿದ್ದಾರೆ' ಎಂದರು.

'136 ಶಾಸಕರನ್ನು ಹೊಂದಿರುವ ಮುಖ್ಯಮಂತ್ರಿ ಏತಕ್ಕಾಗಿ ಡಿನ್ನರ್ ಪಾರ್ಟಿ ಏರ್ಪಡಿಸುತ್ತಿದ್ದಾರೆ? ಗಾಜಿನ ಮನೆಯಲ್ಲಿ ಕುಳಿತಿರುವವರು ನೀವು. ನಿಮ್ಮ ತಟ್ಟೆಯಲ್ಲಿ ಹೆಗ್ಗಣ ಸತ್ತು ಬಿದ್ದಿದ್ದು, ಕೀಳುಮಟ್ಟದ ರಾಜಕಾರಣ ಮಾಡಿಕೊಂಡು ಹೊರಟಿದ್ದೀರಿ. ಇದನ್ನು ಮೊದಲು ನಿಲ್ಲಿಸಿ' ಎಂದರು.

'ಹಳೆಯದೆಲ್ಲ ಮರಿಬೇಡಿ ಸ್ವಾಮಿ. ಕದ್ದ ಮಾಲು ಹ್ಯುಬ್ಲೋಟ್ ವಾಚ್ ಹಾಕಿಕೊಂಡ ಮುಖ್ಯಮಂತ್ರಿ ನೀವು. ಇಂಥವರು ನನ್ನ ಬಗ್ಗೆ ಮಾತನಾಡ್ತೀರಾ? ವಿಪಕ್ಷದ ಕೆಲಸ ಏನು ಎಂದು ನಿಮ್ಮಿಂದ ಪಾಠ ಕಲಿಯಬೇಕಾಗಿಲ್ಲ. ಮುಖ್ಯಮಂತ್ರಿಯಾಗಿ ನಿಮ್ಮ ಕೆಲಸ ಮಾಡಿ' ಎಂದು ಒತ್ತಾಯಿಸಿದರು.

**28 ಸ್ಥಾನ ಗೆಲ್ಲುವುದೇ ಗುರಿ:** 'ಬಿಜೆಪಿ ಜೊತೆಗಿನ ಮೈತ್ರಿಯ ಕುರಿತು ಪ್ರಾಥಮಿಕ ಹಂತದ ಚರ್ಚೆಯಾಗಿದೆ. ಪಂಚರಾಜ್ಯಗಳ ಚುನಾವಣೆಯ ನಂತರ ರಾಜ್ಯದ ಬಿಜೆಪಿ ಮುಖಂಡರ ಜೊತೆಗೆ ಸಮಾಲೋಚಿಸಿ, ಅಂತಿಮಗೊಳಿಸಲಾಗುವುದು. ರಾಜ್ಯದ ಹಿತಕ್ಕಾಗಿ ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ಜೆಡಿಎಸ್-ಬಿಜೆಪಿ ಮೈತ್ರಿಕೂಟ ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವುದೇ ನಮ್ಮ ಮೊದಲ ಆದ್ಯತೆ' ಎಂದರು.

'ಒಳಮೀಸಲಾತಿಗಾಗಿ ದಲಿತರು ಶಾಸಕರ ಮನೆ ಮುಂದೆ ಧರಣಿ ಮಾಡಿ' ಎಂದು ಹೇಳಿಕೆ ನೀಡಿದ್ದ ಸಚಿವ ಕೆ.ಎಚ್. ಮುನಿಯಪ್ಪ ಅವರಿಗೆ ತಿರುಗೇಟು ನೀಡಿದ ಕುಮಾರಸ್ವಾಮಿ, 'ಜಾತಿ ಹೆಸರಲ್ಲಿ ಲೋಕಸಭಾ ಚುನಾವಣೆಗೆ ಟ್ರಂಪ್ ಕಾರ್ಡ್ ನಡೆಸುತ್ತಿದ್ದಾರೆ. ದಲಿತ ಸಮುದಾಯದವರು ಮೊದಲು ಅಧಿಕಾರ ಕೊಟ್ಟಿರುವ ನಾಯಕರ ಮನೆಗೆ ನುಗ್ಗಿ, ನಿಮ್ಮ ಆಗ್ರಹ ಮಂಡಿಸಿ' ಎಂದು ಹೇಳಿದರು.

'ಗುರುಮಠಕಲ್ ಶಾಸಕ ಶರಣಗೌಡ ಕಂದಕೂರ ನಮ್ಮ ಮನೆಯ ಮಗ. ಬಿಜೆಪಿ ಜೊತೆಗಿನ ಮೈತ್ರಿಯ ಬಗ್ಗೆ ಅವರಲ್ಲಿ ಸ್ವಲ್ಪ ಗೊಂದಲವಿದೆ. ಕರೆದು ಮಾತಾಡುವೆ' ಎಂದರು.

## 'ಬಿಜೆಪಿಗೆ ಒಬ್ಬ ಶಾಸಕನ ಸೆಳೆಯಲೂ ಆಗುವುದಿಲ್ಲ'



ಡಿ.ಕೆ. ಶಿವಕುಮಾರ್

ನವದೆಹಲಿ: 'ನಮ್ಮ ಪಕ್ಷದ ಒಬ್ಬನೇ ಒಬ್ಬ ಶಾಸಕನನ್ನು ಸೆಳೆಯಲು ಬಿಜೆಪಿಗೆ ಆಗುವುದಿಲ್ಲ. ಇದು ವಿಫಲ ಯತ್ನ ಎಂದು ಅವರಿಗೂ ಚೆನ್ನಾಗಿ ಗೊತ್ತಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಬುಧವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಬಿಜೆಪಿಯ ಪರಿಸ್ಥಿತಿ ಹದಗೆಟ್ಟು ಹೋಗಿದೆ. ಅದನ್ನು ಹೊರಗೆ ಹೇಳಿಕೊಳ್ಳಲು ಆಗದೆ, ಆಪರೇಷನ್ ಕಮಲದ ಹೆಸರು ಹೇಳುತ್ತಿದ್ದಾರೆ. ಬಿಜೆಪಿಯ ಎಲ್ಲ ನಡೆಗಳ ಬಗ್ಗೆಯೂ ನನಗೆ ಮಾಹಿತಿ ಇದೆ. ಬಿಜೆಪಿಯಲ್ಲಿ ಒಂದಷ್ಟು ಜನ ನಿರುದ್ಯೋಗಿಗಳು ಇದ್ದಾರಲ್ಲ, ಅವರು ಚಪಲಕ್ಕೆ ಏನೇನೋ ಪ್ರಯತ್ನ ಮಾಡುತ್ತಿದ್ದಾರೆ' ಎಂದು ಅವರು ಹೇಳಿದರು.

ಕಾಂಗ್ರೆಸ್ ಶಾಸಕರು ಈ ಸಭೆಗಳಲ್ಲಿ ಭಾಗವಹಿಸಿಲ್ಲ. ಮೊದಲಿನಿಂದ ಏಜೆಂಟ್ ಕೆಲಸ ಮಾಡುತ್ತಿದ್ದವರು, ನಮ್ಮ ಶಾಸಕರನ್ನು ಸ್ವತಃ ಹುಡುಕಿಕೊಂಡು ಬಂದಿದ್ದಾರೆ ಎಂದರು.

'ನಾನು ಕಾಂಗ್ರೆಸ್ ಪಕ್ಷ ಎಂಬ ಕುಟುಂಬದ ಮುಖ್ಯಸ್ಥ. ಪಕ್ಷದ ಸಾಕಷ್ಟು ಕೆಲಸಗಳು ಇರುತ್ತವೆ. ಅದಕ್ಕೆ ನಾನೇ ಒಂದಷ್ಟು ಜನ ನಾಯಕರ ಮನೆಗೆ ಹೋಗುತ್ತೇನೆ ಅಥವಾ ನನ್ನ ಮನೆಗೆ ಕರೆಯುತ್ತೇನೆ. ಸತೀಶ ಜಾರಕಿಹೊಳಿ ಅವರೇ ಮನೆಗೆ ಬರುತ್ತೇನೆ ಎಂದಿದ್ದರು. ಅದಕ್ಕೆ ಬೇಡ, ನಾನೇ ನಿಮ್ಮ ಮನೆಗೆ ಬರುತ್ತೇನೆ ಎಂದು ಹೇಳಿ ಹೋದೆ' ಎಂದರು.

ಶಿವಕುಮಾರ್ ಹೆಸರಿನಲ್ಲಿ ಬಿಬಿಎಂಪಿ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಸುಲಿಗೆ ಮಾಡುತ್ತಿದ್ದಾರೆ ಎಂಬ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಅವರ ಭೇಟಿಯ ನಂತರ ನನಗೆ ಈ ವಿಚಾರ ತಿಳಿಯಿತು. ನನಗೆ ಯಾವುದೇ ಪತ್ರ ತಲುಪಿಲ್ಲ. ಅದರ ಬಗ್ಗೆ ವಿಚಾರಿಸಿ ಹೇಳುತ್ತೇನೆ. ಹಿರಿಯರಾದ ಕೆಂಪಣ್ಣ ಭೇಟಿ ಮಾಡಿ, ಒಂದಷ್ಟು ಸಲಹೆ ನೀಡಿದರು' ಎಂದರು.

## ಅಭಿನವ ಹಾಲಶ್ರೀಗೆ ಜಾಮೀನು

ಬೆಂಗಳೂರು: ಕಳೆದ ವಿಧಾನಸಭೆ ಚುನಾವಣೆ ವೇಳೆ ಉದ್ಯಮಿಯೊಬ್ಬರಿಗೆ ಬಿಜೆಪಿ ಟಿಕೆಟ್ ಕೊಡಿಸುವುದಾಗಿ ನಂಬಿಸಿ ವಂಚಿಸಿದ ಪ್ರಕರಣದಲ್ಲಿ ಮೂರನೇ ಆರೋಪಿಯಾಗಿರುವ ವಿಜಯನಗರ ಜಿಲ್ಲೆ ಹಿರೇಹಡಗಲಿ ಹಾಲಸ್ವಾಮಿ ಮಠದ ಅಭಿನವ ಹಾಲಶ್ರೀ ಸ್ವಾಮೀಜಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಜಾಮೀನು ಕೋರಿ ಹಾಲಶ್ರೀ ಸ್ವಾಮೀಜಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ರಾಜ್ಯ ಪ್ರಾಸಿಕ್ಯೂಟರ್, 'ಅರ್ಜಿದಾರರ ವಿರುದ್ಧ ತನಿಖಾಧಿಕಾರಿಗಳು ಇಂದಷ್ಟೇ (ಬುಧವಾರ) ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

# ಶಿವಮೂರ್ತಿ ಶರಣರಿಗೆ ಜಾಮೀನು

ಒಂದನೇ ಪುಟದಿಂದ...

ಶರಣರ ಪರ ಹಿರಿಯ ವಕೀಲ ಸಿ.ವಿ. ನಾಗೇಶ್ ವಾದ ಮಂಡಿಸಿದ್ದರು.

**ಪ್ರಕರಣವೇನು?:** 'ಶರಣರು ನಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಆರೋಪಿಸಿ ಇಬ್ಬರು ಬಾಲಕಿಯರು ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ 2022ರ ಆಗಸ್ಟ್ 26ರಂದು ದೂರು ದಾಖಲಿಸಿದ ನಂತರ 2022ರ ಸೆಪ್ಟೆಂಬರ್ 1ರಂದು ಅವರನ್ನು ಬಂಧಿಸಲಾಗಿತ್ತು. ಅಂದಿನಿಂದಲೂ ಅವರು ಚಿತ್ರದುರ್ಗದ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಶರಣರ ವಿರುದ್ಧ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆ–2012, ಭಾರತೀಯ ದಂಡ ಸಂಹಿತೆ–1860, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮೇಲಿನ ದೌರ್ಜನ್ಯ ತಡೆ ಕಾಯ್ದೆ–1989 ಮತ್ತು ಬಾಲ ನ್ಯಾಯ (ಮಕ್ಕಳ ಸಂರಕ್ಷಣೆ ಹಾಗೂ ಆರೈಕೆ) ಕಾಯ್ದೆ–2015ರ ವಿವಿಧ ಕಲಂಗಳ ಅಡಿಯಲ್ಲಿ ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಲಾಗಿದ್ದು ಸೆಷನ್ಸ್ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.

**ಎರಡನೇ ಪ್ರಕರಣ:** ಮೊದಲ ಪ್ರಕರಣದ ಬೆನ್ನಲ್ಲೇ ಮತ್ತೊಂದು ಪೋಕ್ಸೊ ಪ್ರಕರಣ ಶರಣರ ವಿರುದ್ಧ ದಾಖಲಾಗಿದ್ದು ಇದರಲ್ಲಿ ಶರಣರ ವಿರುದ್ಧ ಬಾಡಿ ವಾರಂಟ್ ಹೊರಡಿಸಲಾಗಿತ್ತು. ಇದೀಗ ಈ ಪ್ರಕರಣದಲ್ಲೂ ಶರಣರು ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದು, ಇದಿನ್ನೂ ವಿಚಾರಣೆಗೆ ಬರಬೇಕಿದೆ. ಏತನ್ಮಧ್ಯೆ, ಈ ಕುರಿತಂತೆ ಪ್ರತಿಕ್ರಿಯಿಸಿದ ವಕೀಲ ಸಂದೀಪ್ ಎಸ್.ಪಾಟೀಲ್, 'ಈಗಾಗಲೇ ಜಾಮೀನು ದೊರೆತಿರುವ ಕಾರಣ ಶರಣರ ಬಿಡುಗಡೆಗೆ ಎರಡನೇ ಎಫ್‌ಐಆರ್ ಅಡ್ಡಿಯಾಗುವುದಿಲ್ಲ' ಎಂದರು.



ಸಿರಿಗೆರೆಯಲ್ಲಿ ಬುಧವಾರ ಸಂಜೆ ಸುರಿದ ಮಳೆಗೆ ಜಮ್ಮೇನಹಳ್ಳಿ ಹಳ್ಳ ತುಂಬಿ ಹರಿಯಿತು

ಹಲವೆಡೆ ಮಳೆ: ಸಿಡಿಲಿಗೆ 2 ಕುರಿ ಸಾವು, ಮೂವರಿಗೆ ಗಾಯ

# ತುಂಬಿದ ಹಳ್ಳಗಳು: ಸಂಪರ್ಕ ಕಡಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬುಧವಾರವೂ ಹದ ಮಳೆಯಾಗಿದೆ. ಸಿಡಿಲು ಬಡಿದು ಇಬ್ಬರು ಕುರಿಗಾಹಿಗಳು ಹಾಗೂ ಒಬ್ಬ ದನಗಾಹಿ ಗಾಯಗೊಂಡಿದ್ದಾರೆ. ಯಾದಗಿರಿ ಜಿಲ್ಲೆಯಲ್ಲಿ ಕಟಾವಿಗೆ ಬಂದ ಭತ್ತದ ಬೆಳೆ ನೆಲಕಚ್ಚಿದೆ.

ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಾದ ಕಲಬುರಗಿ, ಕೊಪ್ಪಳ, ರಾಯಚೂರು, ಬೀದರ್ ಜಿಲ್ಲೆಗಳ ಕೆಲವೆಡೆ ಸಾಧಾರಣ ಮಳೆಯಾಗಿದೆ. ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಮಾಟಲದಿನ್ನಿ ಗ್ರಾಮದ ಹೊರವಲಯದಲ್ಲಿ ಸಿಡಿಲು ಬಡಿದು ದನಗಾಹಿ ವೆಂಕಪ್ಪ ಗೊಲ್ಲರ ಗಾಯಗೊಂಡಿದ್ದಾರೆ. ಅವರನ್ನು ಕುಷ್ಟಗಿ ತಾಲ್ಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ.

ಯಾದಗಿರಿ ಜಿಲ್ಲೆಯಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಭತ್ತದ ಬೆಳೆ ಬೆಳೆದಿದ್ದ ರೈತರಿಗೆ ಸಂಕಷ್ಟ ಎದುರಾಗಿದೆ. ತೊಗರಿ, ಹತ್ತಿ, ಮೆಣಸಿನಕಾಯಿ ಬೆಳೆಗಳಿಗೆ ಮಳೆ ಆಸರೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಕಡೂರು, ತರೀಕೆರೆ, ಬೀರೂರು ಭಾಗದಲ್ಲಿ ಮಧ್ಯಾಹ್ನ ಗುಡುಗು ಸಹಿತ ಜೋರು ಮಳೆ ಸುರಿಯಿತು. ಅಡಿಕೆ ಕೊಯಿಲು ಮಾಡಲು ಕೃಷಿಕರಿಗೆ ಮಳೆ ಅಡ್ಡಿಪಡಿಸಿದೆ. ಕೆಲವೆಡೆ ತೆಂಗು, ಅಡಿಕೆ, ಬಾಳೆ ತೋಟಗಳಿಗೆ ನೀರು ನುಗ್ಗಿದೆ.

ಮಧ್ಯ ಕರ್ನಾಟಕದ ದಾವಣಗೆರೆ, ಚಿತ್ರದುರ್ಗ ಹಾಗೂ ಶಿವಮೊಗ್ಗ ಜಿಲ್ಲೆಗಳ ವಿವಿಧೆಡೆ ಹದ ಮಳೆ ಸುರಿಯಿತು. ಮಲೇಬೆನ್ನೂರು ಭಾಗದಲ್ಲಿ ಬಿರು ಮಳೆ ಸುರಿದಿದ್ದು, ಕೆಲವೆಡೆ ಭತ್ತದ ಗದ್ದೆಗಳು ಚಾಪೆ ಹಾಸಿವೆ. ಗದ್ದೆಗಳಲ್ಲಿ ನೀರು ನಿಂತಿದೆ. ದೇವರಬೆಳಕೆರೆ ಪಿಕಪ್ ಡ್ಯಾಮ್‌ನ ಹಿನ್ನೀರಿನಲ್ಲಿ ನಿರ್ಮಾಣ ಹಂತದಲ್ಲಿದ್ದ ಸಂಕ್ಲೀಪುರ- ಮುಕ್ತೇನಹಳ್ಳಿ ರಸ್ತೆ ಜಲಾವೃತವಾಗಿದೆ.

ಚಿತ್ರದುರ್ಗ ಜಿಲ್ಲೆಯ ಹಲವು ಜಮೀನುಗಳಲ್ಲಿ ನೀರು ನಿಂತಿದೆ. ಕಟಾವಿಗೆ ಬಂದಿದ್ದ ಮೆಕ್ಕೆಜೋಳ ನೆಲಕ್ಕುರುಳಿದೆ. ದೊಡ್ಡಿಗನಹಾಳ್, ಜಮ್ಮೇಮನಹಳ್ಳಿ ಬಳಿ ಹಳ್ಳಗಳು ತುಂಬಿ ಹರಿಯುತ್ತಿವೆ. ಜಮ್ಮೇನಹಳ್ಳಿ ಹಳ್ಳದಲ್ಲಿ ದೊಡ್ಡ ಪ್ರಮಾಣದಲ್ಲಿ ನೀರು ಹರಿಯುತ್ತಿರುವುದರಿಂದ ಗ್ರಾಮದ ರಸ್ತೆ ಸಂಪರ್ಕ ಕಡಿತಗೊಂಡಿದೆ.

ಬಾಗಲಕೋಟೆ ತಾಲ್ಲೂಕಿನ ಶಿರೂರ ಪಟ್ಟಣದಲ್ಲಿ ಸಿಡಿಲು ಬಡಿದು ಇಬ್ಬರು ಕುರಿಗಾಯಿಗಳಿಗೆ ಸುಟ್ಟಗಾಯಗಳಾಗಿವೆ. ಎರಡು ಕುರಿಗಳು ಮೃತಪಟ್ಟಿವೆ. ವಿಜಯಪುರ, ಬಾಗಲಕೋಟೆ ಜಿಲ್ಲೆಯಲ್ಲಿ ಕೆಲಕಾಲ ಗುಡುಗು ಸಹಿತ ಮಳೆಯಾಗಿದೆ

ಕಾರವಾರ, ಭಟ್ಕಳ, ಕುಮಟಾ ಭಾಗದಲ್ಲಿ ತಡರಾತ್ರಿಯ ಬಳಿಕ ಮಳೆ ಆರಂಭವಾಗಿ ನಸುಕಿನವರೆಗೂ ತುಂತುರು ಮಳೆ ಮುಂದುವರೆದಿತ್ತು. ಬೆಳಗಾವಿ ನಗರವೂ ಸೇರಿದಂತೆ ಜಿಲ್ಲೆಯ ಬಹುಪಾಲು ಕಡೆಗಳಲ್ಲಿ ಸಾಧಾರಣ ಮಳೆಯಾಗಿದೆ. ಬೆಳಗಾವಿ ತಾಲ್ಲೂಕು, ಖಾನಾಪುರ, ನಿಪ್ಪಾಣಿ, ಚಿಕ್ಕೋಡಿ, ಕಾಗವಾಡ, ಬೈಲಹೊಂಗಲ, ಸವದತ್ತಿ ತಾಲ್ಲೂಕಿನಲ್ಲಿ ಅಲ್ಲಲ್ಲಿ ಮಳೆ ಸುರಿದಿದೆ.

ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಗಳ ಹಲವೆಡೆ ಸಾಧಾರಣ ಮಳೆಯಾಗಿದೆ. ಕೊಟ್ಟೂರು ತಾಲ್ಲೂಕಿನ ಗಾಣಗಟ್ಟೆ ಮತ್ತು ಕಾಳಾಪುರಗಳಲ್ಲಿ ಒಂದೊಂದು ಮನೆಗಳು ಭಾಗಶಃ ಹಾನಿಗೊಂಡಿವೆ. ಹರಪನಹಳ್ಳಿ ತಾಲ್ಲೂಕಿನ ಹಾರಕನಾಳು ಮತ್ತು ಹಾವನೂರುಗಳಲ್ಲಿ ಒಂದೊಂದು ಮನೆಗಳು ಭಾಗಶಃ ಹಾನಿಗೊಂಡಿವೆ.

### ಹಾಸನಾಂಬೆ ದರ್ಶನಕ್ಕೆ ಮಳೆ ಅಡ್ಡಿ

ಹಾಸನ ಜಿಲ್ಲೆಯಾದ್ಯಂತ ಮಧ್ಯಾಹ್ನದಿಂದ ಗುಡುಗು ಸಹಿತ, ಬಿರುಸಿನ ಮಳೆ ಸುರಿಯಿತು. ಜಿಲ್ಲಾಕೇಂದ್ರದಲ್ಲಿ ಮಧ್ಯಾಹ್ನದಿಂದ ಸಂಜೆಯವರೆಗೂ ಮಳೆ ಸುರಿಯಿತು. ಹಾಸನಾಂಬ ದೇವಿಯ ದರ್ಶನಕ್ಕೆ ಬಂದಿರುವ ಭಕ್ತರು ತೊಂದರೆ ಅನುಭವಿಸಿದರು. ಸಿಬ್ಬಂದಿಯೂ ಮಳೆಯಿಂದ ರಕ್ಷಣೆ ಪಡೆಯಲು ಪರದಾಡಿದರು. ಜಿಲ್ಲೆಯ ನುಗ್ಗೇಹಳ್ಳಿ, ಅರಸೀಕೆರೆ, ಜಾವಗಲ್, ಹಿರೀಸಾವೆ, ಚನ್ನರಾಯಪಟ್ಟಣದಲ್ಲಿ ಉತ್ತಮ ಮಳೆಯಾಗಿದೆ.

## ಶಾಸಕರು ಕಾಂಗ್ರೆಸ್ ತೊರೆದರೆ ಅಚ್ಚರಿ ಇಲ್ಲ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಜನವಾಡ(ಬೀದರ್ ಜಿಲ್ಲೆ): 'ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ಬಿಡಿಗಾಸನ್ನೂ ಕೊಡದಿರುವುದರಿಂದ ಬೇಸತ್ತಿರುವ ಕಾಂಗ್ರೆಸ್ ಶಾಸಕರು ಪಕ್ಷ ತೊರೆದರೆ ಅಚ್ಚರಿ ಇಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಬರ ಪರಿಸ್ಥಿತಿ ಅಧ್ಯಯನಕ್ಕೆ ಬುಧವಾರ ಜಿಲ್ಲೆಗೆ ಭೇಟಿ ನೀಡಿದ ವೇಳೆ ಮಾತನಾಡಿದ ಅವರು, 'ಆಡಳಿತ ಪಕ್ಷದ ಶಾಸಕರು ತಲೆ ಎತ್ತಿ ಓಡಾಡದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಪಕ್ಷ ಬಿಡುವ ಸಂದರ್ಭ ಸೃಷ್ಟಿಯಾಗಿದೆ. ಅದಕ್ಕೆ ಬಿಜೆಪಿ ಜವಾಬ್ದಾರ ಅಲ್ಲ. ನಾವಂತೂ ಆಪರೇಷನ್ ಕಮಲ ಮಾಡುತ್ತಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಸರ್ಕಾರದ ವೈಫಲ್ಯವನ್ನು ಮರೆ ಮಾಚಲು ಬಿಜೆಪಿಯವರು ಕಾಂಗ್ರೆಸ್‌ಗೆ ಬರಲಿದ್ದಾರೆ ಎಂದು ಹೇಳಿಕೆ ಕೊಡುತ್ತಿದ್ದಾರೆ' ಎಂದು ಆರೋಪಿಸಿದರು.

# 'ಆಗ ಜಾಮೂನು, ಈಗ ವಿಷ ಕೊಡ್ತಾರೆ'

ಶಾಸಕ ಎಸ್‌.ಟಿ.ಸೋಮಶೇಖರ್ ಅಸಮಾಧಾನ • ಕೆ.ಎಸ್‌. ಈಶ್ವರಪ್ಪ ತಿರುಗೇಟು

ಪ್ರಜಾವಾಣಿ ವಾರ್ತೆ

ಮೈಸೂರು: 'ಕಾಂಗ್ರೆಸ್‌ಗೆ ನಾನು ರಾಜೀನಾಮೆ ಕೊಟ್ಟು ಬಿಜೆಪಿಗೆ ಬರುವಾಗ ಜಾಮೂನು ಕೊಡ್ತಾರೆ. ಅಧಿಕಾರ ಆದ ಮೇಲೆ ವಿಷ ಕೊಡ್ತಾರೆ. ನನ್ನನ್ನ ಪಕ್ಷದಿಂದ ಹೊರಹಾಕಲು ಕೆಲವರು ಮಾನಸಿಕವಾಗಿ ಸಿದ್ಧರಾಗಿದ್ದಾರೆ. ವಿಧಾನಸಭೆ ಚುನಾವಣೆ ಮುಗಿದ ಬಳಿಕ ನನಗೆ ಸೂಕ್ತ ಗೌರವ ದೊರೆಯುತ್ತಿಲ್ಲ' ಎಂದು ಶಾಸಕ ಎಸ್‌.ಟಿ.ಸೋಮಶೇಖರ್ ಅಸಮಾಧಾನ ವ್ಯಕ್ತಪಡಿಸಿದರು.

'ಪಕ್ಷದಲ್ಲಿ ಉಸಿರುಗಟ್ಟಿಸುವ ವಾತಾವರಣ ಸೃಷ್ಟಿಯಾಗಿದೆ. ಐದಾರು ಜನ ನನ್ನನ್ನು ಈಗಲೇ ಹೋಗಲಿ ಎನ್ನುತ್ತಿದ್ದಾರೆ. ನಾನು ಅಧಿಕಾರಕ್ಕಾಗಿ ಯಾರ ಬಳಿಯೂ ಹೋಗುತ್ತಿಲ್ಲ. ಕಾಂಗ್ರೆಸ್‌ಗೆ ಬಹುಮತವಿದ್ದು, ಅವರಿಗೆ ನನ್ನ ಅಗತ್ಯವೂ ಇಲ್ಲ. ಆದರೆ, ಕ್ಷೇತ್ರದ ಹಿತದೃಷ್ಟಿಯಿಂದ ಕಾಂಗ್ರೆಸ್ ಸರ್ಕಾರದ ಒಡನಾಟ ನನಗೆ ಬೇಕಿದೆ' ಎಂದು ನಗರದಲ್ಲಿ ಬುಧವಾರ ತಿಳಿಸಿದರು.

'ಪಕ್ಷ ಬಿಟ್ಟು ಹೋಗುವಂತೆ ಹೇಳಲು ಈಶ್ವರಪ್ಪ ಅವರಿಗೆ ನೈತಿಕ ಶಕ್ತಿಯಿಲ್ಲ. ಯಡಿಯೂರಪ್ಪ ನನ್ನನ್ನು ಕರೆತಂದವರು, ಅವರೇ ಕರೆದು ಪಕ್ಷ ಬಿಡಬೇಡ ಎಂದಿದ್ದಾರೆ. ಸ್ವತಃ ಟಿಕೆಟ್ ಪಡೆಯಲು ಆಗದ ಅಶಕ್ತರ ಮಾತಿಗೆ ಉತ್ತರ ನೀಡಿ ನನ್ನ ಗೌರವ ಕಳೆದುಕೊಳ್ಳುವುದಿಲ್ಲ' ಎಂದು ಹರಿಹಾಯ್ದರು.

'ನನ್ನ ಕ್ಷೇತ್ರದ ಜನರಿಗೆ ಗ್ಯಾರಂಟಿ ಪ್ರಯೋಜನ ದೊರೆಯಲು ಪ್ರಯತ್ನಿಸುತ್ತಿದ್ದೇನೆ. ಕ್ಷೇತ್ರಕ್ಕೆ ಬಂದ ಸಿ.ಎಂ, ಡಿಸಿಎಂ ಜತೆ ಸಮಸ್ಯೆ ಚರ್ಚಿಸಿದ್ದೇನೆ. ಇದು ದೊಡ್ಡ ತಪ್ಪಾ? ನನ್ನ ಮತದಾರರು ಅಭಿವೃದ್ಧಿ ಯಾಗಬಾರದೇ? ಬರ ವೀಕ್ಷಣೆಗೆ ಕೇಂದ್ರದ ಅಧಿಕಾರಿಗಳು ಬಂದು ಹೋಗಿದ್ದು, ಇನ್ನೂ ಯಾವುದೇ ಪರಿಹಾರ ಬಂದಿಲ್ಲ. ನನ್ನನ್ನು ಕರೆಯದಿದ್ದರೂ ಪರವಾಗಿಲ್ಲ, ಅವರಾದರೂ ಹಿಂದೆ ಬಿದ್ದು ಪ್ರಯತ್ನಿಸಲಿ' ಎಂದು ಕಿಡಿಕಾರಿದರು.

## 'ತಲೆಹರಟೆ ಮಾತಾಡುವವರ ಯಾವಾಗ ತೆಗೆಯಬೇಕು ಗೊತ್ತು'

ಬೆಂಗಳೂರು: 'ತಲೆಹರಟೆ ಮಾತನಾಡುವವರನ್ನು ಯಾವಾಗ ತೆಗೆಯಬೇಕೋ ಗೊತ್ತಿದೆ. ಸಂದರ್ಭ ಬಂದಾಗ ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಬಿಜೆಪಿ ನಾಯಕ ಕೆ.ಎಸ್.ಈಶ್ವರಪ್ಪ ಅವರು ತಮ್ಮದೇ ಪಕ್ಷದ ಶಾಸಕ ಎಸ್.ಟಿ.ಸೋಮಶೇಖರ್ ಅವರನ್ನು ಕುಟುಕಿದ್ದಾರೆ.

'ಬಿಜೆಪಿಯವರು ಕರೆಸಿ ಜಾಮೂನು ತಿನ್ನಿಸಿ, ಈಗ ವಿಷ ಕೊಟ್ಟಿದ್ದಾರೆ. ನನ್ನ ಬಗ್ಗೆ ಮಾತನಾಡಲು ಈಶ್ವರಪ್ಪ ಯಾರು' ಎಂದು ಸೋಮಶೇಖರ್ ನೀಡಿರುವ ಹೇಳಿಕೆಗೆ ಸುದ್ದಿಗೋಷ್ಠಿಯಲ್ಲಿ ಈಶ್ವರಪ್ಪ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು.

'ಸೋಮಶೇಖರ ಅವರನ್ನು ಪಕ್ಷ ಬಿಟ್ಟು ಹೋಗು ಎಂದಿಲ್ಲ. ಹಾಗೆ ಹೇಳಲು ನಾನ್ಯಾರು? ಅನೇಕರು ಜಾಮೂನ್ ತಿಂದಿದ್ದಾರೆ. ವಿಷ ಕುಡಿದವರು ಒಬ್ಬರಾದರೂ ಇದ್ದಾರಾ? ಅವರು ಜಾಮೂನ್ ತಿಂದು ಸಚಿವರಾದರು. ನಾವೂ ಸಚಿವರಾದೆವು. ಸರ್ಕಾರವೂ ಬಂತು. ಬಿಜೆಪಿ ಈಗ ಅಧಿಕಾರಕ್ಕೆ ಬಂದಿದ್ದರೆ ಈ ರೀತಿ ಮಾತನಾಡುತ್ತಿದ್ದರೆ? ಬಿಜೆಪಿಯಲ್ಲಿ ಕೋಟ್ಯಂತರ ಕಾರ್ಯಕರ್ತರಿದ್ದಾರೆ. ಬಿಜೆಪಿಯಲ್ಲಿ ಶಾಸಕರಾಗಿ ಇದ್ದು ಈ ರೀತಿ ಮಾತನಾಡುವುದು ಸರಿಯಲ್ಲ' ಎಂದರು.

'ಸೋಮಶೇಖರ್ ಅವರು ವಿಷ ಕುಡಿದಿದ್ದಾರಾ? ಇಡೀ ರಾಜ್ಯದ ಜನತೆ ಬಿಜೆಪಿಯನ್ನು ನೋಡಿದ್ದಾರೆ. ಬೇರೆ ಪಕ್ಷದಿಂದ ಬಂದ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆದರು. ಅವರಿಗೆ ವಿಷ ಕೊಟ್ಟಿದ್ದೇವಾ? 17 ಜನ ಶಾಸಕರು ಬಂದಿದ್ದರು. ಅವರು ಯಾವುದೇ ಕಾರಣಕ್ಕೂ ಪಕ್ಷ ಬಿಡುವುದಿಲ್ಲ ಎನ್ನುತ್ತಾರೆ. ಸೋಮಶೇಖರ್ ಅವರು ನಿಷ್ಠೆಯಿಂದ ಇದ್ದು, ಪಕ್ಷದ ಕುರಿತು ನಂಬಿಕೆ ಇದ್ದರೆ ಇರಲಿ. ಅದನ್ನು ಬಿಟ್ಟು ಅಧಿಕಾರ ಬಂದರೆ ಮಾತ್ರ ಇರ್ತೇನೆ. ಇಲ್ಲಾಂದ್ರೆ ಹೋಗ್ತೇನೆ ಎಂದರೆ ಅವರ ಇಷ್ಟ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## 'ಚುನಾವಣಾ ರಾಜಕೀಯದಿಂದ ದೂರ'

ಹಾಸನ: 'ಚುನಾವಣಾ ರಾಜಕಾರಣದಲ್ಲಿ ಮುಂದುವರಿಯಬಾರದು ಎನ್ನುವ ಸಣ್ಣ ತೀರ್ಮಾನವನ್ನು ಮಾಡಿದ್ದೇನೆ' ಎಂದು ಸಂಸದ ಡಿ.ವಿ. ಸದಾನಂದಗೌಡ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇಷ್ಟು ವರ್ಷ ಪಕ್ಷ ನನಗೆ ಎಲ್ಲವನ್ನೂ ನೀಡಿದೆ. ಬಿ.ಎಸ್.ಯಡಿಯೂರಪ್ಪ ಅವರ ನಂತರ ನಾನೇ ಹೆಚ್ಚು ಅಧಿಕಾರ ಅನುಭವಿಸಿದ ವ್ಯಕ್ತಿ. 10 ವರ್ಷ ಶಾಸಕ, 20 ವರ್ಷ ಸಂಸದ, 1 ವರ್ಷ ಮುಖ್ಯಮಂತ್ರಿ, 7 ವರ್ಷ ಕೇಂದ್ರ ಸಚಿವ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ, ಪ್ರತಿಪಕ್ಷದ ನಾಯಕ ಹೀಗೆ ಎಲ್ಲ ಅಧಿಕಾರವನ್ನು ಅನುಭವಿಸಿದ್ದೇನೆ. ಇನ್ನೂ ಮುಂದುವರಿದರೆ ಸ್ವಾರ್ಥಿ ಆಗುತ್ತೇನೆ' ಎಂದು ಹೇಳಿದರು.

ಮೊಬೈಲ್ ಟವರ್ ಲೊಕೇಷನ್ ತಂತ್ರಗಾರಿಕೆ ಮುಂದಿಟ್ಟು ಕಳ್ಳ-ಪೊಲೀಸ್ ಆಟವಾಡಿದ ಕಿಂಗ್‌ಪಿನ್

# ಪೊಲೀಸರ ದಾರಿ ತಪ್ಪಿಸಿದ ಪಾಟೀಲ!

• ಮಲ್ಲಿಕಾರ್ಜುನ ನಾಲವಾರ



ರುದ್ರಗೌಡ

ಕಲುಬರಗಿ: ನಗರದ ಅಪಾರ್ಟ್‌ಮೆಂಟ್ ಒಂದರಲ್ಲಿ ಉಳಿದುಕೊಂಡಿದ್ದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ನೇಮಕಾತಿ ಅಕ್ರಮದ ಕಿಂಗ್‌ಪಿನ್ ರುದ್ರಗೌಡ ಡಿ.ಪಾಟೀಲ ಪೊಲೀಸರ ಗಮನ ಬೇರೆಡೆ ಸೆಳೆಯಲು ತಾನು ಬಳಸುತ್ತಿದ್ದ ಮೊಬೈಲ್ ಒಂದನ್ನು ಉತ್ತರ ಪ್ರದೇಶದತ್ತ ಕಳುಹಿಸಿದ್ದಾನೆ.

ಅಪಾರ್ಟ್‌ಮೆಂಟ್‌ನಿಂದ ಕೂದಲೆಳೆಯ ಅಂತರದಲ್ಲಿ ಪರಾರಿಯಾದ ಬಳಿಕ ರುದ್ರಗೌಡನ ತಂತ್ರಗಳು ಒಂದೊಂದಾಗಿ ಹೊರ ಬರುತ್ತಿವೆ. ಸಿನಿಮೀಯ ರೀತಿಯಲ್ಲಿ ತನ್ನ ಮೊಬೈಲ್ ಅನ್ನು ಉತ್ತರ ಪ್ರದೇಶದತ್ತ ಕಳುಹಿಸಿದ್ದಾನೆ. ಕಲಬುರಗಿಯಲ್ಲಿ ಇರುವುದಿಲ್ಲ ಎಂದು ಮನಗಂಡ ಪೊಲೀಸರು ಆತನ ಮೊಬೈಲ್ ಟವರ್ ಲೊಕೇಷನ್ ಜಾಡು ಹಿಡಿದು ಉತ್ತರ ಪ್ರದೇಶ, ಮಹಾರಾಷ್ಟ್ರದಲ್ಲಿ ಹುಡುಕಾಡಿದ್ದಾರೆ. ಹತ್ತಾರು ಮೂಲಗಳಿಂದ ರುದ್ರಗೌಡ ಇರುವಿಕೆಯ ಮಾಹಿತಿ ಬರುತ್ತಲೇ ಇದ್ದವು. ಆದರೆ, ಅವುಗಳತ್ತ ಹೆಚ್ಚಿನ ಲಕ್ಷ್ಯ ಕೊಡದೆ ಮೊಬೈಲ್ ಟವರ್ ಲೊಕೇಷನ್ ಬೆನ್ನು ಹತ್ತಿದ್ದರು ಎಂಬುದು ಮೂಲಗಳಿಂದ ತಿಳಿದುಬಂದಿದೆ.

> ಸರ್ಕಾರ ತನ್ನ ಜವಾಬ್ದಾರಿಯಿಂದ ಜಾರಿಕೊಳ್ಳುವುದಿಲ್ಲ. ನಮ್ಮವರು ಭಾಗಿಯಾಗಿದ್ದು ಕಂಡುಬಂದರೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು
> **ಪ್ರಿಯಾಂಕ್ ಖರ್ಗೆ,** ಸಚಿವ

ವಿಧಾನಸಭಾ ಚುನಾವಣೆಯಲ್ಲಿ ಅಫಜಲಪುರ ಕ್ಷೇತ್ರದಲ್ಲಿ ಉತ್ತರ ಪ್ರದೇಶ ಮೂಲದ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿಯೂ ಸ್ಪರ್ಧಿಸಿದ್ದ. ಹೀಗಾಗಿ, ಉತ್ತರಪ್ರದೇಶ ಮುಖಂಡರ ಶ್ರೀರಕ್ಷೆಗಾಗಿ ಅಲ್ಲಿಗೆ ಮೊರೆ ಹೋಗಿರಬಹುದು ಎಂದು ಪೊಲೀಸರು ಅಂದಾಜಿಸಿದ್ದರು. ಜೇವರ್ಗಿ ರಸ್ತೆಯ ಅಪಾರ್ಟ್‌ಮೆಂಟ್‌ನಲ್ಲಿ ಇರುವ ಮಾಹಿತಿ ಬೆಳಿಗ್ಗೆಯೇ ಬಂದರೂ ಪೊಲೀಸರು ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಮಧ್ಯಾಹ್ನ ಕ್ರಾಸ್ ಚೆಕ್ ಮಾಡಲು ಹೋದಾಗ ಪೊಲೀಸರು ಬರುವ ಮಾಹಿತಿ ಅರಿತು ಆತ ಅಲ್ಲಿಂದ ಪರಾರಿಯಾಗಿದ್ದಾನೆ. ಮೊಬೈಲ್ ಟವರ್ ಲೊಕೇಷನ್ ತಂತ್ರಗಾರಿಕೆ ಮುಂದಿಟ್ಟು ಕಳ್ಳ-ಪೊಲೀಸ್ ಆಟವಾಡಿದ್ದಾನೆ ಎಂದು ಮೂಲಗಳು ತಿಳಿಸಿವೆ.

ಅಪಾರ್ಟ್‌ಮೆಂಟ್ ಕಾಂಪೌಂಡ್ ಜಿಗಿದ ಬಂದ ರುದ್ರಗೌಡನನ್ನು ಕಾರಿನಲ್ಲಿ ಕೂರಿಸಿಕೊಂಡು ಮಹಾರಾಷ್ಟ್ರದ ಸೋಲಾಪುರವರೆಗೆ ಬಿಟ್ಟ ಆತನ ಇಬ್ಬರು ಆಪ್ತರನ್ನು ಕಲಬುರಗಿಯ ವಿಶ್ವವಿದ್ಯಾಲಯ ಠಾಣೆಯ ಪೊಲೀಸರು ಬುಧವಾರ ವಶಕ್ಕೆ ಪಡೆದಿದ್ದಾರೆ. ರವಿ ಉಕ್ಕಲಿ ಮತ್ತು ಇನ್ನೊಬ್ಬನ ವಿಚಾರಣೆ ನಡೆಯುತ್ತಿದೆ. ಸೋಲಾಪುರದಿಂದ ರುದ್ರಗೌಡ ಒಬ್ಬನೇ ಬೇರೆ ಕಡೆ ಪರಾರಿಯಾಗಿದ್ದಾನೆ ಎನ್ನಲಾಗಿದೆ.

ಮಹಾರಾಷ್ಟ್ರದಲ್ಲಿ ಇರುವ ಮಾಹಿತಿ ಆಧರಿಸಿ ತೆರಳಿದ್ದ ಪೊಲೀಸರ ತಂಡ ಬರಿಗೈಯಲ್ಲೇ ವಾಪಸಾಗಿದೆ. ಮತ್ತೊಂದು ತಂಡ ಜಿಲ್ಲೆಯಾದ್ಯಂತ ಹುಡುಕಾಟ ನಡೆಸುತ್ತಿದೆ. ರುದ್ರಗೌಡನ ಸಹೋದರ ಮಹಾಂತೇಶ ಪಾಟೀಲನ ವಿಚಾರಣೆಯೂ ನಡೆಯುತ್ತಿದೆ.

ರುದ್ರಗೌಡನ ತಮ್ಮ ವಕೀಲರ ಮೂಲಕ ಹೈಕೋರ್ಟ್‌ನ ಕಲಬುರಗಿ ಪೀಠಕ್ಕೆ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಸಲ್ಲಿಸಿದ್ದು, ಗುರುವಾರ ವಿಚಾರಣೆಗೆ ನಿಗದಿಯಾಗುವ ಸಾಧ್ಯತೆ ಇದೆ. ಒಂದು ವೇಳೆ ನಿರೀಕ್ಷಣಾ ಜಾಮೀನು ಸಿಗದೆ ಇದ್ದರೆ ರುದ್ರಗೌಡ ನ್ಯಾಯಾಲಯದ ಮುಂದೆ ಹಾಜರಾಗಬಹುದು ಎಂದು ಹೇಳಲಾಗುತ್ತಿದೆ.

### ಇಬ್ಬರ ಜಾಮೀನು ಅರ್ಜಿ ವಜಾ

ಅಶೋಕನಗರ ಠಾಣೆ ಪ್ರದೇಶದ ಖಾಸಗಿ ಕಾಲೇಜು ಕೇಂದ್ರದಲ್ಲಿ ಬ್ಲೂಟೂತ್ ಬಳಸಿದ್ದ ತ್ರಿಮೂರ್ತಿ ಹಾಗೂ ಆತನಿಗೆ ನೆರವಾಗಲು ಬಂದಿದ್ದ ಅಂಬರೀಶನ ಜಾಮೀನು ಅರ್ಜಿಯನ್ನು ಇಲ್ಲಿನ 5ನೇ ಜೆಎಂಎಫ್‌ಸಿ ನ್ಯಾಯಾಲಯ ವಜಾಗೊಳಿಸಿದೆ.

ಈ ಇಬ್ಬರೂ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಧೀಶೆ ಸ್ಮಿತಾ ಅವರು, ಆರೋಪಿಗಳ ಜಾಮೀನು ಅರ್ಜಿ ತಿರಸ್ಕರಿಸಿದ್ದಾರೆ. ಪೊಲೀಸರ ವಶದಲ್ಲಿದ್ದು, ವಿಚಾರಣೆ ಎದುರಿಸುತ್ತಿದ್ದಾರೆ.

### ತನಿಖಾ ತಂಡ ರಚನೆ

ಕೆಇಎ ನೇಮಕಾತಿಯಲ್ಲಿ ಕಮಿಷನರೇಟ್ ವ್ಯಾಪ್ತಿಯಲ್ಲಿ ನಡೆದ ಬ್ಲೂಟೂತ್ ಅಕ್ರಮದ ಉಳಿದ ಆರೋಪಿಗಳ ಪತ್ತೆಗೆ ಡಿಸಿಪಿ ಕನಿಕಾ ಸಿಕ್ರಿವಾಲ್ ಉಸ್ತುವಾರಿಯಲ್ಲಿ ನಾಲ್ವರ ತನಿಖಾ ತಂಡ ರಚಿಸಲಾಗಿದೆ ಎಂದು ಕಮಿಷನರ್ ಚೇತನ್ ಆರ್. ತಿಳಿಸಿದ್ದಾರೆ.

ಎಸಿಪಿಗಳಾದ ಭೂತೇಗೌಡ ವಿ.ಎಸ್., ಡಿ.ಜಿ. ರಾಜಣ್ಣ, ಪಿಐಗಳಾದ ಅರುಣ ಕುಮಾರ ಮತ್ತು ಮಲ್ಲಿಕಾರ್ಜುನ ಇಕ್ಕಳಕಿ ತಂಡದಲ್ಲಿ ಇದ್ದಾರೆ.

## ಸೌಜನ್ಯ ಪ್ರಕರಣ: ಸಿಬಿಐ ಮೇಲ್ಮನವಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸೌಜನ್ಯ ಮೇಲಿನ ಅತ್ಯಾಚಾರ ಹಾಗೂ ಕೊಲೆ ಪ್ರಕರಣದ ಆರೋಪಿಯನ್ನು ಖುಲಾಸೆಗೊಳಿಸಿ ಸಿಬಿಐ ವಿಶೇಷ ನ್ಯಾಯಾಲಯ ನೀಡಿರುವ ಆದೇಶ ಪ್ರಶ್ನಿಸಿ ಸಿಬಿಐ ಹೈಕೋರ್ಟ್ ಮೆಟ್ಟಿಲೇರಿದೆ.

ವಿಶೇಷ ನ್ಯಾಯಾಲಯದ ಆದೇಶ ಪ್ರಶ್ನಿಸಿರುವ ಸಿಬಿಐ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದು, ಈ ಅರ್ಜಿಯು ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ. ವಿಚಾರಣಾ ನ್ಯಾಯಾಲಯ ತೀರ್ಪು ನೀಡಿದ 4 ತಿಂಗಳ ಬಳಿಕ ಸಿಬಿಐ ಈ ಮೇಲ್ಮನವಿ ಸಲ್ಲಿಸಲಾಗಿದೆ. ಪ್ರಕರಣದ ಆರೋಪಿ ಸಂತೋಷ್ ರಾವ್ ನಿರ್ದೋಷಿ ಎಂದು ಸಿಬಿಐ ವಿಶೇಷ ನ್ಯಾಯಾಲಯ 2023ರ ಜೂನ್ 16ರಂದು ಆದೇಶಿಸಿತ್ತು. ಮೇಲ್ಮನವಿ ಸಲ್ಲಿಸಲು ಸಿಬಿಐಗೆ 60 ದಿನಗಳ ಕಾಲಾವಕಾಶವನ್ನೂ ನೀಡಲಾಗಿತ್ತು.

**ಪ್ರಕರಣ:** ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣ 2012ರ ಅಕ್ಟೋಬರ್ 12ರಂದು ನಡೆದಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳ್ತಂಗಡಿ ಪೊಲೀಸರು ಸಂತೋಷ್ ರಾವ್ ಅವರನ್ನು ಬಂಧಿಸಿದ್ದರು. ಸಾಕ್ಷ್ಯಾಧಾರಗಳ ಕೊರತೆಯ ಹಿನ್ನೆಲೆಯಲ್ಲಿ 11 ವರ್ಷಗಳ ಬಳಿಕ ಆರೋಪಿಯನ್ನು ನಿರ್ದೋಷಿ ಎಂದು ವಿಚಾರಣಾ ನ್ಯಾಯಾಲಯ ತೀರ್ಪು ನೀಡಿತ್ತು. ಏತನ್ಮಧ್ಯೆ ಪ್ರಕರಣದ ಮರು ತನಿಖೆಗೆ ಕೋರಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು.

ಆಯೋಗದ ಸದಸ್ಯರ ಆಯ್ಕೆ ಪ್ರಕ್ರಿಯೆಗೆ ಆಕ್ಷೇಪ • ರಾಜ್ಯಪಾಲರಿಗೆ ದೂರು

# ಅಧ್ಯಕ್ಷರಿಲ್ಲದ ಮಾನವ ಹಕ್ಕು ಆಯೋಗ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕರ್ನಾಟಕ ರಾಜ್ಯ ಮಾನವ ಹಕ್ಕು ಆಯೋಗದ ಅಧ್ಯಕ್ಷರ ಹಾಗೂ ಇಬ್ಬರು ಸದಸ್ಯರ ಹುದ್ದೆಗಳು ಏಳು ತಿಂಗಳಿಂದ ಖಾಲಿ ಉಳಿದಿವೆ. ಮಾನವ ಹಕ್ಕು ಉಲ್ಲಂಘನೆಗೆ ಸಂಬಂಧಿಸಿದ 2,243 ಪ್ರಕರಣಗಳು ಆಯೋಗದಲ್ಲಿ ವಿಚಾರಣೆಗೆ ಬಾಕಿ ಇವೆ. ಕರ್ನಾಟಕ ಸರ್ಕಾರ ಆರಂಭಿಸಿರುವ ಸದಸ್ಯರ ಆಯ್ಕೆ ಪ್ರಕ್ರಿಯೆಗೂ ಆಕ್ಷೇಪ ವ್ಯಕ್ತವಾಗಿದೆ.

ಆಯೋಗದ ಅಧ್ಯಕ್ಷರಾಗಿದ್ದ ನಿವೃತ್ತ ನ್ಯಾಯಮೂರ್ತಿ ಡಿ.ಎಚ್. ವಘೇಲಾ ಅವರ ಅಧಿಕಾರದ ಅವಧಿ ಮಾರ್ಚ್‌ನಲ್ಲಿ ಮುಗಿದಿತ್ತು. ಸದಸ್ಯ-ರಾಗಿದ್ದ ಕೆ.ಬಿ.ಚೆಂಗಪ್ಪ ಹಾಗೂ ಆರ್.ಕೆ.ದತ್ತ ಅವಧಿ ಫೆಬ್ರುವರಿಗೆ ಮುಕ್ತಾಯಗೊಂಡಿತ್ತು. ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರ ಹುದ್ದೆ ಖಾಲಿಯಾದರೆ ಮೂರು ತಿಂಗಳೊಳಗೆ ಭರ್ತಿ ಮಾಡಬೇಕು ಎಂದು ಸುಪ್ರೀಂ ಕೋರ್ಟ್ (ಡಿ.ಕೆ.ಬಸು ಪ್ರಕರಣ) ನಿರ್ದೇಶನ ನೀಡಿದೆ. ಆದರೆ, ರಾಜ್ಯ ಸರ್ಕಾರವು ಹುದ್ದೆಗಳ ಭರ್ತಿ ಮಾಡಿರಲಿಲ್ಲ. ಈ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು ಎಂದು ಆಗ್ರಹಿಸಿ ವಕೀಲರಾದ ಸುಧಾ ಕಟ್ವಾ ಅವರು ಕರ್ನಾಟಕ ಕಾನೂನು ಇಲಾಖೆಗೆ ಮನವಿ ಸಲ್ಲಿಸಿದ್ದರು. ಜತೆಗೆ, ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರ ಹುದ್ದೆಗಳನ್ನು ಭರ್ತಿ ಮಾಡಲು ನಿರ್ದೇಶನ ನೀಡುವಂತೆ ಕೋರಿ ಅವರು ಜೂನ್ ತಿಂಗಳಲ್ಲಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ್ದ ಮುಖ್ಯ ನ್ಯಾಯಮೂರ್ತಿ ಪೀಠವು ಮುಖ್ಯ ಕಾರ್ಯದರ್ಶಿ ಹಾಗೂ ಕಾನೂನು ಇಲಾಖೆಯ ಕಾರ್ಯದರ್ಶಿಗೆ ನೋಟಿಸ್ ನೀಡಿತ್ತು. ವಿಧಾನಸಭೆಯ ವಿರೋಧ ಪಕ್ಷದ ನಾಯಕರ ನೇಮಕ ಆಗದ ಕಾರಣ ಆಯೋಗದ ಅಧ್ಯಕ್ಷರ ನೇಮಕಾತಿ ವಿಳಂಬವಾಗಿದೆ ಎಂದು ರಾಜ್ಯ ಸರ್ಕಾರವು ನ್ಯಾಯಪೀಠಕ್ಕೆ ಪ್ರತಿಕ್ರಿಯೆ ನೀಡಿತ್ತು. ಈ ಪ್ರಕರಣದ ವಿಚಾರಣೆ ಬಾಕಿ ಉಳಿದಿದೆ.

ಇನ್ನೊಂದೆಡೆ, ಆಯೋಗದ ಸದಸ್ಯರ ಹುದ್ದೆಗಳ ಭರ್ತಿ ಮಾಡಲು ಕಾನೂನು ಇಲಾಖೆಯು ಜೂನ್ 19ರಂದು ಅಧಿಸೂಚನೆ ಹೊರಡಿಸಿತ್ತು. ಅರ್ಹರು 20 ದಿನಗಳೊಳಗೆ ಅರ್ಜಿ ಸಲ್ಲಿಸಬೇಕು ಎಂದು ಅಧಿಸೂಚನೆ-ಯಲ್ಲಿ ತಿಳಿಸಲಾಗಿತ್ತು. ಅರ್ಜಿ ಸಲ್ಲಿಕೆಗೆ ಜುಲೈ 9 ಕೊನೆಯ ದಿನಾಂಕವಾಗಿತ್ತು. ಜುಲೈ 10ರ ಬಳಿಕವೂ ಆರು ಮಂದಿ ಅರ್ಜಿ ಸಲ್ಲಿಸಿದ್ದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ಅವರು ರಾಜ್ಯಪಾಲರು ಹಾಗೂ ಮುಖ್ಯಮಂತ್ರಿಗೆ ದೂರು ಸಲ್ಲಿಸಿದ್ದು, ಈ ಅರ್ಜಿಗಳನ್ನು ಪರಿಗಣಿಸ-ಬಾರದು ಎಂದು ಆಗ್ರಹಿಸಿದ್ದಾರೆ.

'ನಜೀರ್ ವಿ.ಎ., ಶ್ರೀಕಾಂತ ರಾವ್, ರಾಜ್ ಕಿಶೋರ್ ಸಿಂಗ್ ಹಾಗೂ ಎಸ್.ಯು.ಪಾಟೀಲ ಅವರು ಜುಲೈ 11ರಂದು, ಎ.ರಾಮರಾಜು ಅರಸು ಅವರು ಜುಲೈ 12ರಂದು ಹಾಗೂ ಅಶಿತ್ ಮೋಹನ್ ಪ್ರಸಾದ್ ಅವರು ಜುಲೈ 18ರಂದು ಅರ್ಜಿ ಸಲ್ಲಿಸಿದ್ದಾರೆ. ಈ ಅರ್ಜಿಗಳನ್ನು ಪರಿಗಣಿಸಲು ಸಾಧ್ಯವಿಲ್ಲ ಎಂದು ಕಾನೂನು ಇಲಾಖೆಯ ಕಾರ್ಯದರ್ಶಿ ಪ್ರಭಾವತಿ ಎಂ.ಹಿರೇಮಠ ಹೇಳಿದ್ದರು. ಅವರನ್ನು ಕೆಲವೇ ದಿನಗಳಲ್ಲಿ ವರ್ಗಾವಣೆ ಮಾಡಲಾಗಿದೆ' ಎಂದು ಅವರು ದೂರಿನಲ್ಲಿ ಉಲ್ಲೇಖಿ-ಸಿದ್ದಾರೆ.

'ಇಂಥ ಹುದ್ದೆಗಳ ಆಯ್ಕೆ ಪ್ರಕ್ರಿಯೆಯಲ್ಲಿ ಕಡೆಯ ದಿನಾಂಕದ ನಂತರ ಸ್ವೀಕೃತವಾಗುವ ಅರ್ಜಿಗಳು ಅಮಾನ್ಯ ಆಗುತ್ತವೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಕರ್ನಾಟಕ ಸರ್ಕಾರವು ಇಂತಹ ಅರ್ಜಿಗಳನ್ನು ಪರಿಗಣಿಸಿದರೆ ಕಾನೂನು ಹೋರಾಟಕ್ಕೂ ದಾರಿ ಮಾಡಿಕೊಟ್ಟಂತೆ ಆಗುತ್ತದೆ' ಎಂದು ಎಚ್ಚರಿಸಿದ್ದಾರೆ.



ಧಾರವಾಡದ ಗೌರಿಶಂಕರ ಹಾಸ್ಟೆಲ್‌ನಲ್ಲಿ ಸಚಿವ ಎಚ್.ಸಿ. ಮಹದೇವಪ್ಪ ಅವರಿಗೆ ಬೆಂಗಾವಲು ಸಿಬ್ಬಂದಿಯೊಬ್ಬರು ಶೂ ಹಾಕಿದರು

## ಮಹದೇವಪ್ಪಗೆ ಶೂ ಹಾಕಿದ ಸಿಬ್ಬಂದಿ

ಪ್ರಜಾವಾಣಿ ವಾರ್ತೆ

**ಧಾರವಾಡ:** ಸಮಾಜಕಲ್ಯಾಣ ಸಚಿವ ಡಾ. ಎಚ್.ಸಿ.ಮಹದೇವಪ್ಪ ಅವರು ಬುಧವಾರ ಇಲ್ಲಿನ ಗೌರಿಶಂಕರ ಹಾಸ್ಟೆಲ್‌ಗೆ ಭೇಟಿ ನೀಡಿ ಹೊರ ಬಂದಾಗ, ಅವರ ಬೆಂಗಾವಲು ಸಿಬ್ಬಂದಿಯೊಬ್ಬರು ಶೂ ಹಾಕಿದರು.

ಹಾಸ್ಟೆಲ್‌ನ ಅಡುಗೆ ಮನೆ ದ್ವಾರದಲ್ಲಿ ಶೂ ಕಳಚಿ ಒಳಗೆ ಹೋಗಿ ಅಡುಗೆ ಮನೆಯಲ್ಲಿನ ವ್ಯವಸ್ಥೆಗಳನ್ನು ಪರಿಶೀಲಿಸಿದರು. ಕೋಣೆಯಿಂದ ಹೊರ ಬಂದಾಗ, ಶೂಗಳನ್ನು ಸಿಬ್ಬಂದಿಯೊಬ್ಬರು ಹಾಕಿದರು.

**ಸೊಂಟ ನೋವು -ಬಗ್ಗಲು ಆಗಲ್ಲ- ಮಹದೇವಪ್ಪ:** 'ನಂಜನಗೂಡು ಉಪಚುನಾವಣೆ ಸಂದರ್ಭದಲ್ಲಿ ನನಗೆ ಸೊಂಟದ ಭಾಗದಲ್ಲಿ ಕೀವು ಆಗಿ ಸಮಸ್ಯೆಯಾಗಿತ್ತು. ಸೊಂಟ ನೋವು ಇದೆ, ಬಗ್ಗಲು ಆಗಲ್ಲ. ಅದಕ್ಕೆ ಸಿಬ್ಬಂದಿಯೊಬ್ಬರು ಶೂ ಹಾಕಿದರು. ಅವರಿಗೆ ಧನ್ಯವಾದ ತಿಳಿಸುವೆ. ಇದರಲ್ಲಿ ದುರಾಹಂಕಾರ ಇಲ್ಲ' ಎಂದು ಎಚ್.ಸಿ.ಮಹದೇವಪ್ಪ ತಿಳಿಸಿದರು.

'ಸಂವಿಧಾನದ ಆಶಯಗಳ ಪ್ರಕಾರವೇ ಬದುಕುವ ನನಗೆ ಸಮಾನತೆ, ವ್ಯಕ್ತಿ ಗೌರವ, ಪ್ರೀತಿ ವಿಶ್ವಾಸ ಹೊರತುಪಡಿಸಿ ಇತರೆ ಸಂಗತಿಗಳಲ್ಲಿ ಆಸಕ್ತಿ ಇಲ್ಲ. ದೈಹಿಕ ತೊಂದರೆಗಾಗಿ ಪಡೆದ ನೆರವನ್ನು ಸಂಕುಚಿತ ಮನಸ್ಸಿನಿಂದ ನೋಡಬಾರದು' ಎಂದು ಅವರು ಕೋರಿದರು.

## ಭ್ರಷ್ಟನಲ್ಲ: ಅಧಿಕಾರಿಯಿಂದ ಫಲಕ

ಪ್ರಜಾವಾಣಿ ವಾರ್ತೆ

**ಹಾಸನ:** ನಗರದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ಅಧೀಕ್ಷಕ ಡಿ.ಎಸ್. ಲೋಕೇಶ್ ಅವರು, ತಮ್ಮ ಮೇಜಿನ ಮೇಲೆ ಇಟ್ಟಿರುವ 'ನಾನು ಭ್ರಷ್ಟನಲ್ಲ, ಇಲ್ಲಿ ಲಂಚ ಸ್ವೀಕರಿಸುವುದಿಲ್ಲ' ಎಂಬ ಫಲಕದ ಮೂಲಕ ಜನರ ಗಮನ ಸೆಳೆಯುತ್ತಿದ್ದಾರೆ.

ಫಲಕದ ಮುಂದೆ ಕುಳಿತ ಅವರ ಫೋಟೋ ಬುಧವಾರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದು, ಬಹುತೇಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಅವರು, 'ಪ್ರಾಮಾಣಿಕವಾಗಿ ನನ್ನ ಕೆಲಸ ಮಾಡು-ತ್ತಿದ್ದೇನಷ್ಟೇ' ಎಂದು ಹೇಳಿದರು.




ಲೋಕೇಶ್ ಅವರು ತಮ್ಮ ಮೇಜಿನ ಮೇಲೆ ಹಾಕಿರುವ ಫಲಕ.

ಈ ಹಿಂದೆ ಎಚ್.ಡಿ. ದೇವೇಗೌಡರು ಹಾಗೂ ಮಾಜಿ ಶಾಸಕ ಪ್ರೀತಂ ಗೌಡರಿಗೆ ಆಪ್ತ ಸಹಾಯಕರಾಗಿಯೂ ಅವರು ಕೆಲಸ ಮಾಡಿದ್ದಾರೆ.

ಇತ್ತೀಚೆಗೆ ಬಿಇಒ ಕಚೇರಿ ಅಧೀಕ್ಷಕರಾಗಿ ಬಡ್ತಿ ಇವರು ಹೊಂದಿದ್ದಾರೆ.

## ಲೈಂಗಿಕ ದೌರ್ಜನ್ಯ: 20 ವರ್ಷ ಜೈಲು

**ಹಾವೇರಿ:** ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಿಗೆ 20 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ₹1.80 ಲಕ್ಷ ದಂಡ ವಿಧಿಸಿ ಹಾವೇರಿ ವಿಶೇಷ ಸೆಷನ್ಸ್ ನ್ಯಾಯಾಲಯದ (ಎಫ್.ಟಿ.ಎಸ್.ಸಿ-1) ನ್ಯಾಯಾಧೀಶ ನಿಂಗೌಡ ಪಾಟೀಲ ಆದೇಶ ನೀಡಿದ್ದಾರೆ.

ಹಿರೇಕೆರೂರು ತಾಲ್ಲೂಕು ಪುರಕೊಂಡಿಕೊಪ್ಪದ ಆರೋಪಿ ಅಣ್ಣಪ್ಪ ಹನುಮಂತಪ್ಪ ಕಬ್ಬೂರ ಎಂಬಾತ 2019ರ ಸೆಪ್ಟೆಂಬರ್‌ನಲ್ಲಿ ಬಾಲಕಿಯನ್ನು ಅಪಹರಿಸಿಕೊಂಡು ಹೋಗಿ, ಚಿಕ್ಕಮಗಳೂರು ಜಿಲ್ಲೆ ಎನ್.ಆರ್. ಪುರ ತಾಲ್ಲೂಕು ದ್ಯಾರಮಕ್ಕಿ ಬಡಗದಬೈಲ್ ಗ್ರಾಮದ ಕಾಫಿ ಎಸ್ಟೇಟ್ ಮನೆಯಲ್ಲಿ ಲೈಂಗಿಕ ದೌರ್ಜನ್ಯ ಎಸಗಿದ್ದ.

ದಂಡದ ಹಣದಲ್ಲಿ ನೊಂದ ಬಾಲಕಿಗೆ ₹1 ಲಕ್ಷ ಪರಿಹಾರ ಹಾಗೂ ರಾಜ್ಯ ಸರ್ಕಾರವು ಬಾಲಕಿಗೆ ₹4 ಲಕ್ಷ ಪರಿಹಾರ ನೀಡಬೇಕು ಎಂದು ಆದೇಶಿಸಿದ್ದಾರೆ.

## 800 ಪುಟಗಳ ಆರೋಪ ಪಟ್ಟಿ

ಒಂದನೇ ಪುಟದಿಂದ...

'ವಂಚನೆಯಾದ ಹಣದಲ್ಲಿ ಶೇ 90ರಷ್ಟು ಜಪ್ತಿ ಮಾಡಿಕೊ-ಳ್ಳಲಾಗಿದೆ. ಉದ್ಯಮಿಗೆ ಹೇಗೆ ಆಮಿಷ ಒಡ್ಡಲಾಗಿತ್ತು. ಯಾವ ಸ್ಥಳದಲ್ಲಿ ಹಣ ಪಡೆಯಲಾಗಿತ್ತು. ಎಲ್ಲೆಲ್ಲಿ ಸಭೆ ನಡೆಸಿದ್ದರು ಎಂಬ ಮಾಹಿತಿಯನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.'

'ಡಿಜಿಟಲ್ ಸಾಕ್ಷ್ಯ, ಎಂಟು ಮಂದಿ ಆರೋಪಿಗಳ ಬ್ಯಾಂಕ್ ವ್ಯವಹಾರದ ವಿವರ, ಆರೋಪಿಗಳ ನಡುವೆ ನಡೆದ ಮೊಬೈಲ್ ಸಂದೇಶಗಳ ವಿನಿಮಯದ ದಾಖಲೆಗಳನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆರೋಪಿಗಳು ವಿವಿಧ ಸ್ಥಳಗಳಲ್ಲಿ ಸಭೆ ನಡೆಸಿದ್ದರು. ಆ ಸ್ಥಳಕ್ಕೂ ಆರೋಪಿಗಳನ್ನೇ ಕರೆದೊಯ್ದು ಮಹಜರು ನಡೆಸಲಾಗಿತ್ತು. ವಿಧಿವಿಜ್ಞಾನ ಪ್ರಯೋಗಾಲಯದ ವರದಿಯನ್ನು ಸೇರಿಸಲಾಗಿದೆ' ಎಂದು ಹೇಳಿದರು.

'ಆರೋಪಿಗಳು ಉದ್ಯಮಿಯಿಂದ ಪಡೆದಿದ್ದ ಹಣದ ಪೈಕಿ ₹4.11 ಕೋಟಿ ಜಪ್ತಿ ಮಾಡಿಕೊಳ್ಳಲಾಗಿತ್ತು. ₹25 ಲಕ್ಷ ಕೊಟ್ಟು ಹಾಲವೀರಪ್ಪ ಸ್ವಾಮೀಜಿ ಖರೀದಿಸಿದ್ದ ಇನ್ನೋವಾ ಕಾರನ್ನು ಸುಪರ್ದಿಗೆ ಪಡೆಯಲಾಗಿತ್ತು. ಆರೋಪಿಗಳು ಎಲ್ಲೆಲ್ಲಿ ಹಣ ವಿನಿ-ಯೋಗಿಸಿದ್ದರು ಎಂದು ಮಾಹಿತಿ ಸಹ ಆರೋಪಪಟ್ಟಿಯಲ್ಲಿ ಇದೆ' ಎಂದು ಮೂಲಗಳು ತಿಳಿಸಿವೆ.



## 6 ಮಂದಿಗೆ 'ಸಂಸ್ಕೃತಿ ಸಿರಿ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಡಾ. ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಪ್ರತಿಷ್ಠಾನ ನೀಡುವ 'ಸಂಸ್ಕೃತಿ ಸಿರಿ' ಪ್ರಶಸ್ತಿಗೆ ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಸೇರಿ ಆರು ಮಂದಿ ಆಯ್ಕೆ-ಯಾಗಿದ್ದಾರೆ.

ಸಾಹಿತಿ ಕಮಲಾ ಹಂಪನಾ, ಸಂಗೀತ ವಿದ್ವಾಂಸೆ ಎಚ್.ಆರ್. ಲೀಲಾವತಿ, ಕಥೆಗಾರ ಕರೀಗೌಡ ಬೀಚನಹಳ್ಳಿ, ಸಾಹಿತಿ ಜಿ. ಕೃಷ್ಣಪ್ಪ ಹಾಗೂ ಗಾಯಕ ಮುದ್ದುಮೋಹನ್ ಆಯ್ಕೆ ಆಗಿದ್ದಾರೆ.

ಪ್ರಶಸ್ತಿಯು ತಲಾ ₹ 25 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಇದೇ 17ರಂದು ಸಂಜೆ 6 ಗಂಟೆಗೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಸಂಗೀತ ನಿರ್ದೇಶಕ ಹಂಸಲೇಖ ಅವರು ಸಮಾರಂಭ ಉದ್ಘಾಟಿಸಲಿದ್ದಾರೆ ಎಂದು ಪ್ರತಿಷ್ಠಾನದ ಗೌರವ ಅಧ್ಯಕ್ಷ ಹಿ.ಚಿ. ಬೋರಲಿಂಗಯ್ಯ ಅವರು ತಿಳಿಸಿದ್ದಾರೆ.




ಗೊ.ರು. ಚನ್ನಬಸಪ್ಪ




ಕಮಲಾ ಹಂಪನಾ




ಎಚ್.ಆರ್. ಲೀಲಾವತಿ



ಕರೀಗೌಡ ಬೀಚನಹಳ್ಳಿ



ಮುದ್ದುಮೋಹನ್



ಜಿ. ಕೃಷ್ಣಪ್ಪ

# ವರದಿ ಬಿಡುಗಡೆಗೆ ಗಡುವು

ಒಂದನೇ ಪುಟದಿಂದ...

ಜಾತಿ ಗಣತಿ ವರದಿಯನ್ನು ತ್ವರಿತವಾಗಿ ಅಂಗೀಕರಿಸುವಂತೆ ಒಕ್ಕೂಟ ಒತ್ತಾಯಿಸುವುದಿಲ್ಲ. ಬಿಡುಗಡೆಯ ನಂತರ ಸದನದ ಹೊರಗೆ, ಒಳಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ವಿಸ್ತೃತ ಚರ್ಚೆಯ ನಂತರವಷ್ಟೇ ಅಂಗೀಕರಿಸುವ ಕುರಿತು ಸರ್ಕಾರ ಸೂಕ್ತ ನಿರ್ಧಾರ ತೆಗೆ-ದುಕೊಳ್ಳಬಹುದು ಎಂದರು.

ಎರಡು ದಶಕಗಳಿಂದ ಹಿಂದುಳಿದ ವರ್ಗಗಳ ಪರಿಷ್ಕೃತ ಪಟ್ಟಿ ಪ್ರಕಟಿಸಿಲ್ಲ. ವೈಜ್ಞಾನಿಕ ಸಮೀಕ್ಷೆಯ ಅಂಕಿಅಂಶ ಇಲ್ಲದ ಕಾರಣ ಕೆಲ ಪ್ರಬಲ ಜಾತಿಗಳು ತಮ್ಮದೇ ಹೆಚ್ಚು ಜನಸಂಖ್ಯೆ ಎಂದು ಬಿಂಬಿಸುವ ಮೂಲಕ ಸಮಾಜದಲ್ಲಿ ಗೊಂದಲ ಸೃಷ್ಟಿಸುತ್ತಾ ಬಂದಿದ್ದಾರೆ. ಇಂತಹ ಗೊಂದಲಗಳಿಗೆ ತೆರೆ ಎಳೆಯಲು ಜಾತಿ ಗಣತಿಯ ವರದಿ ಬಿಡುಗಡೆಯೊಂದೇ ದಾರಿ ಎಂದರು.

ಬಿಹಾರ, ಕರ್ನಾಟಕದ ಮಾದರಿಯಲ್ಲಿ ದೇಶದ ಎಲ್ಲ ರಾಜ್ಯಗಳಲ್ಲೂ ಜಾತಿ ಗಣತಿ ನಡೆಯಬೇಕು. ಪ್ರಸ್ತುತ ಕೆಲವೇ ಪ್ರಬಲ ಜಾತಿಗಳು ಪ್ರಾಬಲ್ಯ ಹೊಂದಿವೆ. ರಾಜ್ಯದಲ್ಲೂ ಅಂತಹ ವರ್ಗಗಳ ಜನರೇ ಮುಖ್ಯಮಂತ್ರಿಗಳಾಗಿದ್ದಾರೆ. ದೇಶದ ಸಂಪತ್ತು, ಅಧಿಕಾರ, ಅವಕಾಶಗಳು ಸಮಾನವಾಗಿ ಹಂಚಿಕೆಯಾಗಬೇಕು. ಆಗ ಮಾತ್ರ ಸಮಸಮಾಜ ನಿರ್ಮಾಣ ಸಾಧ್ಯ. ಈಗ ಹಿಂದುಳಿದ ವರ್ಗಗಳಲ್ಲೂ ಜಾಗೃತಿ ಮೂಡಿದೆ. ಮೋಸಗೊಳಿಸಲು ಸಾಧ್ಯವಿಲ್ಲ ಎಂದರು.

ಕೆಲವರು ವರದಿ ಬಿಡುಗಡೆಗೆ ವಿರೋಧ ವ್ಯಕ್ತಪಡಿಸುತ್ತಿರುವುದು ಸಮಾಜದ ಹಿತಕ್ಕಲ್ಲ, ಸ್ವಾರ್ಥಕ್ಕಾಗಿ. ಸಾಮಾಜಿಕ ನ್ಯಾಯ ಪ್ರತಿಪಾದಿಸುವ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ-ದ್ದಾರೆ. ನ್ಯಾಯ ದೊರಕಿಸುವ ಭರವಸೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿ.ಟಿ.ಲಲಿತಾ ನಾಯಕ್, ಎನ್.ವಿ.ನರಸಿಂಹಯ್ಯ, ಅನಂತ ನಾಯಕ್, ಜಿ.ಡಿ.ಗೋಪಾಲ್, ಕೆ.ವೆಂಕಟಸುಬ್ಬರಾಜು, ಆರ್. ರಾಮಕೃಷ್ಣಪ್ಪ, ಮಹಮದ್ ಯೂಸುಫ್ ಖನಿ ಇದ್ದರು.

**ಕೆ.ಎಸ್.ಈಶ್ವರಪ್ಪ ವಿರುದ್ಧ ಆಕ್ರೋಶ:** ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಅವರು ಜಾತಿ ಗಣತಿ ವರದಿಯ ಪ್ರತಿ ಸುಟ್ಟುಹಾಕಬೇಕು ಎಂದಿದ್ದಾರೆ. ಅವರೇ ಸಚಿವರಾಗಿದ್ದಾಗ ಜಾತಿ ಗಣತಿ ವರದಿ ಬಿಡುಗಡೆಗೆ ಒತ್ತಡ ಹಾಕಲು ಹಿಂದುಳಿದ ವರ್ಗಗಳ ಮುಖಂಡರನ್ನು ಬಳಸಿಕೊಂಡಿದ್ದರು. ಅಂಥವರನ್ನು ನಮ್ಮ ನಾಯಕರು ಎಂದು ನಂಬಿದ್ದು ದುರದೃಷ್ಟಕರ. ಅಂದು ಅವರು ಆಡಿದ್ದ ಮಾತುಗಳ ವಿಡಿಯೊವನ್ನು ಸಾರ್ವಜನಿಕ ಚರ್ಚೆಗೆ ಬಿಡುಗಡೆ ಮಾಡಲಾಗುವುದು ಎಂದು ರಾಮಚಂದ್ರಪ್ಪ ಹೇಳಿದರು.

## ಲಿಂಗಾಯತರ ಸಭೆ ಇಂದು

ಒಂದನೇ ಪುಟದಿಂದ...

ಜಾತಿ ಗಣತಿ ವರದಿ ಕುರಿತು ಚರ್ಚಿಸಲು ಸಭಾದ ಅಧ್ಯಕ್ಷ, ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ, ಪ್ರಧಾನ ಕಾರ್ಯದರ್ಶಿ ಹಾಗೂ ಅರಣ್ಯ ಸಚಿವ ಈಶ್ವರ ಖಂಡ್ರೆ ನೇತೃತ್ವದಲ್ಲಿ ಪದಾಧಿಕಾರಿಗಳ ಸಭೆ ನಡೆಯಲಿದೆ. ವರದಿಯ ಬಗ್ಗೆ ಯಾವ ನಿಲುವು ತೆಗೆದುಕೊಳ್ಳಬೇಕು ಎಂಬ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು. ಮುಂದಿನ ಹಂತದ ಸಭೆಗೆ ಸಮುದಾಯವನ್ನು ಪ್ರತಿನಿಧಿಸುವ ಸಚಿವರು, ಶಾಸಕರನ್ನು ಆಮಂತ್ರಿಸಲಾಗುವುದು ಎಂದು ಸಭಾದ ಮೂಲಗಳು ಹೇಳಿವೆ.

ಈಶ್ವರ ಖಂಡ್ರೆ ನೇತೃತ್ವದಲ್ಲಿ ಈಚೆಗೆ ನಡೆದಿದ್ದ ಪೂರ್ವಭಾವಿ ಸಭೆಯಲ್ಲೂ ಹೊಸ ಸಮೀಕ್ಷೆಗೆ ಒತ್ತಾಯಿಸುವ ಕುರಿತು ಮಹಾಸಭಾ ಚರ್ಚಿಸಿತ್ತು. ಮುಂದುವರಿದ ತಂತ್ರಜ್ಞಾನ ಬಳಸಿಕೊಂಡು ಎರಡು ತಿಂಗಳಲ್ಲಿ ಆಧಾರ್ ಆಧಾರಿತ ಹೊಸ ಸಮೀಕ್ಷೆ ನಡೆಸಬಹುದು ಎನ್ನುವ ಸಲಹೆಯನ್ನು ಸರ್ಕಾರಕ್ಕೆ ನೀಡಲು ನಿರ್ಧರಿಸಲಾಗಿತ್ತು.

ಲಿಂಗಾಯತಕ್ಕೆ ಪ್ರತ್ಯೇಕ ಧರ್ಮದ ಸ್ಥಾನಮಾನ ನೀಡುವ ಕುರಿತು ನಡೆದಿದ್ದ ಹೋರಾಟ ವೀರಶೈವ–ಲಿಂಗಾಯತ ಸಮುದಾಯದ ಶಾಸಕರನ್ನೇ ವಿಭಜಿಸಿತ್ತು. ಸಮುದಾಯ ಇಬ್ಭಾಗವಾಗುವ ಹಂತ ತಲುಪಿತ್ತು. ಹಾಗಾಗಿ, ಜಾತಿ ಗಣತಿ ವಿಷಯದಲ್ಲಿ ಎಚ್ಚರಿಕೆ ಹೆಜ್ಜೆ ಇಡಲು ನಿರ್ಧರಿಸಿರುವ ನಾಯಕರು, ಅಪಸ್ವರಕ್ಕೆ ಆಸ್ಪದ ನೀಡದೇ, ಎಲ್ಲ ಪಕ್ಷಗಳ ಶಾಸಕರು, ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಗ್ಗಟ್ಟು ಮೂಡಿಸುವಂತಹ ಒಮ್ಮತದ ನಿರ್ಧಾರಗಳ-ನ್ನು ತೆಗೆದುಕೊಳ್ಳಲು ಒತ್ತು ನೀಡಲಿದ್ದಾರೆ ಎನ್ನಲಾಗಿದೆ.

# ಡಿ.ಬಿ.ಚಂದ್ರೇಗೌಡ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

**ಮೂಡಿಗೆರೆ (ಚಿಕ್ಕಮಗಳೂರು):** ಹಿರಿಯ ರಾಜಕಾರಣಿ ಡಿ.ಬಿ. ಚಂದ್ರೇಗೌಡ ಅವರ ಪಾರ್ಥಿವ ಶರೀರದ ಅಂತ್ಯ ಸಂಸ್ಕಾರ ಅವರ ಹುಟ್ಟೂರು ದಾರದಹಳ್ಳಿಯ 'ಪೂರ್ಣಚಂದ್ರ' ಎಸ್ಟೇಟ್‌ನಲ್ಲಿ ಬುಧವಾರ ನೆರವೇರಿತು.

ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಚಂದ್ರೇಗೌಡ ಮಂಗಳವಾರ ಬೆಳಗಿನ ಜಾವ ಮೃತಪಟ್ಟಿದ್ದರು. ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳು ಅವರ ಅಂತಿಮ ದರ್ಶನ ಪಡೆದುಕೊಂಡರು.

ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಕೃಷಿ ಸಚಿವೆ ಶೋಭಾ ಕರಂದ್ಲಾಜೆ, ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲು ಸೇರಿ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಮುಖಂಡರು ಅಂತಿಮ ನಮನ ಸಲ್ಲಿಸಿದರು.


ತ್ರಿವರ್ಣ ಧ್ವಜವನ್ನು ಅವರ ಪಾರ್ಥಿವ ಶರೀರಕ್ಕೆ ಹೊದಿಸಲಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆ ಧ್ವಜವನ್ನು, ಚಂದ್ರೇಗೌಡರ ಪತ್ನಿ ಪೂರ್ಣಿಮಾ ಅವರಿಗೆ ಹಸ್ತಾಂತರಿಸಿ-ದರು. ಮಧ್ಯಾಹ್ನ 2 ಗಂಟೆಯ ನಂತರ ಅಂತ್ಯಕ್ರಿಯೆ ನೆರವೇರಿತು.



ಡಿ.ಬಿ. ಚಂದ್ರೇಗೌಡ ಅವರ ಪಾರ್ಥಿವ ಶರೀರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಂತಿಮ ನಮನ ಸಲ್ಲಿಸಿದರು. ಶಾಸಕರಾದ ಟಿ.ಡಿ.ರಾಜೇಗೌಡ, ಕೆ.ಎಸ್.ಆನಂದ್, ಜೆ.ಎಚ್.ಶ್ರೀನಿವಾಸ್ ಇದ್ದರು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in





❦ ಸುಭಾಷಿತ ❦

ಯಾರು ಪ್ರೀತಿಸುತ್ತಾರೋ ಅವರಿಗೆ ಮಾತ್ರ ತಿದ್ದುವ, ಶಿಕ್ಷಿಸುವ ಅಧಿಕಾರ ಇರುತ್ತದೆ.

-ರವೀಂದ್ರನಾಥ ಟ್ಯಾಗೋರ್

# ಆಹಾರಧಾನ್ಯ ಯೋಜನೆ ವಿಸ್ತರಣೆ: ಬಡತನ ತಗ್ಗಿಸಲು ವಿಫಲವಾದುದರ ಸಂಕೇತ

**ಬಡವರಿಗೆ** ಉಚಿತವಾಗಿ ಆಹಾರಧಾನ್ಯ ಒದಗಿಸುವ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆ (ಪಿಎಂಜಿಕೆಎವೈ) ವಿಸ್ತರಣೆ ಆಗುತ್ತದೆ ಎಂಬುದು ನಿರೀಕ್ಷಿತವಾಗಿತ್ತು. ಆದರೆ ಅದರ ವಿಸ್ತರಣೆಯನ್ನು ಘೋಷಿಸಿದ ಬಗೆಯು ಆಶ್ಚರ್ಯ ಮೂಡಿಸುವಂಥದ್ದು. ಯೋಜನೆಯನ್ನು ಇನ್ನೂ ಐದು ವರ್ಷಗಳ ವರೆಗೆ ವಿಸ್ತರಿಸಲಾಗುತ್ತದೆ ಎಂಬ ಘೋಷಣೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಛತ್ತೀಸಗಢದಲ್ಲಿ ಇತ್ತೀಚೆಗೆ ನಡೆದ ಚುನಾವಣಾ ರ‍್ಯಾಲಿಯೊಂದರಲ್ಲಿ ಮಾಡಿದರು. ಈ ಯೋಜನೆಯ ಅಡಿಯಲ್ಲಿ ದೇಶದ 81 ಕೋಟಿಗೂ ಹೆಚ್ಚು ಜನರಿಗೆ ತಿಂಗಳಿಗೆ ಉಚಿತವಾಗಿ 5 ಕೆ.ಜಿ.ಯಷ್ಟು ಆಹಾರಧಾನ್ಯವನ್ನು ನೀಡಲಾಗುತ್ತದೆ. ಆಹಾರಧಾನ್ಯವನ್ನು ಉಚಿತವಾಗಿ ಪಡೆಯುವ ಜನರ ಪ್ರಮಾಣವು ದೇಶದ ಗ್ರಾಮೀಣ ಪ್ರದೇಶಗಳ ಜನಸಂಖ್ಯೆಯಲ್ಲಿ ನಾಲ್ಕನೆಯ ಮೂರು ಭಾಗದಷ್ಟು ಇದೆ, ನಗರ ಪ್ರದೇಶಗಳ ಜನಸಂಖ್ಯೆಯಲ್ಲಿ ಅರ್ಧದಷ್ಟು ಇದೆ. ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರವು 2013ರಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯ ಅಡಿಯಲ್ಲಿ ಈ ಯೋಜನೆಯನ್ನು ಆರಂಭಿಸಿತ್ತು. ಬಡವರಿಗೆ ಸಬ್ಸಿಡಿ ದರದಲ್ಲಿ ಆಹಾರಧಾನ್ಯ ಒದಗಿಸುವುದು ಯೋಜನೆಯ ಉದ್ದೇಶ. 2020ರಲ್ಲಿ ಮೋದಿ ನೇತೃತ್ವದ ಸರ್ಕಾರವು ಪಿಎಂಜಿಕೆಎವೈ ಯೋಜನೆಯನ್ನು ಜಾರಿಗೆ ತಂದ ನಂತರದಲ್ಲಿ ಮೂಲ ಯೋಜನೆಯು ಬದಲಾವಣೆಗಳನ್ನು ಕಂಡಿದೆ. ಯೋಜನೆಯನ್ನು 2020ರ ಡಿಸೆಂಬರ್‌ನಲ್ಲಿ ಒಂದು ವರ್ಷದ ಅವಧಿಗೆ ವಿಸ್ತರಿಸಲಾಯಿತು. ಏಕೆಂದರೆ, ದೇಶವು ಕೋವಿಡ್ ಸಾಂಕ್ರಾಮಿಕದ ಕೆಟ್ಟ ಪರಿಣಾಮಗಳಿಂದ ಆಗಷ್ಟೇ ಹೊರಬರುತ್ತಿತ್ತು. ನಂತರದಲ್ಲಿ, ಈ ಯೋಜನೆಯು ಮತ್ತೆ ಮತ್ತೆ ವಿಸ್ತರಣೆ ಕಾಣುತ್ತಿದೆ.



ಯೋಜನೆ ವಿಸ್ತರಣೆಯ ಘೋಷಣೆಯನ್ನು ಚುನಾವಣಾ ರ‍್ಯಾಲಿಯೊಂದರಲ್ಲಿ ಮಾಡಿರುವುದು ಸರಿಯಾದ ನಡೆ ಅಲ್ಲ

ಈ ಬಾರಿ ಈ ಯೋಜನೆಯನ್ನು ಐದು ವರ್ಷಗಳ ಅವಧಿಗೆ ವಿಸ್ತರಿಸಲಾಗಿದೆ. ಯೋಜನೆಯ ವಿಸ್ತರಣೆಯ ಘೋಷಣೆಯನ್ನು ಚುನಾವಣಾ ರ‍್ಯಾಲಿಯೊಂದರಲ್ಲಿ ಮಾಡಿರುವುದು ಸರಿಯಾದ ನಡೆ ಅಲ್ಲ. ಏಕೆಂದರೆ, ಈ ರೀತಿ ಮಾಡುವುದು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ ಆಗುತ್ತದೆ. ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ವಿವಿಧ ಭರವಸೆಗಳನ್ನು ನೀಡುವುದು ಸಹಜ. ಆದರೆ ಪ್ರಧಾನಿಯವರು ತಮ್ಮ ಸರ್ಕಾರದ ತೀರ್ಮಾನವೊಂದನ್ನು ರ‍್ಯಾಲಿಯಲ್ಲಿ ಘೋಷಿಸಿರುವುದು ಮತದಾರರ ಮೇಲೆ ಪ್ರಭಾವ ಬೀರಬಲ್ಲದು ಎಂದು ದೂರಲಾಗಿದೆ. ಇದನ್ನು ವಿರೋಧ ಪಕ್ಷಗಳು ಚುನಾವಣಾ ಆಯೋಗದ ಗಮನಕ್ಕೆ ತಂದಿವೆ. ಪ್ರಧಾನಿಯವರು ಈ ಯೋಜನೆಯನ್ನು ತಮ್ಮ ನೇತೃತ್ವದ ಸರ್ಕಾರದ ‘ಉಡುಗೊರೆ’ ಎಂಬಂತೆ ಚಿತ್ರಿಸಿರುವುದಕ್ಕೆ ಕೂಡ ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿವೆ. ಯುಪಿಎ ಸರ್ಕಾರವು ಆಹಾರ ಭದ್ರತಾ ಕಾಯ್ದೆಯನ್ನು ರೂಪಿಸಿದ್ದು ಸಾಮಾಜಿಕ ಭದ್ರತಾ ಯೋಜನೆಯ ರೂಪದಲ್ಲಿ. ಆಗ ಬಿಜೆಪಿಯು ಈ ಯೋಜನೆಯನ್ನು ವಿರೋಧಿಸಿತ್ತು. ಗುಜರಾತಿನ ಮುಖ್ಯಮಂತ್ರಿ ಆಗಿದ್ದ ಮೋದಿ ಅವರು, ಆಗ ಪ್ರಧಾನಿ ಮನಮೋಹನ್ ಸಿಂಗ್ ಅವರಿಗೆ ಪತ್ರ ಬರೆದು, ಯೋಜನೆಯು ‘ಕಾರ್ಯರೂಪಕ್ಕೆ ತರಲು ಅಸಾಧ್ಯವಾದ ಶಾಸನಾತ್ಮಕ ಹೊಣೆಗಾರಿಕೆಯನ್ನು ರಾಜ್ಯ ಸರ್ಕಾರಗಳು ಹಾಗೂ ಕೇಂದ್ರ ಸರ್ಕಾರಕ್ಕೆ ವಹಿಸಿದೆ’ ಎಂದು ಹೇಳಿದ್ದರು. ವರ್ಷಗಳು ಉರುಳಿದ ನಂತರದಲ್ಲಿ ಇದು ಒಂದು ರಾಜಕೀಯ ಯೋಜನೆಯಾಗಿ ಬದಲಾಗಿದೆ. ಮೋದಿ ನೇತೃತ್ವದ ಸರ್ಕಾರವು ಈ ಯೋಜನೆಯನ್ನು ಒಪ್ಪಿಕೊಂಡಿದೆ, ಅದನ್ನು ವಿಸ್ತರಿಸಿದೆ, ಯೋಜನೆ ತನ್ನದು ಎಂದು ಹೇಳಿಕೊಳ್ಳುತ್ತಿದೆ. ಇದನ್ನು ಈಗ ಚುನಾವಣಾ ಕಾಲದ ‘ಕೊಡುಗೆ’ ಎಂಬಂತೆ ಬಳಸಿಕೊಳ್ಳಲಾಗುತ್ತಿದೆ.

ಯೋಜನೆ ವಿಸ್ತರಿಸುತ್ತಿರುವುದನ್ನು, ಹಿಂದಿನ ಒಂಬತ್ತು ವರ್ಷಗಳ ಅವಧಿಯಲ್ಲಿ ಬಡತನದ ಮಟ್ಟ ಕಡಿಮೆಯಾಗಿಲ್ಲ ಎಂಬುದನ್ನು ಪ್ರಧಾನಿ ಮೋದಿ ಅವರು ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ ಎಂಬಂತೆ ಕಾಣಬೇಕಿದೆ. ದೇಶದ ಆರ್ಥಿಕ ಬೆಳವಣಿಗೆ ಕುರಿತ ಹೇಳಿಕೆಗಳ ಬಗ್ಗೆ ಇದು ಅನುಮಾನಗಳನ್ನು ಮೂಡಿಸುತ್ತದೆ. ಆಹಾರ ಭದ್ರತಾ ಯೋಜನೆಯನ್ನು ಜಾರಿಗೆ ತಂದಾಗ, ವರಮಾನದ ಮಟ್ಟ ಹೆಚ್ಚಿದಂತೆಲ್ಲ ಯೋಜನೆಯ ವ್ಯಾಪ್ತಿಯು ಕಡಿಮೆ ಆಗುತ್ತಾ ಬರುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಈ ಯೋಜನೆಯ ಫಲಾನುಭವಿಗಳ ವರಮಾನವು ಹೆಚ್ಚಾಗಿಲ್ಲ, ಯೋಜನೆಗೆ ತೆಗೆದಿರಿಸುವ ಹಣದ ಮೊತ್ತವು ಹೆಚ್ಚಾಗಿದೆ. ಈಗ ಈ ಯೋಜನೆಗೆ ವರ್ಷಕ್ಕೆ ₹ 2 ಲಕ್ಷ ಕೋಟಿ ಅಗತ್ಯವಿದೆ. ಇದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ದೇಶದ ಸ್ಥಾನವು ಕುಸಿದಿರುವುದು ವಾಸ್ತವಕ್ಕೆ ದೂರವಾದ ಅಂಕಿ-ಅಂಶವನ್ನು ಆಧರಿಸಿದೆ ಎಂಬ ಟೀಕೆಗಳನ್ನೂ ಮಾಡುತ್ತಿದೆ ಎನ್ನುವುದು ಇಲ್ಲಿ ಉಲ್ಲೇಖಾರ್ಹ.

## ದಿನದ ಟ್ವೀಟ್

### ಸ್ವಾಗತಾರ್ಹ ಹೇಳಿಕೆ



**ಮಹಿಳೆಯರು ಶಿಕ್ಷಣ ಪಡೆಯುವುದು ಜನಸಂಖ್ಯೆ ನಿಯಂತ್ರಣದಲ್ಲಿ ದೊಡ್ಡ ಪಾತ್ರ ವಹಿಸುತ್ತದೆ ಎಂಬ ಬಿಹಾರದ ಮುಖ್ಯಮಂತ್ರಿಯವರ ಹೇಳಿಕೆ ಅತ್ಯಂತ ಸೂಕ್ತವಾಗಿದೆ. ಇಲ್ಲಷ್ಟೇ ಅಲ್ಲ, ಜಗತ್ತಿನಲ್ಲಿ ಎಲ್ಲೇ ಜನಸಂಖ್ಯೆ ನಿಯಂತ್ರಣಕ್ಕೆ ಬಂದಿದ್ದರೂ ಅದಕ್ಕೆ ಮೊದಲ ಕಾರಣ, ಹೆಣ್ಣುಮಕ್ಕಳು ಶಿಕ್ಷಣ ಪಡೆದದ್ದು. ಉತ್ತರದ ರಾಜ್ಯಗಳು ಜನಸಂಖ್ಯಾ ಸ್ಫೋಟದಿಂದ ನರಳುತ್ತಿವೆ. ಈ ಹೊತ್ತಿನಲ್ಲಿ ಅವರ ಹೇಳಿಕೆಯನ್ನು ಸ್ವಾಗತಿಸಬೇಕು.**

**ವಸಂತ ಶೆಟ್ಟಿ,** ಬರಹಗಾರ

## ಕಿಡಿನುಡಿ

**ರಾಜ್ಯದಲ್ಲಿ ಮುಂಗಾರು ಬೆಳೆ ಸಂಪೂರ್ಣ ಹಾಳಾಗಿಹೋದರೂ ಕೇಂದ್ರದಿಂದ ಒಂದು ನಯಾಪೈಸೆ ಬಿಡುಗಡೆಯಾಗಿಲ್ಲ. ಹೀಗಾಗಿ, ಯಾರ ಖಜಾನೆ ಖಾಲಿಯಾಗಿದೆ ಎಂಬುದನ್ನು ಯಡಿಯೂರಪ್ಪ ಅವರೇ ಹೇಳಬೇಕು.**

(ರಾಜ್ಯ ಸರ್ಕಾರದ ಬೊಕ್ಕಸ ಖಾಲಿಯಾಗಿದೆ ಎಂಬ ಬಿಜೆಪಿ ಮುಖಂಡ ಬಿ.ಎಸ್.ಯಡಿಯೂರಪ್ಪ ಅವರ ಹೇಳಿಕೆಗೆ ಪ್ರತಿಕ್ರಿಯೆ)



**ಎಚ್.ಕೆ.ಪಾಟೀಲ,** ಪ್ರವಾಸೋದ್ಯಮ ಸಚಿವ

## 25 ವರ್ಷಗಳ ಹಿಂದೆ

ಸೋಮವಾರ, 9-11-1998

- **ಬಿಹಾರದಲ್ಲಿ ಮಾಫಿಯಾ ರಾಜ್ಯ- ಪ್ರಧಾನಿ ವಾಜಪೇಯಿ**

ಪಟ್ನಾ, ನ. 8 (ಯುಎನ್ಐ)- ಬಿಹಾರದಲ್ಲಿ ಕಾನೂನು, ಶಾಂತಿಪಾಲನೆ ಪರಿಸ್ಥಿತಿ ಏನೇನೂ ತೃಪ್ತಿಕರವಾಗಿಲ್ಲ ಎಂದು ಪ್ರಧಾನಿ ಎ.ಬಿ.ವಾಜಪೇಯಿ ಅವರು ಇಂದು ಇಲ್ಲಿ ಹೇಳಿದರು.

ಬಿಹಾರದಲ್ಲಿ ಈಗಲೂ ‘ಮಾಫಿಯಾ ರಾಜ್ಯ’ವೇ ಇದೆ ಎಂದು, ಬುದ್ಧ ಮಹೋತ್ಸವ ಸಮಾರೋಪದಲ್ಲಿ ಭಾಗವಹಿಸಲು ಗಯಾಕ್ಕೆ ಹೋಗುತ್ತಿದ್ದ ಮಾರ್ಗದಲ್ಲಿ ಇಲ್ಲಿನ ವಿಮಾನ ನಿಲ್ದಾಣದಲ್ಲಿ ಅವರು ಪತ್ರಕರ್ತರಿಗೆ ತಿಳಿಸಿದರು. ಆದರೆ ಬಿಹಾರದ ಪರಿಸ್ಥಿತಿ ಬಗ್ಗೆ ಇನ್ನಷ್ಟು ಅಭಿಪ್ರಾಯ ನೀಡಲು ಅವರು ನಿರಾಕರಿಸಿದರು.

ಸಂವಿಧಾನದ 356ನೇ ವಿಧಿಯ ಅನುಸಾರ, ಬಿಹಾರದ ರಾಬ್ಡಿ ದೇವಿ ನೇತೃತ್ವದ ಸರ್ಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಡಳಿತ ಜಾರಿ ಮಾಡುವ ಪ್ರಸ್ತಾವವನ್ನು ಇನ್ನೊಮ್ಮೆ ರಾಷ್ಟ್ರಪತಿಯವರಿಗೆ ಕಳುಹಿಸಲು ಕೇಂದ್ರ ಸರ್ಕಾರ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದರು.

- **ಮುಜೀಬುರ್ ಹತ್ಯೆ: 15 ಮಂದಿಗೆ ಮರಣದಂಡನೆ**

ಢಾಕಾ, ನ. 8 (ಯುಎನ್ಐ): ‘ಬಂಗಬಂಧು’ ಮುಜೀಬುರ್ ರೆಹಮಾನ್ ಹತ್ಯೆ ಪ್ರಕರಣದ ಆರೋಪಿಗಳಾದ 15 ಮಂದಿ ಸೇನಾಧಿಕಾರಿಗಳನ್ನು ಬಾಂಗ್ಲಾ ದೇಶದ ಸೆಷನ್ಸ್ ನ್ಯಾಯಾಲಯ ಇಂದು ಅಪರಾಧಿಗಳು ಎಂದು ತೀರ್ಪು ನೀಡಿ, ಅವರಿಗೆ ಮರಣದಂಡನೆ ವಿಧಿಸಿತು.

ಇಲ್ಲಿನ ಕೇಂದ್ರ ಕಾರಾಗೃಹದ ಪಕ್ಕದಲ್ಲಿ ರಚಿಸಲಾದ ತಾತ್ಕಾಲಿಕ ನ್ಯಾಯಾಲಯದಲ್ಲಿ ನ್ಯಾಯಾಧೀಶ ಕಾಜಿ ಗುಲಾಂ ರಸೂಲ್ ಈ ತೀರ್ಪು ನೀಡಿ, ಈ ಅಪರಾಧಿಗಳನ್ನು ಗುಂಡುಹಾರಿಸಿ ಕೊಲ್ಲಬೇಕು, ಅಂಥ ಸೌಲಭ್ಯ ಇಲ್ಲವೆಂದಾದರೆ ಮಾಮೂಲಿನಂತೆ ನೇಣುಗಂಬಕ್ಕೆ ಏರಿಸಬೇಕು ಎಂದರು.

## 50 ವರ್ಷಗಳ ಹಿಂದೆ

ಶುಕ್ರವಾರ, 9-11-1973

- **ಕೇಂದ್ರ ನೀರಾವರಿ ಸಚಿವ ಡಾ. ಕೆ.ಎಲ್.ರಾವ್ ರಾಜೀನಾಮೆ**

ನವದೆಹಲಿ, ನ. 8- ಕೇಂದ್ರದ ನೀರಾವರಿ ಮತ್ತು ವಿದ್ಯುಚ್ಛಕ್ತಿ ಶಾಖೆ ಸಚಿವ ಡಾ. ಕೆ.ಎಲ್. ರಾವ್ ಅವರು ಇಂದು ಬೆಳಿಗ್ಗೆ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು.

ಕಳೆದ ವರ್ಷ ರಾಷ್ಟ್ರದ ಇಡೀ ಆರ್ಥಿಕ ವ್ಯವಸ್ಥೆಯ ಬುನಾದಿಯನ್ನೇ ಕದಡಿದ ತೀವ್ರ ವಿದ್ಯುಚ್ಛಕ್ತಿ ಅಭಾವದಿಂದ ಕೈಗಾರಿಕಾ ಉತ್ಪಾದನೆ ಕುಂಠಿತಗೊಂಡ ಹಿನ್ನೆಲೆಯಲ್ಲಿ, ಡಾ. ರಾವ್ ಅವರು ಪಾರ್ಲಿಮೆಂಟ್ ಒಳಗೂ ಮತ್ತು ಹೊರಗೂ ಬಹಳಷ್ಟು ಟೀಕೆಗಳಿಗೆ ಗುರಿಯಾಗಿದ್ದರು.

- **ಸೀಮೆಎಣ್ಣೆ ಬೆಲೆ 10 ಪೈಸೆ ಇಳಿತ**

ನವದೆಹಲಿ, ನ. 8- ರಾಷ್ಟ್ರದಾದ್ಯಂತ ಒತ್ತಾಯಕ್ಕೆ ಮಣಿದ ಕೇಂದ್ರ ಸರ್ಕಾರವು ಇಂದು ಸೀಮೆಎಣ್ಣೆ ಮೇಲಿನ ಎಕ್ಸೈಸ್ ಸುಂಕವನ್ನು ಲೀಟರ್‌ಗೆ ಹತ್ತು ಪೈಸೆ ಇಳಿಸುವ ನಿರ್ಧಾರವನ್ನು ಕೈಗೊಂಡಿತು.

ಇಳಿಸಿದ ದರ ಈಗಿಂದೀಗಲೇ ಜಾರಿಗೆ ಬರುತ್ತದೆ. ಇದರಿಂದ, ನವೆಂಬರ್ 3ರಂದು 28 ಪೈಸೆಗಳಿಗೆ ಏರಿಸಿದ್ದ ಸುಂಕದ ದರವು ಈಗ ಲೀಟರ್‌ಗೆ 18 ಪೈಸೆಗೆ ಇಳಿದಂತಾಗಿದೆ.

ಮಲಿನಗಾಳಿ ತುಂಬಿಕೊಳ್ಳಲು ನಮ್ಮಲ್ಲಿರುವಷ್ಟು ಶ್ವಾಸಕೋಶಗಳು ಬೇರಾವ ದೇಶದಲ್ಲೂ ಇಲ್ಲ

# ಹೊಗೆಬಣವೆಯಲ್ಲಿ ಸೂಜಿಗಳು



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

**ಮೊನ್ನೆ** ಭಾನುವಾರ ಆಗ್ರಾದ ತಾಜಮಹಲ್ ಕಣ್ಮರೆಯಾಯಿತು. ಹಿಂದೆ 2000ದ ನವೆಂಬರ್ 8ರಂದು ಖ್ಯಾತ ಜಾದೂಗಾರ ಪಿ.ಸಿ. ಸೊರ್ಕಾರ್ (ಜ್ಯೂ) ಎರಡು ನಿಮಿಷಗಳ ಕಾಲ ಇದನ್ನು ಮಾಯ ಮಾಡಿದ್ದು ದಾಖಲೆಯಾಗಿತ್ತು. ಅದಕ್ಕಿಂತ ತುಸು ಮುಂಚೆ 1998ರಲ್ಲಿ ಅಮೆರಿಕದ ಜಾದೂಗಾರ ಫ್ರಾಂಝ್ ಹರಾರಿ ಆಗ್ರಾಕ್ಕೆ ಬಂದು ಒಂದು ನಿಮಿಷದ ಮಟ್ಟಿಗೆ ತಾಜಮಹಲನ್ನು ಮಾಯ ಮಾಡಿದ್ದ.

ಈ ಬಾರಿ ಅಂಥ ಕಣ್ಕಟ್ಟು, ಜಾದೂಗೀದೂ ಏನೂ ಇರಲಿಲ್ಲ. ಇಡೀ ಆಗ್ರಾಕ್ಕೆ ಕಂಬಳಿ ಹೊದೆಸಿದಂತೆ ಹೊಂಜು (ಹೊಗೆ + ಮಂಜು) ಆವರಿಸಿತ್ತು. ಆಗ್ರಾ ಒಂದೇ ಅಲ್ಲ, ಉತ್ತರ ಭಾರತದ ಆರು ರಾಜ್ಯಗಳ 133 ನಗರಗಳಲ್ಲಿ ವಾಯುಮಾಲಿನ್ಯವು ಸುರಕ್ಷಾ ಮಟ್ಟಕ್ಕಿಂತ ಅದೆಷ್ಟೊ ಪಟ್ಟು ಮೇಲಕ್ಕೇರಿ ಕೂತಿದೆ. ಹಾಗೆಂದು ಇದು ಈಗಿನ ವಿದ್ಯಮಾನ ಏನಲ್ಲ; ಕಳೆದ ಹತ್ತು ವರ್ಷಗಳಿಂದ ದೀಪಾವಳಿಯ ಆಸುಪಾಸಿನ ದಿನಗಳಲ್ಲಿ ಇದೇ ಕತೆ. ಅದರಲ್ಲೂ ದಿಲ್ಲಿಯದು ಎಲ್ಲಕ್ಕಿಂತ ಲಜ್ಜಾಸ್ಪದ ಕತೆ. 2017ರಲ್ಲಿ ದಟ್ಟ ಹೊಂಜಿನಿಂದಾಗಿ ಶ್ರೀಲಂಕಾ ಕ್ರಿಕೆಟ್ ತಂಡ ದಿಲ್ಲಿಯಲ್ಲಿ ಮುಖವಾಡ ಧರಿಸಿ ಆಟಕ್ಕೆ ಇಳಿದಿತ್ತು. ಎರಡನೆಯ ದಿನ ವಿರಾಟ್ ಕೊಹ್ಲಿ 230-35-40 ರನ್ ಪೇರಿಸುತ್ತಿದ್ದಾಗ ಶ್ರೀಲಂಕಾ ಫೀಲ್ಡರ್‌ಗಳು ವಾಂತಿಗೀಂತಿ ಮಾಡಿಕೊಂಡು, ವೈದ್ಯರನ್ನು ಕರೆಸುವಂತಾಗಿ ಆಟವನ್ನು ಅರ್ಧಕ್ಕೇ ನಿಲ್ಲಿಸಲು ಒತ್ತಾಯ ಬಂದಾಗ ಕೊಹ್ಲಿ ಅದನ್ನು ವಿರೋಧಿಸಿ ಪ್ಯಾಡ್ ಸಮೇತ ಧರಣಿ ಕೂತು ಏನೆಲ್ಲ ರಂಪಾಟ ಆಗಿತ್ತು (ಮೊನ್ನೆ ಶನಿವಾರವೂ ಶ್ರೀಲಂಕಾ ತಂಡ ವಾಯುಮಾಲಿನ್ಯಕ್ಕೆ ಬೆದರಿ ಅಭ್ಯಾಸ ಮಾಡಲು ಕಣಕ್ಕಿಳಿಯಲಿಲ್ಲ).

ದಿಲ್ಲಿಯಲ್ಲಿ ಮಾಲಿನ್ಯ ನಿಯಂತ್ರಣದ ಕೊನೆಯ ಅಸ್ತ್ರವಾಗಿ ಈ ಬಾರಿ ಮತ್ತೆ ಸಮ-ಬೆಸ ಸಂಖ್ಯೆಯ ವಾಹನಗಳ ನಿಯಮವನ್ನು ಜಾರಿಗೆ ತರಲಾಗುತ್ತಿದೆ. ಶಾಲೆ-ಕಾಲೇಜುಗಳು ಬಂದ್; ಕಾರ್ಖಾನೆಗಳು ಬಂದ್; ಕಟ್ಟಡ ನಿರ್ಮಾಣ, ರಸ್ತೆ ರಿಪೇರಿ ಬಂದ್. ಗಡಿಯಾಚೆಯಿಂದ ಭಾರಿ ವಾಹನಗಳ ಪ್ರವೇಶಕ್ಕೆ ತಡೆ; ಕ್ರೀಡಾಂಗಣದಲ್ಲಿ ಪಟಾಕಿ ಸಿಡಿತಕ್ಕೆ ತಡೆ. ಆದರೂ ವಾಯುವಿನ ಗುಣಮಟ್ಟದ ಸೂಚ್ಯಂಕ (ಎಕ್ಯುಐ) ತಗ್ಗುವ ಲಕ್ಷಣ ಕಾಣುತ್ತಿಲ್ಲ.

ಅಂದಹಾಗೆ, ಗಾಳಿಯ ಗುಣಮಟ್ಟವನ್ನು ಆರು ಹಂತಗಳಲ್ಲಿ ವಿಂಗಡಿಸುತ್ತಾರೆ: 0-50 ಅತ್ಯುತ್ತಮ (ದಟ್ಟ ಹಸಿರು); 51-100 ಉತ್ತಮ (ಹಳದಿ), 101-150 ಕೆಲವರಿಗೆ ಅಪಾಯ (ಕೇಸರಿ), 151-200 ಅಪಾಯ (ಕೆಂಪು), 201-300 ಜಾಸ್ತಿ ಅಪಾಯ (ನೇರಳೆ), 301ಕ್ಕಿಂತ ಹೆಚ್ಚಿನದು ತೀವ್ರ ಅಪಾಯ (ಕಾಫಿಬಣ್ಣ), ಹೀಗೆ. ನಿನ್ನೆ ದಿಲ್ಲಿಯ ಆನಂದ ವಿಹಾರ್ ಎಂಬಲ್ಲಿ ಎಕ್ಯುಐ 990ಕ್ಕೇರಿತ್ತು. ಭಾರತ ತನ್ನದೇ ಪ್ರತ್ಯೇಕ (ತುಸು ಸಡಿಲದ) ಗುಣಮಟ್ಟ ಸೂಚ್ಯಂಕವನ್ನು ಸಿದ್ಧಪಡಿಸಿದ್ದು, ಅದರ ಪ್ರಕಾರ 400ರ ನಂತರದ್ದು ಮಾತ್ರ ಅಪಾಯಕಾರಿ ಎಂದು ಗುರುತಿಸಲಾಗುತ್ತಿದೆ. ಯಾವ ಸೂಚ್ಯಂಕದ ಪ್ರಕಾರ ನೋಡಿದರೂ ಉತ್ತರ ಭಾರತದ ಎಲ್ಲ 133 ನಗರಗಳಲ್ಲೂ ಕೆಂಪು, ನೇರಳೆ, ಕಾಫಿಬಣ್ಣದ ಚೌಕಳಿಗಳೇ ಕಾಣಿಸುತ್ತಿವೆ. ಎಲ್ಲಿ ನೋಡಿದರೂ ಕೋವಿಡ್ ಕಾಲದ ಮುಖವಾಡಗಳೇ ಕಾಣುತ್ತಿವೆ.

ಉತ್ತರ ಭಾರತದ ಗಾಳಿ ಅಷ್ಟು ಕೊಳೆಯಾಗಿರಲು ಮುಖ್ಯ ಕಾರಣ ಏನೆಂದರೆ, ಅಲ್ಲೆಲ್ಲ ಜನಸಾಗರ ದಟ್ಟವಾಗಿ ಇದೆಯೇ ಹೊರತೂ ಸಾಗರದ ತಟ ಇಲ್ಲ. ಗೋಡೆಯಂತೆ ಆಚೆ ಹಿಮಾಲಯ ನಿಂತಿದೆ. ಹಾಗಾಗಿ ಚಳಿಗಾಲ ಬಂತೆಂದರೆ ಗಾಳಿಯ ಸಂಚಾರ ತೀರ ಕಡಿಮೆಯಾಗುತ್ತದೆ. ಸಾಲದ್ದಕ್ಕೆ ಕಲ್ಲಿದ್ದಲಿನ ಬಳಕೆ ಜಾಸ್ತಿ ಇರುವುದರಿಂದ ಹೊಗೆ ಎಲ್ಲ ಊರುಗಳಲ್ಲೂ ಕಾಣುತ್ತದೆ. ಎಲ್ಲಕ್ಕಿಂತ ಮುಖ್ಯ ಕಾರಣ ಏನೆಂದರೆ, ಮುಂಗಾರಿನ ಭತ್ತದ ಕೊಯ್ಲು ಮುಗಿಸಿದ ತಕ್ಷಣವೇ ಹಿಂಗಾರಿಗೆ ಗೋಧಿಯ ಬಿತ್ತನೆಗೆಂದು ಭತ್ತದ ಕೂಳೆಗಳಿಗೆ ಬೆಂಕಿ ಕೊಡುತ್ತಾರೆ. ಹೊಗೆ ಮತ್ತು ಮಂಜು ಎರಡೂ ಸೇರಿ ತಾಜಮಹಲ್ ಅಷ್ಟೇಕೆ, ಎಲ್ಲ ಐತಿಹಾಸಿಕ ಕೋಟೆ-ಕಟ್ಟಡಗಳಿಗೂ ಹೊಂಜಿನ ಚಾದರ ಹೊದೆಸಿದಂತಾಗುತ್ತದೆ. ವಿಡಿಯೊ ಗ್ರಾಫರ್‌ಗಳೂ ಪರದಾಡುವಂತಾಗಿದೆ. ರಾಷ್ಟ್ರಪತಿ ಭವನವನ್ನೊ, ಕೆಂಪುಕೋಟೆಯನ್ನೊ ದೂರದಿಂದ ಚಿತ್ರಿಸಹೋದರೆ ಏನೂ ಕಾಣುವುದಿಲ್ಲ. ತೀರ ಸಮೀಪಕ್ಕೆ ಹೋದರೆ ಇಡೀ ಚಿತ್ರಣ ಸಿಗುವುದಿಲ್ಲ.

ದಿಲ್ಲಿಯ ಕೊಳೆಗಾಳಿಯನ್ನು ನಿಭಾಯಿಸಲು ವಿಜ್ಞಾನಿಗಳು, ತಂತ್ರಜ್ಞರು ಸೂಚಿಸಿದ ಉಪಾಯಗಳನ್ನೆಲ್ಲ ಜಾರಿಗೆ ತರಲು ಸರ್ಕಾರಗಳೇನೋ ಯತ್ನಿಸುತ್ತಿವೆ. ಕಲ್ಲಿದ್ದಲನ್ನು ಉರಿಸುವ ಕಾರ್ಖಾನೆಗಳನ್ನು, ಉಷ್ಣವಿದ್ಯುತ್ ಸ್ಥಾವರಗಳನ್ನು ದೂರ ಸಾಗಿಸಲಾಗಿದೆ. ರಸ್ತೆಗೆ ತುಂತುರು ಸಿಂಚನ ನಡೆಯುತ್ತಿದೆ. ಬೇಹುಲ್ಲನ್ನು ಸುಟ್ಟ ಹೊಗೆಯೇ ಮಾಲಿನ್ಯಕ್ಕೆ ಮುಖ್ಯ (ಶೇ 47ರಷ್ಟು) ಕಾರಣ ಎಂಬುದು ಹೊಗೆಕಣಗಳ ಪರೀಕ್ಷೆಯ ನಂತರ ಗೊತ್ತಾಗಿದೆ. ಅದನ್ನು ನಿಲ್ಲಿಸುವುದು ಹೇಗೆ? ಭತ್ತದ ಬಿತ್ತನೆಯನ್ನು ಹಿಂದಕ್ಕೆ ಹಾಕಲು ಸಾಧ್ಯವಿಲ್ಲ ಅಥವಾ ಗೋಧಿಯ ಬಿತ್ತನೆಯನ್ನು ಮುಂದಕ್ಕೆ ಹಾಕಲು ಸಾಧ್ಯವಿಲ್ಲ. ನೀರಿರಬೇಕಲ್ಲ? ಕೊಳವೆಬಾವಿಗಳಿಂದ ನೀರೆತ್ತಲು ಹೋದರೆ ಡೀಸೆಲ್ ಹೊಗೆಯ ಹಾವಳಿ (ಜಾಸ್ತಿ ನೀರನ್ನು ಬೇಡುವ ‘ಪೂಸಾ44’ ತಳಿಯ ಭತ್ತಕ್ಕೆ ನಿಷೇಧ ಹಾಕಲಾಗಿದೆ). ಭತ್ತದ ಕೂಳೆಯನ್ನು ಪ್ರತ್ಯೇಕ ಕಟಾವು ಮಾಡಿ ಹುಲ್ಲನ್ನು ಪ್ಯಾಕ್ ಮಾಡಬಲ್ಲ ಸಾವಿರಾರು ‘ಬೇಲರ್’ ಯಂತ್ರಗಳನ್ನು ವಿತರಿಸಲಾಗಿದೆ, ಆದರೆ ಅವು ಕೂಳೆಯನ್ನು ಅರೆಬರೆ ಕತ್ತರಿಸುತ್ತವೆ. ಅರ್ಧಕ್ಕರ್ಧ ಕೆಟ್ಟು ಕೂತಿವೆ (ಹಾಗಾಗಿ ಸದ್ಯ ಅವು ಡೀಸೆಲ್ ಹೊಗೆಯನ್ನು ಉಗುಳುತ್ತಿಲ್ಲ!). ಕೂಳೆಯನ್ನು ಕೊಳೆಯಿಸಿ ಇಥೆನಾಲ್ ತಯಾರಿಸುವ ಘಟಕಗಳಿವೆ. ಆದರೆ ಅವು ಊರೂರಲ್ಲಿಲ್ಲ, ದೂರದಲ್ಲಿವೆ.

ಹೊಂಜಿನ ಜೊತೆಜೊತೆಗೆ ಮಾಲಿನ್ಯ ನಿಯಂತ್ರಣ ಕುರಿತ ರಾಜಕೀಯ ವಿವಾದಗಳ ಹೊಗೆಯೂ ದಿಲ್ಲಿಯನ್ನು ದಟ್ಟ ಆವರಿಸಿದೆ. ಹರಿಯಾಣ ಮತ್ತು ಉತ್ತರಪ್ರದೇಶದ ಸರ್ಕಾರಗಳನ್ನು ಆಮ್ ಆದ್ಮಿ ಪಕ್ಷ ದೂಷಿಸುತ್ತಿದೆ. ಅಲ್ಲಿನ ಡೀಸೆಲ್ ವಾಹನಗಳ ಹೊಗೆ ದಿಲ್ಲಿಗೆ ಬರುತ್ತಿದೆಯಂತೆ. ದಿಲ್ಲಿ ಮತ್ತು ಪಂಜಾಬ್‌ನ ಸರ್ಕಾರಗಳನ್ನು ಬಿಜೆಪಿ ದೂಷಿಸುತ್ತಿದೆ. ಈ ನಡುವೆ ರಾಜಸ್ಥಾನದ (ಕಾಂಗ್ರೆಸ್ ಆಡಳಿತದ) ಹೊಗೆಯೂ ದಿಲ್ಲಿಗೆ ತಲುಪುತ್ತಿದೆ. ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ದಿಲ್ಲಿಯನ್ನು ಅದರ ಪಾಡಿಗೆ ಬಿಟ್ಟು ಚುನಾವಣಾ ಪ್ರಚಾರಕ್ಕೆ ಹೋಗಿದ್ದೇಕೆಂದು ಕಾಂಗ್ರೆಸ್ ದೂರುತ್ತಿದೆ. ವಿವಾದಗಳ ಬಣವೆಯಲ್ಲಿ ಪ್ರತಿಪಕ್ಷಗಳ ವೈಫಲ್ಯದ ಸೂಜಿಗಳನ್ನು ಹುಡುಕುವ ಪೈಪೋಟಿ ಎಲ್ಲ ಪಕ್ಷಗಳಲ್ಲೂ ಕಾಣುತ್ತಿದೆ. ಪರಿಸರ ರಕ್ಷಣೆಗೆ ಹಣ ಬಿತ್ತನೆ ಆಗುತ್ತಿದೆ ವಿನಾ ಜನರ ಪಾಲುದಾರಿಕೆ ಕಾಣುತ್ತಿಲ್ಲ.

‘ಜಗತ್ತಿನ ಅತ್ಯಂತ ದಟ್ಟ ಕೊಳಕು ಗಾಳಿಯ 14 ನಗರಗಳೆಲ್ಲ ಒಂದೇ ದೇಶದಲ್ಲಿವೆ’ ಎಂದು ಭಾರತವನ್ನು ಹೆಸರಿಸಿ 2018ರ ಮೇ ತಿಂಗಳಲ್ಲಿ ವಿಶ್ವ ಸ್ವಾಸ್ಥ್ಯ ಸಂಸ್ಥೆ (ಡಬ್ಲ್ಯುಎಚ್ಒ) ಹೇಳಿತ್ತು. ಅಂಥ ಸಮೀಕ್ಷೆಯನ್ನು ಈಗ ನಡೆಸಿದರೆ ಇನ್ನಷ್ಟು ನಗರಗಳು ಸೇರ್ಪಡೆ ಆಗುತ್ತಿದ್ದವು. ಯಾವ ಯಾವ ನಗರಗಳಲ್ಲಿ ಶ್ವಾಸಕೋಶದ ಕಾಯಿಲೆಗಳಿಗೆ ಸಂಬಂಧಿಸಿದ ಔಷಧಗಳು ಮತ್ತು ಉಪಕರಣಗಳ ಮಾರಾಟ ಯಾವ ತಿಂಗಳುಗಳಲ್ಲಿ, ಎಷ್ಟು ವೇಗದಲ್ಲಿ ಹೆಚ್ಚುತ್ತಿದೆ ಎಂಬ ಸಂಖ್ಯಾಲೇಖವನ್ನು ಯಾವ ಸಂಸ್ಥೆಯೂ ಸಿದ್ಧಪಡಿಸಿದಂತಿಲ್ಲ. ಇದ್ದುದರಲ್ಲಿ ಈ ಬಾರಿ ದೀಪಾವಳಿಯಲ್ಲಿ ಪಟಾಕಿ ಸುಡುವ ಪ್ರಮಾಣ ತುಸು ಕಡಿಮೆ ಆಗುವಂತಿದೆ. ನಿರ್ಬಂಧ ಸಾಕಷ್ಟು ಕಟ್ಟುನಿಟ್ಟಾಗುವಂತೆ ದಿಲ್ಲಿಯೊಂದರಲ್ಲೇ 400ಕ್ಕೂ ಹೆಚ್ಚು ವೀಕ್ಷಣಾ ತಂಡಗಳನ್ನು ನೇಮಿಸಲಾಗುತ್ತಿದೆ. ‘ಮಕ್ಕಳಿಗೆ ಪಟಾಕಿ ಬೇಕಾಗಿಲ್ಲ; ದೊಡ್ಡವರೇ ಸುಡುತ್ತಾರೆ’ ಎಂದು ಸುಪ್ರೀಂ ಕೋರ್ಟ್‌ನ ಜಸ್ಟಿಸ್ ಬೋಪಣ್ಣ ಹೇಳಿದ್ದಾರೆ. ಹಾಗಿದ್ದರೆ ನಮ್ಮ ದೇಶದ ಪ್ರತಿ ಮನೆಯಲ್ಲೂ ಇರಬಹುದಾದ ವೀಕ್ಷಕರ ಸಬಲೀಕರಣ ಆಗಬೇಕಿದೆ. ಶಾಲೆಗಳಲ್ಲೇ ಆ ಕೆಲಸ ನಡೆಯಬೇಕಿದೆ.

ಜಾದೂಗಾರರಿಂದ ಆರಂಭಿಸಿದ ಈ ಅಂಕಣವನ್ನು ಜಾದೂಗಾರನಿಂದಲೇ ಮುಗಿಸಬೇಕಲ್ಲವೆ? ‘ಶ್ವಾಸಕೋಶ ಎಂಬ ಈ ಜೋಡಿಚೀಲ ಇಲ್ಲದಿದ್ದಿದ್ದರೆ ಇಷ್ಟೊಂದು ಮಲಿನಗಾಳಿಯನ್ನು ಇಡೋಕೆ ಜಾಗವೇ ಇರುತ್ತಿರಲಿಲ್ಲ’ ಎಂದು ಅಮೆರಿಕದ ಜಾದೂಗಾರ ಮತ್ತು ಹಾಸ್ಯಸಾಹಿತಿ ರಾಬರ್ಟ್ ಆರ್ಬೆನ್ ಹೇಳಿದ್ದ.

ನಮ್ಮಲ್ಲಿರುವಷ್ಟು ‘ಚೀಲ’ಗಳು ಬೇರೆ ಯಾವ ದೇಶದಲ್ಲಿವೆ ಹೇಳಿ?



## ಚುರುಮುರಿ





### ಬ್ರೇಕ್‌ಫಾಸ್ಟ್ ಮೀಟಿಂಗ್

• ಆನಂದ

**ಬ್ರೇಕ್‌ಫಾಸ್ಟ್** ಮೀಟಿಂಗ್ ಮುಗಿಸಿ ಹೊರಗೆ ಬಂದೆ. ‘ಹೇಗಿತ್ತು ಸಾರ್?’ ಎಂದು ಕೇಳಿದರು ಪತ್ರಕರ್ತರು.

‘ಮೀಟಿಂಗೋ ಬ್ರೇಕ್‌ಫಾಸ್ಟೋ?’

‘ಮೀಟಿಂಗ್‌ಗಳು ಇದ್ದೇ ಇರುತ್ತವೆ, ಬ್ರೇಕ್‌ಫಾಸ್ಟ್ ಬಗ್ಗೆ ಹೇಳಿ’.

‘ಚೆನ್ನಾಗಿತ್ತು ಎಂದು ಹೇಳಲಿಕ್ಕೆ ನಾನು ಇಷ್ಟಪಡುತ್ತೇನೆ’.

‘ಮೆನು?’

‘ಇಡ್ಲಿ, ವಡೆ, ಪೊಂಗಲ್, ದೋಸೆ...’

‘ಮಸಾಲೇನೋ ಪ್ಲೇನೋ...’

‘ಮಸಾಲೇಲಿ ಎಣ್ಣೆ ಜಾಸ್ತಿ ಇರುತ್ತೆ ಅಂತ ಸೆಟ್‌ದೋಸೆ ತಿಂದೆ. ನಮ್ಮ ಆರೋಗ್ಯಾನೂ ಮುಖ್ಯ ಅಲ್ಲವೆ? ಇಡ್ಲಿ ಸಾಫ್ಟಾಗಿತ್ತು. ಈಗ ಮಲ್ಲಿಗೆ ಇಡ್ಲಿ ಸಿಗೊಲ್ಲಾಂತ ಕಾಣುತ್ತೆ. ಆದರೂ ಇವತ್ತು ಕೊಟ್ಟಿದ್ದು ಚೆನ್ನಾಗಿತ್ತು’.

‘ಚಟ್ನಿ, ಸಾಂಬಾರ್...’

‘ಎರಡೂ ಇದ್ದವು. ಒಳ್ಳೇ ಹಸಿ ಕೊಬ್ಬರಿ ಚಟ್ನೀರಿ. ವೆರಿ ಟೇಸ್ಟಿ. ಸಾಂಬಾರೂ ಅಷ್ಟೇ. ಈರುಳ್ಳಿ ಬೆಲೆ ಹೆಚ್ಚಿದ್ದರೂ ಧಾರಾಳವಾಗಿ ಬಳಸಿದ್ದರು’.

‘ಮತ್ತೆ ವಡೆ?’

‘ಸಾಮಾನ್ಯವಾಗಿ ದೊಡ್ಡ ತೂತಿರೋ ಚಿಕ್ಕ ವಡೆ ಸರ್ವ್ ಮಾಡ್ತಾರೆ. ಆದರೆ ಇಲ್ಲಿ ಚಿಕ್ಕ ತೂತಿರೊ ದೊಡ್ಡ ವಡೇನೆ ಕೊಟ್ಟಿದ್ದರು’.

‘ಪೊಂಗಲ್?’

‘ತುಂಬಾ ಟೇಸ್ಟಿ. ನಾನು 2-3 ಸಲ ಹಾಕಿಸಿಕೊಂಡೆ’.

‘ಸ್ವೀಟ್ ಇರಲಿಲ್ಲವೆ?’

‘ಕ್ಯಾರೆಟ್ ಹಲ್ವ ಇತ್ತು, ಆದರೆ ನನಗೆ ಶುಗರ್. ಸ್ಕಿಪ್ ಮಾಡಿದೆ’.

‘ಏನು ಡಿಸ್ಕಸ್ ಮಾಡಿದಿರಿ?’

‘ಅದಕ್ಕೆ ಟೈಮೇ ಇರಲಿಲ್ಲ ನೋಡಿ. 10.30 ಆಗಿದ್ರಿಂದ ಹಸಿವೆ ಆಗಿತ್ತು, ಅದಕ್ಕೆ ಬ್ರೇಕ್‌ಫಾಸ್ಟ್ ಮೇಲೆ ಮಾತ್ರ ಗಮನ ಕೊಟ್ಟಿದ್ದಾಯ್ತು. 11.30ಕ್ಕೆ ನನಗೆ ಇನ್ನೊಂದು ಮೀಟಿಂಗ್ ಇತ್ತು. ಮುಂದಿನ ಸಲ ಬರ, ಕಾವೇರಿ, ಗ್ಯಾರಂಟಿ ಬಗ್ಗೆ ಚರ್ಚಿಸ್ತೀವಿ’.

‘ಬ್ರೇಕ್‌ಫಾಸ್ಟ್ ಸಕ್ಸಸ್?’

‘ಖಂಡಿತ. ಅಂದಹಾಗೆ ಬರ್ತಾ ಆ ಕೆಟರಿಂಗ್‌ನವರ ವಿಸಿಟಿಂಗ್ ಕಾರ್ಡ್ ತಂದೆ. ಮಗಳ ಮದುವೆಗೆ ಉಪಯೋಗಕ್ಕೆ ಬರುತ್ತೆ ನೋಡಿ. ಅವರಿಗೇ ಕಾಂಟ್ರಾಕ್ಟ್’.

## ಸಂಗತ

# ಮುಖ್ಯೋಪಾಧ್ಯಾಯ ಮತ್ತು ವೃತ್ತಿಗೌರವ

ಗುರು ಎಂಬ ಸ್ಥಾನಕ್ಕಿರುವ ಮಹತ್ವವನ್ನು ಅರಿಯದೆ, ಜನರ ಮುಂದೆ ಶಿಕ್ಷಕರ ಅವಹೇಳನ ಮಾಡುವುದು ಜನಪ್ರತಿನಿಧಿಗಳ ಜಾಯಮಾನವಾಗಿ ಬಿಡುತ್ತಿದೆ

• ಪ.ರಾಮಕೃಷ್ಣಶಾಸ್ತ್ರಿ

**ಸರ್ಕಾರಿ** ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು ಎಂದರೆ ಸಾಕು, ಆರಾಮಾಗಿ ಐದಂಕಿಯ ಸಂಬಳ ಪಡೆಯುತ್ತಾರೆ, ಯಾವ ಜವಾಬ್ದಾರಿಯೂ ಇಲ್ಲದೆ ಪಟ್ಟಣಕ್ಕೆ ಸುತ್ತಾಡಿಕೊಂಡು ಇರುತ್ತಾರೆ ಎಂದು ಬಹುತೇಕ ಊರುಗಳ ಜನ ಅವರ ಬಗೆಗೆ ಹಗುರವಾಗಿ ಮಾತನಾಡುತ್ತಾರೆ. ಸೇವಾ ಬಡ್ತಿ ಎನ್ನುವಾಗ, ಯಾವ ಶಿಕ್ಷಕರೂ ಈ ಹುದ್ದೆ ಮತ್ತು ಜವಾಬ್ದಾರಿಯನ್ನು ಬೇಡ ಎಂದು ನಿರಾಕರಿಸುವಂತಿಲ್ಲ. ವೇತನದ ವಿಷಯಕ್ಕೆ ಬಂದರೆ, ಉಳಿದವರಿಗಿಂತ ಸ್ವಲ್ಪ ಹೆಚ್ಚು ಹಣ ಬರುತ್ತದೆ. ಆದರೆ ಹೆಚ್ಚಿನ ಮುಖ್ಯೋಪಾಧ್ಯಾಯರು ತಮಗೆ ಈ ಕೆಲಸದಲ್ಲಿ ಸುಖಕ್ಕಿಂತ ಕಷ್ಟವೇ ಹೆಚ್ಚು ಎನ್ನುತ್ತಾರೆ.

ಶಾಲೆಗಳಲ್ಲಿ ಪೋಷಕರ ಸಭೆ ನಡೆದಾಗಲೆಲ್ಲ ಮುಖ್ಯೋಪಾಧ್ಯಾಯರನ್ನು ಹೆತ್ತವರು ತರಾಟೆಗೆ ತೆಗೆದುಕೊಳ್ಳುತ್ತಾರೆ. ಅವರಿಂದ ಯಾವುದೇ ಪ್ರಯೋಜನ ಇಲ್ಲ, ಯಾವಾಗಲೂ ಸುತ್ತಾಡುತ್ತಾ ಇರುತ್ತಾರೆ, ಪಾಠ ಮಾಡುವುದೇ ಇಲ್ಲ ಎಂದೆಲ್ಲ ಹಳಿಯುತ್ತಾರೆ. ಖಾಸಗಿ ಶಾಲೆಯಲ್ಲಾದರೆ ಒಬ್ಬ ಅಟೆಂಡರ್ ಇರುತ್ತಾನೆ. ಶಾಲೆಗೆ ಅಗತ್ಯವಿರುವ ಪರಿಕರಗಳನ್ನು ತಂದುಕೊಡುತ್ತಾನೆ. ಸರ್ಕಾರಿ ಶಾಲೆಗಳಲ್ಲಿ ಮುಖ್ಯೋಪಾಧ್ಯಾಯರೇ ಅಟೆಂಡರ್! ಓದುವ ಪುಸ್ತಕಗಳನ್ನು ತರಲು ಶಿಕ್ಷಣಾಧಿಕಾರಿ ಕಚೇರಿಗೆ ಹೋಗಬೇಕಾಗುತ್ತದೆ, ಬಿಸಿಯೂಟದ ತರಕಾರಿ ತರಬೇಕಾಗುತ್ತದೆ, ಕುಸಿಯುವ ಹಂತದಲ್ಲಿರುವ ಶಾಲೆಯ ಕಟ್ಟಡವನ್ನು ದುರಸ್ತಿ ಮಾಡಿಸಿಕೊಡಿ ಎಂದು ಬೇಡಲು ಶಾಸಕರು, ಅಧಿಕಾರಿಗಳ ಬಳಿಗೆ ಕಾಲಿಗೆ ಚಕ್ರ ಕಟ್ಟಿಕೊಂಡು ಅವರು ಸುತ್ತುತ್ತಲೇ ಇರಬೇಕಾಗುತ್ತದೆ.

ಇನ್ನು ಬಿಸಿಯೂಟದ ಆಹಾರ ಪದಾರ್ಥಗಳ ಲೆಕ್ಕಾಚಾರ ಇಡುವುದಂತೂ ಮುಖ್ಯೋಪಾಧ್ಯಾಯರ ಸಹನೆಯ ಶಕ್ತಿಗೆ ಒಂದು ಸವಾಲು. ಅಕ್ಕಿ, ಉಪ್ಪು, ಎಣ್ಣೆ ಎಲ್ಲವೂ ಪ್ರತಿ ವಿದ್ಯಾರ್ಥಿಗೂ ಗ್ರಾಂ ಲೆಕ್ಕದಲ್ಲಿ ಬರುತ್ತದೆ. ಪ್ರತಿದಿನದ ಹಾಜರಾತಿಗೆ ಅನುಗುಣವಾಗಿ ಅದೇ ಲೆಕ್ಕಾಚಾರದಲ್ಲಿ ಎಲ್ಲವನ್ನೂ ಅವರೇ ಅಡುಗೆಯವರಿಗೆ ತೂಕ ಮಾಡಿಕೊಡಬೇಕು. ತಿಂಗಳ ಕೊನೆಗೆ ಖರ್ಚಾಗಿ ಉಳಿದ ಆಹಾರ ಪದಾರ್ಥಗಳು ಬಂದ ದಾಸ್ತಾನಿಗೆ ಹೊಂದಿಕೆಯಾಗಬೇಕು. ತರಕಾರಿ ಖರೀದಿಗೂ ತಲಾವಾರು ಪೈಸೆಗಳ ಲೆಕ್ಕದಲ್ಲಿ ಬರುವ ಹಣ ಕೆಲವೊಮ್ಮೆ ಒಂದು ದಿನದ ತರಕಾರಿ ಖರೀದಿಗೂ ಸಾಲದೇ ಹೋಗುತ್ತದೆ. ಆಗ, ಇದೇ ಮುಖ್ಯೋಪಾಧ್ಯಾಯರು ತಮ್ಮ ಕಿಸೆಯಿಂದ ಭರ್ತಿ ಮಾಡಬೇಕಾದ ಸಂದರ್ಭವೂ ಇರುತ್ತದೆ.

ಬಿಸಿಯೂಟ ಸಿದ್ಧವಾಗುವಾಗ ರುಚಿ ನೋಡಿ ಪರೀಕ್ಷಿಸಲು ಮುಖ್ಯೋಪಾಧ್ಯಾಯರು ತಯಾರಾಗಿ ಇರಬೇಕು. ಆಹಾರದಲ್ಲಿ ಹಲ್ಲಿ ಬಿದ್ದರೆ, ಪಾತ್ರೆಯ ಕಿಲುಬು ಸೇರಿದರೆ ಅದರ ದುಷ್ಪರಿಣಾಮಗಳನ್ನು ಅವರೇ ಎದುರಿಸಬೇಕು. ಇನ್ನು, ಮೂವತ್ತು ಮಕ್ಕಳಿಗೆ ಒಬ್ಬರಂತೆ ಶಿಕ್ಷಕರನ್ನು ಸರ್ಕಾರ ನೇಮಿಸುತ್ತದೆ. ಏಳು ತರಗತಿಗಳು ಸೇರಿ ಮೂವತ್ತೇ ಮಕ್ಕಳಿರುವ ಶಾಲೆಗಳೂ ಇವೆ. ಒಂದು ತರಗತಿಗೆ ಒಬ್ಬರಂತೆ ಶಿಕ್ಷಕರಿಲ್ಲದಿದ್ದರೂ ಇರುವ ಶಿಕ್ಷಕರ ಜೊತೆಗೇ ಎಲ್ಲ ಪಾಠಗಳನ್ನೂ ಹಂಚಿಕೊಂಡು ಕಲಿಸಲು ಮುಖ್ಯೋಪಾಧ್ಯಾಯರು ಮುಂದಾಗಬೇಕಾಗುತ್ತದೆ. ಇಂತಹ ಸಮಯದಲ್ಲಿ ಮಕ್ಕಳು ಅನುತ್ತೀರ್ಣರಾದರೆ, ಸರ್ಕಾರಿ ಶಾಲೆಯಲ್ಲಿ ಸರಿಯಾಗಿ ಪಾಠ ಮಾಡುವುದಿಲ್ಲ ಎಂದು ಊರವರು ದೂರುತ್ತಾರೆ.

ಒಂದು ಸರ್ಕಾರಿ ಶಾಲೆಯಲ್ಲಿ ಇತ್ತೀಚಿನ ಮಳೆಗೆ ಶೌಚಾಲಯ ಕುಸಿಯಿತು. ಈ ದುರ್ಘಟನೆ ರಾತ್ರಿ ಸಂಭವಿಸಿದ ಕಾರಣ ಜೀವಹಾನಿಯಾಗಲಿಲ್ಲ. ಪೋಷಕರು ಮುಖ್ಯೋಪಾಧ್ಯಾಯರ ಮೇಲೆ ಮುಗಿಬಿದ್ದರು. ಹಗಲೇನಾದರೂ ಇದು ನಡೆದಿದ್ದರೆ ಮಕ್ಕಳ ಪ್ರಾಣ ಹೋಗುತ್ತಿತ್ತು, ಇದು ಶಿಕ್ಷಕರ ಬೇಜವಾಬ್ದಾರಿಯಿಂದ ಸಂಭವಿಸಿದೆ ಎಂದು ಆರೋಪಿಸಿದರು. ಆಗ ಮುಖ್ಯೋಪಾಧ್ಯಾಯರು, ಶೌಚಾಲಯ ದುರಸ್ತಿಗೆ ಸಂಬಂಧಿಸಿದಂತೆ ಒಂದು ವರ್ಷದಿಂದಲೂ ಪೋಷಕರ ಸಭೆಯಲ್ಲಿ ಸಲ್ಲಿಸುತ್ತಾ ಬಂದ ಪ್ರಸ್ತಾವದ ನಿರ್ಣಯವನ್ನು ಮುಂದಿಟ್ಟರು. ಶಾಸಕರು ಹಾಗೂ ವಿವಿಧ ಅಧಿಕಾರಿಗಳಿಗೆ ಸಲ್ಲಿಸಿದ ಮನವಿಗಳ ಸ್ವೀಕೃತಿ ಪತ್ರಗಳನ್ನೂ ತೋರಿಸಿದರು. ಅಲ್ಲಿ ಅಧಿಕಾರಿಗಳ ನಿರ್ಲಕ್ಷ್ಯ ಎದ್ದು ಕಾಣುತ್ತಿತ್ತು.



ಈಗಲೂ ಅನೇಕ ಸರ್ಕಾರಿ ಶಾಲೆಗಳಲ್ಲಿ ಪೀಠೋಪಕರಣಗಳಿಲ್ಲ, ಆಟದ ಸಾಮಗ್ರಿಗಳಿಲ್ಲ. ಗ್ರಾಮ ಪಂಚಾಯಿತಿ ಸದಸ್ಯರಿಗೂ ಅಧಿಕಾರ ಚಲಾಯಿಸಲು ಇಂತಹ ಶಾಲೆಗಳ ಶಿಕ್ಷಕರೇ ಬಲಿಪಶುಗಳಾಗಿರುತ್ತಾರೆ. ಅವರ ವೃತ್ತಿಯನ್ನು ಗೌರವಿಸದೆ, ಸಾಮಾಜಿಕವಾಗಿ ಗುರು ಎಂಬ ಸ್ಥಾನಕ್ಕೆ ಇರುವ ಮಹತ್ವದ ಅರಿವೂ ಇಲ್ಲದೆ ಜನರ ಮುಂದೆ ಶಿಕ್ಷಕರನ್ನು ಮೂದಲಿಸುವುದು, ಅವಹೇಳನ ಮಾಡುವುದು ಜನಪ್ರತಿನಿಧಿಗಳ ಜಾಯಮಾನವಾಗಿ ಬಿಡುತ್ತಿದೆ.

ಸರ್ಕಾರಿ ಶಾಲೆಯ ಅಧ್ಯಾಪಕನಾಗಿ ಶ್ರಮಿಸುವ ವ್ಯಕ್ತಿಯೊಬ್ಬನ ವೃತ್ತಿಗೌರವದ ರಕ್ಷಣೆಗೆ ಮುಂದಾಗಬೇಕಿರುವುದು ಸರ್ಕಾರದ ಗುರುತರ ಜವಾಬ್ದಾರಿ ತಾನೆ? ಕುಸಿದು ಬೀಳುತ್ತಿರುವ ಶಾಲಾ ಕಟ್ಟಡಗಳ ತುರ್ತು ದುರಸ್ತಿಗೆ ಸಕಾಲದಲ್ಲಿ ಹಣ ಒದಗಿಸಬೇಕು. ಕೆಲ ಶಾಲೆಗಳಲ್ಲಿ ಬಿಸಿಯೂಟದ ಅಡುಗೆ ಮನೆಯ ಚಾವಣಿ ಮಳೆ ಬಂದರೆ ಸೋರುತ್ತದೆ. ಆ ನೀರನ್ನು ಹಿಡಿದಿಟ್ಟುಕೊಳ್ಳಲು ಸಾಲುಸಾಲಾಗಿ ಬಕೆಟ್‌ಗಳನ್ನು ಇರಿಸಬೇಕಾದ ದುರವಸ್ಥೆ ಅಲ್ಲಿರುತ್ತದೆ. ಇಂತಹ ಸ್ಥಿತಿಯನ್ನು ತಪ್ಪಿಸಬೇಕು.

ಪುಸ್ತಕ, ತರಕಾರಿ ತರುವ ಕೆಲಸಕ್ಕೆ ಸರ್ಕಾರವು ಒಬ್ಬ ಜವಾನನನ್ನು ನೇಮಿಸಿದರೆ, ಶಿಕ್ಷಕರು ಪೇಟೆ ಸುತ್ತುವ ಸಂಕಷ್ಟ ತಪ್ಪುತ್ತದೆ. ಶಿಕ್ಷಣದ ಅಭಿವೃದ್ಧಿಗಾಗಿ ತಾವು ಮಾಡಿದ ಕೆಲಸಗಳನ್ನು ಜಾಹೀರಾತುಗಳಲ್ಲಿ ಮಾತ್ರ ಹೇಳಿಕೊಳ್ಳುವ ಸರ್ಕಾರಗಳು, ಶಾಲೆಗಳ ಕುಂದುಕೊರತೆಗಳನ್ನು ಆಮೂಲಾಗ್ರವಾಗಿ ಸರಿಪಡಿಸಲು ಇದುವರೆಗೂ ಶಕ್ತವಾಗಿಲ್ಲ. ವ್ಯವಸ್ಥೆಯ ನಿರ್ಲಕ್ಷ್ಯವು ಮುಖ್ಯೋಪಾಧ್ಯಾಯರ ಬುಡವನ್ನೇ ಅಲುಗಾಡಿಸುವುದು ಮಾತ್ರ ವಿಷಾದನೀಯ.

## ವಾಚಕರ ವಾಣಿ

### ನೀರಿಲ್ಲದ ಶೌಚಾಲಯ ವ್ಯರ್ಥ

ಸರ್ಕಾರಿ ಅನುದಾನಿತ ಮತ್ತು ವಸತಿ ಶಾಲೆಗಳಲ್ಲಿ ಬಾಲಕಿಯರ ಸಂಖ್ಯೆಗೆ ಅನುಗುಣವಾಗಿ ಶೌಚಾಲಯಗಳನ್ನು ನಿರ್ಮಿಸಲು ರಾಷ್ಟ್ರೀಯ ಮಾದರಿ ರೂಪಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಬೇಕಾಗಿ ಬಂದಿದ್ದು (ಪ್ರ.ವಾ., ನ. 7) ನಮ್ಮ ಪ್ರಜಾಪ್ರಭುತ್ವದ ಸೋಲಿಗೆ ಕನ್ನಡಿ ಹಿಡಿದಿದೆ. ಹೊಸ ಶೌಚಾಲಯಗಳ ನಿರ್ಮಾಣದಿಂದ ಅಧಿಕಾರಿಶಾಹಿ, ಗುತ್ತಿಗೆದಾರರು ಲಾಭ ಪಡೆಯುತ್ತಾರೆ. ಆದರೆ ಲಕ್ಷಾಂತರ ಶೌಚಾಲಯಗಳು ನೀರಿಲ್ಲದೆ ಗಬ್ಬುನಾಥ ಬೀರುತ್ತಾ ಬಳಸಲು ಅಸಾಧ್ಯ ಎನ್ನುವಂತೆ ಇರುತ್ತವೆ. ಆದ್ದರಿಂದ ಶೌಚಾಲಯ ನಿರ್ಮಾಣದ ಜೊತೆಗೆ ನೀರಿನ ಪೂರೈಕೆಯನ್ನು ಸಹ ಮಾಡಬೇಕು.

ಶಾಲೆಯ ಕಟ್ಟಡದ ಮೇಲೆ ಬೀಳುವ ಮಳೆ ನೀರನ್ನು ಸಂಗ್ರಹಿಸುವ ಮೂಲಕ ಶೌಚಾಲಯಗಳಿಗೆ ನೀರು ಪೂರೈಸಬಹುದು. ಶಾಲೆಯ ಶೌಚಾಲಯಗಳನ್ನು ಹಳ್ಳಿಯ ಹೆಣ್ಣುಮಕ್ಕಳು ಸಹ ಬಳಸಲು ಸಾಧ್ಯವಾದರೆ, ಬಯಲುಶೌಚದಿಂದ ಅವರಿಗೆ ಮುಕ್ತಿ ದೊರೆಯುತ್ತದೆ.

**ಎಚ್.ಆರ್.ಪ್ರಕಾಶ್,** ಕೆ.ಬಿ.ದೊಡ್ಡಿ, ಮಂಡ್ಯ

### ಕನ್ನಡದಲ್ಲಿ ಪರೀಕ್ಷೆ: ಪ್ರಧಾನಿಯ ಮನವೊಲಿಸಬೇಕಿದೆ

ಕೇಂದ್ರ ಸರ್ಕಾರ ನಡೆಸುವ ಉದ್ಯೋಗ ನೇಮಕಾತಿ ಪರೀಕ್ಷೆಗಳನ್ನು ಹಿಂದಿಯಲ್ಲಿ ಬರೆಯಲು ಅವಕಾಶ ಕೊಟ್ಟಿರುವಂತೆ, ಕನ್ನಡದಲ್ಲಿ ಬರೆಯಲೂ ಅವಕಾಶ ಕಲ್ಪಿಸಬೇಕು ಎನ್ನುವ ಬೇಡಿಕೆಗೆ ಸಂಬಂಧಿಸಿ ಪ್ರಧಾನಿಯವರಿಗೆ ಪತ್ರ ಬರೆಯುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕನ್ನಡ ರಾಜ್ಯೋತ್ಸವದ ಭಾಷಣದಲ್ಲಿ ಹೇಳಿದ್ದಾರೆ. ಆದರೆ, ಈ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಈಗಾಗಲೇ ಹಲವು ಬಾರಿ ಪತ್ರಗಳನ್ನು ಬರೆದಿವೆ. ಆದರೂ ಪ್ರಯೋಜನವಾಗಿಲ್ಲ. ಹೀಗಾಗಿ, ಮುಖ್ಯಮಂತ್ರಿಯವರು ನೇರವಾಗಿ ಪ್ರಧಾನಿ ಅವರನ್ನು ಭೇಟಿ ಮಾಡಿ ಅವರಿಗೆ ಮನವರಿಕೆ ಮಾಡಿಕೊಡಬೇಕಿದೆ.

ಅಂತೆಯೇ ಈ ವಿಷಯವನ್ನು ಹಿಂದಿಯೇತರ ರಾಜ್ಯಗಳ ಮುಖ್ಯಮಂತ್ರಿಗಳ ಗಮನಕ್ಕೆ ತಂದರೂ ಒಳ್ಳೆಯದೆ. ಶಾಸ್ತ್ರೀಯ ಭಾಷೆಯಾದ ಕನ್ನಡಕ್ಕೆ ಭಾರತದ ಒಕ್ಕೂಟದಲ್ಲಿ ಹಿಂದಿಗೆ ಸಿಕ್ಕಿರುವ ಎಲ್ಲಾ ಸ್ಥಾನಮಾನ, ಅವಕಾಶಗಳು ಸಂವಿಧಾನಬದ್ಧವಾಗಿ ಸಿಗಬೇಕಿದೆ.

**ಗಿರೀಶ್ ಮತ್ತೇರ,** ಯರಗಟ್ಟಿಹಳ್ಳಿ, ಚನ್ನಗಿರಿ

### ಬರದ ವಿಷಯದಲ್ಲಿ ರಾಜಕೀಯ ಸಲ್ಲ

ರಾಜ್ಯದಲ್ಲಿ ಈ ವರ್ಷ ವಾಡಿಕೆಯಷ್ಟು ಮಳೆ ಬೀಳದ ಕಾರಣ ಕೃಷಿ ವಲಯಕ್ಕೆ ಹೆಚ್ಚು ಪೆಟ್ಟು ಬಿದ್ದಿದೆ. ಇದರಿಂದ ಆಹಾರ ಉತ್ಪಾದನೆ ಕುಂಠಿತವಾಗಿದ್ದು, ರೈತರಿಗೆ ನಷ್ಟವಾಗಿದೆ. ರಾಜ್ಯ ಸರ್ಕಾರ ಈಗಾಗಲೇ ಹಲವು ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದೆ. ಕೇಂದ್ರ ಸರ್ಕಾರದ ಬರ ಅಧ್ಯಯನ ತಂಡವು ರಾಜ್ಯದ ಹಲವು ಪ್ರದೇಶಗಳಿಗೆ ಭೇಟಿ ನೀಡಿ ಸಮೀಕ್ಷೆ ನಡೆಸಿದೆ. ಇದರ ಬೆನ್ನಲ್ಲೇ, ವಿರೋಧ ಪಕ್ಷಗಳಾದ ಬಿಜೆಪಿ ಹಾಗೂ ಜೆಡಿಎಸ್ ಪ್ರತ್ಯೇಕವಾಗಿ ಬರ ಅಧ್ಯಯನ ಪ್ರವಾಸ ನಡೆಸಲು ಮುಂದಾಗಿರುವುದು ಎಷ್ಟು ಸರಿ? ಅದರ ಅಗತ್ಯವಾದರೂ ಏನಿದೆ? ಬರದ ವಿಷಯದಲ್ಲೂ ಪಕ್ಷಗಳು ರಾಜಕೀಯ ಮಾಡುತ್ತಿರುವುದು ಸರಿಯಾದ ನಡೆಯಲ್ಲ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳೆರಡೂ ಬರ ಪರಿಹಾರದ ಮೊತ್ತವನ್ನು ಶೀಘ್ರದಲ್ಲಿ ಬಿಡುಗಡೆ ಮಾಡಿ ರೈತರ ಸಂಕಷ್ಟಕ್ಕೆ ನೆರವಾಗಬೇಕು. ಈ ವಿಚಾರದಲ್ಲಿ ರಾಜ್ಯ ಸರ್ಕಾರವು ಕೇಂದ್ರದ ಕಡೆ ಬೊಟ್ಟು ಮಾಡಿ ಆರೋಪ ಮಾಡುವುದನ್ನು ಬಿಡಬೇಕು. ಕೇಂದ್ರದಿಂದ ಬರ ಪರಿಹಾರದ ಮೊತ್ತ ತರಲು ಸರ್ವಪಕ್ಷಗಳ ಜನಪ್ರತಿನಿಧಿಗಳೂ ಪಕ್ಷಭೇದ ಮರೆತು ಸಂಘಟಿತ ಪ್ರಯತ್ನ ಮಾಡಬೇಕು.

**ಪ್ರಸಾದ್ ಜಿ.ಎಂ.,** ಮೈಸೂರು

### ಮಕ್ಕಳ ಪ್ರೀತಿಗೆ ಅಪಾರ್ಥ ಕಲ್ಪಿಸುವುದು ಬೇಡ

ಹಿರಿಯ ನಾಗರಿಕರು ಕಾಳಜಿಯ ಹೆಸರಿನಲ್ಲಿ ಮನೆಯವರಿಂದಲೇ ‘ಗೃಹಬಂಧನ’ಕ್ಕೆ ಒಳಗಾಗುತ್ತಿದ್ದಾರೆ ಎಂದು ಮಲ್ಲಿಕಾರ್ಜುನ ಹೆಗ್ಗಳಗಿ ಕಳವಳ ವ್ಯಕ್ತಪಡಿಸಿದ್ದಾರೆ (ಸಂಗತ., ನ. 3). ಸಾಮಾನ್ಯವಾಗಿ ಮಕ್ಕಳು ದೊಡ್ಡವರಾಗಿ, ಮದುವೆಯಾಗಿ, ಸಂಸಾರದ ಭಾರವನ್ನು ತಮ್ಮ ಹೆಗಲ ಮೇಲೆ ಹೊತ್ತುಕೊಂಡ ಮೇಲೆ, ತಂದೆ-ತಾಯಿ ಜೊತೆ ಮಾತನಾಡುವುದನ್ನು ಕಡಿಮೆ ಮಾಡುತ್ತಾರೆ. ಆಗ ನಿಜಕ್ಕೂ ತಂದೆ-ತಾಯಿಯ ಮನಸ್ಸಿಗೆ ನೋವಾಗುತ್ತದೆ. ಆದರೆ ಮಗನೊಬ್ಬ ವಯಸ್ಸಾದ ತಂದೆಗೆ ‘ನೀನು ಹೊರಗೆ ಹೋಗಬೇಡ, ಗಾಡಿ ಓಡಿಸಬೇಡ, ಇಲ್ಲಿಯವರೆಗೆ ಬಹಳಷ್ಟು ದುಡಿದಾಗಿದೆ, ಮತ್ತೂ ಹೊರಗೆ ಹೋಗಿ ದುಡಿಯುವುದು ಬೇಡ, ಮನೆಯಲ್ಲೇ ತಿಂದುಂಡುಕೊಂಡು, ಟಿ.ವಿ ನೋಡಿಕೊಂಡು, ಪುಸ್ತಕ ಓದಿಕೊಂಡು ಹಾಯಾಗಿರು’ ಎಂದು ಹೇಳಿದರೆ, ಮಗನ ಆ ಪ್ರೀತಿಯ ಮಾತಿಗೆ ಹೆಮ್ಮೆಪಡಬೇಕೇ ವಿನಾ ಅದನ್ನು ‘ಗೃಹಬಂಧನ’ ಎಂದು ತಿಳಿಯುವ ಅಗತ್ಯವಿಲ್ಲ.

ಬಾಳ ಮುಸ್ಸಂಜೆಯಲ್ಲಿರುವ ಹಿರಿಯರು ಮಕ್ಕಳ ಸುಖ, ಸಂತೋಷದಲ್ಲೇ ತಾವೂ ಸುಖ ಪಡುವುದನ್ನು ರೂಢಿಸಿಕೊಂಡರೆ, ಮಕ್ಕಳು ಬೈದರೂ ಅದು ಹಿತವಾಗಿಯೇ ಕೇಳಿಸುತ್ತದೆ. ಹೆತ್ತವರನ್ನು ಅನಾಥಾಶ್ರಮಗಳಿಗೆ ದಬ್ಬುತ್ತಿರುವ ಹಾಗೂ ಯಾವುದೋ ಕಾಣದ ದೇಶದಲ್ಲಿ ಇದ್ದುಕೊಂಡು ಹೆತ್ತವರ ಸಂಸಾರಕ್ಕೂ ಅವರ ಅಂತ್ಯಸಂಸ್ಕಾರಕ್ಕೂ ಹಣ ಕಳುಹಿಸುವ ಮಕ್ಕಳಿರುವ ಈ ಕಾಲದಲ್ಲಿ, ಮಕ್ಕಳನ್ನು ದಿನವೂ ನೋಡುವ, ಅವರ ಬಳಿ ಮಾತನಾಡುವ, ಅವರ ಪ್ರೀತಿಯ ಮಾತು ಕೇಳುವ ಸೌಭಾಗ್ಯ ದೊರೆತ ತಂದೆ-ತಾಯಿಯೇ ಧನ್ಯರು.

**ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ,** ಬೆಂಗಳೂರು

### ಕೂಳೆಗೆ ಬೆಂಕಿ: ರೈತರಲ್ಲಿ ಅರಿವು ಮೂಡಲಿ

ಪಂಜಾಬ್ ಸುತ್ತಮುತ್ತ ಕಬ್ಬಿನ ಕೂಳೆಗೆ ಬೆಂಕಿ ಹಾಕುತ್ತಿರುವುದರಿಂದ ವಾಯುಮಾಲಿನ್ಯ ಉಂಟಾಗಿ, ದೆಹಲಿಯಲ್ಲಿ ಶಾಲೆಗಳಿಗೆ ರಜೆ ಘೋಷಿಸಲಾದ ಸುದ್ದಿಯು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಈ ಕುರಿತು ಟ್ವೀಟ್ ಮಾಡಿರುವ ಲೇಖಕ ದೇವಿಂದರ್ ಶರ್ಮಾ (ಪ್ರ.ವಾ., ನ. 6), ರೈತರಿಗೆ ಪ್ರೋತ್ಸಾಹ ನೀಡುವ ಮೂಲಕ ಈ ಸಮಸ್ಯೆಗೆ ಪರಿಹಾರ ಸಾಧ್ಯ ಎಂದಿದ್ದಾರೆ. ನಮ್ಮ ರಾಜ್ಯದಲ್ಲಿ ಸಹ ಕಬ್ಬಿನ ಕೂಳೆಗೆ ಬೆಂಕಿ ಹಾಕುವ ಪದ್ಧತಿ ಎಂದಿನಿಂದಲೂ ಇದೆ. ಆದರೆ ನಮ್ಮ ಕೃಷಿ ಇಲಾಖೆಯು ಇದರ ದುಷ್ಪರಿಣಾಮಗಳ ಬಗ್ಗೆ ರೈತರಲ್ಲಿ ಅರಿವು ಮೂಡಿಸುವ ಕಾರ್ಯದಲ್ಲಿ ವಿಫಲವಾಗಿದೆ.

ಕಬ್ಬಿನ ಕೂಳೆಗೆ ಬೆಂಕಿ ಹಾಕುವುದರಿಂದ ಭೂಮಿಯ ಮೇಲ್ಪದರದಲ್ಲಿನ ಎರೆಹುಳುಗಳು ಸಾಯುತ್ತವೆ. ಅದರಿಂದ ಭೂಮಿಯ ಫಲವತ್ತತೆ ನಾಶವಾಗುತ್ತದೆ. ಹೊಗೆಯು ವಾಯುಮಾಲಿನ್ಯ, ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತದೆ. ಇಲಾಖೆಯು ಈ ಕುರಿತು ಅರಿವು ಮೂಡಿಸಿದರೆ, ಕಬ್ಬು ಬೆಳೆಗಾರರು ಎಚ್ಚೆತ್ತುಕೊಂಡು ಈ ಸಮಸ್ಯೆ ಬಗೆಹರಿದೀತು.

**ಹುರುಕಡ್ಲಿಶಿವಕುಮಾರ,** ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 



# ಮೀಸಲಾತಿ ಶೇ 50ರ ಮಿತಿಗೆ ವಿನಾಯಿತಿಯೂ ಇದೆ

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗ ನೇಮಕಾತಿಯಲ್ಲಿ ಈಗ ಇರುವ ಶೇ 50ರಷ್ಟು ಮೀಸಲಾತಿಯನ್ನು ಶೇ 65ಕ್ಕೆ ಏರಿಕೆ ಮಾಡುವ ಪ್ರಸ್ತಾವಕ್ಕೆ ಬಿಹಾರ ಸಚಿವ ಸಂಪುಟವು ಮಂಗಳವಾರವಷ್ಟೇ ಒಪ್ಪಿಗೆ ನೀಡಿದೆ. ಮೀಸಲಾತಿಗೆ ಶೇ 50ರ ಮಿತಿ ಇರಬೇಕು ಎಂಬ ಸುಪ್ರೀಂ ಕೋರ್ಟ್ ತೀರ್ಪಿನ ಉಲ್ಲಂಘನೆ ಇದು ಎಂಬ ಆಕ್ಷೇಪವೂ ಅದರ ಬೆನ್ನಲ್ಲೇ ವ್ಯಕ್ತವಾಗಿದೆ. ಮೀಸಲಾತಿಗೆ ಇರುವ ಮಿತಿಗೆ ಸಕಾರಣವಾದ ವಿನಾಯಿತಿಯೂ ಇದೆ ಎನ್ನುತ್ತದೆ ಸುಪ್ರೀಂ ಕೋರ್ಟ್ ತೀರ್ಪು. ಈಗ ಜಾತಿಗಣತಿ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆಯ ದತ್ತಾಂಶಗಳ ಆಧಾರದಲ್ಲಿ ಮೀಸಲಾತಿ ಹೆಚ್ಚಳಕ್ಕೆ ಮುಂದಾಗಿರುವ ಬಿಹಾರ ಸರ್ಕಾರದ ನಡೆ ಹೆಚ್ಚು ಮಹತ್ವ ಪಡೆದುಕೊಂಡಿದೆ

ಪ್ರಜಾವಾಣಿ ವಾರ್ತೆ

**ಪರಿಶಿಷ್ಟ ಜಾತಿ,** ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ನೇಮಕಾತಿಯಲ್ಲಿ ನೀಡುವ ಮೀಸಲಾತಿಗೆ ಶೇ 50ರಷ್ಟು ಮಿತಿ ಹಾಕಬೇಕು ಎಂಬುದು ಇಂದಿರಾ ಸಹಾನಿ ಪ್ರಕರಣ/ಮಂಡಲ ಆಯೋಗ ಪ್ರಕರಣದಲ್ಲಿ 9 ಸದಸ್ಯರ ಸಂವಿಧಾನ ಪೀಠದ ಮುಂದೆ ಇದ್ದ ಪ್ರಶ್ನೆಗಳಲ್ಲಿ ಒಂದು. ಈ ಸಮುದಾಯಗಳಿಗೆ ನೀಡುವ ಮೀಸಲಾತಿಯು ಶೇ 50ರ ಮಿತಿಯನ್ನು ದಾಟಬಾರದು ಎಂದು ಈ ಪೀಠವು 6:3 ಬಹುಮತದ ತೀರ್ಪು ನೀಡಿತ್ತು. ಈ ಸಮುದಾಯಗಳಿಗೆ ನೀಡಲಾಗುತ್ತಿರುವ ಮೀಸಲಾತಿಯನ್ನು ಹೆಚ್ಚಿಸುವ ಪ್ರಸ್ತಾವ ಬಂದಾಗಲೆಲ್ಲಾ ಈ ಪ್ರಕರಣದ ತೀರ್ಪನ್ನು ಉದಾಹರಿಸಲಾಗುತ್ತದೆ ಮತ್ತು ಅದನ್ನೇ ಮುಂದು ಮಾಡಿ, ಪ್ರಸ್ತಾವವನ್ನು ತಿರಸ್ಕರಿಸಲಾಗುತ್ತದೆ. ಆದರೆ, 'ಮೀಸಲಾತಿಯು ಶೇ 50ರ ಮಿತಿಯನ್ನು ಮೀರುವಂತಿಲ್ಲ ಎಂಬುದು ಒಂದು ನಿಯಮವಾದರೂ, ಅದನ್ನು ಮೀರಬಾರದು ಎಂದೇನಿಲ್ಲ' ಎಂದೂ ಇಂದಿರಾ ಸಹಾನಿ ಪ್ರಕರಣದ ಬಹುಮತದ ತೀರ್ಪಿನಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ.

ಈ ತೀರ್ಪು ನೀಡಿದ 9 ನ್ಯಾಯಮೂರ್ತಿಗಳಲ್ಲಿ ಒಬ್ಬರು ಮಾತ್ರ, ಮೀಸಲಾತಿಗೆ ಶೇ 50ರಷ್ಟು ಮಿತಿ ಇರಬಾರದು ಎಂದು ಹೇಳಿದ್ದರು. ಸಂವಿಧಾನದ 16(1) ಮತ್ತು 16(4) ವಿಧಿಗಳ ಅಡಿಯಲ್ಲಿ ನೀಡಲಾಗುವ ಮೀಸಲಾತಿಗೆ ಎಲ್ಲಿಯೂ ಗರಿಷ್ಠ ಮಿತಿಯನ್ನು ಹೇರಿಲ್ಲ. ಹೀಗಾಗಿ ಶೇ 50ರಷ್ಟು ಮಿತಿ ಹೇರಬೇಕು ಎಂಬುದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಒಬ್ಬರು ನ್ಯಾಯಮೂರ್ತಿಗಳು ಹೇಳಿದ್ದರು.

ಉಳಿದ ಎಂಟು ನ್ಯಾಯಮೂರ್ತಿಗಳು ಮೀಸಲಾತಿಗೆ ಶೇ 50ರ ಮಿತಿ ಬೇಕು ಎಂದು ತೀರ್ಪು ನೀಡಿದ್ದರು. ಆದರೆ, 'ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ನೀಡಲಾಗುವ ಮೀಸಲಾತಿಯ ಪ್ರಮಾಣ ಶೇ 50ರ ಮಿತಿ ಮೀರಬಾರದು. ಈ ದೇಶ ಮತ್ತು ಇಲ್ಲಿನ ಜನರ ಅಗಾಧ ವೈವಿಧ್ಯದ ಕಾರಣದಿಂದ ಒದಗಿಬರುವ ಅಸಾಧಾರಣ ಸನ್ನಿವೇಶಗಳಲ್ಲಿ, ಶೇ 50ರ ಮಿತಿಯನ್ನು ಮೀರಬೇಕಾದ ಸ್ಥಿತಿಯನ್ನು ತೆಗೆದುಹಾಕುವಂತಿಲ್ಲ. ಅಂತಹ ಅಸಾಧಾರಣ ಸ್ಥಿತಿಗಳನ್ನು ಎದುರಿಸುವಾಗ ಶೇ 50 ಮಿತಿಯನ್ನು ಸಡಿಲಿಸುವುದು ಅನಿವಾರ್ಯವಾಗುತ್ತದೆ. ಆದರೆ ಹಾಗೆ ಮಾಡುವಾಗ ಅತ್ಯಂತ ಎಚ್ಚರಿಕೆಯನ್ನು ವಹಿಸಬೇಕು' ಎಂಬುದು ಈ ತೀರ್ಪಿನ ಬಹುಮತದ ಅಭಿಪ್ರಾಯವಾಗಿತ್ತು.

'ಅತಿ ಅಸಾಧಾರಣ ಸನ್ನಿವೇಶಗಳಲ್ಲಿ ಈ ಮಿತಿಯನ್ನು ಮೀರಬಹುದು. ಆದರೆ ಶೇ 50ಕ್ಕಿಂತಲೂ ಹೆಚ್ಚಿನ ಪ್ರಮಾಣದ ಮೀಸಲಾತಿಯನ್ನು ಯಾವ ಕಾರಣಕ್ಕೆ ನೀಡಲಾಗುತ್ತಿದೆ, ಮತ್ತು ಹೆಚ್ಚಿನ ಮೀಸಲಾತಿ ಏಕೆ ಅಗತ್ಯ ಎಂಬುದನ್ನು ಅತ್ಯಂತ ನಿಖರವಾಗಿ ಸಮರ್ಥಿಸಿಕೊಳ್ಳಬೇಕು. ಜತೆಗೆ ಸರ್ಕಾರಿ ಉದ್ಯೋಗದಲ್ಲಿ ಯಾವುದೋ ಒಂದು ಸಮುದಾಯದ ಪ್ರತಿನಿಧಿಗಳ ಸಂಖ್ಯೆ ಕಡಿಮೆ ಇದೆ ಎಂಬುದಷ್ಟೇ ಮೀಸಲಾತಿ ಹೆಚ್ಚಳಕ್ಕೆ ಕಾರಣವಾಗಬಾರದು. ಬದಲಿಗೆ ಸರ್ಕಾರದ ವಿವಿಧ ಶ್ರೇಣಿಯ ಹುದ್ದೆಗಳಲ್ಲಿ ಆ ಸಮುದಾಯದ ಪ್ರಾತಿನಿಧ್ಯ ಎಷ್ಟಿದೆ ಎಂಬುದನ್ನೂ ಪರಿಗಣಿಸಬೇಕು. ಶೇ 50ರ ಮಿತಿ ಎಂಬುದು ಒಂದು ವರ್ಷದಲ್ಲಿ ನಡೆಯುವ ಒಟ್ಟು ನೇಮಕಾತಿಗೆ ಅನ್ವಯವಾಗಬೇಕು' ಎಂದು ಆ ತೀರ್ಪಿನಲ್ಲಿ ವಿವರಿಸಲಾಗಿತ್ತು.

ಇಂದಿರಾ ಸಹಾನಿ ಪ್ರಕರಣದ ತೀರ್ಪಿನಲ್ಲಿ ಮೀಸಲಾತಿಗೆ ಶೇ 50ರಷ್ಟು ಮಿತಿ ಇರಬೇಕು ಎಂದು ಹೇಳಿರುವುದು ಎಷ್ಟು ಸತ್ಯವೋ, ಆ ಮಿತಿಯನ್ನು ಮೀರಲು ಅದೇ ತೀರ್ಪಿನಲ್ಲಿ ಅವಕಾಶ ಮಾಡಿಕೊಟ್ಟಿರುವುದೂ ಅಷ್ಟೇ ಸತ್ಯ. ಆದರೆ ಶೇ 50ಕ್ಕಿಂತಲೂ ಹೆಚ್ಚು ಮೀಸಲಾತಿಯನ್ನು ಏಕೆ ನೀಡಬೇಕು ಎಂಬುದನ್ನು ರಾಜ್ಯ ಸರ್ಕಾರಗಳು ದತ್ತಾಂಶಗಳ ಆಧಾರದಲ್ಲಿ ಸಮರ್ಥಿಸಿಕೊಳ್ಳಬೇಕು. ಸಕಾರಣವನ್ನು ನೀಡಿ ಮೀಸಲಾತಿ ಹೆಚ್ಚಳಕ್ಕೆ ಕ್ರಮ ತೆಗೆದುಕೊಳ್ಳಬೇಕು. ಈಗ ಬಿಹಾರವು ಜಾತಿ ಗಣತಿ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಆಧಾರದಲ್ಲಿ ಮೀಸಲಾತಿ ಹೆಚ್ಚಳವನ್ನು ಪ್ರಸ್ತಾಪಿಸಿದೆ. ಜತೆಗೆ ಬಿಹಾರ ಸಚಿವ ಸಂಪುಟವೂ ಅದಕ್ಕೆ ಒಪ್ಪಿಗೆ ನೀಡಿದೆ.




ಮರಾಠ ಮೀಸಲಾತಿಯನ್ನು ಆಗ್ರಹಿಸಿ ಮರಾಠ ಕ್ರಾಂತಿ ಮೋರ್ಚಾ ಹಾಗೂ ಸಾಕಲ್ ಮರಾಠ ಸಮಾಜ್ ಕಾರ್ಯಕರ್ತರು ಮಹಾರಾಷ್ಟ್ರದ ಕರಾಡ್‌ನಲ್ಲಿ ಪ್ರತಿಭಟನೆ ನಡೆಸಿದರು – ಪಿಟಿಐ ಚಿತ್ರ

## ಇಡಬ್ಲ್ಯುಎಸ್‌ಗೆ ಅನ್ವಯವಾಗದ ಮಿತಿ



ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ (ಇಡಬ್ಲ್ಯುಎಸ್) ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗ ನೇಮಕಾತಿಯಲ್ಲಿ ಶೇ 10ರಷ್ಟು ಮೀಸಲಾತಿಯನ್ನು 2019ರಲ್ಲಿ ಕೇಂದ್ರ ಸರ್ಕಾರವು ಜಾರಿಗೆ ತಂದಿತ್ತು. ಅದರಿಂದ ರಾಜ್ಯಗಳಲ್ಲಿನ ಮೀಸಲಾತಿಯ ಒಟ್ಟು ಪ್ರಮಾಣ ಶೇ 60ಕ್ಕೆ ಏರಿಕೆಯಾಗಿತ್ತು. ಮೀಸಲಾತಿ ಪ್ರಮಾಣ ಶೇ 50ರ ಮಿತಿ ಮೀರುವಂತಿಲ್ಲ ಎಂಬ ತೀರ್ಪನ್ನು ಇದು ಉಲ್ಲಂಘಿಸುತ್ತದೆ ಎಂದು ಕೇಂದ್ರ ಸರ್ಕಾರದ ನಿರ್ಧಾರದ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಹಲವು ಅರ್ಜಿಗಳನ್ನು ಹಾಕಲಾಗಿತ್ತು.

ಇಂದಿರಾ ಸಹಾನಿ ಪ್ರಕರಣದ ತೀರ್ಪಿನಲ್ಲಿ ಸಂವಿಧಾನ ಪೀಠವು, 'ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಸಮುದಾಯಗಳಿಗೆ ನೀಡುವ ಮೀಸಲಾತಿಯ ಒಟ್ಟು ಪ್ರಮಾಣ ಶೇ 50ರಷ್ಟನ್ನು ಮೀರಬಾರದು' ಎಂದು ಹೇಳಿತ್ತು. ಹೀಗಾಗಿ ಇಡಬ್ಲ್ಯುಎಸ್ ಮೀಸಲಾತಿಗೆ ಈ ಮಿತಿ ಅನ್ವಯವಾಗುವುದಿಲ್ಲ ಎಂದೂ ಸುಪ್ರೀಂ ಕೋರ್ಟ್‌ನಲ್ಲಿ ವಾದಿಸಲಾಗಿತ್ತು. ಆರ್ಥಿಕವಾಗಿ ದುರ್ಬಲವಾದವರಿಗೆ ಮೀಸಲಾತಿಯ ಅಗತ್ಯವಿದೆ ಎಂದು ಕೇಂದ್ರ ಸರ್ಕಾರ ಪ್ರತಿಪಾದಿಸಿದ ಕಾರಣಕ್ಕೆ, ಮೀಸಲಾತಿಯನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿತ್ತು. ಜತೆಗೆ ಶೇ 50ರಷ್ಟು ಮೀಸಲಾತಿಯ ಮಿತಿಯನ್ನು ಸಡಿಲ ಮಾಡಬಹುದು ಎಂದೂ ಹೇಳಿತ್ತು.

ಒಂದೊಮ್ಮೆ ಇದರ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಕೆಯಾದರೆ, ಸುಪ್ರೀಂ ಕೋರ್ಟ್ ನೀಡುವ ತೀರ್ಪು ದೇಶದ ರಾಜಕಾರಣದಲ್ಲಿ ಮತ್ತು ಸಾಮಾಜಿಕ ನ್ಯಾಯದಲ್ಲಿ ಮಹತ್ವದ ಮೈಲುಗಲ್ಲಾಗಲಿದೆ.

## ಹಲವು ಯತ್ನಗಳು

ಶೇ 50ಕ್ಕಿಂತಲೂ ಹೆಚ್ಚಿನ ಮೀಸಲಾತಿ ನೀಡಲು ಹಲವು ರಾಜ್ಯ ಸರ್ಕಾರಗಳು ಯತ್ನಿಸಿವೆಯಾದರೂ, ವಿವಿಧ ಕಾರಣಗಳಿಂದಾಗಿ ಅವು ಅನುಷ್ಠಾನವಾಗಿಲ್ಲ. ಅಂತಹ ಕೆಲವು ಯತ್ನಗಳ ವಿವರ ಇಲ್ಲಿದೆ

### ಛತ್ತೀಸಗಢ



ಭೂಪೇಶ್ ಬಘೇಲ್ ನೇತೃತ್ವದ ರಾಜ್ಯ ಸರ್ಕಾರವು ಶಿಕ್ಷಣ ಮತ್ತು ನೇಮಕಾತಿಯಲ್ಲಿ ಶೇ 76ರಷ್ಟು ಮೀಸಲಾತಿ ನೀಡುವ ಸಂಬಂಧ ಎರಡು ತಿದ್ದುಪಡಿ ಮಸೂದೆಯನ್ನು 2022ರ ಡಿಸೆಂಬರ್‌ನಲ್ಲಿ ಮಂಡಿಸಿತ್ತು. ಇದು ದೇಶದಲ್ಲೇ ಅತಿ ಹೆಚ್ಚಿನ ಪ್ರಮಾಣದ ಮೀಸಲಾತಿ ನೀಡುವ ಮಸೂದೆಯಾಗಿತ್ತು. ಪರಿಶಿಷ್ಟ ಪಂಗಡಕ್ಕೆ ಶೇ 32, ಇತರೆ ಹಿಂದುಳಿದ ವರ್ಗಗಳಿಗೆ ಶೇ 27, ಪರಿಶಿಷ್ಟ ಜಾತಿಗೆ ಶೇ 13 ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಶೇ 4ರಷ್ಟು ಮೀಸಲಾತಿಯನ್ನು ಮಸೂದೆಯಲ್ಲಿ ನೀಡಲಾಗಿತ್ತು. ಈ ಮಸೂದೆಯನ್ನು ರಾಜ್ಯಪಾಲೆ ಅನುಸೂಯ ಉಯಿಕೆ ಅವರಿಗೆ ಕಳುಹಿಸಲಾಗಿದೆ. ಆದರೆ, ಇದಕ್ಕೆ ಅವರು ಅಂಕಿತ ಹಾಕಿಲ್ಲ. ಈ ಕುರಿತು ರಾಜ್ಯ ಸರ್ಕಾರ ಹಾಗೂ ರಾಜ್ಯಪಾಲರ ಮಧ್ಯೆ ತಿಕ್ಕಾಟ ನಡೆಯುತ್ತಿದೆ.

ಈ ಹಿಂದೆ, 2012ರಲ್ಲಿ ರಮಣ್ ಸಿಂಗ್ ನೇತೃತ್ವದ ಸರ್ಕಾರದಲ್ಲಿಯೂ ಶೇ 50ರಷ್ಟು ಮೀಸಲಾತಿ ಮಿತಿಯನ್ನು ಮೀರಿ, ಶೇ 58ರಷ್ಟು ಮೀಸಲಾತಿ ನೀಡುವ ಮಸೂದೆಗೆ ವಿಧಾನಸಭೆಯ ಅನುಮೋದನೆ ದೊರೆತಿತ್ತು. ಇದಕ್ಕೆ ರಾಜ್ಯಪಾಲರ ಅಂಕಿತವೂ ದೊರೆತಿತ್ತು. 2022ರ ಸೆಪ್ಟೆಂಬರ್‌ವರೆಗೂ ಶೇ 58ರಷ್ಟು ಮೀಸಲಾತಿಯ ಕಾನೂನು ರಾಜ್ಯದಲ್ಲಿ ಜಾರಿಯಲ್ಲಿತ್ತು. 2022ರ ಸೆಪ್ಟೆಂಬರ್‌ನಲ್ಲಿ ಛತ್ತೀಸಗಢ ಹೈಕೋರ್ಟ್ ಈ ಕಾನೂನಿಗೆ ತಡೆ ನೀಡಿತ್ತು. ಈ ಕಾನೂನನ್ನು ಅಸಾಂವಿಧಾನಿಕ ಎಂದೂ ಹೇಳಿತ್ತು. ನಂತರ ರಾಜ್ಯ ಸರ್ಕಾರವು ಈ ಬಗ್ಗೆ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತು. ಹೈಕೋರ್ಟ್‌ನ ಆದೇಶಕ್ಕೆ 2023ರ ಮೇ ತಿಂಗಳಿನಲ್ಲಿ ಸುಪ್ರೀಂ ಕೋರ್ಟ್ ತಡೆ ನೀಡಿದೆ.

### ಮಹಾರಾಷ್ಟ್ರ

2001ರ ರಾಜ್ಯ ಮೀಸಲಾತಿ ಕಾಯ್ದೆಯ ಅನ್ವಯ ನೇಮಕಾತಿ ಮತ್ತು ಶಿಕ್ಷಣದಲ್ಲಿ ಶೇ 52ರಷ್ಟು ಮೀಸಲಾತಿ ಜಾರಿಯಲ್ಲಿದೆ. ಪರಿಶಿಷ್ಟ ಜಾತಿಗೆ ಶೇ 13, ಪರಿಶಿಷ್ಟ ಪಂಗಡಕ್ಕೆ ಶೇ 7, ಇತರೆ ಹಿಂದುಳಿದ ವರ್ಗಗಳಿಗೆ ಶೇ 19, ಅತಿ ಹಿಂದುಳಿದ ವರ್ಗಗಳಿಗೆ (ವಿಮುಕ್ತ ಜಾತಿ ಮತ್ತು ಅಲೆಮಾರಿ ಬುಡಕಟ್ಟುಗಳು, ವಿಶೇಷ ಹಿಂದುಳಿದ ವರ್ಗಗಳು) ಶೇ 13ರಷ್ಟು ಮೀಸಲಾತಿ ಇದೆ. ಮರಾಠ ಮೀಸಲಾತಿ ಹೋರಾಟವು ರಾಜ್ಯದಲ್ಲಿ ಇತ್ತೀಚೆಗೆ ತೀವ್ರಗೊಂಡಿದೆ.

1981ರಿಂದಲೂ ಮರಾಠ ಮೀಸಲಾತಿ ವಿಚಾರವು ಚರ್ಚೆಯಲ್ಲಿದೆ. 2014ರಲ್ಲಿ ಕಾಂಗ್ರೆಸ್ ಹಾಗೂ ಎನ್‌ಸಿಪಿ ನೇತೃತ್ವದ ಸರ್ಕಾರವು ಮರಾಠರಿಗೆ ಶೇ 16ರಷ್ಟು ಮೀಸಲಾತಿಯನ್ನು ಸುಗ್ರೀವಾಜ್ಞೆಯ ಮೂಲಕ ನೀಡಿತು. ನಂತರ ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗದ ಕಾಯ್ದೆ 2018ರ ವಿಶೇಷ ಅವಕಾಶದ ಅಡಿಯಲ್ಲಿ ಮೀಸಲಾತಿಯನ್ನು ನೀಡಿತು. ಆಗ ರಾಜ್ಯದಲ್ಲಿ ಒಟ್ಟು ಮೀಸಲಾತಿ ಪ್ರಮಾಣ ಶೇ 68ರಷ್ಟಿತ್ತು. ಆದರೆ, 2019ರಲ್ಲಿ ಬಾಂಬೆ ಹೈಕೋರ್ಟ್ ಈ ಮೀಸಲಾತಿ ಅವಕಾಶವನ್ನು ತಿರಸ್ಕರಿಸಿತು. ನಂತರ 2021ರಲ್ಲಿ ಸುಪ್ರೀಂ ಕೋರ್ಟ್ ಸಹ ಇದನ್ನೇ ಹೇಳಿತು. 'ಶೇ 50ಕ್ಕಿಂತ ಹೆಚ್ಚಿನ ಮೀಸಲಾತಿ ನೀಡುವಂಥ ಅಸಾಧಾರಣ ಸಂದರ್ಭವೇನೂ ನಿರ್ಮಾಣವಾಗಿಲ್ಲ' ಎಂದು ತನ್ನ ಆದೇಶದಲ್ಲಿ ಹೇಳಿತ್ತು.

### ತೆಲಂಗಾಣ

2017ರಲ್ಲಿ ಕೆ. ಚಂದ್ರಶೇಖರ ರಾವ್ (ಕೆಸಿಆರ್) ಅವರ ನೇತೃತ್ವದ ಟಿಆರ್‌ಎಸ್ (ಈಗಿನ ಬಿಆರ್‌ಎಸ್) ಸರ್ಕಾರವು ಶಿಕ್ಷಣ ಹಾಗೂ ಉದ್ಯೋಗದಲ್ಲಿ ಪರಿಶಿಷ್ಟ ಪಂಗಡ ಹಾಗೂ ಮುಸ್ಲಿಂ ಸಮುದಾಯಗಳ ಮೀಸಲಾತಿಯನ್ನು ಹೆಚ್ಚಿಸಿ ವಿಧಾನಸಭೆಯಲ್ಲಿ ಮಸೂದೆ ಮಂಡಿಸಿತ್ತು. ಪರಿಶಿಷ್ಟ ಪಂಗಡಕ್ಕೆ ಶೇ 6ರಷ್ಟಿರುವ ಮೀಸಲಾತಿಯನ್ನು ಶೇ 10ಕ್ಕೆ ಏರಿಸುವ ಹಾಗೂ ಶೇ 4ರಷ್ಟಿದ್ದ ಮುಸ್ಲಿಂ ಸಮುದಾಯದ ಮೀಸಲಾತಿಯನ್ನು ಶೇ 12ಕ್ಕೆ ಏರಿಸುವ ಮಸೂದೆ ಅದಾಗಿತ್ತು. ಆಗ ರಾಜ್ಯದಲ್ಲಿರುವ ಒಟ್ಟು ಮೀಸಲಾತಿ ಪ್ರಮಾಣವು 62ಕ್ಕೆ ಏರಿಕೆ ಆಗುತ್ತಿತ್ತು. ಇದಕ್ಕೆ ವಿಧಾನಸಭೆಯ ಅನುಮೋದನೆಯೂ ದೊರಕಿತ್ತು. ರಾಜ್ಯಪಾಲರು, ರಾಷ್ಟ್ರಪತಿ ಅಂಕಿತಕ್ಕಾಗಿ ಈ ಮಸೂದೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಆದರೆ, ಕಾನೂನು ತೊಡಕಿನ ಕಾರಣ ನೀಡಿ, ಕೇಂದ್ರವು ರಾಷ್ಟ್ರಪತಿ ಅಂಕಿತಕ್ಕೆ ಕಳುಹಿಸಿಲ್ಲ. 2022ರಲ್ಲಿ ಕಾರ್ಯಕಾರಿ ಆದೇಶ ಹೊರಡಿಸಿದ ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿ ಮೀಸಲಾತಿ ಪ್ರಮಾಣವನ್ನು ಶೇ 10ಕ್ಕೆ ಏರಿಸಿದೆ.

ಆಧಾರ: ಇಂದಿರಾ ಸಹಾನಿ ಪ್ರಕರಣದ ತೀರ್ಪು, ಪಿಟಿಐ, ಇಡಬ್ಲ್ಯುಎಸ್ ಮೀಸಲಾತಿ ಪ್ರಕರಣದ ತೀರ್ಪು

## ಸಿನಿ ಬಿಟ್ಸ್

### 'ಥಗ್ ಲೈಫ್' ಕಮಲ್ ಹೊಸ ಪ್ರಾಜೆಕ್ಟ್



ಥಗ್ ಲೈಫ್ ಪೋಸ್ಟರ್

ಬಹುಭಾಷಾ ನಟ ಕಮಲ್ ಹಾಸನ್ ನಟನೆಯ 234ನೇ ಸಿನಿಮಾದ ಶೀರ್ಷಿಕೆ ಘೋಷಣೆಯಾಗಿದೆ. 'ಥಗ್ ಲೈಫ್' ಹೆಸರಿನ ಈ ಚಿತ್ರವನ್ನು ಮಣಿರತ್ನಂ ಅವರು ನಿರ್ದೇಶಿಸುತ್ತಿದ್ದಾರೆ.

37 ವರ್ಷಗಳ ಬಳಿಕ ಕಮಲ್ ಹಾಗೂ ಮಣಿರತ್ನಂ ಕಾಂಬಿನೇಷನ್‌ನಲ್ಲಿ ಸಿನಿಮಾವೊಂದು ತೆರೆಕಾಣುತ್ತಿದೆ. 1987ರಲ್ಲಿ 'ನಾಯಗನ್' ಸಿನಿಮಾ ಬಳಿಕ ಈ ಜೋಡಿ ತೆರೆ ಮೇಲೆ ಮತ್ತೆ ಒಂದಾಗುತ್ತಿದೆ. ರಂಗರಾಯ ಸತ್ಯವೇಲ್ ನಾಯಗನ್ ಆಗಿ ಕಮಲ್ ಹಾಸನ್ ತಾನೊಬ್ಬ ಗ್ಯಾಂಗ್‌ಸ್ಟರ್ ಎಂದು ಚಿತ್ರದ ಟೈಟಲ್ ಪೋಸ್ಟರ್ ವಿಡಿಯೊದಲ್ಲಿ ಪರಿಚಯ ಮಾಡಿಕೊಂಡಿದ್ದಾರೆ. 'ಉಳಗನಾಯಗನ್' ಈ ಚಿತ್ರದಿಂದ ಹೊಸ ಅವತಾರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಎ.ಆರ್. ರೆಹಮಾನ್ ಸಂಗೀತ ಚಿತ್ರಕ್ಕಿದೆ. ಆ್ಯಕ್ಷನ್ ಎಂಟರ್‌ಟೈನರ್ ಜಾನರ್‌ನ ಈ ಸಿನಿಮಾದಲ್ಲಿ ತ್ರಿಷಾ ಕೃಷ್ಣನ್, ದುಲ್ಕರ್ ಸಲ್ಮಾನ್, ಜಯಂ ರವಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ರಾಜ್ ಕಮಲ್ ಇಂಟರ್‌ನ್ಯಾಷನಲ್ ಫಿಲ್ಮ್ಸ್ ಹಾಗೂ ಮದ್ರಾಸ್ ಟಾಕೀಸ್‌ನಡಿ ಕಮಲ್ ಹಾಸನ್, ಮಣಿರತ್ನಂ, ಆರ್. ಮಹೇಂದ್ರನ್ ಮತ್ತು ಶಿವ ಅನಂತಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

ಉದಯನಿಧಿ ಸ್ಟಾಲಿನ್ ಈ ಚಿತ್ರವನ್ನು ಪ್ರಸ್ತುತಪಡಿಸುತ್ತಿದ್ದಾರೆ. ಶ್ರೀಕರ್ ಪ್ರಸಾದ್ ಸಂಕಲನ, ರವಿ ಕೆ. ಚಂದ್ರನ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

### ಎರಡು ಭಾಷೆಗಳಲ್ಲಿ 'ಸತ್ಯಂ'

**'ಕರಿಯ 2'**, 'ಗಣಪ' ಮೊದಲಾದ ಮಾಸ್ ಚಿತ್ರಗಳ ಮೂಲಕವೇ ಗುರುತಿಸಿಕೊಂಡಿದ್ದ ನಟ ಸಂತೋಷ್ ಬಾಲರಾಜ್ ನಟನೆಯ 'ಸತ್ಯಂ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟಿ ರಂಜನಿ ರಾಘವನ್ ಚಿತ್ರದಲ್ಲಿ ಸಂತೋಷ್‌ಗೆ ಜೋಡಿಯಾಗಿದ್ದಾರೆ.

'2019ರಿಂದ ಪ್ರಾರಂಭವಾದ ಪಯಣವಿದು. ನಾವು ಅಂದುಕೊಂಡಂತೆ ಸಿನಿಮಾ ಬರಬೇಕಿತ್ತು. ಅದಕ್ಕಾಗಿ ಸ್ವಲ್ಪ ತಡವಾಯಿತು. ಚಿತ್ರದ ಎಲ್ಲ ಕೆಲಸಗಳೂ ಪೂರ್ಣಗೊಂಡಿದ್ದು, ಡಿಸೆಂಬರ್‌ನಲ್ಲಿ ಬಿಡುಗಡೆಗೆ ಆಲೋಚಿಸಿದ್ದೇವೆ. ಕನ್ನಡ ಮತ್ತು ತೆಲುಗಿನಲ್ಲಿ ಚಿತ್ರ ತೆರೆಗೆ ಬರಲಿದೆ' ಎಂದರು ನಿರ್ಮಾಪಕ ಮಹಂತೇಶ್ ವಿಕೆ.

'ನನ್ನ ತಂದೆ ಆನೇಕಲ್ ಬಾಲರಾಜ್ ಬದುಕಿದ್ದಾಗ ಈ ಕಥೆಯನ್ನು ಇಷ್ಟಪಟ್ಟು ಸಿನಿಮಾಗೆ ಒಪ್ಪಿಗೆ ನೀಡಿದ್ದರು. ಆದರೆ ಈಗ ಚಿತ್ರ ನೋಡಲು ಅವರಿಲ್ಲ ಎಂಬ ಬೇಸರವಿದೆ. ತಂದೆ ಕಟ್ಟಿರುವ ನಿರ್ಮಾಣ ಸಂಸ್ಥೆಯನ್ನು ಮುಂದುವರಿಸುತ್ತಿದ್ದು, ಸಂಸ್ಥೆಯಿಂದ ಮತ್ತೆರಡು ಸಿನಿಮಾಗಳು ಸಿದ್ಧವಾಗುತ್ತಿವೆ' ಎಂದು ಚಿತ್ರದ ನಾಯಕ ಸಂತೋಷ್ ಬಾಲರಾಜ್ ತಿಳಿಸಿದರು.

ಅಶೋಕ್ ಕಡಬ ನಿರ್ದೇಶನದ ಚಿತ್ರಕ್ಕೆ ರವಿ ಬಸ್ರೂರು ಸಂಗೀತ, ಸಿನಿಟೆಕ್ ಸೂರಿ ಛಾಯಾಗ್ರಹಣವಿದೆ. 'ತುಳುನಾಡಿನ ದೈವಾರಾಧನೆ ಜೊತೆಗೆ ಎರಡು ತಲೆಮಾರಿನ ಕಥೆ ಹೊಂದಿರುವ ಚಿತ್ರ ಇದು. ನಾಯಕಿಯದ್ದು ಕಥೆಗೆ ತಿರುವು ನೀಡುವ ಪಾತ್ರ' ಎಂದರು ಚಿತ್ರದ ನಾಯಕಿ ರಂಜನಿ ರಾಘವನ್.

ಮುಖ್ಯಮಂತ್ರಿ ಚಂದ್ರು, ಅವಿನಾಶ್, ವಿನಯಾ ಪ್ರಸಾದ್, ತೆಲುಗು ನಟ ಸುಮನ್ ಮೊದಲಾದವರು ತಾರಾಗಣದಲ್ಲಿದ್ದಾರೆ.



ಸಂತೋಷ್ ಬಾಲರಾಜ್, ರಂಜನಿ ರಾಘವನ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

**ಹೆಣಗಳಿಗೆ** ಬಿಳಿ ಬಟ್ಟೆ ಸುತ್ತಿ ಸಾಲಾಗಿ ಇರಿಸಲಾಗಿರುವ ದೃಶ್ಯಗಳನ್ನು ವಿಡಿಯೊ ಆರಂಭವಾದ ಕೆಲವು ಸೆಕೆಂಡಿನವರೆಗೂ ನೋಡಬಹುದು. ಇದ್ದಕ್ಕಿದ್ದಂತೆ, ಶವಗಳು ಕಣ್ಣುಬಿಡುತ್ತವೆ... ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಸಂಖ್ಯೆಯಲ್ಲಿ ಹರಿದಾಡುತ್ತಿವೆ. ಇಸ್ರೇಲ್–ಹಮಾಸ್ ಯುದ್ಧಕ್ಕೂ ಇದಕ್ಕೂ ಹೋಲಿಸಿ ಅಭಿಪ್ರಾಯ ಹಂಚಿಕೊಳ್ಳಲಾಗುತ್ತಿದೆ. ಗಾಜಾದಲ್ಲಿ ಜನರು ಸಾಯುತ್ತಿಲ್ಲ, ಜಗತ್ತಿಗೆ ಸಾವಿನ ಸಂಖ್ಯೆಯನ್ನು ತೋರಿಸಲು ಈ ರೀತಿ ನಾಟಕ ಮಾಡುತ್ತಿದ್ದಾರೆ ಎಂಬ ಪೋಸ್ಟ್‌ಗಳನ್ನು ಹಂಚಿಕೊಳ್ಳಲಾಗುತ್ತಿದೆ. 'ಸತ್ತವನಿಗೆ ಜೀವ ಬಂತು!' ಎನ್ನುವ ವ್ಯಂಗ್ಯದ ದಾಟಿಯಲ್ಲಿ ಪೋಸ್ಟ್‌ಗಳನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.



**ಮಲೇಷ್ಯಾದಲ್ಲಿ** ಅಂತ್ಯಸಂಸ್ಕಾರದ ವಿಧಿಗಳನ್ನು ಹೇಳಿಕೊಡುವ ತರಬೇತಿ ಕೇಂದ್ರಗಳಿವೆ. ಹೀಗೆ ಮುಸ್ಲಿಂ ಸಮುದಾಯದ ಅಂತ್ಯಸಂಸ್ಕಾರದ ಕುರಿತು ತರಬೇತಿ ನೀಡುತ್ತಿದ್ದ ವೇಳೆ ಈ ವಿಡಿಯೊವನ್ನು ಸೆರೆ ಹಿಡಿಯಲಾಗಿದೆ. ಇನ್‌ಸ್ಟಾಗ್ರಾಂನಲ್ಲಿ ಆಗಸ್ಟ್ 21ರ ಸುಮಾರಿಗೆ ಈ ವಿಡಿಯೊಗಳು ಮೊದಲು ಹರಿದಾಡಿವೆ. 'ಈ ವಿಡಿಯೊಗಳನ್ನು ತಮಾಷೆಗಾಗಿ ಹಂಚಿಕೊಳ್ಳಲಾಗುತ್ತಿದೆ' ಎಂದು ಜಯಾನ್ ಎನ್ನುವ ಮಲೇಷ್ಯಾದ ರೇಡಿಯೊ ವಾಹಿನಿಯು ತನ್ನ ಅಧಿಕೃತ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಬರೆದುಕೊಂಡಿದೆ. ಸ್ವಯಂ ಪ್ರೇರಿತವಾಗಿ ಮಲೇಷ್ಯಾದ ಶಾಲೆ ಹಾಗೂ ಮಸೀದಿಗಳಲ್ಲಿ ಈ ಕೋರ್ಸ್ ಅನ್ನು ಮಾಡಬಹುದು ಎಂದು ಅಲ್ಲಿನ ಸ್ಥಳೀಯರೊಬ್ಬರು ಮಾಹಿತಿ ನೀಡಿದ್ದಾರೆ. ಈ ಬಗ್ಗೆ ಹಲವು ವಿಡಿಯೊಗಳು ಯೂಟ್ಯೂಬ್‌ನಲ್ಲಿ ಇವೆ. ಖಚಿತವಾಗಿ ಯಾವ ಜಾಗದಲ್ಲಿ ಈ ವಿಡಿಯೊ ಸೆರೆಹಿಡಿಯಲಾಗಿದೆ ಎಂದು ತಿಳಿದುಬಂದಿಲ್ಲ. ಆದರೆ, ಇದು ಇಸ್ರೇಲ್–ಹಮಾಸ್ ಯುದ್ಧಕ್ಕೆ ಸಂಬಂಧಿಸಿದ್ದಲ್ಲ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

## ನುಡಿ ಬೆಳಗು

### ಕ್ಷಣದಲ್ಲಿ ಕೃತಘ್ನರಾಗುವ ಮುನ್ನ






ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

**ಒಂದೂರಿನಲ್ಲಿ** ಒಬ್ಬ ರಾಜನಿದ್ದ. ಅವನ ಹತ್ತಿರ ಆರು ಭರ್ಜರಿ ಬೇಟೆ ನಾಯಿಗಳಿದ್ದವು. ನೋಡಿದರೇ ಭಯವಾಗುವಂಥವು! ತನ್ನ ಸೇವಕರು ಯಾರಾದರೂ ತಪ್ಪು ಮಾಡಿದರೆ ರಾಜ ಹಸಿದ ಆ ನಾಯಿಗಳ ಬೋನಿಗೆ ಹಾಕಿಸುತ್ತಿದ್ದ. ಆ ಮನುಷ್ಯನನ್ನು ಅವು ಕ್ಷಣಾರ್ಧದಲ್ಲಿ ಸಿಗಿದು-ಹಾಕುತ್ತಿದ್ದವು. ಹಾಗಿರುವಾಗ ಬುದ್ಧಿವಂತನೂ ಪ್ರಾಮಾಣಿಕನೂ ಆದ ಸೇವಕನೊಬ್ಬ ಅಕಸ್ಮಾತ್ತಾಗಿ ಒಂದು ತಪ್ಪು ಮಾಡಿಬಿಟ್ಟ! ನಾಯಿಗಳ ಬೋನಿಗೆ ಈ ಸೇವಕನನ್ನು ಎಸೆಯಬೇಕೆಂದು ಆದೇಶಿಸಿದ ರಾಜ. ಆಗ ಆ ಸೈನಿಕ 'ಮಹಾರಾಜ, ಹತ್ತು ವರ್ಷಗಳ ಕಾಲ ನಿಮ್ಮ ಸೇವೆ ಮಾಡಿದ್ದೇನೆ, ದಯವಿಟ್ಟು ಶಿಕ್ಷೆಯನ್ನು ಹತ್ತು ದಿನ ಮುಂದೂಡಬೇಕೆಂಬುದು ನನ್ನ ಕೊನೆಯ ಪ್ರಾರ್ಥನೆ' ಎಂದ. ರಾಜ ಅದಕ್ಕೆ ಒಪ್ಪಿದ.

ಸೇವಕ ಸೀದಾ ನಾಯಿಗಳನ್ನು ನೋಡಿಕೊಳ್ಳುವ ಕೆಲಸಗಾರನಿದ್ದಲ್ಲಿಗೆ ಹೋಗಿ ಕೆಲದಿನ ತಾನು ಅವುಗಳ ಆರೈಕೆಯನ್ನು ಮಾಡುವುದಾಗಿ ತಿಳಿಸಿದ. ಅಂತೆಯೇ ನಾಯಿಗಳಿಗೆ ಆಹಾರ ಹಾಕುವುದು, ಮೈ ತೊಳೆಸುವುದು ಹೀಗೆ ಪ್ರತೀ ಕೆಲಸವನ್ನೂ ಮಾಡಿದ. ಹತ್ತು ದಿನಗಳು ಕಳೆದ ಮೇಲೆ ಆಸ್ಥಾನಕ್ಕೆ ಬಂದ ಸೇವಕನನ್ನು ನಾಯಿಗಳಿರುವ ಬೋನಿಗೆ ಹಾಕುವಂತೆ ರಾಜ ಹೇಳಿದ. ಅಂತೆಯೇ ಅವನನ್ನು ಬೋನಿಗೆ ಕಳುಹಿಸಿದಾಗ ಆ ನಾಯಿಗಳು ಆಕ್ರಮಣ ಮಾಡುವ ಬದಲು ಸೇವಕನ ಪಾದವನ್ನು ನೆಕ್ಕಲಾರಂಭಿಸಿದವು. ಎಲ್ಲರಿಗೂ ಅಚ್ಚರಿ! ರಾಜನೂ ಕಂಗಾಲಾಗಿ ತನ್ನ ನಾಯಿಗಳಿಗೆ ಏನಾಯಿತೆಂದು ವಿಚಾರಿಸಲಾರಂಭಿಸಿದ. ಆಗ ಸೇವಕ, 'ದೊರೆಯೇ ನಾನು ಈ ನಾಯಿಗಳ ಸೇವೆಯನ್ನು ಕೇವಲ ಹತ್ತು ದಿನ ಮಾತ್ರ ಮಾಡಿದೆ. ಅವು ನನ್ನ ಸೇವೆಯನ್ನು ಮರೆಯಲಿಲ್ಲ. ಅದೇ ಪೂರ್ತಿ ಹತ್ತು ವರ್ಷಗಳ ಕಾಲ ನಿಮ್ಮ ಸೇವೆಯನ್ನು ಮಾಡಿದ್ದರೂ ನನ್ನ ಸೇವೆಯನ್ನೆಲ್ಲ ಮರೆತು ನನ್ನ ಪುಟ್ಟದೊಂದು ತಪ್ಪಿಗೆ ಇಂತಹ ಕ್ರೂರ ಶಿಕ್ಷೆ ಕೊಟ್ಟುಬಿಟ್ಟಿರಿ' ಎನ್ನುತ್ತ ಗದ್ಗದಿತನಾದ. ರಾಜನಿಗೆ ತನ್ನ ತಪ್ಪಿನ ಅರಿವಾಗಿ ಸೇವಕನ ಕ್ಷಮೆ ಕೋರಿ ಶಿಕ್ಷೆಯನ್ನು ರದ್ದುಗೊಳಿಸಿದ.

ಕೆಲವೊಮ್ಮೆ ನಮ್ಮ ಬದುಕಿನಲ್ಲಿಯೂ ಹೀಗಾಗುತ್ತದೆ. ನಮ್ಮ ತಂದೆ ತಾಯಿ, ಸೋದರ ಸೋದರಿಯರು ಆಪ್ತ ಸ್ನೇಹಿತರೊಂದಿಗೆ ಯಾವುದೋ ಒಂದು ಕಾರಣಕ್ಕೆ ಕೋಪಿಸಿಕೊಂಡಿರುತ್ತೇವೆ. ವರ್ಷಗಳ ಕಾಲ ಸಂಪರ್ಕವನ್ನೇ ಕಡಿದುಕೊಂಡಿರುತ್ತೇವೆ. ಎದೆಯಲ್ಲಿ ಅರಿವಿಲ್ಲದೇ ಭಾರವೊಂದನ್ನು ಹೊತ್ತಿರುತ್ತೇವೆ. ಒಮ್ಮೆ ತಪ್ಪು ಮಾಡಿದರೆನ್ನುವ ಕಾರಣಕ್ಕೆ ಅವರು ನಮಗೆ ಮಾಡಿದ ಎಲ್ಲ ಉಪಕಾರವನ್ನು ಮರೆಯುವುದು, ಆಪ್ತ ಸಂಬಂಧಗಳನ್ನು ಕತ್ತರಿಸಿಹಾಕುವುದು ದೊಡ್ಡ ತಪ್ಪು. ಪರಸ್ಪರರ ಸಣ್ಣಪುಟ್ಟ ತಪ್ಪುಗಳನ್ನು ಕ್ಷಮಿಸಿ ನಮ್ಮ ಅಹಂಕಾರವನ್ನು ಬಿಟ್ಟು ಹಗುರಾಗುವುದೇ ಈ ಚಿಕ್ಕ ಬದುಕಿಗೆ ಅಗತ್ಯವಾಗಿ ಮುಖ್ಯ ಬೇಕಿರುವ ಅಂಶ.

## ಗುಂಡಣ್ಣ




## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಗುರುವಾರ ನವೆಂಬರ್ 9, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಏಕಾದಶಿ ಗಂ. 10-42 ನಕ್ಷತ್ರ: ಉತ್ತರಫಲ್ಗುನಿ ಗಂ. 21-57 ಯೋಗ: ವೈಧೃತಿ ಗಂ 16-48 ಕರಣ: ಬಾಲವ ಗಂ. 10-42, ತುಲಾ ಮಾಸದ 23 ನೇ ದಿನ, ಮಳೆನಕ್ಷತ್ರ: ವಿಶಾಖ 1.
ರಾಹುಕಾಲ : ಮಧ್ಯಾಹ್ನ 01-30 - 03-00
ಸೂರ್ಯೋದಯ : 06-31 ಸೂರ್ಯಾಸ್ತ : 05-58
ಮುಸ್ಲಿಂ ದಿನಾಂಕ : 24 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ : 5, 9

**ಮೇಷ:** ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆಯಲ್ಲಿ ಗಮನವಿರಲಿ. ಬಳಕೆಯ ಜ್ಞಾನದ ಕೊರತೆಯಿಂದಾಗಿ ಅಥವಾ ಅತಿಯಾದ ಬಳಕೆಯಿಂದಾಗಿ ವಸ್ತು ನಷ್ಟವಾಗಬಹುದು. ನೆರೆ-ಹೊರೆಯವರೊಂದಿಗೆ ಸೌಹಾರ್ದದಿಂದ ವರ್ತಿಸಿ.

**ವೃಷಭ:** ಹಲವಾರು ಅವಕಾಶಗಳು ನಿಮಗೆ ಎದುರಾಗುವುದರಿಂದ ಗೊಂದಲಕ್ಕೆ ಈಡಾಗುವಿರಿ. ದಿನವಿಡೀ ಇತರರ ಸಮಸ್ಯೆ ಬಗೆಹರಿಸುವುದರಲ್ಲಿ ವ್ಯಸ್ತರಾಗಿರುವಿರಿ. ಅತ್ತೆ-ಸೊಸೆ ಬಾಂಧವ್ಯದಲ್ಲಿ ಅಭಿಪ್ರಾಯ ಭೇದ ಉಂಟಾಗಬಹುದು.

**ಮಿಥುನ:** ಈ ದಿನ ನೀವು ತೆಗೆದುಕೊಳ್ಳುವ ಮೌನವೆಂಬ ಅಸ್ತ್ರ ನಿಮ್ಮ ಅಭಿವೃದ್ಧಿಗೆ ಕಾರಣವಾಗುತ್ತದೆ. ನಿಮ್ಮ ಆತ್ಮವಿಶ್ವಾಸವೇ ನಿಮಗೆ ಶ್ರೀರಕ್ಷೆಯಾಗಿರುತ್ತದೆ. ಈಶ್ವರನ ಸೇವೆಯಿಂದ ಕೆಲಸ ಕಾರ್ಯಗಳು ಕೂಡಿ ಬರುವುವು.

**ಕರ್ಕಾಟಕ:** ನಿಮ್ಮ ನಿಯಮಿತ ಕೆಲಸಕ್ಕೆ ಸೂಕ್ತ ಪ್ರಶಂಸೆ ಹಾಗೂ ಅಭಿವೃದ್ಧಿ ದೊರೆಯಲಿದೆ. ರಾಜಕೀಯ ವಿಷಯಗಳಲ್ಲಿ ಮೌನ ವಹಿಸುವುದು ಅತ್ಯಂತ ಲೇಸು. ನಿಮಗೆ ಅವಶ್ಯಕತೆ ಇರುವ ಧನ ಪ್ರಾಪ್ತಿಯಾಗಲಿದೆ.

**ಸಿಂಹ:** ವೃತ್ತಿಪರ ಕೆಲಸ ಕಾರ್ಯದಲ್ಲಿ ನಿರ್ದಾಕ್ಷಿಣ್ಯವಾಗಿ ವ್ಯವಹರಿಸುವುದನ್ನು ಅಭ್ಯಾಸಿಸಿಕೊಳ್ಳಿರಿ. ತೈಲಗಳ ಲೇಪನ ಮಾಡಿಕೊಳ್ಳುವುದರಿಂದ ಕಾಲು ನೋವು ನಿವಾರಣೆಯಾಗುವುದು. ಉದರ ವೇದನೆ ಇರುವುದು.

**ಕನ್ಯಾ:** ಬದುಕಿನಲ್ಲಿ ಹೊಸ ವ್ಯಕ್ತಿಯ ಪ್ರವೇಶವಾಗಲಿದೆ ಹಾಗೂ ಅವರಿಂದ ಸಿಗುವ ಸಲಹೆ, ಸಹಕಾರ ಮರೆಯಲಾಗದಂತೆ ಇರುವುದು. ಯಾವುದೇ ಕಾರಣಗಳಿಗೂ ಉದ್ಯೋಗ ಬದಲಾವಣೆಯ ಬಗ್ಗೆ ತೀರ್ಮಾನಿಸಬೇಡಿ.

**ತುಲಾ:** ರೈತಾಪಿ ವರ್ಗದವರಿಗೆ ಪರಿಸರದ ವಾತಾವರಣದಿಂದ ಅಥವಾ ಕಾಡು ಪ್ರಾಣಿಗಳಿಂದ ಕೃಷಿಗೆ ತೊಂದರೆ ಆಗುವುದು. ಯಾವುದೇ ಕಾರಣಕ್ಕೂ ಉದ್ವೇಗಕ್ಕೆ ಒಳಗಾಗದಿದ್ದಲ್ಲಿ ಎಲ್ಲಾ ರೀತಿಯ ಯಶಸ್ಸು ನಿಮ್ಮದಾಗಲಿದೆ.

**ವೃಶ್ಚಿಕ:** ಹಿಂತಿರುಗಿ ಬರಬೇಕಾದ ಹಣಕ್ಕೆ ಇರುವ ಅಡಚಣೆಯನ್ನು ನಿವಾರಿಸಿಕೊಳ್ಳಿ. ದುರ್ಗಾಪರಮೇಶ್ವರಿ ಸೇವೆ ಮಾಡುವುದರಿಂದ ಗೊಂದಲ ನಿವಾರಣೆ. ದೈನಂದಿನ ಕೆಲಸದಲ್ಲಿ ಬದಲಾವಣೆಗಳಿರುವುದಿಲ್ಲ.

**ಧನು:** ಕೌಟುಂಬಿಕ ಸಮಸ್ಯೆಗಳು ಬಗೆಹರಿದು ಮನೆಯವರಿಗೆಲ್ಲ ನೆಮ್ಮದಿ ಉಂಟಾಗುವುದು. ನಿಮ್ಮ ಜವಾಬ್ದಾರಿಯನ್ನು ನಿಭಾಯಿಸಲು ಹೆಚ್ಚಿನ ಶ್ರಮಪಡಬೇಕಾಗಿಲ್ಲ. ಮನೆಯ ಕಟ್ಟಡದ ದುರಸ್ತಿ ಕಾರ್ಯಗಳು ಅನಿವಾರ್ಯವಾಗುತ್ತದೆ.

**ಮಕರ:** ಹಿರಿಯರ ಮಾರ್ಗದರ್ಶನದಂತೆ ಧಾರ್ಮಿಕ ಕೆಲಸ ಮಾಡುವುದರಿಂದ ಅಡೆತಡೆ ಇರುವುದಿಲ್ಲ ಹಾಗೂ ಸಂಪ್ರದಾಯಬದ್ಧವಾಗಿ ನೆಡೆಯುವುದು. ಮಹಿಳೆಯರಿಗೆ ಋಣಾತ್ಮಕ ಚಿಂತನೆಯು ಆರೋಗ್ಯವನ್ನು ಹಾಳು ಮಾಡುತ್ತದೆ.

**ಕುಂಭ:** ಸಮಸ್ಯೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ರಾಜಿ ಸಂಧಾನದ ಅಥವಾ ಷರತ್ತುಗಳ ಮೂಲಕ ಬಗೆ ಹರಿಸಿಕೊಳ್ಳುವುದು ಉತ್ತಮ. ನಿಮ್ಮ ವೃತ್ತಿಗೆ ಮಗನ ಆಗಮನ ಸಂತಸ ತರಲಿದೆ. ವಾಹನದಲ್ಲಿ ಚಲಿಸುವಾಗ ಜಾಗ್ರತೆ ಇರಲಿ.


**ಮೀನ:** ಸರ್ಕಾರಿ ಕಚೇರಿಗಳಲ್ಲಿ ಈಗಾಗಲೇ ಆರಂಭಿಸಿರುವ ಕೆಲಸಗಳು ಯಶಸ್ವಿಯಾಗಲಿವೆ. ಹಣಕಾಸಿನ ವಿಚಾರದಲ್ಲಿ ಧೃಢ ನಿರ್ಧಾರ ಕೈಗೊಳ್ಳಲು ಉತ್ತಮ ದಿನ. ಕಬ್ಬಿಣದ ಕೆಲಸ ಮಾಡುವವರಿಗೆ ಶುಭವಾಗುವುದು.

## ಪದಬಂಧ 5495

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
3.ಒಂಚೂರೂ ವಿವೇಕವೇ ಇಲ್ಲದವನು (4)
5.ನಡುವೆ ರಂಪವಿರುವ ಸಂಪ್ರದಾಯ! (4)
6.ಈಕೆ ಬೇರೆಯವರ ಹೆಂಡತಿ (4)
8.ನಾಡಾಡಿಯ ರಕ್ತ ಧಮನಿಯಿದು (2)
9.ನಿತ್ಯ ನುಡಿಯುವ ನಿಜ (2)
10.ಮನದಲ್ಲಿರುವವನಿಗೆ ಸ್ವಲ್ಪವೂ ಬುದ್ಧಿಯಿಲ್ಲ! (4)
13.ತರಂಗವನ್ನು ನೋಡುತ್ತಿರುವವನು ತುಂಬಾ ನಿಪುಣ (4)
14.ಆರೋಪದಲ್ಲೇ ಮುಗಿದಿರುವ ಮುಕ್ತಾಯ ಸಮಾರಂಭ (4)

**ಮೇಲಿಂದ ಕೆಳಕ್ಕೆ**
1.ನಡುವೆ ಪತ್ರವಿದ್ದಾಗಲೇ ಈ ಕಷ್ಟ! (4)
2.ಅಪ್ಪನ ಈ ರೂಪ ತುಸು ವಿರಳ! (4)
3.ಮತಿಯಿಟ್ಟುಕೊಂಡೇ ನೀಡಿದ ಒಪ್ಪಿಗೆ (4)
4.ಕಿಡಿಯೊಳಗೇ ಆಡಿಕೊಳ್ಳುತ್ತಿದ್ದಾನೆ ಈ ತುಂಟ (4)
7.ಸತಿಗೆ ಸಿಕ್ಕಿರುವ ಮೋಕ್ಷ (3)
9.ಜೊತೆಯಲ್ಲಿನ ಒಡನಾಟ (4)
10.ಮನದ ವಿಷಯ ಪ್ರಸ್ತಾಪ ಮಾಡಿದ್ದಕ್ಕೇ ಈ ದ್ವೇಷ! (4)
11.ದೇವಾಲಯದ ಸಭಾಮಂಟಪವಿದು (4)
12.ಅಂತರವಿದ್ದದ್ದಕ್ಕೇ ತಾನೇ? ಇಷ್ಟೆಲ್ಲಾ ಗಡಿಬಿಡಿ! (4)



### 5494ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಸಭಾಜನ 3.ವರಮಾನ
5.ನಯನ 7.ನಮಸ್ಕಾರ
9.ಣಿರಾ 10.ಣಹ
11.ಜಯಶಾಲಿ 14.ಹರಿತ
16.ಗಡಿಯಾರ 17.ದಿನಮಣಿ

**ಮೇಲಿಂದ ಕೆಳಕ್ಕೆ:**
1.ಸನ್ಮಾನ 2.ಜನನ
3.ವನಸುಮ 4.ನಸುಕು
6.ಯಮರಾಜ 7.ನಕಲಿ
8.ರಣಭೇರಿ 12.ಶಾಕಾಹಾರ
13.ವಿರಾಗ 14.ಹವನ
15.ತರುಣಿ

## ಸುಡೊಕು 5881

| | | | | | | | | |
|---|---|---|---|---|---|---|---|---|
| 5 | | | 4 | | 3 | 9 | 6 | |
| | | 8 | | | | | | 5 |
| | | 3 | 5 | | 8 | 7 | 2 | 1 |
| | | 9 | | | | | | 7 |
| | 3 | 7 | 1 | 8 | 6 | 4 | 5 | |
| 8 | | | | | | 2 | 1 | |
| 6 | | 5 | | 2 | | | | 4 |
| 3 | | | | | | 5 | | 2 |
| | 8 | 2 | | 5 | | | 7 | |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5880 ಸುಡೊಕು

| | | | | | | | | |
|---|---|---|---|---|---|---|---|---|
| 3 | 4 | 8 | 2 | 7 | 9 | 6 | 5 | 1 |
| 9 | 6 | 1 | 5 | 8 | 3 | 2 | 7 | 4 |
| 5 | 7 | 2 | 1 | 6 | 4 | 3 | 9 | 8 |
| 6 | 9 | 4 | 7 | 3 | 5 | 1 | 8 | 2 |
| 2 | 8 | 5 | 6 | 9 | 1 | 7 | 4 | 3 |
| 1 | 3 | 7 | 4 | 2 | 8 | 9 | 6 | 5 |
| 8 | 5 | 9 | 3 | 1 | 6 | 4 | 2 | 7 |
| 7 | 1 | 6 | 8 | 4 | 2 | 5 | 3 | 9 |
| 4 | 2 | 3 | 9 | 5 | 7 | 8 | 1 | 6 |

## ವಿದೇಶಿ ಶಿಕ್ಷಣ ಸಂಸ್ಥೆಗಳ ಕ್ಯಾಂಪಸ್ ನಿಯಮಾವಳಿ ಪ್ರಕಟಿಸಿದ ಯುಜಿಸಿ

ನವದೆಹಲಿ (ಪಿಟಿಐ): ವಿದೇಶಿ ವಿಶ್ವವಿದ್ಯಾಲಯಗಳು ಭಾರತದಲ್ಲಿ ತಮ್ಮ ಕ್ಯಾಂಪಸ್ ಸ್ಥಾಪಿಸುವುದು ಹಾಗೂ ಕಾರ್ಯಾಚರಣೆ ನಡೆಸುವುದಕ್ಕೆ ಸಂಬಂಧಿಸಿದ ನಿಯಮಾವಳಿಗಳನ್ನು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಬುಧವಾರ ಪ್ರಕಟಿಸಿದೆ.

'ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅನುಸಾರ ಹಾಗೂ ಅದರ ಶಿಫಾರಸುಗಳ ಪ್ರಕಾರ, ಭಾರತದಲ್ಲಿನ ಉನ್ನತ ಶಿಕ್ಷಣಕ್ಕೆ ಅಂತರರಾಷ್ಟ್ರೀಯ ಆಯಾಮ ಒದಗಿಸುವುದಕ್ಕಾಗಿ ವಿದೇಶಿ ಉನ್ನತ ಶಿಕ್ಷಣ ಸಂಸ್ಥೆಗಳು (ಎಫ್‌ಎಚ್‌ಇಐ) ಇಲ್ಲಿ ತಮ್ಮ ಕ್ಯಾಂಪಸ್ ಆರಂಭಿಸುವುದಕ್ಕೆ ಅನುವು ಮಾಡಿಕೊಡುವುದು ಈ ನಿಯಮಗಳ ಉದ್ದೇಶವಾಗಿದೆ' ಎಂದು ಯುಜಿಸಿ ಮುಖ್ಯಸ್ಥ ಎಂ. ಜಗದೀಶಕುಮಾರ್ ತಿಳಿಸಿದ್ದಾರೆ.

ವಿದೇಶಿ ಶಿಕ್ಷಣ ಸಂಸ್ಥೆಗಳು ತಮ್ಮ ಕ್ಯಾಂಪಸ್ ಆರಂಭಿಸುವುದಕ್ಕೆ ಸಂಬಂಧಿಸಿ ಅರ್ಜಿ ಶುಲ್ಕವನ್ನು ಒಂದು ಬಾರಿ ಪಾವತಿಸಬೇಕು. ನಂತರ, ಯುಜಿಸಿಗೆ ಯಾವುದೇ ವಾರ್ಷಿಕ ಶುಲ್ಕಗಳನ್ನು ಪಾವತಿಸುವ ಅಗತ್ಯವಿಲ್ಲ. ತಮ್ಮ ಮೂಲಸೌಕರ್ಯ, ಜಮೀನು, ಭೌತಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಬಳಸಿಕೊಂಡು ತಮ್ಮ ಕ್ಯಾಂಪಸ್‌ಗಳನ್ನು ಸ್ಥಾಪಿಸಬೇಕು.

ಭಾರತೀಯ ವಿದ್ಯಾರ್ಥಿಗಳಿಗೆ ಅರ್ಹತೆ ಇಲ್ಲವೇ ಅಗತ್ಯತೆ ಆಧಾರದಲ್ಲಿ ಶುಲ್ಕದಲ್ಲಿ ವಿನಾಯಿತಿ ಮತ್ತು ಶಿಷ್ಯವೇತನ ನೀಡಬಹುದು ಎಂಬುದು ಸೇರಿದಂತೆ ಹಲವಾರು ಅಂಶಗಳನ್ನು ಈ ನಿಯಮಾವಳಿಗಳು ಒಳಗೊಂಡಿವೆ. ವಿದೇಶಿ ಶಿಕ್ಷಣ ಸಂಸ್ಥೆಗಳು ತಮ್ಮ ನೇಮಕಾತಿ ನಿಯಮಗಳ ಅನುಸಾರ ಬೋಧಕ ವರ್ಗ ಹಾಗೂ ಇತರ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವ ಸ್ವಾಯತ್ತತೆ ಹೊಂದಿರುತ್ತವೆ. ಯಾವುದೇ ಹೊಸ ಕೋರ್ಸ್ ಆರಂಭಿಸುವ ಮುನ್ನ ಯುಜಿಸಿಯ ಅನುಮೋದನೆ ಪಡೆಯುವುದು ಕಡ್ಡಾಯ ಎಂದೂ ನಿಯಮಾವಳಿಯಲ್ಲಿ ತಿಳಿಸಲಾಗಿದೆ.

### ಜನಸಂಖ್ಯಾ ನಿಯಂತ್ರಣ, ಮಹಿಳೆಯ ಶಿಕ್ಷಣದ ಬಗ್ಗೆ 'ಅಶ್ಲೀಲ' ಮಾತು

# ಕ್ಷಮೆಯಾಚಿಸಿದ ಸಿಎಂ ನಿತೀಶ್


ನಿತೀಶ್ ಕುಮಾರ್

ಪಟ್ನಾ (ಪಿಟಿಐ): ಜನಸಂಖ್ಯೆಯ ಏರಿಕೆಯ ನಿಯಂತ್ರಣ ಮತ್ತು ಮಹಿಳೆಯರಿಗೆ ಶಿಕ್ಷಣ ನೀಡುವುದರ ಬಗ್ಗೆ ತಾವು ಆಡಿದ ಮಾತುಗಳಿಗೆ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ವಿಧಾನ ಮಂಡಲದ ಒಳಗೆ ಮತ್ತು ಹೊರಗೆ ಬುಧವಾರ ಕ್ಷಮೆ ಯಾಚಿಸಿದ್ದಾರೆ. ನಿತೀಶ್ ಕುಮಾರ್ ಅವರ ಮಾತುಗಳು ವಿವಾದಕ್ಕೆ ಕಾರಣವಾಗಿದ್ದವು. ನಿತೀಶ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬೇಕು ಎಂದು ವಿರೋಧ ಪಕ್ಷಗಳು ಸದನದಲ್ಲಿ ಧರಣಿ ನಡೆಸಿದ್ದವು.

'ಹೊರಗಡೆ ಪತ್ರಕರ್ತ ಬಳಿ ಮಾತನಾಡುವಾಗ, ನನ್ನ ಮಾತುಗಳು ನಿಂದನಾತ್ಮಕ ಎಂದಾಗಿದ್ದರೆ ನಾನು ಕ್ಷಮೆ ಯಾಚಿಸಲು ಸಿದ್ಧನಿದ್ದೇನೆ ಎಂದು ಹೇಳಿದ್ದೇನೆ. ಯಾರನ್ನೂ ನಿಂದಿಸುವ ಉದ್ದೇಶ ನನ್ನದಲ್ಲವಾಗಿತ್ತು. ನಾನು ನನ್ನನ್ನೇ ಖಂಡಿಸಿಕೊಳ್ಳುವೆ' ಎಂದು ನಿತೀಶ್ ಅವರು ವಿಧಾನಸಭೆಯಲ್ಲಿ ಹೇಳಿದರು. ತಮ್ಮ ಹೇಳಿಕೆ ಕುರಿತು ಅವರು ವಿಧಾನ ಪರಿಷತ್ತಿನಲ್ಲಿಯೂ ಕ್ಷಮೆ ಯಾಚಿಸಿದರು.

'ನಿತೀಶ್ ಅವರು ಮೆಂಟಲ್ ಕೇಸ್ ಆಗಿದ್ದಾರೆ. ರಾಜ್ಯವನ್ನು ಆಳುವ ಸಾಮರ್ಥ್ಯ ಅವರಿಗಿಲ್ಲ. ಅವರು ರಾಜೀನಾಮೆ ನೀಡಬೇಕು' ಎಂದು ವಿರೋಧ ಪಕ್ಷಗಳ ಸದಸ್ಯರು ವಿಧಾನಸಭೆಯಲ್ಲಿ ಆಗ್ರಹಿಸಿದರು.

ವಿಧಾನಸಭೆಯ ಸ್ಪೀಕರ್ ಎದುರಿನ ಅಂಗಳಕ್ಕೆ ನುಗ್ಗಿದ ಬಿಜೆಪಿ ಸದಸ್ಯರು ನಿತೀಶ್ ಅವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ನಿತೀಶ್ ಕ್ಷಮೆಯಾಚನೆ ವಿರೋಧ ಪಕ್ಷಗಳಿಗೆ ಸಮಾಧಾನ ತರಲಿಲ್ಲ. ಅವರ ರಾಜೀನಾಮೆಗೆ ವಿರೋಧ ಪಕ್ಷಗಳು ಒತ್ತಾಯ ಮುಂದುವರಿಸಿದಾಗ, ಕಲಾಪವನ್ನು ಸ್ಪೀಕರ್ ಮುಂದೂಡಬೇಕಾಯಿತು.

**ಮಹಿಳಾ ಆಯೋಗ ಪತ್ರ:** ಬಿಹಾರ ವಿಧಾನಸಭೆ ಸ್ಪೀಕರ್ ಅವರಿಗೆ ಪತ್ರ ಬರೆದಿರುವ ರಾಷ್ಟ್ರೀಯ ಮಹಿಳಾ ಆಯೋಗವು, 'ನಿಂದನಾತ್ಮಕವಾಗಿ ಮಾತನಾಡಿದ್ದಕ್ಕೆ ಹಾಗೂ ಕೆಳಮಟ್ಟದ ಭಾಷೆ ಬಳಸಿದ್ದಕ್ಕೆ ಮುಖ್ಯಮಂತ್ರಿ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿದೆ.

ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರಂಥವರು ನಿತೀಶ್ ಮಾತನ್ನು ಖಂಡಿಸಬೇಕು ಎಂದು ಆಯೋಗದ ಅಧ್ಯಕ್ಷೆ ರೇಖಾ ಶರ್ಮ ಅವರು ಎಕ್ಸ್ ವೇದಿಕೆಯಲ್ಲಿ ಬರೆದಿದ್ದಾರೆ.

**ನಿತೀಶ್ ಹೇಳಿದ್ದು ಏನು?:** ಮಂಗಳವಾರ ವಿಧಾನಸಭೆಯಲ್ಲಿ ಮಾತನಾಡಿದ್ದ ನಿತೀಶ್ ಅವರು, ಸುಶಿಕ್ಷಿತ ಮಹಿಳೆಯು ಲೈಂಗಿಕ ಕ್ರಿಯೆಯ ಸಂದರ್ಭದಲ್ಲಿ ತನ್ನ ಪತಿಯನ್ನು ಹೇಗೆ ತಡೆಯಬಲ್ಲಳು ಎಂಬುದರ ಚಿತ್ರಣ ನೀಡಿದ್ದರು. 'ಗಂಡನ ಕೆಲಸಗಳಿಂದಾಗಿ ಹೆಚ್ಚು ಮಕ್ಕಳು ಹುಟ್ಟುತ್ತಿದ್ದರು. ಆದರೆ ಶಿಕ್ಷಣದ ಕಾರಣದಿಂದಾಗಿ, ಗಂಡನನ್ನು ತಡೆಯುವುದು ಹೇಗೆ ಎಂಬುದು ಮಹಿಳೆಗೆ ಗೊತ್ತಾಗಿದೆ. ಹೀಗಾಗಿ ಜನನ ಸಂಖ್ಯೆ ಕಡಿಮೆ ಆಗುತ್ತಿದೆ' ಎಂದು ನಿತೀಶ್ ಅವರು ಒರಟು ಶೈಲಿಯಲ್ಲಿ ಹೇಳಿದ್ದರು.

ಜನನ ಕ್ರಿಯೆಯ ವಿವರಣೆ ನೀಡುವ ಮೂಲಕ ನಿತೀಶ್ ರಾಜ್ಯದ ಮಹಿಳೆಯರನ್ನು ಅವಮಾನಿಸುತ್ತಿದ್ದಾರೆ ಎಂದು ಬಿಜೆಪಿ ಆರೋಪಿಸಿತ್ತು. ಎಡಪಕ್ಷಗಳ ಮಹಿಳಾ ಘಟಕಗಳು ನಿತೀಶ್ ಅವರ ಹೇಳಿಕೆಯನ್ನು ಖಂಡಿಸಿವೆ. ನಿತೀಶ್ ಅವರ ಆಂಗಿಕ ಭಾಷೆಯು ಬಹಳ ಅಶ್ಲೀಲವಾಗಿತ್ತು ಎಂದು ಅವು ಹೇಳಿವೆ.

### ಬಿಹಾರ ಸಿಎಂ ವಿರುದ್ಧ ಹರಿಹಾಯ್ದ ಪ್ರಧಾನಿ

ಗುನಾ (ಪಿಟಿಐ): ನಿತೀಶ್ ಕುಮಾರ್ ಅವರು ಬಿಹಾರ ವಿಧಾನಸಭೆಯಲ್ಲಿ ಮಹಿಳೆಯರ ಬಗ್ಗೆ ಆಡಿದ 'ನಿಂದನಾತ್ಮಕ' ಮಾತುಗಳ ಬಗ್ಗೆ 'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ಮಾತೇ ಆಡುತ್ತಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಹರಿಹಾಯ್ದಿದ್ದಾರೆ.

ಮಹಿಳೆಯರ ಗೌರವಕ್ಕಾಗಿ ಸಾಧ್ಯವಿರುವ ಎಲ್ಲವನ್ನೂ ತಾವು ಮಾಡುವುದಾಗಿ ಮೋದಿ ಅವರು ಹೇಳಿದ್ದಾರೆ. 'ಕೇಂದ್ರದಲ್ಲಿ ಇರುವ ಸರ್ಕಾರವನ್ನು ಉರುಳಿಸಲು ಬಗೆಬಗೆಯ ಆಟ ಆಡುತ್ತಿರುವ ಇಂಡಿಯಾ ಮೈತ್ರಿಕೂಟದ ದೊಡ್ಡ ನಾಯಕರೊಬ್ಬರು ಭಾಷೆಯೊಂದನ್ನು ಬಳಸಿದರು, ಇಂತಹ ಭಾಷೆಯನ್ನು ತಾಯಂದಿರುವ ಹಾಗೂ ಸಹೋದರಿಯರು ಇರುವ ವಿಧಾನಸಭೆಯಲ್ಲಿ ಯಾರೂ ಆಲೋಚಿಸಲೂ ಸಾಧ್ಯವಿಲ್ಲ... ಭಾಷೆ ಬಳಸಿದ ಅವರಿಗೆ ನಾಚಿಕೆಯೂ ಆಗಲಿಲ್ಲ' ಎಂದು ಮೋದಿ ಅವರು ನಿತೀಶ್ ಕುಮಾರ್ ಅವರ ಹೆಸರು ಉಲ್ಲೇಖಿಸದೆ ಹೇಳಿದರು.

'ಇಂತಹ ದೃಷ್ಟಿಕೋನ ಹೊಂದಿರುವವರು, ಮಹಿಳೆಯರ ಗೌರವವನ್ನು ಉಳಿಸಲು ಹೇಗೆ ಸಾಧ್ಯ? ಅವರು ಇನ್ನೂ ಎಷ್ಟು ಕೆಳಮಟ್ಟಕ್ಕೆ ಇಳಿಯಲಿದ್ದಾರೆ? ದೇಶಕ್ಕೆ ಎಂತಹ ದುರದೃಷ್ಟದ ಸ್ಥಿತಿ ಬಂತು. ಮಹಿಳೆಯರ ಗೌರವವನ್ನು ಕಾಯಲು ನಾನು ನನ್ನಿಂದ ಏನೆಲ್ಲ ಸಾಧ್ಯವೋ ಅವನ್ನೆಲ್ಲ ಮಾಡುತ್ತೇನೆ' ಎಂದು ಮೋದಿ ಅವರು ಮಧ್ಯಪ್ರದೇಶದ ಚುನಾವಣಾ ರ್‍ಯಾಲಿಯೊಂದರಲ್ಲಿ ಹೇಳಿದರು.

> ಬಿಜೆಪಿ ಸದಸ್ಯರು ತಾವು ಬಹಳ ಸಭ್ಯರು ಎಂದು ವರ್ತಿಸಬೇಕಾಗಿಲ್ಲ. ಮಣಿಪುರದಲ್ಲಿ ಮಹಿಳೆಯರ ಬೆತ್ತಲೆ ಮೆರವಣಿಗೆ ನಡೆದಿದೆ. ಅಲ್ಲಿ ಬಿಜೆಪಿಯ ಆಡಳಿತ ಇದೆ. ಮಣಿಪುರದ ಸ್ಥಿತಿ ಬಗ್ಗೆ ಬಿಜೆಪಿ ನಾಯಕತ್ವ ತಲೆಕೆಡಿಸಿಕೊಂಡಿಲ್ಲ.
> **ರಾಬ್ಡಿ ದೇವಿ,** ಆರ್‌ಜೆಡಿ ನಾಯಕಿ

ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯನ್ನು ವಿಸ್ತರಿಸುವ ಘೋಷಣೆಯನ್ನು ಚುನಾವಣಾ ರ್‍ಯಾಲಿಯೊಂದರಲ್ಲಿ ಮಾಡಿರುವ ಬಗ್ಗೆ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸುವುದಾಗಿ ಕಾಂಗ್ರೆಸ್ ಹೇಳಿದೆ ಎಂದು ಮೋದಿ ಅವರು ತಿಳಿಸಿದರು. '80 ಕೋಟಿ ಜನರಿಗೆ ಉಚಿತ ಪಡಿತರ ನೀಡುವ ಯೋಜನೆಯ ಮುಂದುವರಿಕೆಗೆ ಸಾಧ್ಯವಿರುವ ಎಲ್ಲವನ್ನೂ ನಾನು ಮಾಡುತ್ತೇನೆ. ಅವರು (ಕಾಂಗ್ರೆಸ್) ನನ್ನ ವಿರುದ್ಧ ಜಗತ್ತಿನ ಯಾವ ನ್ಯಾಯಾಲಯಕ್ಕೆ ಬೇಕಿದ್ದರೂ ಹೋಗಲಿ' ಎಂದು ಸವಾಲೆಸೆದರು.

## ದೆಹಲಿ: ವಾಯು ಮಾಲಿನ್ಯ ನಿಯಂತ್ರಣಕ್ಕೆ ಮೋಡ ಬಿತ್ತನೆ!


ದೆಹಲಿಯಲ್ಲಿ ದಟ್ಟ ಮಂಜು ಆವರಿಸಿದ್ದರಿಂದ ಮಹಿಳೆಯರು ಮಾಸ್ಕ್ ಧರಿಸಿದ್ದರು —ಪಿಟಿಐ ಚಿತ್ರ

ನವದೆಹಲಿ (ಪಿಟಿಐ/ರಾಯಿಟರ್ಸ್): 'ದೆಹಲಿಯಲ್ಲಿ ವಾಯು ವಾಲಿನ್ಯ ನಿಯಂತ್ರಿಸುವ ನಿಟ್ಟಿನಲ್ಲಿ ಮೋಡ ಬಿತ್ತನೆ ಮೂಲಕ ಕೃತಕ ಮಳೆಯಾಗುವಂತೆ ಪ್ರಯತ್ನ ಕೈಗೊಳ್ಳಲಾಗುವುದು' ಎಂದು ದೆಹಲಿ ಪರಿಸರ ಸಚಿವ ಗೋಪಾಲ್ ರೈ ಬುಧವಾರ ತಿಳಿಸಿದರು.

'ಐಐಟಿ ಕಾನ್ಪುರ ವಿಜ್ಞಾನಿಗಳ ಜತೆ ಈ ಬಗ್ಗೆ ಸಮಾಲೋಚನೆ ನಡೆಸಲಾಗಿದೆ. ವಾತಾವರಣದಲ್ಲಿ ಮೋಡುಗಳು ಅಥವಾ ತೇವಾಂಶ ಇದ್ದರೆ ಮಾತ್ರ ಮೋಡ ಬಿತ್ತನೆ ಸಾಧ್ಯ ಎಂದು ವಿಜ್ಞಾನಿಗಳು ವಿವರಿಸಿದ್ದಾರೆ. ನವೆಂಬರ್ 20 ಅಥವಾ 21ಕ್ಕೆ ಅಂತಹ ವಾತಾವರಣ ಸೃಷ್ಟಿಯಾಗುವ ಸಾಧ್ಯತೆ ಇದೆ. ಈ ಬಗ್ಗೆ ಪ್ರಸ್ತಾವ ಸಿದ್ಧಪಡಿಸುವಂತೆ ವಿಜ್ಞಾನಿಗಳಿಗೆ ಸೂಚಿಸಲಾಗಿದೆ. ಈ ಪ್ರಸ್ತಾವವನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಲಾಗುವುದು' ಎಂದು ತಿಳಿಸಿದರು.

'ಸಮ ಹಾಗೂ ಬೆಸ ನೋಂದಣಿ ಸಂಖ್ಯೆ ಆಧಾರದಲ್ಲಿ ಕಾರುಗಳ ಸಂಚಾರಕ್ಕೆ ಅವಕಾಶ ಕಲ್ಪಿಸುವ ಯೋಜನೆಯನ್ನು ಸುಪ್ರೀಂ ಕೋರ್ಟ್ ಪರಾಮರ್ಶಿಸಿ ಆದೇಶ ನೀಡಿದ ಬಳಿಕ ಜಾರಿಗೊಳಿಸಲಾಗುವುದು' ಎಂದು ಗೋಪಾಲ್ ರೈ ತಿಳಿಸಿದರು.

'ಸಮ– ಬೆಸ ಸಂಖ್ಯೆಯ ಯೋಜನೆ ಕುರಿತು ದೆಹಲಿ ತಾಂತ್ರಿಕ ವಿಶ್ವವಿದ್ಯಾಲಯ ಮತ್ತು 'ಎನರ್ಜಿ ಪಾಲಿಸಿ ಇನ್‌ಸ್ಟಿಟ್ಯೂಟ್ ಆಫ್ ದಿ ಯೂನಿವರ್ಸಿಟಿ ಆಫ್ ಷಿಕಾಗೊ' ನಡೆಸಿದ ಎರಡು ಪ್ರಮುಖ ಅಧ್ಯಯನದ ಫಲಿತಾಂಶಗಳನ್ನು ಸುಪ್ರೀಂ ಕೋರ್ಟ್‌ಗೆ ದೆಹಲಿ ಸರ್ಕಾರ ಸಲ್ಲಿಸಲಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

### ರಜೆ ಘೋಷಣೆ

- ವಾಯುಮಾಲಿನ್ಯ ಅಪಾಯಕಾರಿ ಸ್ಥಿತಿ ತಲುಪಿದ್ದರಿಂದ ದೆಹಲಿಯ ಎಲ್ಲ ಶಾಲೆಗಳಿಗೆ ನ.9ರಿಂದ 18ರವರೆಗೆ ರಜೆ ಘೋಷಿಸಲಾಗಿದೆ.
- ಪ್ರಸ್ತುತ ದೆಹಲಿ ಗಾಳಿಯ ಗುಣಮಟ್ಟ ಸೂಚ್ಯಂಕವು 320 ಇದೆ. ಈ ವಾರದ ಆರಂಭದಲ್ಲಿ ಈ ಸೂಚ್ಯಂಕ 400ರ ಗಡಿ ದಾಟಿತ್ತು.

## ಮಹಾರಾಷ್ಟ್ರ: ಬಿಸಿಯೂಟಕ್ಕೆ ಮೊಟ್ಟೆ

ಮುಂಬೈ (ಪಿಟಿಐ): ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ (2023–24) ಮಧ್ಯಾಹ್ನದ ಬಿಸಿಯೂಟದಲ್ಲಿ ಮೊಟ್ಟೆ, ಬಾಳೆಹಣ್ಣು ನೀಡಲು ಮಹಾರಾಷ್ಟ್ರ ಸರ್ಕಾರ ನಿರ್ಧರಿಸಿದೆ.

ಅಕ್ಕಿ ಮತ್ತು ಬೇಳೆಯಿಂದ ತಯಾರಿಸಿದ ಕಿಚಡಿ ಜೊತೆಗೆ, ವಿದ್ಯಾರ್ಥಿಗಳಿಗೆ ವಾರಕ್ಕೊಮ್ಮೆ (ಬುಧವಾರ ಅಥವಾ ಶುಕ್ರವಾರ) ಬೇಯಿಸಿದ ಮೊಟ್ಟೆ ಅಥವಾ 'ಎಗ್ ಪಲಾವ್' ಅಥವಾ 'ಎಗ್ ಬಿರಿಯಾನಿ' ನೀಡಲಾಗುವುದು. ಸಸ್ಯಹಾರಿ ವಿದ್ಯಾರ್ಥಿಗಳಿಗೆ ಆ ದಿನ ಬಾಳೆಹಣ್ಣು ಅಥವಾ ಇನ್ಯಾವುದೇ ಬೇರೆ ಹಣ್ಣು ನೀಡಲಾಗುವುದು ಎಂದು ಮಂಗಳವಾರ ಹೊರಡಿಸಲಾದ ಸುತ್ತೋಲೆಯಲ್ಲಿ (ಜಿಆರ್) ತಿಳಿಸಿದೆ.




ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಹಾಗೂ ಕೇಂದ್ರದ ರಾಜ್ಯ ಖಾತೆ ಸಚಿವ ಬಿ.ಎಲ್. ವರ್ಮಾ 'ಭಾರತ್ ಆರ್ಗ್ಯಾನಿಕ್ಸ್' ಉತ್ಪನ್ನಗಳನ್ನು ಬಿಡುಗಡೆ ಮಾಡಿದರು

## 'ಭಾರತ್ ಆರ್ಗ್ಯಾನಿಕ್ಸ್' ಬಿಡುಗಡೆ

ಒಂದನೇ ಪುಟದಿಂದ....

ಬ್ರ್ಯಾಂಡ್ ಬಲಪಡಿಸಲು ಪ್ರಯೋಗಾಲಯಗಳ ಸಂಖ್ಯೆಯನ್ನು ಹೆಚ್ಚಿಸುವ ಅಗತ್ಯ ಇದೆ. ಸದ್ಯ ದೇಶದಲ್ಲಿ 246 ಪ್ರಯೋಗಾಲಯಗಳಿದ್ದು, ನ್ಯಾಷನಲ್ ಪ್ಲಾಂಟ್ ಪ್ರೊಟೆಕ್ಷನ್ ಆರ್ಗನೈಸೇಷನ್ (ಎನ್‌ಪಿಪಿಒ) ಒಪ್ಪಿಗೆ ಪಡೆದಿರುವುದು 34 ಮಾತ್ರ. ಹೀಗಾಗಿ ಎನ್‌ಪಿಪಿಒ ಒಪ್ಪಿಗೆ ಪಡೆದ ಪ್ರಯೋಗಾಲಯಗಳ ಸಂಖ್ಯೆ ಹೆಚ್ಚಾಗಬೇಕಿದೆ ಎಂದಿದ್ದಾರೆ.

ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಹಾಗೂ ಇತರೆ ಸಂಘಗಳ ಬೆಂಬಲದೊಂದಿಗೆ ಮುಂದಿನ ವರ್ಷಗಳಲ್ಲಿ ಸರ್ಕಾರವು ಹೆಚ್ಚುವರಿಯಾಗಿ 305 ಪ್ರಯೋಗಾಲಯಗಳನ್ನು ಸ್ಥಾಪಿಸಲಾಗುವುದು. ಇದರಲ್ಲಿ 100 ಮೊಬೈಲ್ ಪ್ರಯೋಗಾಲಯ ಇರಲಿದೆ ಎಂದು ಮಾಹಿತಿ ನೀಡಿದ್ದಾರೆ.

ಆರ್ಗ್ಯಾನಿಕ್ ಉತ್ಪನ್ನಗಳ ದರವು ಹೆಚ್ಚಿಗೆ ಇರುವುದರಿಂದ ಹಲವು ನಕಲಿ ಆರ್ಗ್ಯಾನಿಕ್ ಉತ್ಪನ್ನಗಳು ಸಹ ಮಾರುಕಟ್ಟೆಯಲ್ಲಿವೆ. ಹೀಗಾಗಿ ರೈತರು ಮತ್ತು ಖರೀದಿದಾರ, ಈ ಇಬ್ಬರ ಸಮಸ್ಯೆಗಳನ್ನೂ ಎನ್‌ಸಿಒಎಲ್ ಪರಿಹರಿಸಲಿದೆ ಎಂದು ಶಾ ತಿಳಿಸಿದ್ದಾರೆ.

2022 –23ರಲ್ಲಿ ಭಾರತವು 3.12 ಲಕ್ಷ ಟನ್‌ನಷ್ಟು ಆರ್ಗ್ಯಾನಿಕ್ ಉತ್ಪನ್ನಗಳನ್ನು ರಫ್ತು ಮಾಡಿದ್ದು ಮೌಲ್ಯದ ಲೆಕ್ಕದಲ್ಲಿ ₹5,525 ಕೋಟಿ ಆಗಿದೆ. ಅಮೆರಿಕ, ಐರೋಪ್ಯ ಒಕ್ಕೂಟ, ಕೆನಡಾ ಮತ್ತು ಇತರೆ ದೇಶಗಳಿಗೆ ರಫ್ತು ಮಾಡಲಾಗಿದೆ.

## ಎನ್‌ಐಎ ದಾಳಿ 44 ಜನರ ಬಂಧನ


ನವದೆಹಲಿ/ಜಮ್ಮು (ಪಿಟಿಐ): ರಾಷ್ಟ್ರದಾದ್ಯಂತ ಬುಧವಾರ ದಾಳಿ ನಡೆಸಿರುವ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಮಾನವ ಕಳ್ಳಸಾಗಣೆ ಜಾಲದಲ್ಲಿ ಭಾಗಿಯಾಗಿದ್ದ 44 ಮಂದಿಯನ್ನು ಬಂಧಿಸಿದೆ.

ಎಂಟು ರಾಜ್ಯ ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳ 55 ಸ್ಥಳಗಳಲ್ಲಿ ಗಡಿ ಭದ್ರತಾ ಪಡೆ ಮತ್ತು ರಾಜ್ಯ ಪೊಲೀಸ್ ಪಡೆಗಳು ಜಂಟಿಯಾಗಿ ಈ ದಾಳಿ ನಡೆಸಿವೆ ಎಂದು ಎನ್‌ಐಎ ವಕ್ತಾರರು ಮಾಹಿತಿ ನೀಡಿದ್ದಾರೆ. ಕರ್ನಾಟಕವೂ ಸೇರಿದಂತೆ ತ್ರಿಪುರಾ, ಅಸ್ಸಾಂ, ಪಶ್ಚಿಮ ಬಂಗಾಳ, ತಮಿಳುನಾಡು, ತೆಲಂಗಾಣ, ಹರಿಯಾಣ, ರಾಜಸ್ಥಾನ ಹಾಗೂ ಕೇಂದ್ರಾಡಳಿತ ಪ್ರದೇಶಗಳಾದ ಜಮ್ಮು ಮತ್ತು ಕಾಶ್ಮೀರ ಹಾಗೂ ಪುದುಚೇರಿಯಲ್ಲಿ ಶೋಧ ನಡೆಸಲಾಗಿದೆ ಎಂದು ಹೇಳಿದ್ದಾರೆ.

ತ್ರಿಪುರಾದಲ್ಲಿ 21, ಕರ್ನಾಟಕದಲ್ಲಿ 10, ಅಸ್ಸಾಂನಲ್ಲಿ ಐವರು, ಪಶ್ಚಿಮ ಬಂಗಾಳದಲ್ಲಿ ಮೂವರು, ತಮಿಳುನಾಡಿನಲ್ಲಿ ಇಬ್ಬರು ಹಾಗೂ ಪುದುಚೇರಿ, ತೆಲಂಗಾಣ, ಹರಿಯಾಣದಲ್ಲಿ ತಲಾ ಒಬ್ಬರನ್ನು ಬಂಧಿಸಲಾಗಿದೆ. ಜಮ್ಮು ಮತ್ತು ಸಾಂಬಾ ಜಿಲ್ಲೆಯಲ್ಲಿ ನಡೆದ ದಾಳಿಯ ವೇಳೆ ಬಂಧಿಸಿದಾತ ರೋಹಿಂಗ್ಯಾ ಮುಸ್ಲಿಮ್ ವ್ಯಕ್ತಿ ಜಾಫರ್ ಆಲಂ ಎಂದು ಮೂಲಗಳು ತಿಳಿಸಿವೆ. ದಾಳಿಯಲ್ಲಿ ಡಿಜಿಟಲ್ ಉಪಕರಣಗಳು, ಆಧಾರ್ ಹಾಗೂ ಪಾನ್ ಕಾರ್ಡ್, ₹ 20 ಲಕ್ಷಕ್ಕೂ ಹೆಚ್ಚು ನಗದು ಹಾಗೂ 4,550 ಅಮೆರಿಕದ ಡಾಲರ್ ವಶಪಡಿಸಿಕೊಳ್ಳಲಾಗಿದೆ ಎಂದು ವಕ್ತಾರರು ತಿಳಿಸಿದ್ದಾರೆ.

# ಇಸ್ರೇಲ್ ದಾಳಿಗೆ ಸುರಂಗ ಜಾಲಗಳೇ ಗುರಿ

### ಎರಡನೇ ತಿಂಗಳಿಗೆ ಕಾಲಿಟ್ಟ ಸಂಘರ್ಷ • ಕದನ ವಿರಾಮಕ್ಕೆ ಹೆಚ್ಚಿದ ಕೂಗು


ಇಸ್ರೇಲ್‌ನ ದಕ್ಷಿಣ ಭಾಗದ ಗಡಿಗೆ ಹೊಂದಿಕೊಂಡಿರುವ ಗಾಜಾ ಪಟ್ಟಿಯುದ್ದಕ್ಕೂ ಇಸ್ರೇಲ್ ಬುಧವಾರ ನಡೆಸಿದ ವಾಯು ದಾಳಿಯಿಂದಾಗಿ ದಟ್ಟ ಹೊಗೆ ಕಾಣಿಸಿಕೊಂಡಿತ್ತು —ಎಎಫ್‌ಪಿ ಚಿತ್ರ




ಗಾಜಾ/ಜೆರುಸಲೇಂ (ರಾಯಿಟರ್ಸ್/ಎಎಫ್‌ಪಿ): ಹಮಾಸ್ ಮತ್ತು ಇಸ್ರೇಲ್ ನಡುವಿನ ಯುದ್ಧ ಬುಧವಾರ ಎರಡನೇ ತಿಂಗಳಿಗೆ ಕಾಲಿಟ್ಟಿದೆ. ಮಾನವೀಯ ನೆಲೆಯಲ್ಲಿ ಕದನ ವಿರಾಮ ಘೋಷಿಸಬೇಕು ಎಂಬ ಜಾಗತಿಕ ಮನವಿಗಳ ನಡುವೆಯೇ, ಗಾಜಾ ನಗರದ ಮೇಲಿನ ತನ್ನ ಹಿಡಿತವನ್ನು ಇಸ್ರೇಲ್ ಮತ್ತಷ್ಟು ಬಿಗಿಗೊಳಿಸುತ್ತಿದೆ.

ಗಾಜಾದಲ್ಲಿರುವ ಹಮಾಸ್ ಬಂಡಕೋರರು ಅಡಗಿರುವ ತಾಣಗಳನ್ನು ಗುರಿಯಾಗಿಸಿ ಇಸ್ರೇಲ್ ಸೇನಾ ಪಡೆಗಳು (ಐಡಿಎಫ್) ದಾಳಿಯನ್ನು ತೀವ್ರಗೊಳಿಸಿವೆ. ಭೂದಾಳಿ ಜೊತೆಗೆ, ವಾಯು ದಾಳಿಯನ್ನು ಮುಂದುವರಿಸಿವೆ. ಎರಡು ಪ್ರತ್ಯೇಕ ದಾಳಿಗಳಲ್ಲಿ ಹಮಾಸ್‌ನ ಪ್ರಮುಖ ಶಸ್ತ್ರಾಸ್ತ್ರ ತಯಾರಕ ಮಹಸೀನ್ ಅಬು ಜಿನಾ ಹಾಗೂ ಕೆಲ ಬಂಡುಕೋರರನ್ನು ಹತ್ಯೆ ಮಾಡಿದ್ದಾಗಿ ಇಸ್ರೇಲ್ ಸೇನಾಧಿಕಾರಿಯೊಬ್ಬರು ಹೇಳಿದ್ದಾರೆ.

ಇಸ್ರೇಲ್ ಸೇನಾಪಡೆಗಳಿಗೆ ಪ್ರತಿರೋಧ ಒಡ್ಡಿದ್ದಾಗಿ ಹೇಳಿಕೊಂಡಿರುವ ಹಮಾಸ್, ತಾನು ನಡೆಸಿದ ದಾಳಿಯಿಂದಾಗಿ ಅಪಾರ ಹಾನಿಯಾಗಿದೆ ಎಂದು ಹೇಳಿದೆ. ಕೇಂದ್ರ ಗಾಜಾದಲ್ಲಿರುವ ನಸೀರತ್ ನಿರಾಶ್ರಿತರ ಶಿಬಿರದ ಮೇಲೆ ಇಸ್ರೇಲ್ ನಡೆಸಿದ ವಾಯು ದಾಳಿಯಲ್ಲಿ ಇಬ್ಬರು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

ನಿರಾಶ್ರಿತರ ಶಿಬಿರಯೊಂದರ ಬಳಿ ಬಂಡುಕೋರರು ಹಾಗೂ ಇಸ್ರೇಲಿ ಪಡೆಗಳ ನಡುವೆ ನಡೆದ ಸಂಘರ್ಷ ನಡೆದಿದ್ದು, ಇಸ್ರೇಲ್‌ಗೆ ಟ್ಯಾಂಕ್‌ವೊಂದನ್ನು ನಾಶಪಡಿಸಲಾಗಿದೆ ಎಂದು ಪ್ಯಾಲೆಸ್ಟೀನ್ ಮಾಧ್ಯಮ ವರದಿ ಮಾಡಿದೆ.

ಗಾಜಾ ನಗರವನ್ನು ಸುತ್ತುವರಿದಿರುವ ಐಡಿಎಫ್, ಸುರಂಗ ಮಾರ್ಗಗಳನ್ನು ಗುರಿಯಾಗಿಸಿ ದಾಳಿ ನಡೆಸಿದೆ. ಅಧಿಕ ಜನವಸತಿವುಳ್ಳ ಗಾಜಾ ನಗರದ ಹೃದಯ ಭಾಗದತ್ತ ತನ್ನ ಯೋಧರು ಸಾಗಿದ್ದಾರೆ ಎಂದು ಐಡಿಎಫ್ ತಿಳಿಸಿದೆ.

ಈ ಸಂಘರ್ಷದಲ್ಲಿ ಈ ವರೆಗೆ 4,324 ಮಕ್ಕಳು ಸೇರಿ ಕನಿಷ್ಠ 10,569 ಮಂದಿ ಮೃತಪಟ್ಟಿದ್ದಾರೆ. 26,457 ಜನರು ಗಾಯಗೊಂಡಿದ್ದಾರೆ ಎಂದು ಹಮಾಸ್ ನಿಯಂತ್ರಿತ ಗಾಜಾದ ಆರೋಗ್ಯ ಸಚಿವಾಲಯ ಹೇಳಿದೆ.

### ಪ್ರಮುಖ ಬೆಳವಣಿಗೆಗಳು

- ಗಾಜಾ ನಗರದ ಅಡಿಯಲ್ಲಿ ನೂರಾರು ಕಿ.ಮೀ. ಉದ್ದದ ಸುರಂಗಗಳನ್ನು ನಿರ್ಮಿಸಲಾಗಿದೆ. ಸ್ಫೋಟಕಗಳನ್ನು ಬಳಸಿ ಇವುಗಳನ್ನು ಧ್ವಂಸಗೊಳಿಸಲಾಗುತ್ತಿದೆ ಎಂದು ಇಸ್ರೇಲ್ ಸೇನೆಯ ವಕ್ತಾರ ಡೇನಿಯಲ್ ಹಗರಿ ಹೇಳಿದ್ದಾರೆ
- ಗಾಜಾದ ಉತ್ತರ ಭಾಗವನ್ನು ತೊರೆಯುತ್ತಿರುವ ಸಾವಿರಾರು ಜನರು ಇಸ್ರೇಲ್‌ನ ಟ್ಯಾಂಕ್‌ಗಳ ಸರ್ಪಗಾವಲಿರುವ ರಸ್ತೆ ಮೂಲಕ ದಕ್ಷಿಣದತ್ತ ಸಾಗುತ್ತಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ
- ಗಾಜಾದ ಪ್ರಮುಖ ಅಲ್ ಶಿಫಾ ಆಸ್ಪತ್ರೆ ಸೇರಿದಂತೆ ಇಸ್ರೇಲ್ ಪಡೆಗಳು ಸುತ್ತುವರಿದಿರುವ ಪ್ರದೇಶಗಳಲ್ಲಿ ಈಗಲೂ ಸಾವಿರಾರು ಜನರು ಆಶ್ರಯ ಪಡೆದಿದ್ದಾರೆ
- ಇಸ್ರೇಲ್ ಪಡೆಗಳ ದಾಳಿ ಪರಿಣಾಮವಾಗಿ ನೂರಾರು ಕಟ್ಟಡಗಳು ನೆಲಸಮಗೊಂಡಿದ್ದು, ಅಗತ್ಯ ವಸ್ತುಗಳ ಪೂರೈಕೆಯೂ ವ್ಯತ್ಯಯಗೊಂಡಿದೆ. ಸಂತ್ರಸ್ತರ ನೆರವಿಗೆ ಕದನ ವಿರಾಮ ಘೋಷಿಸಲು ವಿಶ್ವಸಂಸ್ಥೆ ಹಾಗೂ ಜಿ7 ರಾಷ್ಟ್ರಗಳು ಮನವಿ ಮಾಡಿವೆ.

### ಅರ್ಚಕರ ನೇಮಕಾತಿಗೆ ಜಾರಿಯಲ್ಲಿರುವ ನಿಯಮ ಪಾಲಿಸಿ: 'ಸುಪ್ರೀಂ'

## ಆದೇಶ ರದ್ದತಿ ಕೋರಿದ್ದ ತಮಿಳುನಾಡು ಅರ್ಜಿ ವಜಾ

ನವದೆಹಲಿ (ಪಿಟಿಐ): ಆಗಮ ಸಂಪ್ರದಾಯ ಪಾಲಿಸುವ ದೇವಸ್ಥಾನಗಳಲ್ಲಿ ಅರ್ಚಕರ ನೇಮಕಾತಿಗೆ ಸದ್ಯ ಜಾರಿಯಲ್ಲಿರುವ ನಿಯಮಗಳನ್ನೇ ಅನುಸರಿಸುವಂತೆ ಸೂಚಿಸಿ ಈ ಹಿಂದೆ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿತ್ತು. ಆ ಆದೇಶ ರದ್ದುಪಡಿಸುವಂತೆ ಕೋರಿ ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಬುಧವಾರ ವಜಾಗೊಳಿಸಿದೆ.

ತಮಿಳುನಾಡಿನ ದೇವಸ್ಥಾನಗಳಿಗೆ ಅರ್ಚಕರನ್ನು ನೇಮಿಸುವ ಅಧಿಕಾರ ರಾಜ್ಯ ಸರ್ಕಾರಕ್ಕಿದೆ. ಅರ್ಚಕರ ನೇಮಕಾತಿಯು ಜಾತ್ಯತೀತವಾದ ಕ್ರಿಯೆಯಾಗಿದೆ. ರಾಜ್ಯದ ವಿವಿಧ ಆಗಮ ದೇವಾಲಯಗಳಲ್ಲಿ 2,405 ಅರ್ಚಕರ ಹುದ್ದೆಗಳು ಖಾಲಿ ಇವೆ. ಆದೇಶ ರದ್ದುಗೊಳಿಸಿದರೆ ಈ ಹುದ್ದೆಗಳಿಗೆ ನೇಮಕಾತಿ ಮಾಡಲು ಮತ್ತು ಅರ್ಚಕರ ತರಬೇತಿ ಕೇಂದ್ರಗಳಲ್ಲಿ ವ್ಯಾಸಂಗ ಮಾಡಿರುವ ಅಭ್ಯರ್ಥಿಗಳಿಗೆ ತರಬೇತಿ ನೀಡಲು ಸಾಧ್ಯವಾಗುತ್ತದೆ ಎಂದು ಸರ್ಕಾರದ ಪರ ಕೋರ್ಟ್‌ಗೆ ಹಾಜರಾಗಿದ್ದ ಹಿರಿಯ ವಕೀಲ ದುಶ್ಯಂತ್ ದವೆ ಅವರು ಹೇಳಿದರು.

ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಮತ್ತು ಎಂ.ಎಂ. ಸುಂದ್ರೇಶ್ ಅವರಿದ್ದ ಪೀಠವು ರಾಜ್ಯ ಸರ್ಕಾರದ ವಾದವನ್ನು ಪುರಸ್ಕರಿಸಲಿಲ್ಲ. ರಾಜ್ಯ ಸರ್ಕಾರವು ಆಗಮ ಸಂಪ್ರದಾಯದಲ್ಲಿ ನಿಗದಿ ಮಾಡಿರುವ ಪ್ರಕ್ರಿಯೆಗಳನ್ನು ಆಧರಿಸಿ ನಿರ್ದಿಷ್ಟ ಪಂಗಡದ ದೇವಸ್ಥಾನಗಳಲ್ಲಿ ಅರ್ಚಕರನ್ನು ನೇಮಿಸುವುದಿಲ್ಲ ಎಂಬುದು ವಾದವಾಗಿದೆ ಎಂದು ಪೀಠ ಹೇಳಿತು.

ಜೊತೆಗೆ, ಈ ಅರ್ಜಿಯ ಮುಂದಿನ ವಿಚಾರಣೆಯನ್ನು ಮುಂದಿನ ವರ್ಷ ಜನವರಿ 25ಕ್ಕೆ ನಿಗದಿಪಡಿಸಿತು. ಇದೇ ವಿಚಾರವಾಗಿ ಮದ್ರಾಸ್ ಹೈಕೋರ್ಟ್‌ನಲ್ಲಿಯೂ ಪ್ರಕರಣ ನಡೆಯುತ್ತಿದ್ದು, ಅದಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡುವುದಿಲ್ಲ ಎಂದು ಪೀಠ ಹೇಳಿದೆ.

ಆಗಮ ದೇವಾಲಯಗಳಲ್ಲಿ ಅರ್ಚಕರ ನೇಮಕಾತಿಯನ್ನು ವಂಶಪಾರಂಪರ್ಯ ಮಾದರಿಯಲ್ಲಿ ನಡೆಸಲಾಗುತ್ತದೆ. ಈ ಪ್ರಕ್ರಿಯೆಗೆ ತಡೆ ನೀಡಿ, ಬೇರೆ ಪಂಗಡಗಳಿಗೆ ಸೇರಿದವರನ್ನೂ ಈ ದೇವಸ್ಥಾನಗಳಲ್ಲಿ ಅರ್ಚಕರನ್ನಾಗಿ ನೇಮಿಸಲು ರಾಜ್ಯ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಆರೋಪಿಸಿ ರಾಜ್ಯದ ಅರ್ಚಕರ ಸಂಘಟನೆಯೊಂದು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.



## ಕ್ಷಯ: ಭಾರತದಲ್ಲಿ ಸಾವಿನ ಪ್ರಮಾಣ ಇಳಿಕೆ– ಡಬ್ಲ್ಯುಎಚ್‌ಒ ಅಂದಾಜು

ಪ್ರಜಾವಾಣಿ ವಾರ್ತೆ

ನವದೆಹಲಿ: ಕ್ಷಯದಿಂದಾಗಿ ಭಾರತದಲ್ಲಿ ಪ್ರತಿ ವರ್ಷ ಸಂಭವಿಸುವ ಮರಣ ಪ್ರಮಾಣದಲ್ಲಿ ಶೇ 20–40ರಷ್ಟು ಇಳಿಕೆಯಾಗಲಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಅಂದಾಜಿಸಿದೆ.

ದೇಶದಲ್ಲಿ ಸಂಭವಿಸುತ್ತಿರುವ ಸಾವು ಹಾಗೂ ಅದಕ್ಕೆ ಕಾರಣಗಳಿಗೆ ಸಂಬಂಧಿಸಿ ಕೇಂದ್ರ ಸರ್ಕಾರ ತನ್ನೊಂದಿಗೆ ಹಂಚಿಕೊಂಡಿರುವ ಹೊಸ ವರದಿಗಳು ಈ ಅಂದಾಜಿಗೆ ಕಾರಣ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

ಸಂಸ್ಥೆಯು ಬಿಡುಗಡೆ ಮಾಡಿರುವ 'ಜಾಗತಿಕ ಕ್ಷಯ ವರದಿ, 2023'ರಲ್ಲಿರುವ ಹೊಸ ದತ್ತಾಂಶಗಳ ಪ್ರಕಾರ, ಭಾರತದಲ್ಲಿ ಕ್ಷಯದಿಂದಾಗಿ ಸಂಭವಿಸುವ ಸಾವಿನಲ್ಲಿ ಇಳಿಕೆಯಾಗಿರುವ ಕುರಿತ ಮಾಹಿತಿ ಇದೆ. 'ಜಾಗತಿಕ ಕ್ಷಯ ವರದಿ'ಯ 2021 ಹಾಗೂ 2022ರ ಆವೃತ್ತಿಗಳಲ್ಲಿ, ಭಾರತದಲ್ಲಿ ಕ್ಷಯ ಸಂಬಂಧಿತ ವಾರ್ಷಿಕ ಸಾವಿನ ಸಂಖ್ಯೆ 5 ಲಕ್ಷ ದಾಟಬಹುದು ಎಂದು ಅಂದಾಜಿಸಲಾಗಿತ್ತು. ಆದರೆ, ಹೊಸ ದತ್ತಾಂಶಗಳನ್ನು ಆಧರಿಸಿದ ಸಿದ್ಧಪಡಿಸಿರುವ ಪ್ರಸಕ್ತ ವರ್ಷದ ವರದಿಯಲ್ಲಿ 2020 ಹಾಗೂ 2021ರಲ್ಲಿ ಸಾವಿನ ಪ್ರಮಾಣ 2.5 ಲಕ್ಷದಿಂದ 4 ಲಕ್ಷ ಇತ್ತು ಎಂದು ವಿವರಿಸಲಾಗಿದೆ.

'2013ರ ವರೆಗೆ ಮಾದರಿ ನೋಂದಣಿ ವ್ಯವಸ್ಥೆ (ಎಸ್‌ಆರ್‌ಎಸ್)ಯಡಿ ಲಭ್ಯವಿದ್ದ ದತ್ತಾಂಶವನ್ನು ಭಾರತ ಒದಗಿಸಿತ್ತು. ಈ ದತ್ತಾಂಶವನ್ನು ಆಧರಿಸಿ ಈ ಹಿಂದಿನ ವರದಿಗಳನ್ನು ಪ್ರಕಟಿಸಲಾಗಿತ್ತು' ಎಂದು ವಿಶ್ವ ಆರೋಗ್ಯ ಸಂಸ್ಥೆಯ ಜಾಗತಿಕ ಕ್ಷಯ ನಿರ್ಮೂಲನಾ ಕಾರ್ಯಕ್ರಮದ ನಿರ್ದೇಶಕಿ ತೆರೆಜಾ ಕಸೇವಾ ಹೇಳಿದ್ದಾರೆ.

'ಕ್ಷಯ ಪ್ರಕರಣಗಳು ಹಾಗೂ ಕಾಯಿಲೆಯಿಂದ ಸಂಭವಿಸುವ ಸಾವಿನ ಪ್ರಮಾಣ ನಿಯಂತ್ರಿಸುವ ನಿಟ್ಟಿನಲ್ಲಿ ಭಾರತ ಕೈಗೊಂಡ ಪ್ರಯತ್ನಗಳನ್ನು ವಿಶ್ವ ಆರೋಗ್ಯ ಸಂಸ್ಥೆ ಗುರುತಿಸಿದೆ' ಎಂದು ಕೇಂದ್ರ ಆರೋಗ್ಯ ಸಚಿವಾಲಯ ಪ್ರತಿಕ್ರಿಯಿಸಿದೆ.

# 'ಬುಲ್ಡೋಜರ್'ಗೂ ತಣಿಯದ ಆದಿವಾಸಿಗಳ ಸಿಟ್ಟು





**ಗ್ವಾಲಿಯರ್:** ರಾಜ್ಯದ ಸಿಧಿ ಕ್ಷೇತ್ರದಲ್ಲಿ ಆದಿವಾಸಿ ಸಮುದಾಯದ ವ್ಯಕ್ತಿಯೊಬ್ಬರ ಮೇಲಿನ ಮೂತ್ರ ವಿಸರ್ಜನೆಯ ಹೇಯ ಕೃತ್ಯವು ರಾಜ್ಯದ ಚುನಾವಣಾ ಕಣದಲ್ಲಿ ಜೋರು ಸದ್ದು ಮಾಡುತ್ತಿದೆ. ಬಿಜೆಪಿ ಸರ್ಕಾರವು 'ಬುಲ್ಡೋಜರ್' ಮೂಲಕ ಆರೋಪಿ ಸೇರಿದ ಮನೆ ನೆಲಸಮ ಮಾಡಿದ ಬಳಿಕವೂ ಆದಿವಾಸಿಗಳ ಕೋಪ ಶಮನವಾಗಿಲ್ಲ.

ಆರೋಪಿಯು ಪಾದರಿ ಮಾರ್ಗದಲ್ಲಿ ಕುಳಿತಿದ್ದ ಬುಡಕಟ್ಟು ವ್ಯಕ್ತಿ ದಶಮತ್ ರಾವತ್ ಮೇಲೆ ಮೂತ್ರ ವಿಸರ್ಜನೆ ಮಾಡುತ್ತಿರುವ ವಿಡಿಯೊ ಜುಲೈ ತಿಂಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಬಿಜೆಪಿ ಶಾಸಕ ಕೇದಾರನಾಥ್ ಶುಕ್ಲಾ ಅವರ ಆಪ್ತ ಪ್ರವೇಶ್ ಶುಕ್ಲಾ ಈ ಕೃತ್ಯ ಎಸಗಿದ್ದ. ಈ ಘಟನೆಯಿಂದ ಬಿಜೆಪಿ ತೀವ್ರ ಮುಜುಗರಕ್ಕೆ ಒಳಗಾಗಿತ್ತು. ಮುಖ್ಯಮಂತ್ರಿ ಶಿವರಾಜ ಸಿಂಗ್ ಚೌಹಾಣ್ ಸಂತ್ರಸ್ತನ ಪಾದ ತೊಳೆದು ಕ್ಷಮೆಯಾಚಿಸಿದ್ದರು. ಆರೋಪಿ ಮನೆಯನ್ನು ಬುಲ್ಡೋಜರ್ ಮೂಲಕ ನೆಲಸಮ ಮಾಡಿಸುವ ಮೂಲಕ ಸರ್ಕಾರದ ಹಾಗೂ ಪಕ್ಷದ ವರ್ಚಸ್ಸಿನ ಮೇಲಿನ ಹಾನಿಯನ್ನು ಕಮ್ಮಿ ಮಾಡಲು ಮುಖ್ಯಮಂತ್ರಿ ಪ್ರಯತ್ನಿಸಿದ್ದರು. ಕೇದಾರನಾಥ್ ಶುಕ್ಲಾ ಅವರಿಗೆ ಪಕ್ಷ ಟಿಕೆಟ್ ನೀಡಿಲ್ಲ. ಆದರೆ, ಅವರ ಜಾಗದಲ್ಲಿ ಅಖಾಡದಲ್ಲಿರುವುದು ಅವರ ಪಕ್ಷದ ರೀತಿ ಪಾಠಕ್. ಅವರು ಸಂಸದರೂ ಹೌದು. 'ಇದು ಬಿಜೆಪಿಯ ನಾಟಕ. ಕಮಲ ಪಕ್ಷಕ್ಕೆ ನಮ್ಮ ಸಮುದಾಯದ ಮೇಲೆ ನೈಜ ಕಾಳಜಿ ಇದ್ದರೆ ಆ ಕ್ಷೇತ್ರದಲ್ಲಿ ತಳ ಸಮುದಾಯದವರನ್ನು ನಿಲ್ಲಿಸಬೇಕಿತ್ತು' ಎಂಬುದು ಆದಿವಾಸಿಗಳ ಸ್ಪಷ್ಟ ನುಡಿ.

ರಾಜ್ಯದಲ್ಲಿ 82 ಮೀಸಲು ಕ್ಷೇತ್ರಗಳಿವೆ. 47 ಪರಿಶಿಷ್ಟ ಪಂಗಡದ ಕ್ಷೇತ್ರಗಳಾದರೆ, 35 ಪರಿಶಿಷ್ಟ ಜಾತಿಯ ಕ್ಷೇತ್ರಗಳು. ರಾಜ್ಯದಲ್ಲಿ ಪರಿಶಿಷ್ಟ ಪಂಗಡದವರು ಶೇ 21ರಷ್ಟು ಇದ್ದಾರೆ. 2013ರ ವಿಧಾನಸಭಾ ಚುನಾವಣೆಯಲ್ಲಿ 31 ಎಸ್‌ಟಿ ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಿತ್ತು. 2018ರಲ್ಲಿ ಗೆದ್ದಿದ್ದು 15 ಕ್ಷೇತ್ರಗಳಲ್ಲಷ್ಟೇ. ಕಳೆದ ಕೆಲವು ವರ್ಷಗಳಲ್ಲಿ ಪರಿಶಿಷ್ಟರ ಮೇಲಿನ ದೌರ್ಜನ್ಯ ಏರುಗತಿಯಲ್ಲಿದೆ. 'ಕೆಲವು ಪ್ರಕರಣಗಳಷ್ಟೇ ಬೆಳಕಿಗೆ ಬಂದಿವೆ. ಇಂತಹ ದೌರ್ಜನ್ಯಗಳಿಗೆ ಕಡಿವಾಣ ಹಾಕುವಲ್ಲಿ ಬಿಜೆಪಿ ವಿಫಲವಾಗಿದೆ. ಇದಕ್ಕೆ ಈ ಚುನಾವಣೆಯಲ್ಲಿ ಬುಡಕಟ್ಟು ಮತದಾರರು ತಕ್ಕ ಉತ್ತರ ನೀಡಲಿದ್ದಾರೆ' ಎನ್ನುತ್ತಾರೆ ಜೈ ಆದಿವಾಸಿ ಯುವಶಕ್ತಿಯ ಮುಖಂಡ ಹೀರಾಲಾಲ್.

ದಬ್ರಾ ಕ್ಷೇತ್ರದ ಬುಡಕಟ್ಟು ಕಾಲೊನಿಯೊಂದರಲ್ಲಿ ಮಾತಿಗೆ ಸಿಕ್ಕ ಅವರು, 'ರಾಜ್ಯದಲ್ಲಿನ ಆದಿವಾಸಿಗಳ ಮೇಲಿನ ಅಮಾನವೀಯ ದಾಳಿಗಳ ದೊಡ್ಡ ಪಟ್ಟಿಯನ್ನೇ ನಾನು ಕೊಡಬಲ್ಲೆ.




ಒಂದೇ ಒಂದು ಪ್ರಕರಣದಲ್ಲಿ ಆರೋಪಿಗಳಿಗೆ ಕಠಿಣ ಶಿಕ್ಷೆ ಆಗಿಲ್ಲ. ತಮ್ಮ ಕುರ್ಚಿ ಉಳಿಸಿಕೊಳ್ಳಲು ಚೌಹಾಣ್ ಅವರು ಸಂತ್ರಸ್ತನ ಪಾದ ತೊಳೆದಿದ್ದಾರೆ. 'ಇದೆಲ್ಲ ಬರೀ ನಾಟಕ' ಎಂದು ವ್ಯಾಖ್ಯಾನಿಸುತ್ತಾರೆ.

'ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಂದ ಮುಖ್ಯಮಂತ್ರಿ ಚೌಹಾಣ್ ಸ್ಫೂರ್ತಿ ಪಡೆಯುತ್ತಿದ್ದಾರೆ. ಬುಲ್ಡೋಜರ್ ತಂತ್ರ ಅನುಸರಿಸಿದ್ದು ಇದೇ ಕಾರಣಕ್ಕೆ. ಇದನ್ನೆಲ್ಲ ನೋಡಿ ನಮಗೂ ಸಾಕಾಗಿದೆ' ಎಂದು ಅವರು ಹೇಳುತ್ತಾರೆ.

ಗುನಾ ಕ್ಷೇತ್ರದ ಆದಿವಾಸಿ ಧೀರಿಲಾಲ್ ಧೀರು ಇನ್ನೊಂದು ರೀತಿಯಲ್ಲಿ ವ್ಯಾಖ್ಯಾನಿಸುತ್ತಾರೆ. 'ಚುನಾವಣೆ ಸಮಯದಲ್ಲಿ ಆದಿವಾಸಿಗಳನ್ನು ಹೇಗೆ ಸೆಳೆಯಬೇಕು ಎಂಬುದು ರಾಜಕಾರಣಿಗಳಿಗೆ ಗೊತ್ತಿದೆ. ಹಣ ಹಾಗೂ ಮದ್ಯಕ್ಕೆ ನಮ್ಮ ಜನರು ಮರುಳಾಗುತ್ತಾರೆ. ಎಲ್ಲ ಸಿಟ್ಟನ್ನು ಮರೆಯುತ್ತಾರೆ. ಬಿಜೆಪಿಗೆ ಮತ ಒತ್ತುತ್ತಾರೆ' ಎಂದು ಅವರು ಹೇಳುತ್ತಾರೆ. 'ಆದಿವಾಸಿಗಳಲ್ಲಿ ಈಗ ಎರಡು ಗುಂಪುಗಳಾಗಿವೆ. ಹಿರಿಯರ ಒಲವು ಕಾಂಗ್ರೆಸ್ ಪರ ಇದ್ದರೆ, ಯುವಜನರ ಪ್ರೀತಿ ಕಮಲ ಪಾಳಯದ ಮೇಲೆ. ಹಿಂದುತ್ವದ ಅಮಲು ನಮ್ಮ ಯುವಕರ ತಲೆಗೆ ಏರಿದೆ' ಎಂದೂ ಅವರು ತಿಳಿಸುತ್ತಾರೆ. 'ಮೂತ್ರ ವಿಸರ್ಜನೆ ಪ್ರಕರಣವು ನಮ್ಮ ಅಸ್ಮಿತೆಯನ್ನೇ ನಿರಾಕರಿಸಿದ ಘಟನೆ. ಈ ದುಷ್ಕೃತ್ಯವನ್ನು ನೆನೆಸಿಕೊಂಡರೆ ಈಗಲೂ ರಕ್ತ ಕುದಿಯುತ್ತದೆ' ಎಂದು ಅವರು ಕೋಪದಿಂದ ನುಡಿಯುತ್ತಾರೆ.

'ನಮ್ಮ ಜೀವನದಲ್ಲಿ ಬದಲಾವಣೆ ತರುವ ಮತ್ತು ಲೇವಾದೇವಿಗಾರರ ದುಷ್ಕೃತ್ಯಗಳಿಂದ ನಮ್ಮನ್ನು ರಕ್ಷಿಸುವ ಪಕ್ಷಕ್ಕೆ ನಾನು ಮತ ಹಾಕುತ್ತೇನೆ. ನಮ್ಮ ಮೇಲೆ ದೌರ್ಜನ್ಯ ನಡೆಸಿದವರಿಗೂ ಪಾಠ ಕಲಿಸಬೇಕಿದೆ' ಎಂದು ಭಂಡೇರ್‌ನ ಆದಿವಾಸಿ ಗನ್ಪಾಲ್ ಪರ್ಮಾರ್ ಸ್ಪಷ್ಟವಾಗಿ ಹೇಳುತ್ತಾರೆ.

'ನಾವು ಕಾಡು ಉತ್ಪನ್ನಗಳನ್ನು ತೆಗೆದು ಜೀವನ ನಡೆಸುವವರು. ನಮ್ಮ ಕೈಯಲ್ಲಿ ಸಾಮಾನ್ಯವಾಗಿ ಹಣ ಓಡಾಡುತ್ತಿರುವುದಿಲ್ಲ. ಇದನ್ನೇ ನೋಡಿ ಬೇರೆಯವರು ದೌರ್ಜನ್ಯ ಎಸಗುತ್ತಾರೆ. ಮೇಲ್ವರ್ಗದ ಆರೋಪಿ ಹೊರೆಗೆ ಬರುತ್ತಾರೆ. ಅಧಿಕಾರಿಗಳ ಅಟ್ಟಹಾಸಕ್ಕೆ ಕೊನೆಯೇ ಇಲ್ಲದಂತಾಗಿದೆ. ಆರೋಪಿ ವಿರುದ್ಧ ಕ್ರಮ ಕೈಗೊಳ್ಳಲೂ ಲಂಚ ಕೊಡಬೇಕಾಗುತ್ತದೆ. ಕೋಳಿ ಹಾಗೂ ಸಾವಿರಾರು ರೂಪಾಯಿ ಲಂಚ ಕೊಡುವವರೇ ಗೆಲ್ಲುತ್ತಾರೆ. ಅಧಿಕಾರಿಗಳ ಮೇಲೆ ಸರ್ಕಾರಕ್ಕೆ ನಿಯಂತ್ರಣವೇ ಇಲ್ಲ. ಭ್ರಷ್ಟಾಚಾರ ಮಿತಿಮೀರಿದೆ' ಎಂದು ಅವರು ಆಕ್ರೋಶ ವ್ಯಕ್ತಪಡಿಸುತ್ತಾರೆ.

## ಚುನಾವಣಾ ಕಣದಲ್ಲಿ


ಅಜರುದ್ದೀನ್

- **ಚಿಂತೆಯಿಲ್ಲ–ಅಜರುದ್ದೀನ್:** ಎಐಎಂಐಎಂ ಅಭ್ಯರ್ಥಿಯನ್ನು ತಮ್ಮ ವಿರುದ್ಧ ಕಣಕ್ಕಿಳಿಸಿದರೆ ತಮಗೆ ಚಿಂತೆಯೇನೂ ಇಲ್ಲ. ಜುಬಿಲಿ ಹಿಲ್ಸ್ ಜನರು ತಮ್ಮೊಂದಿಗೆ ಇದ್ದಾರೆ ಎಂದು ಈ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಅಜರುದ್ದೀನ್ ಹೇಳಿದ್ದಾರೆ.
  ರಾಜಕೀಯ ವಿಶ್ಲೇಷಕರ ಪ್ರಕಾರ, ಎಐಎಂಐಎಂ ಅಭ್ಯರ್ಥಿಯು ಕಾಂಗ್ರೆಸ್ ಮತಗಳನ್ನು ಒಡೆಯುವ ಸಂಭವ ಇದೆ. ಎಐಎಂಐಎಂ ಜುಬ್ಲಿ ಹಿಲ್ ಕ್ಷೇತ್ರದಿಂದ ಮೊಹಮ್ಮದ್ ರಶೀದ್ ಫರಾಜುದ್ದೀನ್ ಅವರನ್ನು ಕಣಕ್ಕಿಳಿಸಿದ್ದರೆ ಶಾಸಕ ಎಂ. ಗೋಪಿನಾಥ್ ಅವರು ಬಿಆರ್‌ಎಸ್‌ನಿಂದ ಸ್ಪರ್ಧಿಸಿದ್ದಾರೆ.
- **ಜನಸೇನಾ ಅಭ್ಯರ್ಥಿಗಳ ಪಟ್ಟಿ:** ಬಿಜೆಪಿಯೊಂದಿಗೆ ಸೀಟು ಹಂಚಿಕೆ ಒಪ್ಪಂದ ಅಂತಿಮಗೊಂಡ ಬಳಿಕ ನಟ ಪವನ್ ಕಲ್ಯಾಣ್ ನೇತೃತ್ವದ ಜನಸೇನಾ ಪಕ್ಷವು ತೆಲಂಗಾಣ ವಿಧಾನಸಭೆ ಚುನಾವಣೆಗಾಗಿ ಎಂಟು ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದೆ.
  ಪಕ್ಷದ ಏಕೈಕ ಮಹಿಳಾ ಅಭ್ಯರ್ಥಿ ಎಂ. ಉಮಾದೇವಿ ಅವರಿಗೆ ಅಶ್ವರಾವ್‌ಪೇಟಾ (ಎಸ್‌ಟಿ) ಕ್ಷೇತ್ರದಿಂದ ಟಿಕೆಟ್ ನೀಡಿದ್ದರೆ, ಪಕ್ಷದ ತೆಲಂಗಾಣದ ಉಸ್ತುವಾರಿ ಶಂಕರ್ ಗೌಡ್ ಅವರು ತಾಂಡೂರ್ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ.
- **ತನಿಖೆ ಆದೇಶ:** ಜೈಪುರ ಜಿಲ್ಲೆಯ ನಾಗೌರ್‌ನಲ್ಲಿ ಮಂಗಳವಾರ ಚುನಾವಣಾ ಪ್ರಚಾರದ ವೇಳೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ವಾಹನಕ್ಕೆ ವಿದ್ಯುತ್ ತಂತಿ ತಗುಲಿ ಕಿಡಿ ಸಿಡಿದ ಬಗ್ಗೆ ರಾಜಸ್ಥಾನ ಸರ್ಕಾರ ತನಿಖೆಗೆ ಆದೇಶಿಸಿದೆ.
  ಶಾ ಸೇರಿದಂತೆ ಎಲ್ಲರೂ ಸುರಕ್ಷಿತರಾಗಿದ್ದಾರೆ. ಶಾ ಅವರನ್ನು ನಂತರ ಬೇರೆ ವಾಹನದಲ್ಲಿ ಕರೆದೊಯ್ಯಲಾಗಿತ್ತು ಎಂದು ಅಧಿಕೃತ ಮೂಲಗಳು ಹೇಳಿವೆ.
- **ಇ.ಡಿ ದಾಳಿ:** ತಮ್ಮ ಚುನಾವಣಾ ವೆಚ್ಚದ ಮೇಲ್ವಿಚಾರಣೆ ಏಜೆಂಟ್ ಆಗಿ ಹೊತ್ತಿರುವ ಸುರೇಶ್ ಧಿಂಗಾನಿ ಅವರಿಗೆ ಸೇರಿದ ಸ್ಥಳಗಳ ಮೇಲೆ ದಾಳಿ ನಡೆಸಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಜಾರಿ ನಿರ್ದೇಶನಾಲಯವನ್ನು (ಇ.ಡಿ) ಕಳುಹಿಸಿದೆ ಎಂದು ಛತ್ತೀಸಗಢ ಮುಖ್ಯಮಂತ್ರಿ ಭೂಪೇಶ್ ಬಘೆಲ್ ಹೇಳಿದ್ದಾರೆ.
  ತಮ್ಮ ಕ್ಷೇತ್ರದ ಜನರಲ್ಲಿ ಭೀತಿ ಹುಟ್ಟಿಸುವ ಕ್ರಮ ಇದಾಗಿದೆ ಎಂದಿರುವ ಅವರು 'ಛತ್ತೀಸಗಢದ ಜನರು ದುರ್ಬಲರು, ಹೆದರುತ್ತಾರೆ ಎಂದು ಭಾವಿಸಬೇಡಿ' ಎಂದು ಹೇಳಿದ್ದಾರೆ.
- **ಗದ್ದರ್ ಮಗಳ ಆಶ್ವಾಸನೆ:** 'ನಾನು ಆಯ್ಕೆಯಾದರೆ ಜನರ ಮನೆ ಬಾಗಿಲ ಬಳಿ ಇರುತ್ತೇನೆ. ಎಲ್ಲಿಯೋ ಇರುವ ಶಾಸಕರ ಕಚೇರಿಗೆ ಜನರು ಬರುವ ಅವಶ್ಯಕತೆ ಇಲ್ಲ, ನಾನು ಒಂದು ವಾರ್ಡ್‌ನಲ್ಲಿ ನೆಲೆಸಿ ಜನರಿಗೆ ಯಾವಾಗಲೂ ಲಭ್ಯವಿರುತ್ತೇನೆ' ಎಂದು ಕ್ರಾಂತಿಕಾರಿ ಗಾಯಕ ಗದ್ದರ್ ಅವರ ಮಗಳು ಜಿ.ವಿ. ವೆನ್ನೆಲಾ ಜನರಿಗೆ ಆಶ್ವಾಸನೆ ನೀಡಿದ್ದಾರೆ.
  ಸಿಕಂದರಾಬಾದ್ ಕಂಟೋನ್ಮೆಂಟ್ ಕ್ಷೇತ್ರದಿಂದ (ಎಸ್‌ಸಿ ಮೀಸಲು) ಕಾಂಗ್ರೆಸ್‌ನಿಂದ ಅವರು ಸ್ಪರ್ಧಿಸಿದ್ದಾರೆ. ಬಿಆರ್‌ಎಸ್ ಮಾಜಿ ಶಾಸಕ ದಿ. ಜಿ. ಸಾಯಣ್ಣ ಅವರ ಮಗಳು ಜಿ.ಲಾಸ್ಯ ನಂದಿತಾ ಅವರು ಬಿಆರ್‌ಎಸ್‌ನಿಂದ ಕಣದಲ್ಲಿದ್ದಾರೆ. ಇಲ್ಲಿಗೆ ಅಭ್ಯರ್ಥಿಯನ್ನು ಬಿಜೆಪಿ ಇನ್ನೂ ಘೋಷಿಸಬೇಕಿದೆ.
- **ಪ್ರಿಯಾಂಕಾ ಟೀಕೆ:** ಸರ್ಕಾರದ ನಿಯಂತ್ರಣದಲ್ಲಿದ್ದ ಕಂಪನಿಗಳನ್ನು ಕೇಂದ್ರ ಸರ್ಕಾರವು ಈಗ ಉದ್ಯಮಿದಾರರಿಗೆ ವಹಿಸುತ್ತಿದೆ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ವಾದ್ರಾ ಟೀಕಿಸಿದರು.
  ಭೋಪಾಲ್‌ನಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಐಐಎಂ ಮತ್ತು ಎಐಐಎಂಎಸ್‌ನಂತಹ ದೊಡ್ಡ ಆಸ್ಪತ್ರೆಗಳನ್ನು ಕಾಂಗ್ರೆಸ್ ಸ್ಥಾಪಿಸಿತು. ಇಂತಹ ಸಂಸ್ಥೆಗಳು ದೇಶದ ಪ್ರಗತಿಗೆ ಕಾರಣವಾಗುತ್ತವೆ ಎಂದು ನಂಬಿದ್ದರು. ಆದರೆ ಈಗ ಸರ್ಕಾರದ ನಿಯಂತ್ರಣದಲ್ಲಿದ್ದ ಸಂಸ್ಥೆಗಳನ್ನು ಉದ್ಯಮಿಗಳಿಗೆ ಹಸ್ತಾಂತರಿಸುವುದು, ಜನರ ಜೇಬಿನಿಂದ ಹಣ ಕಿತ್ತುಕೊಳ್ಳುವುದೇ ಬಿಜೆಪಿಯ ನೀತಿಯಾಗಿದೆ ಎಂದು ಆರೋಪಿಸಿದರು.
- **ಪೊಲೀಸ್‌ಗಾಗಿ ಶೋಧ:** ಮಿಜೋರಾಂ ಚುನಾವಣಾ ಕರ್ತವ್ಯದಲ್ಲಿದ್ದ ಅಸ್ಸಾಂ ಪೊಲೀಸ್ ಅಧಿಕಾರಿಯೊಬ್ಬರು ನಾಪತ್ತೆಯಾಗಿದ್ದು, ಶೋಧ ಕಾರ್ಯ ಕೈಗೊಳ್ಳಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ. ಅಸ್ಸಾಂ ಪೊಲೀಸ್ ಪಡೆಯ ಏಳನೇ ಬೆಟಾಲಿಯನ್‌ನ ಕಾನ್‌ಸ್ಟೆಬಲ್ ಸಲೀಮ್ ನಾಥ್ ಅವರು ಮಣಿಪುರ ಗಡಿ ಬಳಿಯ ಗ್ರಾಮದಿಂದ ಕಾಣೆಯಾಗಿದ್ದಾರೆ ಎಂದು ಹೇಳಿದ್ದಾರೆ.


**ರೋಡ್ ಶೋ** ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಮಧ್ಯಪ್ರದೇಶದ ಇಂದೋರ್‌ನಲ್ಲಿ ಬುಧವಾರ ರೋಡ್ ಶೋ ನಡೆಸಿದರು –ಪಿಟಿಐ ಚಿತ್ರ

# ರಿಮೋಟ್ ನಿಯಂತ್ರಣದಲ್ಲಿ ಕಾಂಗ್ರೆಸ್ ಅಧ್ಯಕ್ಷರು: ಪ್ರಧಾನಿ

**ಮುಖ್ಯಾಂಶಗಳು**
- ದಮನಿತರ ಮೇಲೆ ದಾಳಿ
- ಕಾಂಗ್ರೆಸ್ ತಿರುಗೇಟು

**ದಮೋಹ್ (ಪಿಟಿಐ):** ಈ ಮೊದಲು ಕಾಂಗ್ರೆಸ್‌ನಿಂದ ಆಯ್ಕೆ ಆಗಿದ್ದ ಪ್ರಧಾನಿಯನ್ನು ರಿಮೋಟ್ ಮೂಲಕ ನಿಯಂತ್ರಿಸಲಾಗುತ್ತಿತ್ತು. ಈಗ ಪಕ್ಷದ ಅಧ್ಯಕ್ಷರು ರಿಮೋಟ್ ನಿಯಂತ್ರಣದಲ್ಲಿದ್ದಾರೆ. ರಿಮೋಟ್ ಸಂಸ್ಕೃತಿಯನ್ನು ಕಾಂಗ್ರೆಸ್ ಬಿಡುವುದೇ ಇಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ವ್ಯಂಗ್ಯವಾಡಿದರು.

ಮಧ್ಯಪ್ರದೇಶದ ದಮೋಹ್‌ನಲ್ಲಿ ನಡೆದ ಬಿಜೆಪಿಯ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, 'ಮಲ್ಲಿಕಾರ್ಜುನ ಖರ್ಗೆ ಅವರು ಹಿರಿಯ ನಾಯಕರಲ್ಲಿ ಒಬ್ಬರು ಮತ್ತು ನನ್ನ ಉತ್ತಮ ಸ್ನೇಹಿತರು. ಅವರು ಈ ಸ್ಥಿತಿಗೆ ತಲುಪಿದ್ದು ನೋಡಲು ಬೇಸರವಾಗುತ್ತದೆ' ಎಂದರು.

ಮಧ್ಯಪ್ರದೇಶದಲ್ಲಿ ಮಂಗಳವಾರ ನಡೆದ ಕಾಂಗ್ರೆಸ್ ರ‍್ಯಾಲಿಯಲ್ಲಿ ಮೋದಿ ಮತ್ತು ಕೇಂದ್ರ ಸರ್ಕಾರದ ವಿವಿಧ ಸಂಸ್ಥೆಗಳನ್ನು ಖರ್ಗೆ ಅವರು ಪಾಂಡವರಿಗೆ ಹೋಲಿಸಿ ವಾಗ್ದಾಳಿ ನಡೆಸಿದ್ದರು.

ಅದನ್ನು ಉಲ್ಲೇಖಿಸಿ ವ್ಯಂಗ್ಯವಾಡಿರುವ ಮೋದಿ, 'ಖರ್ಗೆ ಕೈಯಲ್ಲಿ ಹೆಚ್ಚಿನದನ್ನು ಮಾಡಲು ಸಾಧ್ಯವಿಲ್ಲ. ರಿಮೋಟ್ ಕೆಲಸ ಮಾಡುವಾಗ ಅವರು ಸನಾತನ ಧರ್ಮವನ್ನು ಜರೆಯುತ್ತಾರೆ. ರಿಮೋಟ್ ಸ್ಥಗಿತವಾದಾಗ ಪಾಂಡವರ ಬಗ್ಗೆ ಮಾತನಾಡುತ್ತಾರೆ. ಪಾಂಡವರು ಹಾಕಿಕೊಟ್ಟ ಹಾದಿಯಲ್ಲಿ ನಡೆಯುತ್ತಿರುವುದಕ್ಕೆ ಹೆಮ್ಮೆಯಿದೆ' ಎಂದರು.

**'ಸಂಘಟಿತ ದಾಳಿ':** 'ದಮನಿತ ವರ್ಗಗಳಿಂದ ಬಂದ ಎಲ್ಲರ ವಿರುದ್ಧವೂ ಬಿಜೆಪಿ ಸಂಘಟಿತ ದಾಳಿ ನಡೆಸುತ್ತದೆ' ಎಂದು ಮೋದಿ ಹೇಳಿಕೆಗೆ ಕಾಂಗ್ರೆಸ್ ತಿರುಗೇಟು ನೀಡಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರು 'ಎಕ್ಸ್'ನಲ್ಲಿ ಈ ಕುರಿತು ಪೋಸ್ಟ್ ಮಾಡಿದ್ದಾರೆ. 'ಇದೊಂದು ಅಸಂಬದ್ಧ ರಾಜಕೀಯ ಹೇಳಿಕೆಯಷ್ಟೇ ಅಲ್ಲ. ಹಿಂದುಳಿದ ವರ್ಗಗಳಿಂದ ಬಂದು ಸಾರ್ವಜನಿಕ ಜೀವನದಲ್ಲಿ ಯಶಸ್ಸು ಸಾಧಿಸುವ ಗುರಿ ಹೊಂದಿರುವವರ ಮೇಲೆ ನಡೆಯುವ ಸಂಘಟಿತ ದಾಳಿ' ಎಂದು ಬರೆದಿದ್ದಾರೆ.

ಸಾಮಾಜಿಕ ನ್ಯಾಯದ ಬಗ್ಗೆ ಬಿಜೆಪಿ ಕೇವಲ ಸುಳ್ಳು ಭರವಸೆಗಳನ್ನು ನೀಡುತ್ತದೆ. ಆದರೆ, ಅದನ್ನು ಪ್ರಜಾಸತ್ತಾತ್ಮಕವಾಗಿ ಎತ್ತಿಹಿಡಿಯುವ ಶಕ್ತಿ ಇರುವುದು ಕಾಂಗ್ರೆಸ್‌ಗೆ ಮಾತ್ರ ಎಂಬ ಸತ್ಯವನ್ನು ಮೋದಿ ಅವರಿಗೆ ಜೀರ್ಣಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದಿದ್ದಾರೆ.

## ನುಡಿ-ಕಿಡಿ


ಉಚಿತ ಆಹಾರ ಧಾನ್ಯ ವಿತರಣೆ ಯೋಜನೆಯನ್ನು ಇನ್ನೂ ಐದು ವರ್ಷಗಳಿಗೆ ಮುಂದುವರೆಸುವುದಾಗಿ ನಾನು ನೀಡಿರುವ ಆಶ್ವಾಸನೆ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ನೀಡುವುದಾಗಿ ಕಾಂಗ್ರೆಸ್ ನಾಯಕರು ಹೇಳುತ್ತಿದ್ದಾರೆ. ಅವರು ಈ ದುಷ್ಕೃತ್ಯ ಎಸಗಲಿ. ನಾನು ಉತ್ತಮ ಕೆಲಸಗಳನ್ನು ಮುಂದುವರೆಸುತ್ತೇನೆ.
**ನರೇಂದ್ರ ಮೋದಿ,** ಪ್ರಧಾನ ಮಂತ್ರಿ


ಮಕ್ಕಳನ್ನು ಇಂಗ್ಲಿಷ್ ಮಾಧ್ಯಮಗಳಿಗೆ ಕಳಿಸಬೇಡಿ ಎಂದು ಬಿಜೆಪಿ ನಾಯಕರು ಛತ್ತೀಸಗಢದ ಆದಿವಾಸಿಗಳಿಗೆ ಹೇಳುತ್ತಾರೆ. ಆದಿವಾಸಿಗಳ ಮಕ್ಕಳು ದೊಡ್ಡ ಕನಸು ಕಾಣುವುದನ್ನು ಬಿಜೆಪಿ ಇಷ್ಟಪಡುವುದಿಲ್ಲ. ಆದರೆ, ಬಿಜೆಪಿ ನಾಯಕರ ಮಕ್ಕಳು ವ್ಯಾಸಂಗ ಮಾಡುವಂಥ ಶಾಲೆಗಳಲ್ಲೇ ಬುಡಕಟ್ಟು ಸಮುದಾಯದ ಮಕ್ಕಳೂ ವ್ಯಾಸಂಗ ಮಾಡಬೇಕು ಎಂದು ಕಾಂಗ್ರೆಸ್ ಬಯಸುತ್ತದೆ.
**ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ


ಅಸಮರ್ಥರ ಕೈಯಲ್ಲಿ ತೆಲಂಗಾಣವನ್ನು ಕೊಟ್ಟರೆ ರಾಜ್ಯವು ಸಮಸ್ಯೆಗಳಿಂದ ನಲುಗುತ್ತದೆ. 2014ರಲ್ಲಿ ತೆಲಂಗಾಣ ರಾಜ್ಯ ರಚನೆಯಾದ ವೇಳೆ ನೀರು, ವಿದ್ಯುತ್, ರೈತರ ಆತ್ಮಹತ್ಯೆ ಸೇರಿ ಹಲವು ಗಂಭೀರ ಸಮಸ್ಯೆಗಳಿದ್ದವು. ನಮ್ಮ ಸರ್ಕಾರವು ಇವನ್ನು ಬಗೆಹರಿಸಿದೆ. ಬಿಆರ್‌ಎಸ್ ನಾಯಕರು ರಾಜ್ಯದ ಜನತೆ ಜೊತೆಯಲ್ಲೇ ಇದ್ದು ಸಮಸ್ಯೆಗಳನ್ನು ಆಲಿಸುತ್ತಾರೆ.
**ಕೆ.ಚಂದ್ರಶೇಖರ ರಾವ್,** ತೆಲಂಗಾಣ ಮುಖ್ಯಮಂತ್ರಿ

## ವಿಶೇಷ ವೀಕ್ಷಕರ ನೇಮಕ

**ನವದೆಹಲಿ:** ತೆಲಂಗಾಣದಲ್ಲಿ ತನ್ನ ಪ್ರಚಾರ ನಿರ್ವಹಣೆ ಚುರುಕುಗೊಳಿಸಿರುವ ಕಾಂಗ್ರೆಸ್ ಬುಧವಾರ ಪಕ್ಷದ ಕಾರ್ಯಕಾರಿ ಸಮಿತಿ ಸದಸ್ಯ ರಮೇಶ್ ಚೆನ್ನಿತ್ತಲ ಅವರನ್ನು ವಿಶೇಷ ವೀಕ್ಷಕರಾಗಿ ನೇಮಿಸಿದೆ.

ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ್, ಮಾಜಿ ಸಚಿವರಾದ ಎನ್.ಎಚ್. ಶಿವಶಂಕರ ರೆಡ್ಡಿ, ರಾಜಶೇಖರ್ ಬಿ.ಪಾಟೀಲ್, ಮಾಜಿ ಶಾಸಕಿ ಅಂಜಲಿ ನಿಂಬಾಳ್ಕರ್ ಅವರನ್ನು ಲೋಕಸಭಾ ವೀಕ್ಷಕರನ್ನಾಗಿ ನೇಮಿಸಲಾಗಿದೆ.

ವಿಧಾನಸಭೆ ಚುನಾವಣೆಗೆ ಪಕ್ಷವು, ಕಳೆದ ಶನಿವಾರ ಕರ್ನಾಟಕದ 58 ಹಿರಿಯ ನಾಯಕರು, ಹತ್ತು ಸಚಿವರನ್ನು ಕ್ಲಸ್ಟರ್ ಉಸ್ತುವಾರಿಗಳಾಗಿ ಮತ್ತು 35 ಶಾಸಕರು ಮತ್ತು 13 ವಿಧಾನ ಪರಿಷತ್ ಸದಸ್ಯರನ್ನು ಕ್ಷೇತ್ರ ಉಸ್ತುವಾರಿಗಳಾಗಿ ನೇಮಿಸಿತ್ತು.

# 'ಕರ್ನಾಟಕದ ಉಪೇಕ್ಷೆ; ತೆಲಂಗಾಣಕ್ಕೆ ಕಂಪನಿ'

ಪ್ರಜಾವಾಣಿ ವಾರ್ತೆ

**ಹೈದರಾಬಾದ್:** ತೆಲಂಗಾಣದ ಆಡಳಿತಾರೂಢ ಬಿಆರ್‌ಎಸ್ ಪಕ್ಷದ ಕಾರ್ಯಕಾರಿ ಅಧ್ಯಕ್ಷ ಹಾಗೂ ರಾಜ್ಯದ ಕೈಗಾರಿಕಾ ಸಚಿವ ಕೆ.ಟಿ. ರಾಮ ರಾವ್ ಅವರು ನೆರೆಯ ಕರ್ನಾಟಕದ ಕಾಂಗ್ರೆಸ್ ನೇತೃತ್ವದ ಸರ್ಕಾರದ ವಿರುದ್ಧ ಆರೋಪ ಹೊರಿಸಿದ್ದಾರೆ.

ತಾನು ನೀಡುವ ಗ್ಯಾರಂಟಿಗಳಿಗೆ ಕರ್ನಾಟಕದಲ್ಲಿ ಬದ್ಧತೆ ತೋರಿದ ಮಾದರಿಯಲ್ಲಿಯೇ ತೆಲಂಗಾಣದಲ್ಲಿಯೂ ಬದ್ಧತೆ ತೋರಲಾಗುತ್ತದೆ ಎಂದು ಕಾಂಗ್ರೆಸ್ ಪಕ್ಷವು ಚುನಾವಣಾ ಪ್ರಚಾರದಲ್ಲಿ ಹೇಳುತ್ತಿದೆ. ಇದರ ನಡುವೆ ಕೆಟಿಆರ್ ಅವರು ಹೊಸ ಆರೋಪವೊಂದನ್ನು ಮಾಡಿದ್ದಾರೆ.

ಕೈಗಾರಿಕೆಗಳ ಮುಖ್ಯಸ್ಥರ ಜೊತೆ ಹೈದರಾಬಾದ್‌ನಲ್ಲಿ ಬುಧವಾರ ಸಂವಾದ ನಡೆಸಿದ ಕೆಟಿಆರ್, 'ಮೈಸೂರು ಮೂಲದ ಕೇನ್ಸ್ ಟೆಕ್ನಾಲಜಿ ಕಂಪನಿಯು ತೆಲಂಗಾಣದಲ್ಲಿ ಘಟಕ ಸ್ಥಾಪಿಸುತ್ತಿದೆ. ನಮ್ಮ ಸರ್ಕಾರವು 10 ದಿನಗಳಲ್ಲಿ ಕಂಪನಿಗೆ ಜಮೀನು ಮಂಜೂರು ಮಾಡಿದೆ. ಈ ಕಂಪನಿಯು ಆರಂಭದಲ್ಲಿ ಕರ್ನಾಟಕ ಸರ್ಕಾರದ ಕದ ತಟ್ಟಿತ್ತು' ಎಂದು ಹೇಳಿದರು.

'ಜಮೀನು ಕೊಡುವಂತೆ ಕಂಪನಿಯು ಕೇಳಿತ್ತು. ಆದರೆ ಕರ್ನಾಟಕ ಸರ್ಕಾರದಿಂದ ಯಾವುದೇ ಭರವಸೆ ಸಿಗಲಿಲ್ಲ. ನಂತರ, ಕಂಪನಿಯು ನಮ್ಮ ಸರ್ಕಾರದ ಸಾಧನೆಯಿಂದ ಪ್ರಭಾವಿತವಾಗಿ ಹೊಸ ಘಟಕವನ್ನು ತೆಲಂಗಾಣದಲ್ಲಿ ಸ್ಥಾಪಿಸಲು ತೀರ್ಮಾನಿಸಿತು' ಎಂದು ಕೆಟಿಆರ್ ಹೇಳಿದರು.

ಕರ್ನಾಟಕದಲ್ಲಿ ವಿದ್ಯುತ್ ಕೊರತೆ ಇದೆ ಎಂದು ಹೇಳಿದ ಕೆಟಿಆರ್, ರೈತರು ಹಾಗೂ ಇತರ ವಲಯಗಳಿಗೆ ಸೇರಿದ ಜನರಿಗೆ ಇದರಿಂದ ತೊಂದರೆ ಆಗಿದೆ ಎಂದರು. ತೆಲಂಗಾಣದಲ್ಲಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲಾಗಿದ್ದು, ಇಲ್ಲಿ ವಿದ್ಯುತ್ ಅಭಾವ ಇಲ್ಲ ಎಂದರು.

ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ನೇತೃತ್ವದ ಸ್ಥಿರ ಸರ್ಕಾರ ಹಾಗೂ ಸಮರ್ಥ ನಾಯಕತ್ವವು ಕಂಪನಿಗಳು ಕೇರಳ, ಕರ್ನಾಟಕ, ಗುಜರಾತ್ ಮತ್ತು ಮಹಾರಾಷ್ಟ್ರದಿಂದ ತೆಲಂಗಾಣಕ್ಕೆ ವಲಸೆ ಬರಲು ಕಾರಣ ಎಂದು ತಿಳಿಸಿದರು.

'ಕರ್ನಾಟಕದ ಕಳೆದ 10 ವರ್ಷಗಳ ಸಾಧನೆಯನ್ನು ತೆಲಂಗಾಣದ ನಮ್ಮ ಸರ್ಕಾರದ ಯಾವುದೇ ವಲಯದ ಸಾಧನೆಯೊಂದಿಗೆ ಹೋಲಿಸಬಹುದು. ಅಂಕಿ–ಅಂಶಗಳು ಹಲವು ವಿಷಯಗಳನ್ನು ಸ್ಪಷ್ಟಪಡಿಸುತ್ತವೆ' ಎಂದು ಕೆಟಿಆರ್ ಹೇಳಿದರು.

ಕರ್ನಾಟಕದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಬೇರೆಯವರೂ ಸ್ಪರ್ಧೆಯಲ್ಲಿದ್ದಾರೆ ಎಂದು ಹೇಳಿದ ಕೆಟಿಆರ್, ಸ್ಥಿರ ಸರ್ಕಾರ ಇಲ್ಲದಿದ್ದರೆ ರಾಜ್ಯವು ಅಭಿವೃದ್ಧಿ ಹೊಂದಲು, ಸಮೃದ್ಧಿ ಕಾಣಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು. ರಾಜಕೀಯ ಅನಿಶ್ಚಿತತೆಯು ಕೈಗಾರಿಕಾ ವಲಯದ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುತ್ತದೆ ಎಂದರು.

# ಆರ್ಥಿಕ ಪುನಶ್ಚೇತನ ಕೊನೆಗೊಳಿಸಿದ ನೋಟು ರದ್ದತಿ: ಕಾಂಗ್ರೆಸ್ ಟೀಕೆ

**ನವದೆಹಲಿ (ಪಿಟಿಐ):** ಪ್ರಧಾನಿ ನರೇಂದ್ರ ಮೋದಿ ಅವರು 'ಹಿಂದೆ–ಮುಂದೆ ಆಲೋಚಿಸದೆ' ಜಾರಿಗೊಳಿಸಿದ ನೋಟು ರದ್ದತಿ ಕ್ರಮವು ದೇಶದ ಅರ್ಥ ವ್ಯವಸ್ಥೆಯ ಬೆನ್ನುಮೂಳೆಯನ್ನೇ ಮುರಿದುಹಾಕಿತು ಎಂದು ಕಾಂಗ್ರೆಸ್ ಟೀಕಿಸಿದೆ. 'ಮರೆಯಲು ಸಾಧ್ಯವೇ ಇಲ್ಲದ ದುರಂತ' ಇದು ಎಂದು ಹೇಳಿರುವ ಕಾಂಗ್ರೆಸ್, ಪ್ರಧಾನಿ ಅವರನ್ನು ದೇಶದ ಜನ ಕ್ಷಮಿಸುವುದಿಲ್ಲ ಎಂದು ಹೇಳಿದೆ.

ಎಐಸಿಸಿ ಸಂವಹನ ವಿಭಾಗದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, 'ನೋಟು ರದ್ದತಿಯ ತೀರ್ಮಾನ ಹಾಗೂ ಕೆಟ್ಟದ್ದಾಗಿ ರೂಪಿಸಿದ್ದ ಜಿಎಸ್‌ಟಿ ವ್ಯವಸ್ಥೆಯು ದೇಶದಲ್ಲಿ ಉದ್ಯೋಗ ಸೃಷ್ಟಿಸುತ್ತಿದ್ದ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳನ್ನು ಇಲ್ಲವಾಗಿಸಿತು' ಎಂದು ದೂರಿದ್ದಾರೆ. 2013ರಲ್ಲಿ ಶುರುವಾಗಿದ್ದ ಆರ್ಥಿಕ ಪುನಶ್ಚೇತನವನ್ನು ಕೊನೆಗೊಳಿಸಿತು, 45 ವರ್ಷಗಳ ಗರಿಷ್ಠ ಪ್ರಮಾಣದ ನಿರುದ್ಯೋಗಕ್ಕೆ ಕಾರಣವಾಯಿತು ಎಂದು ಕೂಡ ರಮೇಶ್ ದೂರಿದ್ದಾರೆ.

ಪ್ರಧಾನಿ ಮೋದಿ ಅವರು ನೋಟು ರದ್ದತಿಯ ನಿರ್ಧಾರವನ್ನು 2016ರ ನವೆಂಬರ್ 8ರಂದು ಪ್ರಕಟಿಸಿದ್ದರು. ನೋಟು ರದ್ದತಿಯ ತೀರ್ಮಾನವು 'ಸೊಕ್ಕು, ಅಮಾನವೀಯತೆ ಮತ್ತು ಆರ್ಥಿಕ ಅಸಾಕ್ಷರತೆಯ ಮೂರ್ತರೂಪ' ಎಂದು ರಮೇಶ್ ಅವರು ಟೀಕಿಸಿದ್ದಾರೆ. ಇಂತಹ ನಡೆಯನ್ನು 2020ರ ಮಾರ್ಚ್‌ನಲ್ಲಿ ಯೋಜನೆಯಿಲ್ಲದೆ, ಇದ್ದಕ್ಕಿದ್ದಂತೆ ಲಾಕ್‌ಡೌನ್ ಘೋಷಿಸುವ ಮೂಲಕ ಮತ್ತೊಮ್ಮೆ ಪ್ರದರ್ಶಿಸಲಾಯಿತು. ಲಾಕ್‌ಡೌನ್ ತೀರ್ಮಾನದಿಂದಾಗಿ ವಲಸೆ ಕಾರ್ಮಿಕರು ಸಾವಿರಾರು ಕಿ.ಮೀ. ದಾರಿಯನ್ನು ನಡೆದೇ ಸಾಗಬೇಕಾದ ಸ್ಥಿತಿ ಉಂಟಾಯಿತು ಎಂದು ಅವರು ಹೇಳಿದ್ದಾರೆ.

ನೋಟು ರದ್ದತಿ, ಜಿಎಸ್‌ಟಿಯ ದೋಷಪೂರಿತ ಅನುಷ್ಠಾನದ ಪರಿಣಾಮವಾಗಿ ಸಂಪತ್ತು ಹಾಗೂ ಅಧಿಕಾರವು ಕೆಲವರ ಸ್ವತ್ತಾಗುವಂತಾಯಿತು ಎಂದು ರಮೇಶ್ ಆರೋಪಿಸಿದ್ದಾರೆ.

ನೋಟು ರದ್ದತಿಯ ತೀರ್ಮಾನವು ದೇಶದ ಅರ್ಥ ವ್ಯವಸ್ಥೆ ಹಾಗೂ ಜನರ ಜೀವನೋಪಾಯದ ಮೇಲೆ ನಡೆದ ಅತಿದೊಡ್ಡ ದಾಳಿ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದ್ದಾರೆ. 'ಮೋದಿ ಅವರು 50 ದಿನಗಳ ಕಾಲಾವಕಾಶ ಕೇಳಿದ್ದರು. ಆದರೆ ಏಳು ವರ್ಷಗಳ ನಂತರವೂ ದೇಶದ ಜನ ಉತ್ತರ ಹುಡುಕುತ್ತಿದ್ದಾರೆ' ಎಂದು ಖರ್ಗೆ ಹೇಳಿದ್ದಾರೆ.


ಮಧ್ಯಪ್ರದೇಶದ ಜಬಲ್‌ಪುರದ ದುಮ್ನಾ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರೊಂದಿಗೆ ಬಿಜೆಪಿ ಕಾರ್ಯಕರ್ತರು ಸೆಲ್ಫಿ ತೆಗೆದುಕೊಂಡರು –ಪಿಟಿಐ ಚಿತ್ರ

# ನ್ಯಾಯ ಒದಗಿಸದ ಮೋದಿ: ಓವೈಸಿ

**ಹೈದರಾಬಾದ್ (ಪಿಟಿಐ):** ಪ್ರಧಾನಿ ನರೇಂದ್ರ ಮೋದಿ ಜಾತಿ ಆಧಾರದ ಮೇಲೆ ಮತ ಕೇಳಲು ಮನವಿ ಮಾಡುತ್ತಿದ್ದಾರೆ. ಆದರೆ, ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ನ್ಯಾಯ ಒದಗಿಸಲು ಬಯಸುವುದಿಲ್ಲ ಎಂದು ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಓವೈಸಿ ಬುಧವಾರ ಹೇಳಿದ್ದಾರೆ.

ಹಿಂದುಳಿದ ಮುಸ್ಲಿಮರಿಗೆ ಮೀಸಲಾತಿ ತೆಗೆದುಹಾಕುವುದಾಗಿ ಪ್ರಧಾನಿ ಮೋದಿ ಭರವಸೆ ನೀಡಿದ್ದಾರೆ. ಶೇಕಡ 27 ರಷ್ಟು ಒಬಿಸಿ ಕೋಟಾವನ್ನು ಅವರು ವಿರೋಧಿಸುತ್ತಾರೆ ಮತ್ತು ಮೀಸಲಾತಿಯ ಮೇಲಿನ ಶೇಕಡ 50 ರಷ್ಟು ಮಿತಿಯನ್ನು ತೆಗೆದುಹಾಕುವುದಿಲ್ಲ ಎಂದು ಹೇಳಿದ್ದಾರೆ ಎಂದರು.

# ಮಿಜೋರಾಂ: ಶೇ 80.43 ಮತದಾನ

ಪ್ರಜಾವಾಣಿ ವಾರ್ತೆ

**ಗುವಾಹಟಿ:** ಮಿಜೋರಾಂನ ವಿಧಾನಸಭೆಯ 40 ಸ್ಥಾನಗಳಿಗೆ ಮಂಗಳವಾರ ಶೇಕಡ 80.43 ರಷ್ಟು ಮತದಾನವಾಗಿದೆ.

ಸೆರ್ಚಿಪ್ ಜಿಲ್ಲೆಯಲ್ಲಿ ಅತಿ ಹೆಚ್ಚು ಶೇಕಡ 84.75ರಷ್ಟು ಮತದಾನವಾಗಿದ್ದರೆ, ಸಿಯಾಹಾದಲ್ಲಿ ಶೇಕಡ 75.79ರಷ್ಟು ಕಡಿಮೆ ಮತದಾನವಾಗಿದೆ ಎಂದು ಮಿಜೋರಾಂ ಮುಖ್ಯ ಚುನಾವಣಾಧಿಕಾರಿ ಕಚೇರಿ ತಿಳಿಸಿದೆ.

ಶೇಕಡ 79.61ರಷ್ಟು ಪುರುಷರು ಮತ ಚಲಾಯಿಸಿದ್ದರೆ, ಶೇಕಡ 81.21 ರಷ್ಟು ಮಹಿಳೆಯರು ಮತ ಚಲಾಯಿಸಿದ್ದಾರೆ. 2018ರ ಚುನಾವಣೆಯಲ್ಲಿ ಶೇಕಡ 81.61ರಷ್ಟು ಮತದಾನವಾಗಿತ್ತು. ಡಿ.3ರಂದು ಮತ ಎಣಿಕೆ ನಡೆಯಲಿದೆ.

8.57 ಲಕ್ಷ ಮತದಾರರನ್ನು ಹೊಂದಿರುವ ರಾಜ್ಯದಲ್ಲಿ ಎಂಎನ್‌ಎಫ್, ಝಡ್‌ಪಿಎಂ ಮತ್ತು ಕಾಂಗ್ರೆಸ್ ನಡುವೆ ಪೈಪೋಟಿ ಇದೆ.

**ಮರು ಮತದಾನ:** ಮಿಜೋರಾಂನ ಐಜ್ವಾಲ್ ದಕ್ಷಿಣ–3 ಕ್ಷೇತ್ರದ ಒಂದು ಮತಗಟ್ಟೆಯಲ್ಲಿ ಶುಕ್ರವಾರ ಬೆಳಿಗ್ಗೆ 7ರಿಂದ ಸಂಜೆ 4ರವರೆಗೆ ಮರು ಮತದಾನ ನಡೆಯಲಿದೆ ಎಂದು ಚುನಾವಣಾ ಆಯೋಗ ಹೇಳಿದೆ.

ವಿಧಾನಸಭೆ ಚುನಾವಣೆಗೆ ಮುನ್ನ ನಡೆಸುವ ಅಣಕು ಮತದಾನ ಪ್ರಕ್ರಿಯೆಯನ್ನು ಸಿಬ್ಬಂದಿಯೊಬ್ಬರು ಸಮರ್ಪಕವಾಗಿ ಪೂರ್ಣಗೊಳಿಸದ ಕಾರಣ ಮುಲ್ಲುಂಗ್ತು ಮತಗಟ್ಟೆಯಲ್ಲಿ ಮರುಮತದಾನ ಅನಿವಾರ್ಯವಾಗಿದೆ ಎಂದು ಆಯೋಗ ಹೇಳಿದೆ.

# ಬಿಜೆಪಿಗೆ ವಿಕೃತ ಆನಂದ: ಟಿಎಂಸಿ

**ಕೋಲ್ಕತ್ತ:** ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರಿಗೆ ಮತ್ತೊಮ್ಮೆ ಸಮನ್ಸ್ ನೀಡಿರುವ ಜಾರಿ ನಿರ್ದೇಶನಾಲಯ (ಇ.ಡಿ), ನವೆಂಬರ್ 9ರಂದು ತನ್ನೆದುರು ಹಾಜರಾಗುವಂತೆ ಅವರಿಗೆ ಹೇಳಿದೆ. ಇ.ಡಿಯ ಈ ನಡೆಯನ್ನು ಪಕ್ಷವು 'ವಿಕೃತ ಆನಂದ' ಎಂದು ಕರೆದಿದೆ.

ಟಿಎಂಸಿಯನ್ನು ಬಿಜೆಪಿ ಗುರಿಯಾಗಿಸಿಕೊಂಡಿದೆ ಎಂದು ರಾಜ್ಯ ಸಚಿವ ಶಶಿ ಪಂಜಾ ಹೇಳಿದ್ದಾರೆ.

# ಮಹುವಾ ವಿರುದ್ಧ ಸಿಬಿಐ ತನಿಖೆಗೆ ಲೋಕಪಾಲ್ ಆದೇಶ: ದುಬೆ

**ನವದಹೆಲಿ (ಪಿಟಿಐ):** ಭ್ರಷ್ಟಾಚಾರದ ದೂರಿನ ಮೇರೆಗೆ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ವಿರುದ್ಧ ಸಿಬಿಐ ತನಿಖೆಗೆ ಲೋಕಪಾಲ್ ಆದೇಶಿಸಿದೆ ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಬುಧವಾರ ಹೇಳಿದ್ದಾರೆ.


ಮಹುವಾ

ಈ ಬೆಳವಣಿಗೆ ಬೆನ್ನಲ್ಲೇ ಮೊಯಿತ್ರಾ, ಅದಾನಿ ಸಮೂಹದ ಕಲ್ಲಿದ್ದಲು ಹಗರಣ ಆರೋಪದ ಬಗ್ಗೆ ತನಿಖೆ ನಡೆಸಲು ಸಿಬಿಐ ಮೊದಲು ಎಫ್‌ಐಆರ್ ದಾಖಲಿಸಬೇಕು ಎಂದು ಹೇಳಿದ್ದಾರೆ.

'ನನ್ನ ದೂರಿನ ಮೇರೆಗೆ ಲೋಕಪಾಲ್ ಇಂದು ಮಹುವಾ ಮೊಯಿತ್ರಾ ವಿರುದ್ಧ ಸಿಬಿಐ ತನಿಖೆಗೆ ಆದೇಶಿಸಿದೆ' ಎಂದು ದುಬೆ ಎಕ್ಸ್‌ನಲ್ಲಿ ತಿಳಿಸಿದ್ದಾರೆ. ಆದರೆ, ಈ ಬಗ್ಗೆ ಲೋಕಪಾಲರಿಂದ ಯಾವುದೇ ಅಧಿಕೃತ ಹೇಳಿಕೆ ಬಂದಿಲ್ಲ.

ಉದ್ಯಮಿ ದರ್ಶನ್ ಹೀರಾನಂದಾನಿ ಅವರ ಆಜ್ಞೆಯ ಮೇರೆಗೆ ಲಂಚಕ್ಕೆ ಪ್ರತಿಯಾಗಿ ಮೊಯಿತ್ರಾ ಅವರು ಲೋಕಸಭೆಯಲ್ಲಿ ಅದಾನಿ ಗ್ರೂಪ್ ಮತ್ತು ನರೇಂದ್ರ ಮೋದಿ ಅವರನ್ನು ಗುರಿಯಾಗಿಸಿಕೊಂಡು ಪ್ರಶ್ನೆಗಳನ್ನು ಕೇಳಿದ್ದಾರೆ ಎಂದು ದುಬೆ ಆರೋಪಿಸಿದ ಕೆಲ ದಿನಗಳ ನಂತರ ಈ ಬೆಳವಣಿಗೆ ನಡೆದಿದೆ. ಈ ವಿಷಯವನ್ನು ಸಂಸತ್‌ನ ನೀತಿ–ನಿಯಮಗಳ ಸಮಿತಿ ಪರಿಶೀಲಿಸುತ್ತಿದೆ.

**ಇ.ಡಿ ದುರ್ಬಳಕೆ ತಡೆ: ಕ್ರಮಕ್ಕೆ ಒತ್ತಾಯ**

# ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ದೂರು

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕೇಂದ್ರೀಯ ತನಿಖಾ ಸಂಸ್ಥೆಗಳು ತಮ್ಮ ತನಿಖೆಯನ್ನು ನಿಷ್ಪಕ್ಷಪಾತವಾಗಿ ಮಾಡುವಂತೆ ನೋಡಿಕೊಳ್ಳಬೇಕು ಮತ್ತು ಬೆಟ್ಟಿಂಗ್ ಆ್ಯಪ್ ಪ್ರವರ್ತಕರಿಂದ ಛತ್ತೀಸಗಢ ಮುಖ್ಯಮಂತ್ರಿ ಭೂಪೇಶ್ ಬಘೆಲ್ ಅವರು ₹ 508 ಕೋಟಿ ಹಣ ಪಡೆದಿದ್ದಾರೆಂಬ ಜಾರಿ ನಿರ್ದೇಶನಾಲಯದ (ಇ.ಡಿ) ಪತ್ರಿಕಾ ಹೇಳಿಕೆಯನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿ ಕಾಂಗ್ರೆಸ್ ಬುಧವಾರ ಚುನಾವಣಾ ಆಯೋಗದ ಮೊರೆ ಹೋಗಿದೆ.

ಆಡಳಿತಾರೂಢ ಬಿಜೆಪಿಯು ಪ್ರತಿಪಕ್ಷಗಳ ನಾಯಕರ ವಿರುದ್ಧ ಇ.ಡಿಯನ್ನು 'ರಾಜಕೀಯ ಸಾಧನ'ವಾಗಿ ಬಳಸುವುದನ್ನು ಪ್ರವೃತ್ತಿಯಾಗಿಸಿಕೊಂಡಿದೆ ಎಂದು ಆರೋಪಿಸಿರುವ ಕಾಂಗ್ರೆಸ್ ಈ ಬಗ್ಗೆ ಆತಂಕ ವ್ಯಕ್ತಪಡಿಸಿದೆ. ರಾಜಸ್ಥಾನ ಕಾಂಗ್ರೆಸ್ ಅಧ್ಯಕ್ಷ ಗೋವಿಂದ ಡೊಟಾಸರ ಅವರ ನಿವಾಸದ ಮೇಲೆ ದಾಳಿ ನಡೆಸಿದ್ದನ್ನು ಮತ್ತು ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರ ಮಗ ವೈಭವ್ ಅವರಿಗೆ ಸಮನ್ಸ್ ನೀಡಿದ್ದರ ನಿದರ್ಶನವನ್ನು ನೀಡಿದೆ.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯ ಅಭಿಷೇಕ್ ಸಿಂಘ್ವಿ ನೇತೃತ್ವದ ನಿಯೋಗವು ಮುಖ್ಯ ಚುನಾವಣಾ ಆಯುಕ್ತರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು. ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವ ಮತ್ತು ಆಯೋಗದ ಮಾರ್ಗದರ್ಶಿ ಸೂತ್ರಗಳನ್ನು ಉಲ್ಲಂಘಿಸುತ್ತಿರುವ ಇ.ಡಿ. ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಕೂಡ ಒತ್ತಾಯಿಸಿತು.

'ಕೇಂದ್ರೀಯ ತನಿಖಾ ಸಂಸ್ಥೆಗಳ ಕ್ರಮವು ಪ್ರಮುಖ ಪ್ರತಿಪಕ್ಷಗಳಿಗೆ ಕಿರುಕುಳ ನೀಡುವಂಥದ್ದಾಗಿದೆ. ಇದು ಕೇಂದ್ರ ಸರ್ಕಾರದ ಅಧಿಕಾರ ದುರ್ಬಳಕೆಯ ಗಂಭೀರ ಪ್ರಶ್ನೆಯನ್ನು ಎತ್ತುತ್ತದೆ ಅಲ್ಲದೆ ಚುನಾವಣಾ ಪ್ರಕ್ರಿಯೆ ಮೇಲೂ ಕರಿನೆರಳು ಬೀರುತ್ತದೆ' ಎಂದು ನಿಯೋಗ ಹೇಳಿದೆ.

ಜಾರಿ ನಿರ್ದೇಶನಾಲಯದ ವಶದಲ್ಲಿದ್ದ ವ್ಯಕ್ತಿಯ ಹೇಳಿಕೆ ಆಧರಿಸಿ ಮತ್ತು ಕೋರ್ಟ್ ಪರಿಶೀಲನೆ ಇಲ್ಲದೆ ಬಘೆಲ್ ಅವರ ವಿರುದ್ಧ ಆರೋಪ ಮಾಡಿರುವುದು ಇ.ಡಿಯ ಉದ್ದೇಶವನ್ನು ಪ್ರಶ್ನಿಸುವಂತೆ ಮಾಡುತ್ತದೆ ಜೊತೆಗೆ ಬಿಜೆಪಿಗೆ ರಾಜಕೀಯ ಲಾಭ ತಂದುಕೊಡುವ ಸಲುವಾಗಿ ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ಉದ್ದೇಶಪೂರ್ವಕವಾಗಿ ಮುಖ್ಯಮಂತ್ರಿಯವರ ಹೆಸರನ್ನು ಸೇರಿಸಲಾಗಿದೆ ಎಂಬುದನ್ನು ಸೂಚಿಸುತ್ತದೆ ಎಂದು ಮನವಿ ಪತ್ರದಲ್ಲಿ ಹೇಳಲಾಗಿದೆ.

ಬಘೆಲ್ ಅವರ ವರ್ಚಸ್ಸಿಗೆ ಧಕ್ಕೆಯುಂಟು ಮಾಡಲು ಬಿಜೆಪಿಯು ಇ.ಡಿಯನ್ನು ಉದ್ದೇಶಪೂರ್ವಕವಾಗಿ ದುರ್ಬಳಕೆ ಮಾಡಿಕೊಂಡಿದೆ. ಹಾಗಾಗಿಯೇ ಇ.ಡಿ. ಆಧಾರರಹಿತ ಪತ್ರಿಕಾ ಹೇಳಿಕೆ ನೀಡಿದೆ' ಎಂದೂ ದೂರಲಾಗಿದೆ.

ರಾಜಸ್ಥಾನದಲ್ಲಿ ಯಾವುದೇ ಸೂಕ್ತ ಪುರಾವೆಗಳು ಇಲ್ಲದಿದ್ದಾಗ್ಯೂ ದಾಳಿ ನಡೆಸಲಾಗಿದೆ. ಕಾಂಗ್ರೆಸ್ ನಾಯಕರ ರಾಜಕೀಯ ವರ್ಚಸ್ಸಿಗೆ ಧಕ್ಕೆ ತರುವ ಯಾವ ಅವಕಾಶವನ್ನೂ ಬಿಜೆಪಿ ಬಿಟ್ಟಿಲ್ಲ ಎಂದು ಮನವಿ ಪತ್ರದಲ್ಲಿ ತಿಳಿಸಲಾಗಿದೆ.

ಈ ಹಿಂದೆ ಕರ್ನಾಟಕ ಮತ್ತು ಪಂಜಾಬ್ ವಿಧಾನಸಭೆ ಚುನಾವಣೆಗಳ ಸಂದರ್ಭದಲ್ಲಿ ಈ ತನಿಖಾ ಸಂಸ್ಥೆಗಳು ಕೈಗೊಂಡ ಕ್ರಮಗಳ ಬಗ್ಗೆಯೂ ಮನವಿ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

## ಗಿನ್ನೆಸ್ ದಾಖಲೆ ನಿರ್ಮಿಸಿದ ವಕೀಲ

**ತಿರುವನಂತಪುರ (ಪಿಟಿಐ):** ಕೇರಳದ ಉತ್ತರ ಪಾಲಕ್ಕಾಡ್ ಜಿಲ್ಲೆಯ ಖ್ಯಾತ ವಕೀಲ ಪಿ. ಬಾಲಸುಬ್ರಮಣಿಯನ್ ಮೆನನ್ ಕಾನೂನು ಕ್ಷೇತ್ರದಲ್ಲಿ ಮಹತ್ವದ ಮೈಲುಗಲ್ಲೊಂದನ್ನು ಸಾಧಿಸಿದ್ದಾರೆ.

ವಕೀಲರಾಗಿ 73 ವರ್ಷ 60 ದಿನ ಸುದೀರ್ಘ ಸೇವೆ ಸಲ್ಲಿಸಿರುವ 97ರ ಹರೆಯದ ಮೆನನ್, ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ಸ್ಥಾನ ಪಡೆದಿದ್ದಾರೆ.

ಮೆನನ್ ಇಳಿ ವಯಸ್ಸಿನಲ್ಲಿಯೂ ಸಕ್ರಿಯರಾಗಿದ್ದಾರೆ. ಕಿರಿಯ ವಕೀಲರಂತೆ ಉತ್ಸಾಹಿಯಾಗಿ ಕೆಲಸ ಮಾಡುತ್ತಾರೆ.


ನಿತ್ಯವೂ ತಮ್ಮ ಕಕ್ಷಿದಾರರನ್ನು ಭೇಟಿಯಾಗುತ್ತಾರೆ. ತಮ್ಮ ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯ ಹಾಗೂ ಕಚೇರಿಗಳಿಗೂ ತಪ್ಪದೇ ಹೋಗುತ್ತಾರೆ.

ಮದ್ರಾಸ್ ಕಾನೂನು ಕಾಲೇಜಿನಲ್ಲಿ ವ್ಯಾಸಂಗ ಪೂರ್ಣಗೊಳಿಸಿದ ನಂತರ 1950ರಿಂದಲೂ ಮೆನನ್ ವಕೀಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ನಿವೃತ್ತಿಯ ಬಗ್ಗೆ ಕೇಳಿದರೆ ಕಿರುನಗೆ ಬೀರುತ್ತಾರೆ.

'ಕಕ್ಷಿದಾರರು ನನ್ನನ್ನು ನಂಬಿ ತಮ್ಮ ಪ್ರಕರಣ ಒಪ್ಪಿಸುತ್ತಾರೆ. ಅವರಿಗೆ ಏನು ಮಾಡಬಹುದು ಅದನ್ನು ಮಾಡುತ್ತೇನೆ. ನ್ಯಾಯಾಲಯದಲ್ಲಿ ಸುದೀರ್ಘ ವಾದ ಮಾಡುವುದನ್ನು ನಾನು ನಂಬುವುದಿಲ್ಲ. ಅಲ್ಪ ಸಮಯದಲ್ಲೇ ನನ್ನ ವಾದ ಮತ್ತು ಪಾಟಿ ಸವಾಲು ಮುಗಿಸುತ್ತೇನೆ' ಎಂದು ಮೆನನ್ ಟಿವಿ ವಾಹಿನಿಯೊಂದಕ್ಕೆ ತಿಳಿಸಿದ್ದಾರೆ.

'ಆರೋಗ್ಯ ಸಹಕರಿಸುವ ತನಕವೂ, ಕಕ್ಷಿದಾರರು ನನ್ನನ್ನು ಬಯಸುವ ತನಕವೂ ವಕೀಲನಾಗಿ ಕೆಲಸ ಮಾಡುವೆ. ನನ್ನ ಈ ದಾಖಲೆ ಇತರರಿಗೆ ಸ್ಫೂರ್ತಿ ನೀಡಲಿದೆ' ಎಂದು ಅವರು ಹೇಳಿದ್ದಾರೆ.

**ಷೇರುಪೇಟೆ ವಹಿವಾಟು**




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 19,406 |
| ಇಂದಿನ ಅಂತ್ಯ | 19,443 |
| ▲ | 37 |
| ದಿನದ ಗರಿಷ್ಠ | 19,464 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹585 |
| 12 ಮೊಟ್ಟೆಗೆ | ₹75 |
| ಮೈಸೂರು | |
| 100 ಮೊಟ್ಟೆಗೆ | ₹588 |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1530 (1540) |
| ಸೋಯಾ (ರಿಫೈನ್ಡ್) | ₹915 (915) |
| ಸೂರ್ಯಕಾಂತಿ (ರಿಫೈನ್ಡ್) | ₹915 (910) |
| ಪಾಮೋಲಿನ್ | ₹825 (820) |

**ವಿನಿಮಯ ದರ**

| | |
|---|---|
| $ ಡಾಲರ್ | 83.27 |
| £ ಪೌಂಡ್ | 102.23 |
| € ಯುರೊ | 88.98 |
| ¥ ಯೆನ್ (100ಕ್ಕೆ) | 55 |

**ಕೊಬ್ಬರಿ ಧಾರಣೆ** (ಕ್ವಿಂಟಲ್‌ಗೆ)

| | |
|---|---|
| ತಿಪಟೂರು | ₹7500-8127 |
| ಅರಸೀಕೆರೆ | ₹3900-4750 |
| ತುರುವೇಕೆರೆ | ₹8000-8200 |

ರಫ್ತು ಅನುಮತಿ ನೀಡದ ಮೊಜಾಂಬಿಕ್‌ನ ಕಸ್ಟಮ್ಸ್ ಅಧಿಕಾರಿಗಳು ● ಭಾರತದಲ್ಲಿ ಸಗಟು ದರ ಏರಿಕೆ

# ಬಂದರಿನಲ್ಲೇ ಉಳಿದ 1.5 ಲಕ್ಷ ಟನ್ ತೊಗರಿಬೇಳೆ

ಮುಂಬೈ (ರಾಯಿಟರ್ಸ್‌): ಭಾರತಕ್ಕೆ ಬರಬೇಕಿರುವ 1.50 ಲಕ್ಷ ಟನ್‌ನಷ್ಟು ತೊಗರಿಬೇಳೆಯನ್ನು ಮೊಜಾಂಬಿಕ್‌ನ ಬಂದರಿನಲ್ಲಿ ಕಳೆದ ಕೆಲವು ವಾರಗಳಿಂದ ತಡೆಹಿಡಿಯಲಾಗಿದೆ. ರಫ್ತು ಅನುಮತಿ ನೀಡುವಂತೆ ಮನವಿ ಮಾಡಿದರೂ ಕಸ್ಟಮ್ಸ್ ಅಧಿಕಾರಿಗಳು ಕಿವಿಗೊಡುತ್ತಿಲ್ಲ ಎಂದು ಭಾರತದ ವಹಿವಾಟುದಾರರು ಬುಧವಾರ ಹೇಳಿದ್ದಾರೆ.

ಕಾನೂನು ರೀತ್ಯ ಅಗತ್ಯವಾದ ಎಲ್ಲ ರಫ್ತು ದಾಖಲೆಗಳನ್ನು ಹೊಂದಿದ್ದರೂ 200 ಕಂಟೈನರ್‌ಗಳು ಬಂದರಿನಲ್ಲಿಯೇ ಉಳಿಯುವಂತಾಗಿದೆ. ಮೊಜಾಂಬಿಕ್‌ನ ಕಸ್ಟಮ್ಸ್ ಅಧಿಕಾರಿಗಳು ಅನುಮತಿ ನೀಡುತ್ತಿಲ್ಲ. ಏಕೆ ಅನುಮತಿ ನೀಡುತ್ತಿಲ್ಲ ಎನ್ನುವುದಕ್ಕೆ ಯಾವುದೇ ಕಾರಣವನ್ನೂ ನೀಡುತ್ತಿಲ್ಲ ಎಂದು ಸರಕುಗಳ ಆಮದು, ರಫ್ತು ವಹಿವಾಟು ನಡೆಸುವ ಮೊಜ್‌ಗ್ರೇನ್ ಎಲ್‌ಡಿಎ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಸುಹಾಸ್ ಚೌಗಲೆ ಹೇಳಿದ್ದಾರೆ.

ಮೊಜಾಂಬಿಕ್‌ನ ಬಂದರಿನಲ್ಲಿ ಇರುವ ಗೋದಾಮುಗಳಲ್ಲಿ ದಾಸ್ತಾನನ್ನು ಇಡಲಾಗಿದೆ. ಇದರಿಂದಾಗಿ ಮಾರಾಟಗಾರರು ಗರಿಷ್ಠ ಪ್ರಮಾಣದ ದಾಸ್ತಾನು ವೆಚ್ಚ ಭರಿಸುವಂತಾಗಿದೆ ಎಂದಿದ್ದಾರೆ.






**ಭಾರತದಲ್ಲಿ ಇಳುವರಿ ಕಡಿಮೆ ಆಗಿದೆ. ಹೀಗಾಗಿ ಇಲ್ಲಿ ತೊಗರಿ ಬೇಳೆಯ ಅಗತ್ಯ ಎಷ್ಟಿದೆ ಎನ್ನುವುದು ಮೊಜಾಂಬಿಕ್ ದೇಶಕ್ಕೆ ಅರಿವಿದ್ದು, ಪರಿಸ್ಥಿತಿಯ ಲಾಭ ಪಡೆದುಕೊಳ್ಳುತ್ತಿದೆ**

**ಸತೀಶ್ ಉಪಾಧ್ಯಾಯ,** ಮುಂಬೈ ಮೂಲದ ಬೇಳೆಕಾಳು ಆಮದುದಾರ

ಭಾರತವು ಆಮದು ಮಾಡಿಕೊಳ್ಳುತ್ತಿರುವ ತೊಗರಿಬೇಳೆಯಲ್ಲಿ ಶೇ 50ರಷ್ಟು ಮೊಜಾಂಬಿಕ್‌ನಿಂದಲೇ ಬರುತ್ತಿದೆ. ಆಮದು ವಿಳಂಬ ಆಗಿರುವುದರಿಂದ ದೇಶದಲ್ಲಿ ತೊಗರಿ ದರ ಏರಿಕೆ ಕಾಣುವಂತಾಗಿದೆ ಎಂದು ವಹಿವಾಟುದಾರರು ಹೇಳಿದ್ದಾರೆ.

**ತೊಗರಿಬೇಳೆ ಆಮದು**




ಕಳೆದ ತಿಂಗಳು ಭಾರತದಲ್ಲಿನ ಮೊಜಾಂಬಿಕ್ ಹೈಕಮಿಷನರ್ ಎರ್ಮಿಂಡೊ ಎ. ಪೆರೈರಾ ಜೊತೆಗಿನ ಭೇಟಿಯ ವೇಳೆ ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ ಅವರು ಆಮದು ವಿಳಂಬ ಆಗುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿದ್ದರು. ಭಾರತಕ್ಕೆ ತೊಗರಿಬೇಳೆ ರಫ್ತು ಸುಗಮವಾಗಿ ಆಗುವಂತೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಪೆರೈರಾ ಅವರು ಭರವಸೆ ನೀಡಿದ್ದಾರೆ ಎಂದು ಅಕ್ಟೋಬರ್ 27ರಂದು ಭಾರತ ಸರ್ಕಾರ ಹೊರಡಿಸಿರುವ ಪ್ರಕಟಣೆಯಲ್ಲಿ ಇದೆ.

ಮೊಜಾಂಬಿಕ್ ಭರವಸೆ ನೀಡಿದ ಬಳಿಕವೂ ಪರಿಸ್ಥಿತಿ ಸುಧಾರಿಸಿಲ್ಲ ಎಂದು ಭಾರತೀಯ ಬೇಳೆಕಾಳು ಮತ್ತು ಧಾನ್ಯಗಳ ಒಕ್ಕೂಟದ ಅಧ್ಯಕ್ಷ ಬಿಮಲ್ ಕೊಠಾರಿ ತಿಳಿಸಿದ್ದಾರೆ. ರಫ್ತು ತಡೆ ಹಿಡಿಯುವ ಮೂಲಕ ಭಾರತದ ಪೂರೈಕೆ ಕೊರತೆಯನ್ನು ಮೊಜಾಂಬಿಕ್ ದೇಶವು ತನ್ನ ಲಾಭಕ್ಕೆ ಬಳಸಿಕೊಳ್ಳುವಂತೆ ಕಾಣುತ್ತಿದೆ ಎಂದು ಅವರು ಹೇಳಿದ್ದಾರೆ.

### ಪೂರೈಕೆ ಕೊರತೆ: ದರ ಏರಿಕೆ

ದೇಶದಲ್ಲಿ ಬೇಡಿಕೆಯಷ್ಟು ಲಭ್ಯತೆ ಇಲ್ಲದೇ ಇರುವುದರಿಂದ ಎರಡು ತಿಂಗಳಿನಲ್ಲಿ ಸಗಟು ದರವು ಶೇ 10ರಷ್ಟು ಹೆಚ್ಚಾಗಿದೆ. ಪೂರೈಕೆ ಕೊರತೆಯು ಬೆಲೆಯಲ್ಲಿ ಇನ್ನಷ್ಟು ಏರಿಕೆಗೆ ಕಾರಣವಾಗಬಹುದು ಎಂದು ವಹಿವಾಟುದಾರರು ಹೇಳಿದ್ದಾರೆ. ಮೊಜಾಂಬಿಕ್‌ನಿಂದ ತೊಗರಿ ಬೇಳೆ ಪೂರೈಕೆ ಆಗುವುದು ವಿಳಂಬ ಆಗಿರುವುದರಿಂದ ಈಚಿನ ಕೆಲವು ವಾರಗಳಲ್ಲಿ ಪ್ರತಿ ಟನ್‌ಗೆ ₹ 8,300ರಷ್ಟು ದರ ಏರಿಕೆ ಕಂಡಿದೆ ಎಂದು ಮುಂಬೈನ ಆಮದುದಾರ ಸತೀಶ್ ಉಪಾಧ್ಯಾಯ ತಿಳಿಸಿದ್ದಾರೆ.

### ತೊಗರಿಬೇಳೆ ಕೆ.ಜಿಗೆ ₹190

ಪ್ರಜಾವಾಣಿ ವಾರ್ತೆ

**ಕಲಬುರಗಿ:** ತೊಗರಿ ಕಣಜ ಕಲಬುರಗಿಯಲ್ಲಿ ಬರದಿಂದಾಗಿ ತೊಗರಿಬೆಳೆ ನಾಶವಾಗಿದ್ದು ಆವಕ ಗಣನೀಯವಾಗಿ ಕಡಿಮೆಯಾಗಿದೆ. ಹೀಗಾಗಿ ದರವೂ ಏರಿಕೆ ಆಗುತ್ತಿದೆ. ತಿಂಗಳ ಹಿಂದೆ ಕೆ.ಜಿಗೆ ₹ 180ರಂತೆ ಮಾರಾಟವಾಗುತ್ತಿದ್ದ ತೊಗರಿಬೇಳೆ ಸದ್ಯ ಕೆ.ಜಿಗೆ ₹185 ರಿಂದ ₹190ರವರೆಗೆ ಏರಿಕೆಯಾಗಿದೆ.

‘ಗುಣಮಟ್ಟದ ಒಂದು ಕೆ.ಜಿ. ತೊಗರಿಬೇಳೆ ₹185ರಿಂದ ₹190ರವರೆಗೆ ಮಾರಾಟ ಆಗುತ್ತಿದೆ. ಸಾಧಾರಣ ಗುಣಮಟ್ಟದ ಕೆ.ಜಿ ತೊಗರಿ ಬೇಳೆ ಬೆಲೆ ಈ ಹಿಂದೆ ಇದು ₹160 ಇತ್ತು, ಸದ್ಯ ₹170ರಂತೆ ಮಾರಾಟ ಆಗುತ್ತಿದೆ’ ಎಂದು ಕಲಬುರಗಿ ಕಿರಾಣಿ ಅಂಗಡಿಯೊಂದರ ಮಾಲೀಕ ಶ್ರವಣ್ ತಿಳಿಸಿದರು.

**ಬಿಳಿ ಜೋಳದ ಬೆಲೆ ದುಪ್ಪಟ್ಟು:** ಬಿಳಿ ಜೋಳದ ದರವು ದುಪ್ಪಟ್ಟಾಗಿದೆ. ಗುಣಮಟ್ಟದ ಒಂದು ಕೆ.ಜಿ. ದರ ₹35 ಇದ್ದದ್ದು ಈಗ ₹ 75ಕ್ಕೆ ತಲುಪಿದೆ. ಒಂದು ಕ್ವಿಟಂಲ್ ದರ ₹5,000ಯಿಂದ ₹7,000 ಆಗಿದೆ. ಸಾಧಾರಣ ಜೋಳದ ದರ ₹20ರಿಂದ ₹30 ಇತ್ತು. ಈಗ ₹ 60ಕ್ಕೆ ತಲುಪಿದೆ. ಒಂದು ಕ್ವಿಂಟಲ್ ದರ ₹ 3,500ರಿಂದ ₹6,000ಕ್ಕೆ ಏರಿಕೆಯಾಗಿದೆ’ ಎಂದು ತಿಳಿಸಿದರು.


# ₹2,500ಕ್ಕೆ ಜಿಯೊಫೋನ್ ಪ್ರೈಮಾ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಿಲಯನ್ಸ್ ಜಿಯೊ ಕಂಪನಿಯು ‘ಜಿಯೊಫೋನ್ ಪ್ರೈಮಾ’ ಎನ್ನುವ 4ಜಿ ಫೋನ್ ಬಿಡುಗಡೆ ಮಾಡಿದೆ. ₹2,500ಕ್ಕೆ ಈ ಫೋನ್ ಲಭ್ಯವಿದೆ.

ಈ ಫೋನ್ KaiOS ನಿಂದ ಕಾರ್ಯಾಚರಿಸುತ್ತದೆ. ಯುಟ್ಯೂಬ್, ಫೇಸ್‌ಬುಕ್, ವಾಟ್ಸ್‌ಆ್ಯಪ್, ಗೂಗಲ್ ವಾಯ್ಸ್ ಅಸಿಸ್ಟೆಂಟ್‌ನಂತಹ ವೈಶಿಷ್ಟ್ಯಗಳ ಈ ಫೋನ್‌ನಲ್ಲಿ ಇವೆ. 2.4 ಇಂಚಿನ ಪರದೆ, 1800 ಎಂಎಎಚ್ ಬ್ಯಾಟರಿಯನ್ನು ಇದು ಒಳಗೊಂಡಿದೆ ಎಂದು ಕಂಪನಿ ಹೇಳಿದೆ.

ಜಿಯೊ ಟಿವಿ, ಜಿಯೊ ಸಿನಿಮಾ ತರಹದ ಪ್ರೀಮಿಯಂ ಡಿಜಿಟಲ್ ಸೇವೆಗಳೊಂದಿಗೆ ಈ ಫೋನ್ ಸಿದ್ಧವಾಗಿದೆ.




ಜಿಯೊಪೇ ಮೂಲಕ ಯುಪಿಐ ಪಾವತಿ ಮಾಡಬಹುದು. ಅಮೆಜಾನ್, ಜಿಯೊಮಾರ್ಟ್ ಮತ್ತು ರಿಲಯನ್ಸ್ ಡಿಜಿಟಲ್‌ನಲ್ಲಿ ಈ ಫೋನ್ ಖರೀದಿಸಬಹುದು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

## ರಿಲಯನ್ಸ್ ಕ್ಯಾಪಿಟಲ್‌ಗೆ ₹239 ಕೋಟಿ ನಷ್ಟ

**ನವದೆಹಲಿ (ಪಿಟಿಐ):** ರಿಲಯನ್ಸ್ ಕ್ಯಾಪಿಟಲ್ ಕಂಪನಿಯು 2023–24ರ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹239 ಕೋಟಿ ನಿವ್ವಳ ನಷ್ಟ ಕಂಡಿದೆ. ಹಿಂದಿನ ಹಣಕಾಸು ವರ್ಷ ಇದೇ ಅವಧಿಯಲ್ಲಿ ಕಂಪನಿ ₹215 ಕೋಟಿ ನಿವ್ವಳ ಲಾಭ ಗಳಿಸಿತ್ತು.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ವರಮಾನ ₹5,796 ಕೋಟಿಯಿಂದ ₹6,393 ಕೋಟಿಗೆ ಏರಿಕೆಯಾಗಿದೆ ಎಂದು ಕಂಪನಿ ಷೇರುಪೇಟೆಗೆ ತಿಳಿಸಿದೆ. ಒಟ್ಟು ವೆಚ್ಚವು ₹5,756 ಕೋಟಿಯಿಂದ ₹6,679 ಕೋಟಿಗೆ ಏರಿಕೆ ಆಗಿದೆ ಎಂದು ಮಾಹಿತಿ ನೀಡಿದೆ.

**ಮುಂಬೈ ಧಾರಣೆ**

**ಶೇಂಗಾ**

08-11-2023

| | |
|---|---|
| ಜಾವಾ 70/80(ಹೊಸ) | 10800-10900 |
| ಜಾವಾ 80/90(ಹೊಸ) | 10200-10300 |
| ದಪ್ಪ ಮಧ್ಯಪ್ರದೇಶ(ಹೊಸ) | 9700-9800 |
| ದಪ್ಪ ಗುಜರಾತ್(ಹೊಸ) | 10400-10500 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1540 (1550) |
| ಒಂದು ವಾರದ ಡೆಲಿವರಿ | 1535 (1545) |
| ಸೋಯಾ ಕಚ್ಚಾ | 885 (880) |
| ಪಾಮ್ ವಾರದ ಡೆಲಿವರಿ | 823 (822) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 850 (850) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
60,350 (60,400)
ಬೆಳ್ಳಿ ಕೆ.ಜಿ 70,300 (70,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

**ಸಂಕ್ಷಿಪ್ತ ಸುದ್ದಿ**

## ಐಆರ್‌ಸಿಟಿಸಿ ಲಾಭ ಶೇ 30ರಷ್ಟು ಹೆಚ್ಚಳ

**ನವದೆಹಲಿ (ಪಿಟಿಐ):** ಇಂಡಿಯನ್ ರೈಲ್ವೆ ಕೇಟರಿಂಗ್ ಆ್ಯಂಡ್ ಟೂರಿಸಂ ಕಾರ್ಪೊರೇಷನ್ (ಐಆರ್‌ಸಿಟಿಸಿ) ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 30.36ರಷ್ಟು ಹೆಚ್ಚಾಗಿ ₹294.67 ಕೋಟಿಗೆ ಏರಿಕೆ ಕಂಡಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ನಿವ್ವಳ ಲಾಭವು ₹226 ಕೋಟಿಯಷ್ಟು ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಒಟ್ಟು ವರಮಾನವು ಶೇ 23.51ರಷ್ಟು ಹೆಚ್ಚಾಗಿ ₹995 ಕೋಟಿಗೆ ತಲುಪಿದೆ. ಹಿಂದಿನ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ವರಮಾನ ₹805.8 ಕೋಟಿಯಷ್ಟು ಇತ್ತು ಎಂದು ತಿಳಿಸಿದೆ. ಪ್ರತಿ ಷೇರಿಗೆ ₹2.50ರಂತೆ ಮಧ್ಯಂತರ ಲಾಭಾಂಶವನ್ನು ಆಡಳಿತ ಮಂಡಳಿ ಘೋಷಣೆ ಮಾಡಿರುವುದಾಗಿ ಕಂಪನಿ ಹೇಳಿದೆ.

## ಬಿಎಚ್‌ಇಎಲ್‌ಗೆ ₹238 ಕೋಟಿ ನಷ್ಟ

**ನವದೆಹಲಿ (ಪಿಟಿಐ):** ಸರ್ಕಾರಿ ಸ್ವಾಮ್ಯದ ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ (ಬಿಎಚ್‌ಇಎಲ್), 2023–24ರ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹238 ಕೋಟಿ ನಿವ್ವಳ ನಷ್ಟ ಕಂಡಿದೆ. ಹಿಂದಿನ ಹಣಾಸು ವರ್ಷದ ಇದೇ ಅವಧಿಯಲ್ಲಿ ₹12 ಕೋಟಿ ಲಾಭ ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ. ವರಮಾನವು ₹5,419 ಕೋಟಿಯಿಂದ ₹5,305 ಕೋಟಿಗೆ ಇಳಿಕೆ ಕಂಡಿದೆ.

ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಜೂನ್ ಅವಧಿಯಲ್ಲಿ ₹344 ಕೋಟಿ ನಿವ್ವಳ ನಷ್ಟ ಆಗಿದೆ ಎಂದು ಕಂಪನಿ ಹೇಳಿದೆ.

# ಭಾರತಕ್ಕೆ ಟೆಸ್ಲಾ: ಗೋಯಲ್–ಮಸ್ಕ್ ಭೇಟಿ?

**ನವದೆಹಲಿ (ರಾಯಿಟರ್ಸ್‌):** ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಅವರು ಟೆಸ್ಲಾ ಮುಖ್ಯಸ್ಥ ಇಲಾನ್ ಮಸ್ಕ್ ಅವರನ್ನು ಅಮೆರಿಕದಲ್ಲಿ ಮುಂದಿನ ವಾರ ಭೇಟಿ ಮಾಡಲಿದ್ದಾರೆ ಎಂದು ಮೂಲಗಳು ಹೇಳಿವೆ.

ಟೆಸ್ಲಾ ಕಂಪನಿಯು ಭಾರತದಲ್ಲಿ ತಯಾರಿಕಾ ಘಟಕ ಸ್ಥಾಪನೆ ಮಾಡುವ ಸಂಬಂಧ ಮಾತುಕತೆ ನಡೆಸಲು ಭೇಟಿ ಮಾಡಲಿದ್ದಾರೆ ಎಂದು ತಿಳಿಸಿವೆ.

ಇಲಾನ್ ಮಸ್ಕ್ ಅವರು ಜೂನ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ್ದರು. ಆ ಬಳಿಕ ಭಾರತದಲ್ಲಿ ಹೆಚ್ಚು ಹೂಡಿಕೆಗೆ ಮಾಡುವ ಆಲೋಚನೆ ಹೊಂದಿರುವುದಾಗಿ ಹೇಳಿದ್ದರು. ಈ ಹಿನ್ನೆಲೆಯಲ್ಲಿ ಈ ಭೇಟಿಯು ಮಹತ್ವದ್ದಾಗಿರಲಿದೆ ಎಂದು ಮೂಲಗಳು ಹೇಳಿವೆ.

ಮಸ್ಕ್ ಮತ್ತು ಗೋಯಲ್ ಭೇಟಿಯ ವೇಳೆ, ಭಾರತದಲ್ಲಿ ಟೆಸ್ಲಾ ಕಾರು




ತಯಾರಿಕೆ, ದೇಶದಾದ್ಯಂತ ಚಾರ್ಜಿಂಗ್ ಮೂಲಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಚರ್ಚೆ ನಡೆಯಲಿದೆ. ಈ ಕುರಿತು ವಾಣಿಜ್ಯ ಸಚಿವಾಲಯ ಮತ್ತು ಟೆಸ್ಲಾ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಭಾರತವು ಹೊಸ ಇ.ವಿ. ನೀತಿಯನ್ನು ತರಲಿದ್ದು, ಅದರಂತೆ ಕಂಪನಿಗಳು ವಿದ್ಯುತ್ ಚಾಲಿತ ವಾಹನಗಳನ್ನು ಈಗಿರುವ ಶೇ 100ರ ತೆರಿಗೆಗೆ ಬದಲಾಗಿ ಶೇ 15ಕ್ಕೆ ಆಮದು ಮಾಡಿಕೊಳ್ಳಬಹುದು. ಆದರೆ, ಸ್ಥಳೀಯವಾಗಿ ತಯಾರಿಕೆ ಮಾಡುವ ಬದ್ಧತೆಯನ್ನು ನೀಡಬೇಕು. ಹೊಸ

**ಮುಖ್ಯಾಂಶಗಳು**

- ಆಮದು ತೆರಿಗೆ ಪ್ರಮಾಣ ತಗ್ಗಿಸುವಂತೆ ಟೆಸ್ಲಾ ಒತ್ತಾಯ
- ಮೊದಲು ದೇಶದಲ್ಲಿ ತಯಾರಿಕೆ ಆರಂಭಿಸುವಂತೆ ಭಾರತ ಸೂಚನೆ
- ಕೇಂದ್ರ ಸರ್ಕಾರದಿಂದ ಹೊಸ ಇ.ವಿ. ನೀತಿ?

ಇ.ವಿ. ನೀತಿಯನ್ನು ಅಂತಿಮಗೊಳಿಸಲು ಪ್ರಧಾನಿ ಕಚೇರಿಯು ಹಲವು ಸಚಿವರೊಂದಿಗೆ ಸಭೆ ನಡೆಸಿದೆ ಎಂದೂ ಮೂಲಗಳು ಹೇಳಿವೆ.

ಹೊಸ ನೀತಿಯಿಂದ ಭಾರತದ ಇ.ವಿ. ಮಾರುಕಟ್ಟೆ ಮೇಲೆ ಆಗಲಿರುವ ಪರಿಣಾಮಗಳ ಬಗ್ಗೆಯೂ ಸರ್ಕಾರ ವಿಶ್ಲೇಷಣೆ ನಡೆಸುತ್ತಿದೆ. ಆಮದು ತೆರಿಗೆ ಕಡಿಮೆ ಆಗುವುದರಿಂದ ಮಾರುಕಟ್ಟೆ ಮೇಲೆ ಪರಿಣಾಮ ಆಗಲಿದ್ದು, ತಮ್ಮ ಯೋಜನೆಗಳಿಗೆ ಅಡ್ಡಿಯಾಗಲಿದೆ ಎಂದು ದೇಶಿ ವಾಹನ ತಯಾರಕರು ಹೇಳಿದ್ದಾರೆ.

ಹೊಸ ನೀತಿಯ ಕುರಿತಾಗಿಯೂ ಗೋಯಲ್ ಅವರು ಮಸ್ಕ್ ಜೊತೆ ಮಾತುಕತೆ ನಡೆಸುವ ಸಾಧ್ಯತೆ ಇದೆ ಎಂದೂ ತಿಳಿಸಿವೆ. ಟೆಸ್ಲಾ ಕಂಪನಿಯು ಭಾರತದಲ್ಲಿ ತಯಾರಿಕಕ ಆರಂಭಿಸುವ ಕುರಿತು ಹಲವು ತಿಂಗಳುಗಳಿಂದ ಭಾರತದ ಅಧಿಕಾರಿಗಳು ಮತ್ತು ಕಂಪನಿ ಮಧ್ಯೆ ಮಾತುಕತೆ ನಡೆಸುತ್ತಿದೆ. ಕೇಂದ್ರ ಸರ್ಕಾರವು, ವಿದ್ಯುತ್ ಚಾಲಿತ ವಾಹನಗಳು ಮತ್ತು ಅದರ ಬಿಡಿಭಾಗಗಳ ಮೇಲಿನ ಆಮದು ಸುಂಕ ಕಡಿಮೆ ಮಾಡಬೇಕು ಎಂದು ಟೆಸ್ಲಾ ಕಂಪನಿ ಕೇಳುತ್ತಿದೆ. ಭಾರತದಲ್ಲಿ ತಯಾರಿಕೆಯನ್ನು ಆರಂಭಿಸಿದ ನಂತರದಲ್ಲಿ ತೆರಿಗೆ ವಿನಾಯಿತಿಗಳ ಬಗ್ಗೆ ಪರಿಶೀಲಿಸಬಹುದು ಎಂದು ಕೇಂದ್ರ ಹೇಳಿದೆ.

**ದೇಶದಾದ್ಯಂತ ಮಾರುಕಟ್ಟೆ ಧಾರಣೆ**

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 850-900 |
| ನಡುಗೋಲು | 1000-1100 |
| ರಾಶಿ | 1200-1250 |
| ರಾಶಿ ಉತ್ತಮ | 1300-1450 |
| ಹೆರಕಿದ್ದು | 2000-2100 |
| ಹಸಿರು ಸಾಧಾರಣ | 1350-1450 |
| ಹಸಿರು ಉತ್ತಮ | 1500-1600 |
| ಹಸಿರು ಅತಿ ಉತ್ತಮ | 2000-2100 |
| ಕಾಳು ಮೆಣಸು | 565 |
| **ಬಂಟ್ವಾಳ** | |
| ಕೋಕ | 15000-27500 |
| ಹಳತು | 43500-48500 |
| **ಬೆಂಗಳೂರು** | |
| ಇತರೆ | 55000-60000 |
| **ಹೊನ್ನಾವರ** | |
| ಹಳೆಚಾಲಿ | 37000-39000 |
| **ಕಾರ್ಕಳ** | |
| ಹೊಸತು | 25000-36500 |
| ಹಳತು | 30000-48500 |
| **ಕುಮಟ** | |
| ಚಿಪ್ಪು | 27809-34509 |

| | |
|---|---|
| ಕೋಕ | 19089-32599 |
| ಫ್ಯಾಕ್ಟರಿ | 10169-24329 |
| ಹಳೆಚಾಲಿ | 39509-39909 |
| ಹೊಸಚಾಲಿ | 37609-40099 |
| **ಕುಂದಾಪುರ** | |
| ಹಳೆಚಾಲಿ | 41000-42500 |
| ಹೊಸಚಾಲಿ | 30000-36500 |
| **ಮಡಿಕೇರಿ** | |
| ಕಚ್ಚಾ | 40927-40927 |
| **ಪುತ್ತೂರು** | |
| ಹೊಸತು | 27000-36500 |
| **ಸಿದ್ದಾಪುರ** | |
| ಬಿಳಿಗೋಟು | 31899-34809 |

| | |
|---|---|
| ಚಾಲಿ | 37419-40099 |
| ಕೋಕ | 30199-35209 |
| ಕೆಂಪುಗೋಟು | 31012-33889 |
| ರಾಶಿ | 42669-46399 |
| ತಟ್ಟಿಬೆಟ್ಟೆ | 38699-42089 |
| **ಶಿರಸಿ** | |
| ಬೆಟ್ಟೆ | 37169-42899 |
| ಬಿಳಿಗೋಟು | 30612-36219 |
| ಚಾಲಿ | 36508-41208 |
| ಕೆಂಪುಗೋಟು | 26929-33899 |
| ರಾಶಿ | 45098-47709 |
| **ತುಮಕೂರು** | |
| ರಾಶಿ | 44200-46500 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| ಮೂಡಿಗೆರೆ | ಹಾಸನ | | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | - | 11200 | - | 170.75 ಸೆಂಟ್ಸ್ |
| ಎಸಿ | - | 6500 | - | |
| ಆರ್‌ಪಿ | - | 10000 | - | ಲಂಡನ್ |
| ಆರ್‌ಸಿ | - | 238 on OT | - | 2358 ಡಾಲರ್ಸ್ |

# ಬಾಕ್ಸಿಂಗ್: ಕರ್ನಾಟಕ ವಲಯಕ್ಕೆ 24 ಪದಕ

**ಬೆಂಗಳೂರು:** ಕರ್ನಾಟಕ ವಲಯವು ಜಾರ್ಖಂಡ್‌ನ ರಾಂಚಿಯಲ್ಲಿ ಭಾನುವಾರ ಮುಕ್ತಾಯಗೊಂಡ ಮೂರನೇ ಸಿಐಎಸ್‌ಸಿಇ ರಾಷ್ಟ್ರೀಯ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ 24 ಪದಕಗಳನ್ನು ಗೆದ್ದುಕೊಂಡಿದೆ.

ಬಾಲಕ ಮತ್ತು ಬಾಲಕಿಯರ 14, 17, 19 ವರ್ಷದೊಳಗಿನ ವಿಭಾಗದ ಸ್ಪರ್ಧೆಗಳಲ್ಲಿ ಕರ್ನಾಟಕ ವಲಯದಿಂದ ಒಟ್ಟು 35 ಸ್ಪರ್ಧಾಳುಗಳು ಭಾಗವಹಿಸಿದ್ದರು. ವಿವಿಧ ವಿಭಾಗಗಳ ಸ್ಪರ್ಧೆಗಳಲ್ಲಿ 11 ಚಿನ್ನ, 3 ಬೆಳ್ಳಿ ಮತ್ತು 10 ಕಂಚಿನ ಪದಕಗಳನ್ನು ಕರ್ನಾಟಕ ವಲಯ ಗೆದ್ದುಕೊಂಡಿದೆ. ಜತೆಗೆ ಬಾಲಕರ 17 ವರ್ಷದೊಳಗಿನವರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದೆ ಎಂದು ಕರ್ನಾಟಕ ವಲಯದ ಕೋಚ್ ಅನಿಲ್ ಕುಮಾರ್ ಎಲ್. ತಿಳಿಸಿದ್ದಾರೆ.

ಚಿನ್ನ ಗೆದ್ದವರು: ವಿ.ಚಂದನ್ ಕುಮಾರ್ (ಶಾಂತಿಧಾಮ ಹೈಯರ್ ಪ್ರೈಮರಿ ಇಂಗ್ಲಿಷ್ ಸ್ಕೂಲ್), ಯಾಹ್ಯಾ ಖಾನ್ (ಸೇಂಟ್ ಜರ್ಮೈನ್ಸ್ ಅಕಾಡೆಮಿ), ಸಿ.ಸಿಂಚನಾ (ಶಾಂತಿಧಾಮ ಸ್ಕೂಲ್), ವಿ. ತರುಣ್ (ಈಸ್ಟ್‌ವುಡ್ ಹೈಸ್ಕೂಲ್), ಈಶಾ ಖಾನ್ (ಸೇಂಟ್ ಜರ್ಮೈನ್ಸ್ ಅಕಾಡೆಮಿ), ವಿ. ಲಿಖಿತ್ (ಈಸ್ಟ್‌ವುಡ್ ಹೈಸ್ಕೂಲ್), ಆರ್. ರಚನಾ (ಡಿ ಪಾಲ್ ಇಂಟರ್ ನ್ಯಾಷನಲ್ ಸ್ಕೂಲ್), ಎಸ್. ನಿಶಾ (ಈಸ್ಟ್‌ವುಡ್ ಹೈಸ್ಕೂಲ್), ಎಸ್. ತೇಜಸ್ವಿನಿ (ಸೇಂಟ್ ವಿನ್ಸೆಂಟ್ ಪಲ್ಲೋಟಿ ಸ್ಕೂಲ್), ಶೌರ್ಯ ಸಿಂಗ್ (ಬೆಂಗಳೂರು ಇಂಟರ್‌ನ್ಯಾಷನಲ್ ಹೈಸ್ಕೂಲ್), ಟಿ. ಹೋಹನ್ (ಕ್ಲಾರೆನ್ಸ್ ಹೈಸ್ಕೂಲ್).

# ನ.24 ರಿಂದ ಡ್ರ್ಯಾಗ್ ರೇಸ್

**ಬೆಂಗಳೂರು:** ವ್ರೂಮ್ ಮೋಟರ್ ಸ್ಪೋರ್ಟ್ಸ್ ಆಶ್ರಯದಲ್ಲಿ ನವೆಂಬರ್ 24 ರಿಂದ 26ರವರೆಗೆ 9ನೇ ಆವೃತ್ತಿಯ ಡ್ರ್ಯಾಗ್‌ಮೀಟ್ (ರೇಸ್) ಸ್ಪರ್ಧೆಗಳು ಹೊಸೂರಿನ ತನೇಜಾ ಏರೋಸ್ಪೇಸ್ ಆ್ಯಂಡ್ ಏವಿಯೇಷನ್ ಟ್ರ್ಯಾಕ್‌ನಲ್ಲಿ ನಡೆಯಲಿದೆ.

402 ಮೀಟರ್ ರೇಸ್ ಟ್ರ್ಯಾಕ್‌ನಲ್ಲಿ ನಡೆಯುವ ಈ ರೇಸ್, ದ್ವಿಚಕ್ರ ಮತ್ತು ನಾಲ್ಕು ಚಕ್ರಗಳ ವಿಭಾಗದಲ್ಲಿ ನಡೆಯಲಿದ್ದು, ಸೂಪರ್ ಕಾರ್, ಸೂಪರ್ ಬೈಕ್‌ಗಳ ವೇಗ, ಕಸರತ್ತು ಪ್ರದರ್ಶನ ರೋಮಾಂಚಕ ಅನುಭವ ನೀಡಲಿದೆ ಎಂದು ವ್ರೂಮ್ ಮೋಟರ್ ಸ್ಪೋರ್ಟ್ಸ್ ಆಡಳಿತ ನಿರ್ದೇಶಕ ತಾರಿಖ್ ಮೊಹ್ಸಿನ್ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ನವೆಂಬರ್ 24ರಂದು ವಾಹನಗಳ ತಪಾಸಣೆ ನಡೆಯಲಿದ್ದು, 25 ಮತ್ತು 26ರಂದು ಸ್ಪರ್ಧೆಗಳು ನಡೆಯಲಿವೆ. ಈ ಬಾರಿ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಪ್ರಧಾನ ಪ್ರಾಯೋಜಕತ್ವ ಹೊಂದಿದೆ. ಜೊತೆಗೆ ಹೀರೊ ಮೋಟರ್ಸ್, ಅಲ್ಟ್ರಾವಾಯ್ಲೆಟ್, ಸ್ಪೀಡ್‌ವೇ ಮೋಟರ್‌ಸ್ಪೋರ್ಟ್ಸ್, ಫೆಡರೇಷನ್ ಮೋಟರ್‌ಸ್ಪೋರ್ಟ್ಸ್ ಕ್ಲಬ್ ಆಫ್ ಇಂಡಿಯಾ ಸಹಭಾಗಿತ್ವ ಹೊಂದಿವೆ ಎಂದರು.

‘ಕಳೆದ ಫೆಬ್ರುವರಿಯಲ್ಲಿ ನಡೆದ ಎಂಟನೇ ಆವೃತ್ತಿಯ ಸ್ಪರ್ಧೆಗಳನ್ನು, ದೇಶದಲ್ಲೇ ಮೊದಲ ಬಾರಿ ಹೊನಲು ಬೆಳಕಿನಲ್ಲಿ ಯಶಸ್ವಿಯಾಗಿ ನಡೆಸಲಾಗಿತ್ತು. ಆ ಆವೃತ್ತಿಯ ಸ್ಪರ್ಧೆಯಲ್ಲಿ 650ಕ್ಕೂ ಹೆಚ್ಚು ವಾಹನಗಳು ಪಾಲ್ಗೊಂಡಿದ್ದವು’ ಎಂದರು.

ನವೆಂಬರ್ 2 ರಿಂದ ನೋಂದಣಿ ಆರಂಭಿಸಲಾಗಿದ್ದು ಇದುವರೆಗೆ 100ಕ್ಕೂ ಹೆಚ್ಚು ಮಂದಿ ನೋಂದಾಯಿಸಿದ್ದಾರೆ. ದೇಶದ ನಾನಾ ಭಾಗಗಳಿಂದ ಸ್ಪರ್ಧಿಗಳು ಭಾಗವಹಿಸಲಿದ್ದಾರೆ. ಡ್ರ್ಯಾಗ್ ರೇಸ್‌ನಲ್ಲಿ ಮಹಿಳೆಯರ ಭಾಗವಹಿಸುವಿಕೆ ಪ್ರೋತ್ಸಾಹಿಸಲು ಅವರಿಗೆ ಪ್ರವೇಶಶುಲ್ಕ ಮನ್ನಾ ಮಾಡಲಾಗಿದೆ ಎಂದರು.

ಇದೇ ಮೊದಲ ಬಾರಿಗೆ ಇ.ವಿ. ಸ್ಕೂಟರ್ ಮತ್ತು ಇ.ವಿ. ಮೋಟರ್ ಸೈಕಲ್ ವಿಭಾಗಗಳಲ್ಲಿ ಸ್ಪರ್ಧೆಗಳನ್ನು ಪರಿಚಯಿಸಲಾಗಿದೆ ಎಂದು ಆಯೋಜಕರು ಮಾಹಿತಿ ನೀಡಿದರು.

ಎಐಎಫ್‌ಎಫ್: ವಿಶ್ವಾಸ ದ್ರೋಹದ ಆರೋಪ

# ಕಾರ್ಯದರ್ಶಿ ಸ್ಥಾನದಿಂದ ಶಾಜಿ ವಜಾ

**ನವದೆಹಲಿ (ಪಿಟಿಐ):** ‘ವಿಶ್ವಾಸ ದ್ರೋಹ’ದ ಕಾರಣಕ್ಕಾಗಿ ಶಾಜಿ ಪ್ರಭಾಕರನ್ ಅವರನ್ನು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಸ್ಥಾನದಿಂದ ಕಿತ್ತುಹಾಕಲಾಗಿದೆ ಎಂದು ಫೆಡರೇಷನ್ ಬುಧವಾರ ಪ್ರಕಟಿಸಿದೆ.

14 ತಿಂಗಳ ಹಿಂದೆ (2022ರ ಸೆ. 3) ಈ ಗೌರವದ ಹುದ್ದೆಗೆ ಪ್ರಭಾಕರನ್ ಅವರನ್ನು ನೇಮಕ ಮಾಡಲಾಗಿತ್ತು. ಈ ಶಿಸ್ತುಕ್ರಮಕ್ಕೆ ಕಾರಣವಾದ ವಿಶ್ವಾಸ ದ್ರೋಹ ಏನು ಎಂಬುದನ್ನು ರಾಷ್ಟ್ರೀಯ ಫೆಡರೇಷನ್ ಉಲ್ಲೇಖಿಸಿಲ್ಲ.

‘ನಂಬಿಕೆ ದ್ರೋಹದ ಕಾರಣಕ್ಕಾಗಿ ಡಾ.ಶಾಜಿ ಪ್ರಭಾಕರನ್ ಅವರನ್ನು ನವೆಂಬರ್ 7ರಿಂದ ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ವಜಾಗೊಳಿಸಲಾಗಿದೆ’ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಹೇಳಿಕೆಯಲ್ಲಿ ತಿಳಿಸಿದೆ. ಎಐಎಫ್‌ಎಫ್ ಉಪ ಕಾರ್ಯದರ್ಶಿ ಎಂ.ಸತ್ಯನಾರಾಯಣ



ಶಾಜಿ ಪ್ರಭಾಕರನ್

ಅವರು ಹಂಗಾಮಿಯಾಗಿ ಈ ಹುದ್ದೆ ವಹಿಸಿಕೊಳ್ಳಲಿದ್ದಾರೆ ಎಂದು ಹೇಳಿಕೆ ತಿಳಿಸಿದೆ.

ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ ಅವರು ವಜಾಗೊಳಿಸಿದ ಆದೇಶಪತ್ರವನ್ನು ಪ್ರಭಾಕರನ್ ಅವರಿಗೆ ಮಂಗಳವಾರ ಕಳುಹಿಸಿದ್ದಾರೆ. ಈ ಬಗ್ಗೆ ಇದುವರೆಗೆ ಪ್ರಭಾಕರನ್ ಪ್ರತಿಕ್ರಿಯೆ ನೀಡಿಲ್ಲ.

ಪ್ರಭಾಕರನ್ ಅವರ ಕಾರ್ಯನಿರ್ವಹಣೆ ಶೈಲಿಯ ಬಗ್ಗೆ ಫೆಡರೇಷನ್‌ನ ಕಾರ್ಯಕಾರಿ ಸಮಿತಿ ಸದಸ್ಯರು ಅತೃಪ್ತಿ ಹೊಂದಿದ್ದರು ಎಂದು ಫೆಡರೇಷನ್‌ನ ಉಪಾಧ್ಯಕ್ಷ ಎನ್.ಎ.ಹ್ಯಾರಿಸ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

**ಕ್ರಮ ನಿಯಮಬಾಹಿರ– ಶಾಜಿ ಸಿಡಿಮಿಡಿ:** ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ತಮ್ಮ ವಿರುದ್ಧ ಕೈಗೊಂಡ ಕ್ರಮ ನಿಯಮಬಾಹಿರವಾಗಿದೆ ಎಂದು ವಜಾಗೊಂಡಿರುವ ಕಾರ್ಯದರ್ಶಿ ಶಾಜಿ ಪ್ರಭಾಕರನ್ ಪ್ರತಿಕ್ರಿಯಿಸಿದ್ದಾರೆ.

‘ಎಐಎಫ್‌ಎಫ್ ನಿಯಮಾವಳಿಗಳ ಪ್ರಕಾರ ಕಾರ್ಯಕಾರಿ ಸಮಿತಿ ಮಾತ್ರವೇ ಪ್ರಧಾನ ಕಾರ್ಯದರ್ಶಿಯನ್ನು ವಜಾಗೊಳಿಸಬಹುದು. ಹೀಗಾಗಿ ವಜಾ ಆದೇಶ ಕಾನೂನುಬಾಹಿರ ಮತ್ತು ಕಾರ್ಯಕಾರಿ ಸಮಿತಿಯ ಅನುಮೋದನೆ ಸಹ ಹೊಂದಿಲ್ಲ’ ಎಂದು 51 ವರ್ಷದ ಪ್ರಭಾಕರನ್ ಅವರು ಎಐಎಫ್‌ಎಫ್ ಸದಸ್ಯರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಈ ಕ್ರಮವನ್ನು ‘ಸಂಚು’ ಎಂದೂ ಅವರು ಟೀಕಿಸಿದ್ದಾರೆ.




ಪ್ರಶಸ್ತಿಯೊಂಡಿಗೆ ತನಿಷ್ಕಾ, ತಮೋಘ್ನ

## ಟಿ.ಟಿ: ಪ್ರಶಸ್ತಿ ಗೆದ್ದ ತಮೋಘ್ನ, ತನಿಷ್ಕಾ

**ಬೆಂಗಳೂರು:** ತಮೋಘ್ನ ಎಂ. ಮತ್ತು ತನಿಷ್ಕಾ ಕಪಿಲ್ ಕಾಲಭೈರವ ಅವರು ಮಲ್ಲೇಶ್ವರಂ ಅಸೋಸಿಯೇಷನ್‌ನಲ್ಲಿ ನಡೆಯುತ್ತಿರುವ 25ನೇ ವರ್ಷದ ಎಂ.ಎಸ್.ರಾಮಯ್ಯ ಸ್ಮಾರಕ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 13 ವರ್ಷದೊಳಗಿನ ಬಾಲಕರ ಮತ್ತು ಬಾಲಕಿಯರ ವಿಭಾಗದ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಬುಧವಾರ ನಡೆದ ಫೈನಲ್‌ನಲ್ಲಿ ತಮೋಘ್ನ 15–13, 11–7, 6–11, 11–8 ರಿಂದ ರೆಯಾನ್ಶ್ ಜಲನ್ ಅವರನ್ನು ಸೋಲಿಸಿದ. ಸೆಮಿಫೈನಲ್‌ನಲ್ಲಿ ರೆಯಾನ್ಶ್ 11–6, 11–3, 11–7 ರಿಂದ ವೇದಾಂತ್ ವಶಿಷ್ಟ ವಿರುದ್ಧ, ತಮೋಘ್ನ 11–5, 6–11, 11–3, 11–8 ರಿಂದ ಅಭಿನವ್ ಪ್ರಸನ್ನ ವಿರುದ್ಧ ಜಯಗಳಿಸಿದರು.

ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ತನಿಷ್ಕಾ 11–1, 11–9, 11–6 ರಿಂದ ಅನೆಟ್ಟೆ ಮರಿಯಾನಾ ವಿರುದ್ಧ ಜಯಗಳಿಸಿದಳು.

ಸೆಮಿಫೈನಲ್ ಪಂದ್ಯದಲ್ಲಿ ತನಿಷ್ಕಾ 11–4, 11–1, 11–3 ರಿಂದ ಐರೀನ್ ಅನ್ನಾ ಸುಭಾಷ್ ವಿರುದ್ಧ ಜಯ ಸಾಧಿಸಿದ್ದರು.

ಬೆನ್ ಸ್ಟೋಕ್ಸ್ ಭರ್ಜರಿ ಶತಕ • ಡೇವಿಡ್ ಮಲಾನ್, ವೋಕ್ಸ್ ಅರ್ಧಶತಕ • ನೆದರ್ಲೆಂಡ್ಸ್‌ಗೆ ನಿರಾಶೆ

# ಇಂಗ್ಲೆಂಡ್‌ಗೆ ಗೆಲುವಿನ ದರ್ಶನ

ಪುಣೆ (ಪಿಟಿಐ): ಸತತ ಐದು ಪಂದ್ಯಗಳಲ್ಲಿ ಸೋತಿದ್ದ ಇಂಗ್ಲೆಂಡ್ ತಂಡವು ಬುಧವಾರ ನೆದರ್ಲೆಂಡ್ಸ್ ವಿರುದ್ಧ ಜಯಿಸಿತು.

ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡವು ಈಗಾಗಲೇ ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಹಾದಿಯಿಂದ ಹೊರಬಿದ್ದಿದೆ. ಆದರೆ ಮುಂಬರುವ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ನೇರ ಅರ್ಹತೆಗಾಗಿ ಅಗ್ರ ಏಳರಲ್ಲಿ ಸ್ಥಾನ ಪಡೆಯುವುದೊಂದೇ ಈಗ ಇಂಗ್ಲೆಂಡ್ ಮುಂದಿರುವ ಗುರಿ.

ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಬೆನ್ ಸ್ಟೋಕ್ಸ್ (108; 84ಎಸೆತ, 4X6, 6X6) ಅಮೋಘ ಶತಕದ ಬಲದಿಂದ ಇಂಗ್ಲೆಂಡ್ ತಂಡವು 160 ರನ್‌ಗಳ ಅಂತರದಿಂದ ನೆದರ್ಲೆಂಡ್ಸ್‌ಗೆ ಸೋಲುಣಿಸಿತು. ಇದರೊಂದಿಗೆ ಅಂಕಪಟ್ಟಿಯಲ್ಲಿ ಏಳನೇ ಸ್ಥಾನಕ್ಕೇರಿತು. ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಜೋಸ್ ಬಟ್ಲರ್ ಬಳಗವು ಕೋಲ್ಕತ್ತದ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಶನಿವಾರ ಪಾಕಿಸ್ತಾನವನ್ನು ಎದುರಿಸಲಿದೆ.

ಟಾಸ್ ಗೆದ್ದ ಇಂಗ್ಲೆಂಡ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಸ್ಟೋಕ್ಸ್ ಶತಕ, ಡೇವಿಡ್ ಮಲಾನ್ ಮತ್ತು ಕ್ರಿಸ್ ವೋಕ್ಸ್ ಅವರ ಅರ್ಧಶತಕಗಳ ಬಲದಿಂದ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 339 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಡಚ್ ಬಳಗಕ್ಕೆ 37.2 ಓವರ್‌ಗಳಲ್ಲಿ 179 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಸ್ಪಿನ್ನರ್ ಮೊಯೀನ್ ಅಲಿ ಮತ್ತು ಆದಿಲ್ ರಶೀದ್ ಅವರು ತಲಾ ಮೂರು ವಿಕೆಟ್ ಗಳಿಸಿದರು. ಡೇವಿಡ್ ವಿಲಿ 19 ರನ್‌ಗಳಿಗೆ ಎರಡು ವಿಕೆಟ್ ಪಡೆದರು. ಅಜೇಯ 41 ರನ್ ಗಳಿಸಿದ ತೇಜ ನಿಡಮಾನೂರು ಅವರು ನೆದರ್ಲೆಂಡ್ಸ್ ಪರ ಗರಿಷ್ಠ ಸ್ಕೋರರ್ ಎನಿಸಿದರು.

**ಸ್ಟೋಕ್ಸ್ ಆಟ:** ಟೂರ್ನಿಯಲ್ಲಿ ವೈಫಲ್ಯಗಳನ್ನು ಕಂಡಿರುವ ಇಂಗ್ಲೆಂಡ್ ತಂಡದ ಆಟಗಾರ ಬೆನ್ ಸ್ಟೋಕ್ಸ್ ಅವರು ಡೇವಿಡ್ ಮಲಾನ್ ಅವರೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 85 ರನ್ ಗಳಿಸಿದರು. ಆದರೂ ತಂಡವು 192 ರನ್‌ಗಳಿಗೆ ಆರು ವಿಕೆಟ್ ಕಳೆದುಕೊಂಡಿತ್ತು.

ಆಗ ಕ್ರೀಸ್‌ನಲ್ಲಿದ್ದ ಸ್ಟೋಕ್ಸ್ ಜೊತೆಗೆ ಸೇರಿಕೊಂಡ ಕ್ರಿಸ್ ವೋಕ್ಸ್ (51; 45ಎ, 4X5, 6X1) ಏಳನೇ ವಿಕೆಟ್ ಜೊತೆಯಾಟದಲ್ಲಿ 129 ರನ್ ಸೇರಿಸಿದರು. ಇದರಿಂದಾಗಿ ತಂಡವು 300 ರನ್‌ಗಳ ಗಡಿ ದಾಟಿತು.

**ಸಂಕ್ಷಿಪ್ತ ಸ್ಕೋರು:** ಇಂಗ್ಲೆಂಡ್: 50 ಓವರ್‌ಗಳಲ್ಲಿ 9ಕ್ಕೆ339 (ಡೇವಿಡ್ ಮಲಾನ್ 87, ಜೋ ರೂಟ್ 28, ಬೆನ್ ಸ್ಟೋಕ್ಸ್ 108, ಕ್ರಿಸ್ ವೋಕ್ಸ್ 51, ಆರ್ಯನ್ ದತ್ 67ಕ್ಕೆ2, ವ್ಯಾನ್ ಬೀಕ್ 88ಕ್ಕೆ2, ಬೆಸ್ ಡಿ ಲೀಡ್ 74ಕ್ಕೆ3) **ನೆದರ್ಲೆಂಡ್ಸ್:** 37.2 ಓವರ್‌ಗಳಲ್ಲಿ 179 (ವೆಸ್ಲಿ ಬೆರಿಸಿ 37, ಸೈಬ್ರ್ಯಾಂಡ್ ಏಂಜೆಲ್‌ಬ್ರೆಕ್ಟ್ 33, ಸ್ಕಾಟ್ ಎಡ್ವರ್ಡ್ಸ್ 38, ತೇಜ ನಿಡಮಾನೂರು ಔಟಾಗದೆ 41, ಡೇವಿಡ್ ವಿಲಿ 19ಕ್ಕೆ2, ಮೊಯೀನ್ ಅಲಿ 42ಕ್ಕೆ3, ಆದಿಲ್ ರಶೀದ್ 54ಕ್ಕೆ3) ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ 160 ರನ್‌ಗಳ ಜಯ, ಎರಡು ಪಾಯಿಂಟ್ಸ್. ಪಂದ್ಯಶ್ರೇಷ್ಠ: ಬೆನ್ ಸ್ಟೋಕ್ಸ್.



ಶತಕ ಗಳಿಸಿದ ಇಂಗ್ಲೆಂಡ್ ತಂಡದ ಬೆನ್ ಸ್ಟೋಕ್ಸ್ ಅವರ ಹೊಡೆತದ ಭಂಗಿ –ಪಿಟಿಐ ಚಿತ್ರ


## ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

| ದೇಶ | ಪಂದ್ಯ | ಗೆಲುವು | ಸೋಲು | ಟೈ | ಪಾಯಿಂಟ್ | ಎನ್‌ಆರ್‌ಆರ್ |
|---|---|---|---|---|---|---|
| ಭಾರತ | 8 | 8 | 0 | 0 | 16 | 2.456 |
| ದಕ್ಷಿಣ ಆಫ್ರಿಕಾ | 8 | 6 | 2 | 0 | 12 | 1.376 |
| ಆಸ್ಟ್ರೇಲಿಯಾ | 8 | 6 | 2 | 0 | 12 | 0.861 |
| ನ್ಯೂಜಿಲೆಂಡ್ | 8 | 4 | 4 | 0 | 8 | 0.398 |
| ಪಾಕಿಸ್ತಾನ | 8 | 4 | 4 | 0 | 8 | -0.036 |
| ಅಫ್ಘಾನಿಸ್ತಾನ | 8 | 4 | 4 | 0 | 8 | -0.338 |
| ಇಂಗ್ಲೆಂಡ್ | 8 | 2 | 6 | 0 | 4 | -0.885 |
| ಬಾಂಗ್ಲಾದೇಶ | 8 | 2 | 6 | 0 | 4 | -1.142 |
| ಶ್ರೀಲಂಕಾ | 8 | 2 | 6 | 0 | 4 | -1.160 |
| ನೆದರ್ಲೆಂಡ್ಸ್ | 8 | 2 | 6 | 0 | 4 | -1.635 |

## ಅಗ್ರ ಐವರು

| ಬ್ಯಾಟಿಂಗ್ | |
|---|---|
| ಕ್ವಿಂಟನ್ ಡಿ ಕಾಕ್ (ದಕ್ಷಿಣ ಆಫ್ರಿಕಾ) | 550 |
| ವಿರಾಟ್ ಕೊಹ್ಲಿ (ಭಾರತ) | 543 |
| ರಚಿನ್ ರವೀಂದ್ರ (ನ್ಯೂಜಿಲೆಂಡ್) | 523 |
| ಡೇವಿಡ್ ವಾರ್ನರ್ (ಆಸ್ಟ್ರೇಲಿಯಾ) | 446 |
| ರೋಹಿತ್ ಶರ್ಮಾ (ಭಾರತ) | 442 |

| ಬೌಲಿಂಗ್ | |
|---|---|
| ದಿಲ್ಶಾನ್ ಮಧುಶಂಕ (ಶ್ರೀಲಂಕಾ) | 21 |
| ಜಂಪಾ (ಆಸ್ಟ್ರೇಲಿಯಾ) | 20 |
| ಮಾರ್ಕೊ ಯಾನ್ಸನ್ (ದಕ್ಷಿಣ ಆಫ್ರಿಕಾ) | 17 |
| ಮೊಹಮ್ಮದ್ ಶಮಿ (ಭಾರತ) | 16 |
| ಶಹೀನ್ ಶಾ ಅಫ್ರಿದಿ (ಪಾಕಿಸ್ತಾನ) | 16 |




ಆಸ್ಟ್ರೇಲಿಯನ್ ಕ್ರಿಕೆಟರ್ ಒ ಡಿ ಐ ನ ಅತ್ಯದ್ಭುತ ಇನ್ನಿಂಗ್ಸ್ ಆಡಿದರು!

## ಗಿಲ್, ಸಿರಾಜ್‌ಗೆ ಅಗ್ರಸ್ಥಾನ

ದುಬೈ (ಪಿಟಿಐ): ಭಾರತ ತಂಡದ ಆರಂಭ ಆಟಗಾರ ಶುಭಮನ್ ಗಿಲ್ ಮತ್ತು ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಅವರು ಬುಧವಾರ ಪ್ರಕಟವಾದ ಐಸಿಸಿ ಏಕದಿನ ರ‍್ಯಾಂಕಿಂಗ್ ಪಟ್ಟಿಯಲ್ಲಿ ಕ್ರಮವಾಗಿ ಬ್ಯಾಟಿಂಗ್ ಮತ್ತು ಬೌಲಿಂಗ್ ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿದ್ದಾರೆ.

ಈ ಹಿಂದೆ ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ ಬ್ಯಾಟರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದರು. ಸಿರಾಜ್ ಅವರು ದಕ್ಷಿಣ ಆಫ್ರಿಕಾದ ಸ್ಪಿನ್ನರ್ ಕೇಶವ ಮಹಾರಾಜ್ ಅವರನ್ನು ಎರಡನೇ ಸ್ಥಾನಕ್ಕೆ ತಳ್ಳಿದ್ದಾರೆ.

ಹಾಲಿ ವಿಶ್ವಕಪ್‌ನಲ್ಲಿ ಉತ್ತಮ ಪ್ರದರ್ಶನದ ಪರಿಣಾಮ ಗಿಲ್ (830 ಪಾಯಿಂಟ್ಸ್) ರ‍್ಯಾಂಕಿಂಗ್‌ನಲ್ಲಿ ಬಡ್ತಿಪಡೆದಿದ್ದಾರೆ. ಈ ಸಾಧನೆಗೆ ಭಾಜನರಾದ ಭಾರತದ ನಾಲ್ಕನೇ ಆಟಗಾರ ಅವರು. ಈ ಹಿಂದೆ ಸಚಿನ್ ತೆಂಡೂಲ್ಕರ್, ಮಹೇಂದ್ರ ಸಿಂಗ್ ಧೋನಿ ಮತ್ತು ವಿರಾಟ್ ಕೊಹ್ಲಿ ಅಗ್ರಸ್ಥಾನ ಪಡೆದಿದ್ದರು. ಬಾಬರ್ 824 ಪಾಯಿಂಟ್ಸ್ ಹೊಂದಿದ್ದಾರೆ.

ವಿಶ್ವಕಪ್‌ನಲ್ಲಿ ರನ್ ಸುಗ್ಗಿ ಕಾಣುತ್ತಿರುವ ವಿರಾಟ್ ಕೊಹ್ಲಿ ನಾಲ್ಕನೇ ಸ್ಥಾನಕ್ಕೆ ಏರಿದ್ದಾರೆ. ಕೊಹ್ಲಿ ಪ್ರಸಕ್ತ ವಿಶ್ವಕಪ್‌ನಲ್ಲಿ ಎಂಟು ಇನಿಂಗ್ಸ್‌ಗಳಿಂದ ಎರಡು ಶತಕ, ನಾಲ್ಕು ಅರ್ಧ ಶತಕಗಳನ್ನು ಒಳಗೊಂಡು ಒಟ್ಟು 543 ರನ್ ಗಳಿಸಿದ್ದಾರೆ. ಮೂರನೇ ಸ್ಥಾನದಲ್ಲಿರುವ ಕ್ವಿಂಟನ್ ಡಿ ಕಾಕ್ 771 ಪಾಯಿಂಟ್ ಹೊಂದಿದ್ದರೆ, ಕೊಹ್ಲಿ ಖಾತೆಯಲ್ಲಿ 770 ಪಾಯಿಂಟ್ಸ್ ಇವೆ. ಆಸ್ಟ್ರೇಲಿಯಾದ ಆರಂಭ ಆಟಗಾರ ಡೇವಿಡ್ ವಾರ್ನರ್ ಐದನೇ ಮತ್ತು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಆರನೇ ಸ್ಥಾನದಲ್ಲಿದ್ದಾರೆ.

**ಸಿರಾಜ್‌ಗೆ ಬಡ್ತಿ:** ಬೌಲಿಂಗ್‌ನಲ್ಲಿ ಅಗ್ರಸ್ಥಾನಕ್ಕೆ ಏರಿರುವ ಸಿರಾಜ್ ವಿಶ್ವಕಪ್‌ನಲ್ಲಿ ಉತ್ತಮ ಸಾಧನೆ ತೋರಿದ್ದು, ಎಂಟು ಪಂದ್ಯಗಳಿಂದ 10 ವಿಕೆಟ್ ಪಡೆದಿದ್ದಾರೆ. ಭಾರತ ತಂಡದ ಇನ್ನೊಬ್ಬ ವೇಗಿ ಜಸ್‌ಪ್ರೀತ್ ಬೂಮ್ರಾ ಮೂರು ಸ್ಥಾನ ಬಡ್ತಿ ಪಡೆದಿದ್ದು ಎಂಟನೇ ಸ್ಥಾನಕ್ಕೇರಿದರೆ, ಮೊಹಮ್ಮದ್ ಶಮಿ 10ನೇ ಸ್ಥಾನಕ್ಕೆ ಏರಿದ್ದಾರೆ.

ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ಬಾಂಗ್ಲಾದೇಶ ತಂಡದ ನಾಯಕ ಶಕಿಬ್ ಅಲ್ ಹಸನ್ ಮೊದಲ ಸ್ಥಾನದಲ್ಲಿದ್ದಾರೆ. ಅಫ್ಘಾನಿಸ್ತಾನದ ಮೊಹಮ್ಮದ್ ನಬಿ ಎರಡನೇ ಸ್ಥಾನದಲ್ಲಿದ್ದಾರೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇಂದು ಶ್ರೀಲಂಕಾ ತಂಡದ ವಿರುದ್ಧ ಪೈಪೋಟಿ

# ಗೆಲ್ಲಲೇಬೇಕಾದ ಒತ್ತಡದಲ್ಲಿ ನ್ಯೂಜಿಲೆಂಡ್

• ಮಹಮ್ಮದ್ ನೂಮಾನ್

ಬೆಂಗಳೂರು: ಸತತ ನಾಲ್ಕು ಸೋಲುಗಳಿಂದ ಕಂಗೆಟ್ಟಿರುವ ನ್ಯೂಜಿಲೆಂಡ್ ತಂಡ, ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಗುರುವಾರ ಶ್ರೀಲಂಕಾ ವಿರುದ್ಧ ಪೈಪೋಟಿ ನಡೆಸಲಿದೆ.

ನಾಲ್ಕು ಪಂದ್ಯಗಳಿಂದ ಎಂಟು ಪಾಯಿಂಟ್ಸ್ ಹೊಂದಿರುವ ಕೇನ್ ವಿಲಿಯಮ್ಸನ್ ಬಳಗಕ್ಕೆ ಸೆಮಿಫೈನಲ್ ಪ್ರವೇಶದ ಸಾಧ್ಯತೆ ಜೀವಂತವಾಗಿರಿಸಿಕೊಳ್ಳಲು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಈ ಪಂದ್ಯದಲ್ಲಿ ಜಯ ಅನಿವಾರ್ಯ.

ಭಾರತ, ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ತಂಡಗಳು ಈಗಾಗಲೇ ನಾಲ್ಕರಘಟ್ಟ ಪ್ರವೇಶಿಸಿವೆ. ಇನ್ನೊಂದು ಸ್ಥಾನಕ್ಕಾಗಿ ತಲಾ ಎಂಟು ಪಾಯಿಂಟ್ಸ್ ಹೊಂದಿರುವ ನ್ಯೂಜಿಲೆಂಡ್ (ರನ್‌ರೇಟ್ +0.398), ಪಾಕಿಸ್ತಾನ (+0.036) ಮತ್ತು ಅಫ್ಘಾನಿಸ್ತಾನ (-0.338) ತಂಡಗಳ ನಡುವೆ ಪೈಪೋಟಿ ಏರ್ಪಟ್ಟಿವೆ.

ಈ ಮೂರು ತಂಡಗಳೂ ಕೊನೆಯ ಲೀಗ್ ಪಂದ್ಯ ಗಳನ್ನು ಜಯಿಸಿದರೆ, ಪಾಯಿಂಟ್ಸ್ 10 ಆಗಲಿದೆ. ಆಗ ರನ್‌ರೇಟ್ ಪರಿಗಣನೆಗೆ ಬರಲಿದೆ. ಪಾಕ್ ಮತ್ತು ಅಫ್ಗನ್‌ಗೆ ಹೋಲಿಸಿದರೆ, ನ್ಯೂಜಿಲೆಂಡ್ ತಂಡದ ರನ್‌ರೇಟ್ ಉತ್ತಮವಾಗಿದೆ. ಆದ್ದರಿಂದ ಶ್ರೀಲಂಕಾ ಎದುರು ಗೆಲ್ಲುವುದು ಮಾತ್ರವಲ್ಲದೆ, ರನ್‌ರೇಟ್ ತಗ್ಗದಂತೆ ಗಮನಹರಿಸಬೇಕಿದೆ.

ನ್ಯೂಜಿಲೆಂಡ್ ತಂಡ ಮೊದಲ ನಾಲ್ಕು ಪಂದ್ಯಗಳನ್ನು ಜಯಿಸಿ, ಟೂರ್ನಿಯಲ್ಲಿ ಭರ್ಜರಿ ಆರಂಭ ಪಡೆದಿತ್ತು. ಆ ಬಳಿಕ ಭಾರತ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ಮತ್ತು ಪಾಕಿಸ್ತಾನದ ಎದುರು ಸೋತಿದೆ. ನ.4 ರಂದು ಇದೇ ಕ್ರೀಡಾಂಗಣದಲ್ಲಿ ನಡೆದಿದ್ದ ಪಂದ್ಯದಲ್ಲಿ ಪಾಕ್ ಎದುರು ಪರಾಭವಗೊಂಡಿತ್ತು.

ಲಂಕಾ ವಿರುದ್ಧ ಜಯಿಸಬೇಕಾದರೆ, ಕಿವೀಸ್ ತಂಡ ಬೌಲಿಂಗ್ ವಿಭಾಗದಲ್ಲಿನ ಲೋಪಗಳನ್ನು ತಿದ್ದುವುದು ಅಗತ್ಯ. ಗಾಯದ ಕಾರಣ ಕಳೆದ ಕೆಲ ಪಂದ್ಯಗಳನ್ನು ಕಳೆದುಕೊಂಡಿದ್ದ ಲಾಕಿ ಫರ್ಗ್ಯುಸನ್ ಅವರು ಆಯ್ಕೆಗೆ ಲಭ್ಯರಿರುವುದು ಬೌಲಿಂಗ್ ವಿಭಾಗದ ಬಲವನ್ನು ತುಸು ಹೆಚ್ಚಿಸಿದೆ.

'ಅವರು (ಲಾಕಿ) ನಮ್ಮ ಬೌಲಿಂಗ್ ವಿಭಾಗಕ್ಕೆ ಸಮತೋಲನ ಮತ್ತು ಹೆಚ್ಚಿನ ಅನುಭವ ತಂದುಕೊಡುವರು' ಎಂದು ನಾಯಕ ವಿಲಿಯಮ್ಸನ್ ತಿಳಿಸಿದರು. ವೇಗಿಗಳಾದ ಟ್ರೆಂಟ್ ಬೌಲ್ಟ್ ಮತ್ತು ಟಿಮ್ ಸೌಥಿ ಅವರೂ ಪರಿಣಾಮಕಾರಿ ದಾಳಿ ನಡೆಸಬೇಕಿದೆ.

ತಂಡವು ಬ್ಯಾಟಿಂಗ್‌ನಲ್ಲಿ ಯುವ ಆಟಗಾರ ರಚಿನ್ ರವೀಂದ್ರ ಅವರನ್ನು ನೆಚ್ಚಿಕೊಂಡಿದೆ. ಬೆಂಗಳೂರು ಮೂಲದ ಬ್ಯಾಟರ್ ಎಂಟು ಪಂದ್ಯಗಳಿಂದ 523 ರನ್ ಕಲೆಹಾಕಿದ್ದಾರೆ. ಕಳೆದ ಪಂದ್ಯದಲ್ಲಿ ಐದು ರನ್‌ಗಳಿಂದ ಶತಕ ವಂಚಿತರಾಗಿದ್ದ ವಿಲಿಯಮ್ಸನ್ ಅವರೂ ದೊಡ್ಡ ಇನಿಂಗ್ಸ್ ಆಡುವ ವಿಶ್ವಾಸದಲ್ಲಿದ್ದಾರೆ.

**ಚಾಂಪಿಯನ್ಸ್ ಟ್ರೋಫಿ ಅರ್ಹತೆ ಗುರಿ:** ಮತ್ತೊಂದೆಡೆ ಶ್ರೀಲಂಕಾ ತಂಡ ಪಾಯಿಂಟ್ ಪಟ್ಟಿಯಲ್ಲಿ ಅಗ್ರ ಏಳರಲ್ಲಿ ಸ್ಥಾನ ಪಡೆದು ಮುಂದಿನ ವರ್ಷ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ ಅರ್ಹತೆ ಪಡೆಯುವ ಗುರಿಯೊಂದಿಗೆ ಆಡಲಿಳಿಯಲಿದೆ.

ತವರಿನಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು (ಶ್ರೀಲಂಕಾದ ಕ್ರೀಡಾ ಸಚಿವಾಲಯ ಮತ್ತು ರಾಷ್ಟ್ರೀಯ ಕ್ರಿಕೆಟ್ ಮಂಡಳಿ ನಡುವಣ ತಿಕ್ಕಾಟ) ಮರೆತು ಆಟದತ್ತ ಗಮನ ಕೇಂದ್ರೀಕರಿಸುವ ಸವಾಲು ಕುಸಾಲ್ ಮೆಂಡಿಸ್ ಬಳಗದ ಮುಂದಿದೆ.

'ಲಂಕಾ ಕ್ರಿಕೆಟ್‌ಗೆ ಇದು ಸವಾಲಿನ ಸಮಯ. ಅಂಗಳದ ಹೊರಗೆ ನಡೆಯುತ್ತಿರುವ ಬೆಳವಣಿಗೆಗಳನ್ನು ಬದಿಗಿರಿಸಿ ಆಟದತ್ತ ಗಮನ ಕೇಂದ್ರೀಕರಿಸುತ್ತೇವೆ. ಅಂತಿಮ ಪಂದ್ಯ ಗೆದ್ದು ಚಾಂಪಿಯನ್ಸ್ ಟ್ರೋಫಿಗೆ ಅರ್ಹತೆ ಗಳಿಸುವುದು ಗುರಿ' ಎಂದು ಲಂಕಾ ತಂಡದ ಸಹಾಯಕ ಕೋಚ್ ನವೀದ್ ನವಾಜ್ ಹೇಳಿದರು.



ಏಕದಿನ ಕ್ರಿಕೆಟ್ ಬಲಾಬಲ

**101** ಒಟ್ಟು ಪಂದ್ಯಗಳು

**51** ನ್ಯೂಜಿಲೆಂಡ್ ಗೆಲುವು

**41** ಶ್ರೀಲಂಕಾ ಗೆಲುವು

**1** ಟೈ

**8** ಫಲಿತಾಂಶವಿಲ್ಲ

ಪಂದ್ಯ ಆರಂಭ: ಮಧ್ಯಾಹ್ನ 2.00
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ನ್ಯೂಜಿಲೆಂಡ್ ತಂಡದ ರಚಿನ್ ರವೀಂದ್ರ ಬುಧವಾರ ಅಭ್ಯಾಸ ನಡೆಸಿದರು –ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.



ಶ್ರೀಲಂಕಾ ತಂಡದ ನಾಯಕ ಕುಸಾಲ್ ಮೆಂಡಿಸ್ ಅಭ್ಯಾಸದ ವೇಳೆ ಫುಟ್‌ಬಾಲ್ ಆಡಿದರು –ಪ್ರಜಾವಾಣಿ ಚಿತ್ರ

### ಮಳೆ ಸಾಧ್ಯತೆ

ಬೆಂಗಳೂರಿನಲ್ಲಿ 2–3 ದಿನಗಳಿಂದ ಮಧ್ಯಾಹ್ನದ ಬಳಿಕ ಮಳೆಯಾಗುತ್ತಿದ್ದು, ಈ ಪಂದ್ಯಕ್ಕೂ ವರುಣನ ಆತಂಕ ಎದುರಾಗಿದೆ. ಅಂಗಳದಲ್ಲಿ ನೀರು ನಿಂತರೆ ಅದನ್ನು ಕೆಲವೇ ನಿಮಿಷಗಳಲ್ಲಿ ಹೊರಹಾಕುವ 'ಸಬ್ ಏರ್' ವ್ಯವಸ್ಥೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇದೆ. ಆದ್ದರಿಂದ ಸಾಧಾರಣ ಮಳೆಯಾದರೆ ಪಂದ್ಯ ರದ್ದುಗೊಳ್ಳುವ ಸಾಧ್ಯತೆ ಕಡಿಮೆ. ಎಡೆಬಿಡದೆ ಮಳೆ ಸುರಿದು ಪಾಯಿಂಟ್ ಹಂಚಿಕೆಯಾದರೆ, ನ್ಯೂಜಿಲೆಂಡ್ ತಂಡದ ಸೆಮಿ ಹಾದಿಗೆ ಅಡ್ಡಿಯಾಗಲಿದೆ.

## ಭಾರತ ತಂಡದ ಆಟಗಾರರ ತಾಲೀಮು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದು ಈಗಾಗಲೇ ಸೆಮಿಫೈನಲ್ ಪ್ರವೇಶಿಸಿರುವ ಭಾರತ ತಂಡದ ಆಟಗಾರರು ಬುಧವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಿದರು.

ಕರ್ನಾಟಕದ ಕೆ.ಎಲ್. ರಾಹುಲ್ ಮತ್ತು ಭಾರತ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರು ಇಲ್ಲಿ ಪ್ರಮುಖ ಆಕರ್ಷಣೆಯಾಗಿದ್ದರು. ನಾಯಕ ರೋಹಿತ್ ಶರ್ಮಾ ಮತ್ತು ತರಬೇತಿ ಸಿಬ್ಬಂದಿಯೂ ಪಾಲ್ಗೊಂಡಿದ್ದರು.

ವಿಶ್ವಕಪ್ ಟೂರ್ನಿಯ ಕಳೆದ ಎಂಟೂ ಪಂದ್ಯಗಳಲ್ಲಿ ವಿಕೆಟ್‌ಕೀಪಿಂಗ್ ಮತ್ತು ಬ್ಯಾಟಿಂಗ್ ಎರಡರಲ್ಲಿಯೂ ಚೆನ್ನಾಗಿ ಆಡಿರುವ ರಾಹುಲ್ ಪ್ರಮುಖ ಆಕರ್ಷಣೆಯಾಗಿದ್ದರು. ಅವರು ಕೆಲಹೊತ್ತು ವ್ಯಾಯಾಮ ಮಾಡಿದರು. ನಂತರ ಕ್ಯಾಚಿಂಗ್ ಮತ್ತು ಬ್ಯಾಟಿಂಗ್ ಅಭ್ಯಾಸವನ್ನೂ ಮಾಡಿದರು.

ಇದೇ 12ರಂದು ರೌಂಡ್ ರಾಬಿನ್ ಲೀಗ್ ಪಂದ್ಯವು ಇಲ್ಲಿ ನಡೆಯಲಿದ್ದು ಆತಿಥೇಯ ತಂಡವು ನೆದರ್ಲೆಂಡ್ಸ್ ಎದುರು ಆಡಲಿದೆ. ಮೂರು ದಿನಗಳ ಹಿಂದೆ ದಕ್ಷಿಣ ಆಫ್ರಿಕಾ ಎದುರು ಜಯಿಸಿದ್ದ ತಂಡವು ಬೆಂಗಳೂರಿಗೆ ಬಂದಿಳಿದಿದೆ.

ತಂಡದ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ನೆಟ್ಸ್‌ನಲ್ಲಿಯೂ ತಮ್ಮ ಸ್ವಿಂಗ್ ಮತ್ತು ಶರವೇಗದ ಎಸೆತಗಳನ್ನು ಪ್ರಯೋಗಿಸಿದರು. ಈ ಸಂದರ್ಭದಲ್ಲಿ ಬ್ಯಾಟಿಂಗ್ ಮಾಡಿದ ಇಶಾನ್ ಕಿಶನ್ ಅವರ ಹೊಟ್ಟೆಗೆ ಬೂಮ್ರಾ ಹಾಕಿದ ಎಸೆತವೊಂದು ಅಪ್ಪಳಿಸಿತು. ಕೆಲ ನಿಮಿಷಗಳವರೆಗೆ ನೋವು ಅನುಭವಿಸಿ, ಸುಧಾರಿಸಿಕೊಂಡ ಇಶಾನ್ ಅಭ್ಯಾಸ ಮುಂದುವರಿಸಿದರು.



ಭಾರತ ತಂಡದ ಕೆ.ಎಲ್. ರಾಹುಲ್ ತಾಲೀಮು ಕೈಗೊಂಡರು – ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಸುಮಾರು 20 ನಿಮಿಷಗಳ ಕಾಲ ಬೂಮ್ರಾ ಬೌಲಿಂಗ್ ಮಾಡಿದರು. ಬೂಮ್ರಾ ಈ ಟೂರ್ನಿಯಲ್ಲಿ ಎಂಟು ಪಂದ್ಯಗಳಲ್ಲಿ ಆಡಿದ್ದಾರೆ. 3.65ರ ಸರಾಸರಿಯಲ್ಲಿ ಬೌಲಿಂಗ್ ಮಾಡಿದ್ದಾರೆ.

ಶಾರ್ದೂಲ್ ಠಾಕೂರ್ ಮತ್ತು ಪ್ರಸಿದ್ಧ ಕೃಷ್ಣ ಕೂಡ ಇಲ್ಲಿದ್ದರು. ಶುಭಮನ್ ಗಿಲ್ ಬ್ಯಾಟಿಂಗ್ ಅಭ್ಯಾಸ ನಡೆಸಿದರು.

## ಹಾಕಿ: ಕರ್ನಾಟಕ ತಂಡಕ್ಕೆ ಬೆಳ್ಳಿ

ಪಣಜಿ: ಹರಿಯಾಣ ತಂಡ ಫೈನಲ್‌ನಲ್ಲಿ 5–3 ಗೋಲುಗಳಿಂದ ಕರ್ನಾಟಕ ತಂಡವನ್ನು ಸೋಲಿಸಿ 37ನೇ ರಾಷ್ಟ್ರೀಯ ಕ್ರೀಡೆಗಳ ಹಾಕಿ ಟೂರ್ನಿಯ ಪುರುಷರ ವಿಭಾಗದಲ್ಲಿ ಬುಧವಾರ ಚಿನ್ನ ಗೆದ್ದುಕೊಂಡಿತು. ಇದೇ ವೇಳೆ ಸರ್ವಿಸಸ್ ತಂಡದಿಂದ ಪೈಪೋಟಿ ಎದುರಿಸುತ್ತಿದ್ದರೂ, ಮಹಾರಾಷ್ಟ್ರ ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದಿದೆ.

ಉತ್ತರ ಪ್ರದೇಶ ತಂಡ ಟೈಬ್ರೇಕರ್‌ನಲ್ಲಿ 3–1 ಗೋಲುಗಳಿಂದ ಮಹಾರಾಷ್ಟ್ರ ತಂಡವನ್ನು ಸೋಲಿಸಿ ಕಂಚಿನ ಪದಕ ಪಡೆಯಿತು.

ಕೊಕ್ಕೊ ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಮಹಾರಾಷ್ಟ್ರ 46–40 ಅಂತರದಲ್ಲಿ ಒಡಿಶಾ ತಂಡವನ್ನು ಸೋಲಿಸಿ ಚಿನ್ನದ ಪದಕ ತನ್ನದಾಗಿಸಿಕೊಂಡಿತು. ಕರ್ನಾಟಕ 30–10 ಪಾಯಿಂಟ್‌ಗಳಿಂದ ಕೇರಳ ತಂಡವನ್ನು ಸೋಲಿಸಿ ಕಂಚಿನ ಪದಕ ಗೆದ್ದುಕೊಂಡಿತು.

ಪದಕ ಪಟ್ಟಿಯಲ್ಲಿ ಮಹಾರಾಷ್ಟ್ರಕ್ಕೆ ಪೈಪೋಟಿ ನೀಡುತ್ತಿರುವ ಸರ್ವಿಸಸ್ ತಂಡ ಒಂದೇ ದಿನ 10 ಪದಕ ಬಾಚಿಕೊಂಡಿದೆ. ಮಹಾರಾಷ್ಟ್ರ ಇದುವರೆಗೆ 75 ಚಿನ್ನ ಗಳಿಸಿದೆ. ಸರ್ವಿಸಸ್ ಒಟ್ಟು 65 ಚಿನ್ನ ಗಳಿಸಿದೆ.

**ಸೈಕ್ಲಿಂಗ್–ನವೀನ್‌ಗೆ ಚಿನ್ನ:** ರೋಡ್ ಸೈಕ್ಲಿಂಗ್ ಸ್ಪರ್ಧೆಯ ಪುರುಷರ ಇಂಡಿವಿಜುವಲ್ ಟೈಮ್ ಟ್ರಯಲ್ಸ್ ಸ್ಪರ್ಧೆಯಲ್ಲಿ (41 ಕಿ.ಮೀ.) ಕರ್ನಾಟಕದ ನವೀನ್ ಜಾನ್ ಚಿನ್ನದ ಪದಕ ತಮ್ಮದಾಗಿಸಿಕೊಂಡರು. ತಮಿಳುನಾಡಿನ ಶ್ರೀನಾಥ್ ಲಕ್ಷ್ಮೀಕಾಂತ ಬೆಳ್ಳಿ ಹಾಗೂ ಮಹಾರಾಷ್ಟ್ರದ ಚಿನ್ಮಯ್ ಕಂಚಿನ ಪದಕ ಗಳಿಸಿದರು.

## ಅಥ್ಲೆಟಿಕ್ಸ್: ರಿಹಾನ್‌ಗೆ ಚಿನ್ನ

ಬೆಂಗಳೂರು: ಕರ್ನಾಟಕದ ಸಿ.ಎಚ್. ರಿಹಾನ್ ಅವರು ಕೊಯಮತ್ತೂರಿನಲ್ಲಿ ನಡೆಯುತ್ತಿರುವ 38ನೇ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ 20 ವರ್ಷದೊಳಗಿನವರ ವಿಭಾಗದ 400 ಮೀ. ಓಟದಲ್ಲಿ ಚಿನ್ನ ಜಯಿಸಿದರು.

ಬುಧವಾರ ನಡೆದ ಸ್ಪರ್ಧೆಯನ್ನು ರಿಹಾನ್ 46.95 ಸೆ.ಗಳಲ್ಲಿ ಪೂರ್ಣಗೊಳಿಸಿದರು. ಡಿ. ಪ್ರತೀಕ್ (18 ವರ್ಷದೊಳಗಿನ ವಿಭಾಗದ 400 ಮೀ. ಓಟ), ಸವಿನ್ ತಿಂಗಳಾಯ (16 ವರ್ಷದೊಳಗಿನವರ 100 ಮೀ. ಓಟ) ಮತ್ತು ಯಶಸ್ ಕೆ. (18 ವರ್ಷದೊಳಗಿನವರ ಹ್ಯಾಮರ್ ಥ್ರೋ) ಕಂಚಿನ ಪದಕ ಗೆದ್ದುಕೊಂಡರು.

### ಮಾಕ್ಸ್ ಆಟಕ್ಕೆ ಫಿಸಿಯೊ ಜೋನ್ಸ್ ಕಾಣಿಕೆ

ಮೈತುಂಬಾ ನೋವಿದ್ದರೂ ಗ್ಲೆನ್ ಮ್ಯಾಕ್ಸ್‌ವೆಲ್ ವಾಂಖೆಡೆ ಕ್ರೀಡಾಂಗಣದಲ್ಲಿ ಅದ್ಭುತ ಬ್ಯಾಟಿಂಗ್ ಮಾಡಲು ಕಾರಣವಾಗಿದ್ದು ಆಸ್ಟ್ರೇಲಿಯಾ ತಂಡದ ಫಿಸಿಯೊಥೆರಪಿಸ್ಟ್ ನಿಕ್ ಜೋನ್ಸ್ ಅವರಂತೆ.

ಸ್ನಾಯುಸೆಳೆತ, ಬೆನ್ನುನೋವಿನಿಂದಾಗಿ ನಿಲ್ಲಲೂ ಪರದಾಡುತ್ತಿದ್ದ ಮ್ಯಾಕ್ಸ್‌ವೆಲ್ ಒಂದು ಹಂತದಲ್ಲಿ ಗಾಯಗೊಂಡು ನಿವೃತ್ತಿ ಪಡೆಯಲು ಯೋಚಿಸಿದ್ದರು. ಪ್ಯಾಟ್ ಕಮಿನ್ಸ್ ಕೂಡ ಈ ಬಗ್ಗೆ ಏನೂ ಪ್ರತಿಕ್ರಿಯಿಸಿರಲಿಲ್ಲ.

ಆಗಾಗ ನೋವು ವಿಪರೀತವಾಗಿ ನೆಲಕ್ಕೊರಗುತ್ತಿದ್ದ ಮ್ಯಾಕ್ಸ್‌ವೆಲ್‌ಗೆ ಉಪಚಾರ ನೀಡಲು ಧಾವಿಸುತ್ತಿದ್ದ ನಿಕ್ ಜೋನ್ಸ್ ಮನಸ್ಸು ಮಾತ್ರ ಮ್ಯಾಕ್ಸ್‌ವೆಲ್ ಆಡಲಿ ಎನ್ನುತ್ತಿತ್ತು. ಅದಕ್ಕಾಗಿಯೇ ಕೆಲವು ಸಲಹೆಗಳನ್ನು ನೀಡಿದರು.

'ಒಂಟಿ, ಎರಡು ಓಟಗಳನ್ನು ಹೆಚ್ಚು ತೆಗೆದುಕೊಳ್ಳಬೇಡಿ. ನಿಂತಲ್ಲಿಯೇ ಆಡಿ, ಹೊಡೆತಗಳನ್ನಷ್ಟೇ ಪ್ರಯೋಗಿಸಿ. ಅದು ತಮ್ಮಿಂದ ಸಾಧ್ಯವಿದೆ' ಎಂದು ನಿಕ್ ಹೇಳಿದ್ದರು.

ಈ ಸಲಹೆಗಳು ಫಲ ಕೊಟ್ಟವು. ಮ್ಯಾಕ್ಸ್‌ವೆಲ್ ಖಾತೆಗೆ ದ್ವಿಶತಕ ಮತ್ತು ಆಸ್ಟ್ರೇಲಿಯಾಕ್ಕೆ ಗೆಲುವು ಒಲಿದವು.

'ಇದೇನೂ ಹೊಸದಲ್ಲ. ಈ ರೀತಿ ಬಹಳಷ್ಟು ಆಟಗಾರರಿಗೆ ಆಗುತ್ತದೆ. ಹೆಚ್ಚು ಓಡಿದಷ್ಟು ಕ್ರ್ಯಾಂಪ್ಸ್ ಹೆಚ್ಚುವ ಸಂಭವವಿರುತ್ತದೆ. ದೇಹದ ಉಷ್ಣತೆ ಮತ್ತು ಹೃದಯಬಡಿತಗಳನ್ನು ಸಮತೋಲಗೊಳಿಸಿ ನಿರ್ವಹಿಸಬೇಕು' ಎಂದು ಜೋನ್ಸ್ ಹೇಳಿದರು.

ಗ್ಲೆನ್ ಅಬ್ಬರದ ಇನಿಂಗ್ಸ್‌ಗೆ ಅಫ್ಘಾನಿಸ್ತಾನ ತಂಡದ ಮುಖ್ಯ ಕೋಚ್ ಜೊನಾಥನ್ ಟ್ರಾಟ್ ಮೆಚ್ಚುಗೆ

# ಮ್ಯಾಕ್ಸ್‌ವೆಲ್ ಆಟಕ್ಕೆ ಸ್ಟ್ಯಾಂಡ್‌ಗಳಲ್ಲಿ ಫೀಲ್ಡರ್‌ಗಳಿರಬೇಕಿತ್ತು!

ಮುಂಬೈ (ಪಿಟಿಐ): 'ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಆಟ ನೋಡುತ್ತಿದ್ದಾಗ ನಮ್ಮ ತಂಡದ ಫೀಲ್ಡರ್‌ಗಳನ್ನು ಪ್ರೇಕ್ಷಕರ ಸ್ಟ್ಯಾಂಡ್‌ಗಳಲ್ಲಿ ನಿಯೋಜಿಸಬೇಕೆಂಬ ಯೋಚನೆ ಬಂದಿತ್ತು'–

ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ಐತಿಹಾಸಿಕ ಇನಿಂಗ್ಸ್ ಆಡಿದ್ದ ಮ್ಯಾಕ್ಸ್‌ವೆಲ್ ಅವರ ಆಟವನ್ನು ಅಫ್ಘಾನಿಸ್ತಾನ ತಂಡದ ಮುಖ್ಯ ಕೋಚ್ ಜೊನಾಥನ್ ಟ್ರಾಟ್ ಕೊಂಡಾಡಿದ್ದು ಹೀಗೆ.

ಮಂಗಳವಾರ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ವಿಶ್ವಕಪ್ ಪಂದ್ಯದಲ್ಲಿ ಅಫ್ಘಾನಿಸ್ತಾನವು ಒಡ್ಡಿದ್ದ 292 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಆಸ್ಟ್ರೇಲಿಯಾ ತಂಡವು 91 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿತ್ತು. ಆದರೆ, ತೊಡೆಯ ಸ್ನಾಯುಸೆಳೆತ, ಬೆನ್ನುನೋವು ಅನುಭವಿಸಿದರೂ ಗ್ಲೆನ್ ಮ್ಯಾಕ್ಸ್‌ವೆಲ್ 128 ಎಸೆತಗಳಲ್ಲಿ ಅಜೇಯ 201 ರನ್ ಗಳಿಸಿದರು. ಅದರೊಂದಿಗೆ ತಂಡವನ್ನೂ ಜಯದತ್ತ ಮುನ್ನಡೆಸಿದರು. ಪ್ಯಾಟ್ ಕಮಿನ್ಸ್ (12; 68ಎಸೆತ) ಅವರೊಂದಿಗೆ ಮುರಿಯದ ಎಂಟನೇ ವಿಕೆಟ್ ಜೊತೆಯಾಟದಲ್ಲಿ 202 ರನ್ ಸೇರಿಸಿದರು. ಅವರ ವೀರಾವೇಶದ ಆಟವು ಏಕದಿನ ಕ್ರಿಕೆಟ್‌ನಲ್ಲಿ 'ಸಾರ್ವಕಾಲಿಕ ಶ್ರೇಷ್ಠ ಇನಿಂಗ್ಸ್' ಆಗಿ ದಾಖಲಾಯಿತು.



ತೊಡೆಯ ಸ್ನಾಯುಸೆಳೆತದಿಂದ ಬಳಲಿದ ಗ್ಲೆನ್ ಮ್ಯಾಕ್ಸ್‌ವೆಲ್ ಅವರಿಗೆ ಆಸ್ಟ್ರೇಲಿಯಾದ ಫಿಸಿಯೊ ಪ್ರಥಮ ಚಿಕಿತ್ಸೆ ನೀಡಿದರು –ಪಿಟಿಐ ಚಿತ್ರ

'ಮ್ಯಾಕ್ಸ್‌ವೆಲ್ ಅವರಿಗೆ ಸಂಪೂರ್ಣ ಶ್ರೇಯ ಸಲ್ಲಬೇಕು. ದ್ವಿಶತಕ ಗಳಿಸಿದ ಅವರು ಆಟದ ವೈಖರಿ ಅಭೂತಪೂರ್ವವಾಗಿತ್ತು. ಅವರು ಹೊಡೆಯುತ್ತಿದ್ದ ರೀತಿಗೆ ಚೆಂಡು ಸ್ಟ್ಯಾಂಡ್‌ಗಳಿಗೆ ಹೋಗಿ ಬೀಳುತ್ತಿತ್ತು. ಆದರೆ, ಗ್ಯಾಲರಿಗಳಲ್ಲಿ ಫೀಲ್ಡರ್ ನಿಯೋಜನೆ ಸಾಧ್ಯವಿಲ್ಲವಲ್ಲ' ಎಂದು ಶ್ಲಾಘಿಸಿದರು.

'ನಮ್ಮ ತಂಡದ ಆಟಗಾರರಿಗೆ ಈ ಪಂದ್ಯವು ಒಂದು ಉತ್ತಮ ಪಾಠವಾಗಲಿದೆ. ಪಂದ್ಯದ ಯಾವುದೇ ಹಂತದಲ್ಲಿಯೂ ಏಕಾಗ್ರತೆಯನ್ನು ಬಿಡಬಾರದು. 19 ಓವರ್‌ಗಳಲ್ಲಿಯೇ ಏಳು ವಿಕೆಟ್ ಹೋದ ಮೇಲೆಯೂ ಮುಂದಿನ ವಿಕೆಟ್ ಗಳಿಕೆಗೆ ಸಂಪೂರ್ಣ ಸಾಮರ್ಥ್ಯ ವಿನಿಯೋಗಿಸಬೇಕಿತ್ತು. ಕೇವಲ 70 ಓವರ್‌ಗಳಿಗೆ ಮಾತ್ರವಲ್ಲ ಪಂದ್ಯದ ಒಟ್ಟು 100 ಓವರ್‌ಗಳವರೆಗೂ ಆಟದ ಮೇಲಿನ ಹಿಡಿತವನ್ನು ಕಾಪಿಟ್ಟುಕೊಳ್ಳಲು ಹೋರಾಡಬೇಕು. ಇಂತಹ ಅನುಭವಗಳಿಂದಲೇ ಯುವ ಆಟಗಾರರು ಕಲಿಯಬೇಕು. ಇದು ಅವರನ್ನು ಭವಿಷ್ಯದಲ್ಲಿ ಗಟ್ಟಿಗೊಳಿಸುತ್ತದೆ' ಎಂದು ಟ್ರಾಟ್ ಹೇಳಿದರು.

'ಮ್ಯಾಕ್ಸ್‌ವೆಲ್ ಅವರಿಗೆ ಎಂತಹ ಎಸೆತ ಹಾಕಿದರೂ ಹೊಡೆಯುತ್ತಿದ್ದರು. ವೇಗಿಗಳು ಸ್ವಿಂಗ್ ಮತ್ತು ವೇಗದಲ್ಲಿ ವ್ಯತ್ಯಾಸ ಮಾಡಿ ಹಾಕುತ್ತಿದ್ದರು. ಅವರು ಅಂತಹ ಎಸೆತಗಳನ್ನು ಹೊಡೆದರು. ಸ್ಪಿನ್ನರ್‌ಗಳು ಲೆಂಗ್ತ್ ಬದಲಿಸಿ ಹಾಕಿದ ಎಸೆತಗಳನ್ನೂ ಹೊಡೆದು ಹೊರಗಟ್ಟಿದರು. ಈ ಹಂತದಲ್ಲಿ ಅವರು ಕಾಲುಗಳ ನೋವಿನಿಂದ ಬಳಲಿದ್ದರು. ಹೆಚ್ಚು ಯಾರ್ಕರ್‌ಗಳನ್ನು ಪ್ರಯೋಗಿಸಬೇಕಿತ್ತು' ಎಂದರು.

ಮ್ಯಾಕ್ಸ್‌ವೆಲ್ ಅವರ ಅಮೋಘ ಆಟವನ್ನು ಹಲವು ದಿಗ್ಗಜ ಕ್ರಿಕೆಟಿಗರು ಗುಣಗಾನ ಮಾಡಿದ್ದಾರೆ. ಭಾರತದ ಸಚಿನ್ ತೆಂಡೂಲ್ಕರ್, ವೀರೇಂದ್ರ ಸೆಹ್ವಾಗ್, ಇರ್ಫಾನ್ ಪಠಾಣ್, ಯಜುವೇಂದ್ರ ಚಾಹಲ್, ಪಾಕಿಸ್ತಾನ ಶೋಯಬ್ ಅಖ್ತರ್, ದಕ್ಷಿಣ ಆಫ್ರಿಕಾದ ಎಬಿ ಡಿವಿಲಿಯರ್ಸ್, ಇಂಗ್ಲೆಂಡ್‌ನ ಮೈಕೆಲ್ ವಾನ್, ಶ್ರೀಲಂಕಾದ ಲಸಿತ ಮಾಲಿಂಗ ಸೇರಿದಂತೆ ಹಲವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

### ಸಾರ್ವಕಾಲೀಕ ಶ್ರೇಷ್ಠ ಇನಿಂಗ್ಸ್: ಕಮಿನ್ಸ್

'ಗ್ಲೆನ್ ಮ್ಯಾಕ್ಸ್‌ವೆಲ್ ಅವರದ್ದು ಏಕದಿನ ಕ್ರಿಕೆಟ್‌ನಲ್ಲಿ ಸಾರ್ವಕಾಲಿಕ ಶ್ರೇಷ್ಠ ಇನಿಂಗ್ಸ್' ಎಂದು ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಬಣ್ಣಿಸಿದರು.

'ನಾನು ಕ್ರೀಸ್‌ನಲ್ಲಿದ್ದಾಗ ತಂಡದ ಮೊತ್ತವು 200ರ ಗಡಿ ದಾಟಿದರೆ ಸಾಕು. ನಂತರ ಫಲಿತಾಂಶ ಏನೇ ಆದರೂ ನೆಟ್ ರನ್ ರೇಟ್ ಸುಸ್ಥಿತಿಯಲ್ಲಿರುತ್ತದೆ ಎಂದು ಎಣಿಸಿದ್ದೆ. ಆದರೆ ಸದಾ ಗೆಲುವಿಗಾಗಿ ತುಡಿಯುವ ವಿಭಿನ್ನ ವ್ಯಕ್ತಿ ಮ್ಯಾಕ್ಸ್‌ವೆಲ್. ಅವರ ಯೋಚನೆ ಮತ್ತು ಯೋಜನೆ ಬೇರೆಯೇ ಇತ್ತು. ಗ್ಲೆನ್ ತಂಡವನ್ನು ಜಯದತ್ತ ತೆಗೆದುಕೊಂಡು ಹೋದರು' ಎಂದು ಕಮಿನ್ಸ್ ಹೇಳಿದರು.


HONDA
Shine
ಅದೇ ಭರವಸೆ
ಈಗ 100cc ಯಲ್ಲಿ
ಅತ್ಯುತ್ತಮ ಮೈಲೇಜ್ | ಅತ್ಯದ್ಭುತ ಸ್ಟೈಲ್
ಮಜಾ ಎನಿಸುವ ಆರಾಮ | ಕಡಿಮೆ ಬೆಲೆ
₹ 66600/-
ಎಕ್ಸ್-ಶೋರೂಂ ಬೆಲೆ
(ಕರ್ನಾಟಕ)
BOOK ONLINE NOW!
www.honda2wheelersindia.com
SUPER 6 OFFERS*
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಚಿತ್ರದಲ್ಲಿ ತೋರಿಸಲಾದ ಉತ್ಪನ್ನ ಮತ್ತು ಮಾರುಕಟ್ಟೆಯಲ್ಲಿ ಲಭ್ಯವಿರುವ ನಿಜವಾದ ಉತ್ಪನ್ನದಲ್ಲಿ ವ್ಯತ್ಯಾಸವಿರಬಹುದು. ಉತ್ಪನ್ನದಲ್ಲಿ ತೋರಿಸಲಾದ ಬಿಡಿಭಾಗಗಳು ಸಾಮಾನ್ಯ ಉತ್ಪನ್ನದ ಭಾಗವಾಗಿರದೇ ಇರಬಹುದು.
ಕನಿಷ್ಠ ಬಡ್ಡಿದರ @ 6.99%
ನೋ ಕಾಸ್ಟ್ EMI
ನಗದು ಹಿಂಪಾವತಿ ₹5000 ರವರೆಗೆ
ಮುಂಗಡ ಪಾವತಿ ₹0
100 ಕ್ಕೆ 100
ನೋ ಹೈಪೋಥಿಕೇಷನ್
ಡೀಲರ್ ವಿವರಗಳಿಗೆ 7230032200 ಗೆ WhatsApp ಅಥವಾ ಮಿಸ್ಡ್ ಕಾಲ್ ಮಾಡಿ ಅಥವಾ QR Code ಸ್ಕ್ಯಾನ್ ಮಾಡಿ
1. ಇಯರ್‌ಫೋನ್ ಕನೆಕ್ಟ್ ಮಾಡಿ
2. QR ಕೋಡ್ ಸ್ಕ್ಯಾನ್ ಮಾಡಿ
3. ವಿಡಿಯೋ ಆನಂದಿಸಿ
CLICK BOOK RELAX
Honda 2Wheelers